ಸೋಮವಾರ, ಸೆಪ್ಟೆಂಬರ್ 22, 2025 | ₹ 7.00

prajavani.net prajavani

www.prajavani.net

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಭಗತ್‌ಗೆ ಚಿನ್ನ

ಭಾರತದ ಪ್ರಮೋದ್ ಭಗತ್ ಅವರು ಚೀನಾ ಪ್ಯಾರಾ ಬ್ಯಾಡ್ಮಿಂಟನ್ ಇಂಟರ್‌ನ್ಯಾಷನಲ್ ಟೂರ್ನಿಯಲ್ಲಿ ಪುರುಷರ ಎಸ್‌ಎಲ್‌3 ವಿಭಾಗದ ಸಿಂಗಲ್ಸ್‌ನಲ್ಲಿ ಚಿನ್ನದ ಪದಕ ಗೆದ್ದರು

ಓದುಗರ ಗಮನಕ್ಕೆ

ಪ್ರಜಾವಾಣಿಯ ಇಂದಿನ ಸಂಚಿಕೆ ಎರಡು ಭಾಗಗಳಲ್ಲಿ ಪ್ರಕಟವಾಗಿದೆ

ಹಳೆಯ ಎಕ್ಸ್-ಶೋರೂಮ್	GST ಬೆನಿಫಿಟ್ಸ್	ಹೊಸ ಎಕ್ಸ್-ಶೋರೂಮ್
ಆರಂಭಿಕ ಬೆಲೆ ₹80 216*	₹6 270	ಆರಂಭಿಕ ಬೆಲೆ ₹73 946*

ಡೌನ್ ಪೇಮೆಂಟ್ ₹1 999^ ರಿಂದ ಪ್ರಾರಂಭ

ಪ್ರತಿ ದಿನ EMI ₹69^ ರಿಂದ ಪ್ರಾರಂಭ

ಇನ್‌ಸ್ಟಂಟ್ ಡಿಸ್ಕೌಂಟ್ ₹10 000^ ವರೆಗೆ
HDFC BANK FESTIVE TREATS ಕ್ರೆಡಿಟ್ ಕಾರ್ಡ್
Powered by pine labs

5 crore+ HAPPY CUSTOMERS

Splendor+ WORLD'S NO.1 MOTORCYCLE

INDIA'S FIRST 5 YEAR WARRANTY *Conditions apply

Hero GoodLife 100% ಕ್ಯಾಶ್‌ಬ್ಯಾಕ್ | ಗೋಲ್ಡ್ ಕಾಯಿನ್ ಗೆಲ್ಲುವ ಅವಕಾಶ ಮತ್ತು ಇನ್ನೂ ಹಲವು ಖಚಿತ ಬೆನಿಫಿಟ್ಸ್ ಪಡೆಯಿರಿ#

Also available on Flipkart amazon.in

Hero MotoCorp Ltd, Regd. Office: The Grand Plaza, Plot No.2, Nelson Mandela Road, Vasant Kunj Phase - IL. New Delhi - 110070, India. I CIN: L35911DL1984PLC0173541. For further information, contact your nearest Hero MotoCorp authorised outlet or CALL TOLL-FREE 1800 266 0018 or visit us on www.heromotocorp.com . Accessories and features shown may not be a part of standard fitment. Always wear a helmet while riding a two-wheeler. As per cumulative dispatch numbers till August 2025. 5 crore customers as per the cumulative dispatch numbers of the Splendor family series of motorcycles till March 2025. ^Finance offers are at the sole discretion of the financier, subject to its respective T&Cs. Hero MotoCorp reserves the rights to modify or withdraw any or all the offers without prior notice. #Limited period offer, T&C apply. *Ex-showroom prices are applicable in Karnataka.

TOLL FREE 1800 266 0018

Authorised Dealers: Bengaluru, Hosur Road: RT Krishna Hero, Ph: 9289923177, **Lalbagh Road:** Prakash Hero, Ph: 9289922117, **Byatarayanapura:** Bimal Hero, Ph: 9289922863, **Peenya:** Sai Hero, Ph: 9289922830, **Hosur Road:** RT Krishna Hero, Ph: 9289923177, **Banashankari:** Sai Hero, Ph: 9289922476, **Banaswadi:** Bhagath Hero, Ph: 9289922738, **Magadi Road:** Poorna Hero, Ph: 9289923212, **Marathalli:** Vaayuratha Hero, Ph: 9289923811, **Rajaji Nagar:** Max Hero, Ph: 9289923023, **Kolar:** Sai Balaji Hero, Ph: 9821745024, **Chikkaballapur:** Manjunath Hero, Ph: 9821751332, **Tumkur:** Sai Hero, Ph: 9289922986, **B.H.Road:** Sai Hero, Ph: 7022752841, **Kamakshipalya:** Poorna Motors, Ph: 9606922534, **JP Nagar:** Sai Hero, Ph: 9900236280, **Kanakpura Road:** Sai Hero, Ph: 8904677394, **Hoskote:** Bhagath Hero, Ph: 8884600051, **K R Puram:** Bhagath Hero, Ph: 7829488706, **Jigani:** RT Krishna Hero, Ph: 8762860999, **RT Nagar:** Bimal Hero, Ph: 9535327710, **Tiptur:** Sai Hero, Ph: 9164840456, **Kunigal:** Sai Hero, Ph: 7022752858, **Doddaballapura:** Bimal Hero, Ph: 9742202125, **Associate Dealer: Belathur:** Ph: 9902649569, **Madiwala:** Ph: 9731660639, **Banashankari 3rd Stage:** Ph: 9513353864, **Bannerghatta Road:** Ph: 41209619, **Kengeri:** Ph: 9739275523, **Yelahanka:** Ph: 28462524/9341025589, **Mysore Road:** Ph: 9611997733, **Devanahalli:** Ph: 9964560599, **Kanakapura:** Ph: 9880212346, **Whitefield:** Ph: 9741646466, **Bagepalli:** Ph: 282828, **Srinivaspur:** Ph: 9738504002, **Sidlaghatta:** Ph: 254827, **Nelamangala:** Ph: 27723395, **Pavagada:** Ph: 9740324639, **Madhugiri:** Ph: 9972278989, **Vijayapura:** Ph: 9449619920, **Sira:** Ph: 9448417393, **Chandapura:** 9481329064, **Vidyaranyapura:** Ph: 9606934533, **Magadi:** Ph: 9482090890, **Gottigere:** Ph: 8197678979, **Also Available At: Dunnasandra:** Ph: 8310166369, **HSR Layout:** Ph: 7428893265, **Mathikere:** Ph: 9035027951, **Domlur:** Ph: 7353919910, **J.P.Nagar:** Ph: 9035024274, **RT Nagar:** Ph: 9535327710, **Attibele:** Ph: 8050609104, **B Narayanapura:** Ph: 9945472149, **Varthur:** Ph: 9900877227, **Papareddypalya:** Ph: 9916678309, **Anekal:** Ph: 9739519252, **Konankunte:** Ph: 9886122251, **Sarjapur Main Road:** Ph: 8762860999, **Bidadi:** Ph: 9844767719, **Ramanagara:** Ph: 9663399909, **Jigani:** Ph: 9986498884, **Chikkanayakanahalli:** Ph: 9880807399, **Turuvekere:** Ph: 9448403205, **Koratagere:** Ph: 9731713711, **Peresandra:** Ph: 9901502049, **For Bulk Deals/Corporate Purchase,** "Bangalore@Heromotocorp,Com" & "Kiran,Kumart@Heromotocorp,Com" **For Buy/Sell/Exchange Old Any Vehicle Contact VV Puram, Bengaluru Olety Sai Hero Sure:** Ph: 9845074491.

RS/Hero/09/25

INDIA'S FIRST 5 YEAR WARRANTY* *Conditions apply

Hero GoodLife Stand a chance to win 100% Cashback | 24 Carat Gold Coin and many more assured benefits*

Also available on Flipkart amazon.in

Hero MotoCorp Ltd. Regd. Office: The Grand Plaza, Plot No.2, Nelson Mandela Road, Vasant Kunj Phase - II, New Delhi - 110070, India. I CIN: L35911DL1984PLC017354 I For further information, contact your nearest Hero MotoCorp authorized outlet or visit us on www.HeroMotoCorp.com. Accessories and features shown may not be a part of standard fitment. Always wear a helmet while riding a two-wheeler. ^Basis data available in public forum for products in 100cc Motorcycle segment. ˇOffer amount and combination of offer may vary for model/variant and states and it is applicable on select models only, for a limited time period or till stock lasts. $Finance offer is at the sole discretion of the Financier, subject to its respective T&Cs, Available at select dealerships. *Limited period offer,T&C apply. +As per cumulative sales numbers till August 2025.#Ex-showroom price of HF Deluxe Pro in Karnataka.

TOLL FREE 1800 266 0018

AUTHORISED DEALERS: BENGALURU - HOSUR ROAD: RT KRISHNA HERO - PH: 9289923177. **LALBAGH ROAD: PRAKASH HERO - PH: 9289922117. BYATARAYANAPURA: BIMAL HERO** - PH: 9289922863. **PEENYA: SAI HERO** - PH: 9289922830. **HOSUR ROAD: RT KRISHNA HERO** - PH: 9289923177. **BANASHANKARI: SAI HERO** - PH: 9289922476. **BANASWADI: BHAGATH HERO** - PH: 9289922738. **MAGADI ROAD: POORNA HERO** - PH: 9289923212. **MARATHALLI: VAAYURATHA HERO** - PH: 9289923811. **RAJAJI NAGAR: MAX HERO** - PH: 9289923023. **KOLAR: SAI BALAJI HERO** PH. 9821745024. **CHIKKABALLAPUR: MANJUNATH HERO** - PH: 9821751332. **TUMKUR: SAI HERO** - PH: 9289922986. **B.H.ROAD – SAI HERO**, PH. 7022752841. **KAMAKSHIPALYA: POORNA MOTORS** – PH: 9606922534. **JP NAGAR: SAI HERO**, PH: 99002 36280. **KANAKPURA ROAD:** SAI HERO - 8904677394. **HOSKOTE: BHAGATH HERO** - PH: 8884600051. **K R PURAM: BHAGATH HERO** - PH: 7829488706. **JIGANI: RT KRISHNA HERO** – PH: 8762860999. **RT NAGAR: BIMAL HERO** 9535327710.. **TIPTUR: SAI HERO** PH. 9164840456. **KUNIGAL: SAI HERO** - PH: 7022752858. **DODDABALLAPURA: BIMAL HERO** 9742202125. **Associate Dealer: BELATHUR** - 9902649569. **MADIWALA** - 9731660639. **BANASHANKARI 3RD STAGE** - 9513353864. **BANNERGHATTA ROAD** - 41209619. **KENGERI** - 9739275523. **YELAHANKA** - 28462524, 9341025589. **MYSORE ROAD**:9611997733. **DEVANAHALLI** - 9964560599. **KANAKAPURA** - 9880212346. **WHITEFIELD** - 9741646466. **BAGEPALLI** - 282828. **SRINIVASPUR** - 9738504002. **SIDLAGHATTA** - 254827. **NELAMANGALA** - 27723395. **PAVAGADA** - 9740324639. **MADHUGIRI** - 9972278989. **VIJAYAPURA**: 9449619920. **SIRA**: 9448417393. **CHANDAPURA**: 9481329064. **VIDYARANYAPURA:** 9606934533. **MAGADI:** 9482090890. GOTTIGERE: 81976 78979. **Also Available at: DUNNASANDRA:** 8310166369. **HSR LAYOUT**: 7428893265. **MATHIKERE**: 9035027951. **DOMLUR:** 7353919910- **J.P.NAGAR**: 9035024274. **RT NAGAR:** 9535327710. **ATTIBELE**: 8050609104. **B NARAYANAPURA**: 9945472149. **VARTHUR**: 9900877227. **PAPAREDDYPALYA**: 9916678309. **ANEKAL**: 9739519252. **KONANKUNTE**: 9886122251. **SARJAPUR MAIN ROAD**: 8762860999. **BIDADI:** 9844767719. **RAMANAGARA:** 9663399909. **JIGANI:** 9986498884. **CHIKKANAYAKANAHALLI**: 9880807399. **TURUVEKERE:** 9448403205. **KORATAGERE**: 9731713711. **PERESANDRA**: 9901502049. **For Bulk deals/Corporate purchase - "bangalore@heromotocorp.com" & "kiran.kumart@heromotocorp.com"** For Buy/Sell/Exchange Old any Vehicle contact **VV PURAM, Bengaluru** Olety Sai Hero Sure: **98450 74491.**

VML.5840.2025KAN

ಸೋಮವಾರ, ಸೆಪ್ಟೆಂಬರ್ 22, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 263 | ಪುಟ 16

prajavani.net prajavani www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ



‘ಸಿಜೆ’ಯಾಗಿ ಕನ್ನಡಿಗ ಪ್ರಮಾಣ
ಕರ್ನಾಟಕದ ಪವನ್‌ಕುಮಾರ್ ಭೀಮಪ್ಪ ಭಜಂತ್ರಿ ಅವರು ಬಿಹಾರದ ಪಟ್ನಾ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿ ಭಾನುವಾರ ಪ್ರಮಾಣ ವಚನ ಸ್ವೀಕರಿಸಿದರು

ಭಾರತಕ್ಕೆ ಮಣಿದ ಪಾಕ್
ಭಾರತದ ಶಿವಂ ದುಬೆ ಅವರು ಭಾನುವಾರ ನಡೆದ ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯ ಸೂಪರ್ ಫೋರ್ ಪಂದ್ಯದಲ್ಲಿ ಪಾಕಿಸ್ತಾನದ ಎದುರು ಎರಡು ವಿಕೆಟ್ ಗಳಿಸಿದರು. ಪಂದ್ಯವನ್ನು ಭಾರತ ಆರು ವಿಕೆಟ್‌ಗಳಿಂದ ಜಯಿಸಿತು

ಪ್ಯಾಲೆಸ್ಟೀನ್‌ಗೆ ದೇಶದ ಮಾನ್ಯತೆ ನೀಡಲು ಸಿದ್ಧತೆ 8 | ಪ್ರಧಾನಿ ತಾಯಿಗೆ ನಿಂದನೆ: ಆರೋಪ 9

ಗಣತಿ ಆ್ಯಪ್‌ನಲ್ಲಿ 33 ಜಾತಿ ನಿಷ್ಕ್ರಿಯ

ರಾಜ್ಯದಲ್ಲಿ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಇಂದಿನಿಂದ ಆರಂಭ

7 ಕೋಟಿ	2 ಕೋಟಿಗೂ	1.75 ಲಕ್ಷ	60
ಜನರ ದತ್ತಾಂಶ ಸಂಗ್ರಹ	ಹೆಚ್ಚು ಮನೆಗಳು	ಶಿಕ್ಷಕರು ಗಣತಿದಾರರು	ಸಮೀಕ್ಷೆಯಲ್ಲಿ ಪ್ರಶ್ನೆಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಂದೂ ಜಾತಿಗಳ ಹೆಸರಿನ ಜೊತೆ ಕ್ರಿಶ್ಚಿಯನ್ ಪದ ಸೇರ್ಪಡೆಗೆ ವಿವಿಧ ಸಮುದಾಯಗಳು ಹಾಗೂ ರಾಜಕೀಯ ನಾಯಕರಿಂದ ತೀವ್ರ ವಿರೋಧ ವ್ಯಕ್ತವಾದ ಕಾರಣ, ಈ ರೀತಿಯ 33 ಜಾತಿಗಳ ಹೆಸರುಗಳನ್ನು ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ಸಮೀಕ್ಷೆಗೆ ಸಿದ್ಧಪಡಿಸಿರುವ ಆ್ಯಪ್‌ನಲ್ಲಿ ನಿಷ್ಕ್ರಿಯಗೊಳಿಸುವ ಮೂಲಕ ಗೊಂದಲಕ್ಕೆ ತೆರೆ ಎಳೆದಿದೆ.

ರಾಜ್ಯದಲ್ಲಿ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ (ಜಾತಿವಾರು ಸಮೀಕ್ಷೆ) ಸೋಮವಾರದಿಂದ (ಸೆ.22) ಅ.7ರವರೆಗೆ ನಡೆಯಲಿದೆ.

‘ಆಕ್ಷೇಪಾರ್ಹ ಎನ್ನಲಾಗಿದ್ದ 33 ಜಾತಿಗಳ ಹೆಸರು ಆ್ಯಪ್‌ನಲ್ಲಿ ಲಭ್ಯವಿರುವುದಿಲ್ಲ. ಆದರೆ, ಜನರು ಸ್ವಯಂಪ್ರೇರಿತವಾಗಿ ತಮ್ಮ ಜಾತಿ, ಧರ್ಮ ಹೇಳಿಕೊಳ್ಳಲು ಸ್ವತಂತ್ರರಾಗಿದ್ದು, ಅದನ್ನು ಗಣತಿದಾರರು ಯಥಾವತ್ತಾಗಿ ದಾಖಲಿಸಿಕೊಳ್ಳುತ್ತಾರೆ. ಆ್ಯಪ್‌ನಲ್ಲಿ ನಿಷ್ಕ್ರಿಯಗೊಳಿಸಲಾದ ಜಾತಿಗಳನ್ನು ಸಮೀಕ್ಷೆ ವೇಳೆ ಜನ ನಮೂದಿಸಲು ಬಯಸಿದರೆ ಗಣತಿದಾರರು ಅದನ್ನೂ ದಾಖಲಿಸಿಕೊಳ್ಳಲಿದ್ದಾರೆ’ ಎಂದು ಆಯೋಗದ ಅಧ್ಯಕ್ಷ ಮಧುಸೂದನ ಆರ್. ನಾಯ್ಕ್ ತಿಳಿಸಿದರು.

▶ 6

ನಿಷ್ಕ್ರಿಯಗೊಳಿಸಿರುವ ಜಾತಿಗಳು

ಅಕ್ಕಸಾಲಿಗ ಕ್ರಿಶ್ಚಿಯನ್, ಬಣಜಿಗ ಕ್ರಿಶ್ಚಿಯನ್, ಬಾರಿಕಾರ್ ಕ್ರಿಶ್ಚಿಯನ್, ಬೆಸ್ತರು ಕ್ರಿಶ್ಚಿಯನ್, ಬಿಲ್ಲವ ಕ್ರಿಶ್ಚಿಯನ್, ಬ್ರಾಹ್ಮಣ ಕ್ರಿಶ್ಚಿಯನ್, ಚರೋಡಿ ಕ್ರಿಶ್ಚಿಯನ್, ದೇವಾಂಗ ಕ್ರಿಶ್ಚಿಯನ್, ಈಡಿಗ ಕ್ರಿಶ್ಚಿಯನ್, ಗೊಲ್ಲಕ್ರಿಶ್ಚಿಯನ್, ಗೊಂಡ ಲಾಲಗೊಂಡ ಕ್ರಿಶ್ಚಿಯನ್, ಗೌಡಿ ಕ್ರಿಶ್ಚಿಯನ್, ಜಲಗಾರ ಕ್ರಿಶ್ಚಿಯನ್, ಜಂಗಮ ಕ್ರಿಶ್ಚಿಯನ್, ಕಮ್ಮ ಕ್ರಿಶ್ಚಿಯನ್, ಕಮ್ಮ ನಾಯ್ಡು ಕ್ರಿಶ್ಚಿಯನ್, ಕಂಸಾಳಿ/ ಕಂಸಾಳೆ ಕ್ರಿಶ್ಚಿಯನ್, ಕುರುಬ ಕ್ರಿಶ್ಚಿಯನ್, ಮಡಿವಾಳ ಕ್ರಿಶ್ಚಿಯನ್, ಮಾಂಗ ಕ್ರಿಶ್ಚಿಯನ್, ಮೊದಲಿಯಾರ್ ಕ್ರಿಶ್ಚಿಯನ್, ನಾಡಾರ್ ಕ್ರಿಶ್ಚಿಯನ್, ನೇಕಾರ ಕ್ರಿಶ್ಚಿಯನ್, ಪಡಯಾಚಿ ಕ್ರಿಶ್ಚಿಯನ್, ರೆಡ್ಡಿ ಕ್ರಿಶ್ಚಿಯನ್, ಸೆಟ್ಟಿ ಬಲಿಜ ಕ್ರಿಶ್ಚಿಯನ್, ಸುದ್ರಿ ಕ್ರಿಶ್ಚಿಯನ್, ತಿಗಳ/ ಥಿಗಳ ಕ್ರಿಶ್ಚಿಯನ್, ತುಳು ಕ್ರಿಶ್ಚಿಯನ್, ವೈಶ್ಯ/ ಶೆಟ್ರು ಕ್ರಿಶ್ಚಿಯನ್, ವಿಶ್ವಕರ್ಮ ಕ್ರಿಶ್ಚಿಯನ್, ಒಕ್ಕಲಿಗ ಕ್ರಿಶ್ಚಿಯನ್, ವೈಶ್ಯ ಬ್ರಾಹ್ಮಣ ಕ್ರಿಶ್ಚಿಯನ್

> **ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡು ಜಾತಿ ಉಳಿಸಿಕೊಂಡರೆ, ಧರ್ಮ ಬದಲಾಗುತ್ತದೆ. ಜಾತಿ ಬದಲಾಗದು. ಹೀಗಾಗಿ ಮತಾಂತರಗೊಂಡವರನ್ನು ಕ್ರೈಸ್ತರೆಂದೇ ಪರಿಗಣಿಸಲಾಗುತ್ತದೆ**
> **ಕೆ.ಎ. ದಯಾನಂದ,** ಆಯೋಗದ ಸದಸ್ಯ ಕಾರ್ಯದರ್ಶಿ

ಆಯೋಗದಲ್ಲಿ ಅಪಸ್ವರ

● ರಾಜೇಶ್ ರೈ ಚಟ್ಲ

ಮಧುಸೂದನ್

ಬೆಂಗಳೂರು: ಮೊಬೈಲ್ ಆ್ಯಪ್ ಅಂತಿಮಗೊಳ್ಳದೆ, ಗಣತಿದಾರರಿಗೆ ತರಬೇತಿ ನೀಡದೆ, ಜಾತಿ ಪಟ್ಟಿ ವಿವಾದದ ನಡುವೆಯೇ ತರಾತುರಿಯಲ್ಲಿ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ (ಜಾತಿವಾರು ಸಮೀಕ್ಷೆ) ಆರಂಭವಾಗುತ್ತಿರುವುದು ಹಿಂದುಳಿದ ವರ್ಗಗಳ ಆಯೋಗದಲ್ಲೇ ಅಸಮಾಧಾನಕ್ಕೆ ಕಾರಣವಾಗಿದೆ.

ಸೋಮವಾರದಿಂದ (ಸೆ. 22) ಅ. 7ರವರೆಗೆ ಈ ಸಮೀಕ್ಷೆ ನಡೆಯಲಿದೆ. ಆದರೆ, ಸಮೀಕ್ಷೆಗೆ ಅಗತ್ಯವಾದ ಡಿಜಿಟಲ್ ಆ್ಯಪ್‌ನ ಫೀಚರ್ಸ್‌ಗಳು ಸಿದ್ಧವಾಗಿ ಅಳವಡಿಕೆ ಆಗಿಲ್ಲ. ಜಿಲ್ಲಾ, ತಾಲ್ಲೂಕು ಮಟ್ಟಕ್ಕೆ ಇನ್ನೂ ಸಮೀಕ್ಷೆಯ ಕೈಪಿಡಿ ತಲುಪಿಲ್ಲ. ಗಣತಿದಾರರಿಗೆ ತರಬೇತಿಯೂ ಪೂರ್ಣ ಆಗಿಲ್ಲ. ಪಾರದರ್ಶಕತೆಯಿಂದ ಕೂಡಿದ ಚರ್ಚೆಗಳೂ ನಡೆದಿಲ್ಲ. ಅದಕ್ಕೂ ಮೊದಲೇ ಸಮೀಕ್ಷೆ ಆರಂಭಿಸುವ ನಿರ್ಧಾರ ಆಯೋಗದಲ್ಲಿ ಭಿನ್ನಾಭಿಪ್ರಾಯಕ್ಕೆ ಕಾರಣವಾಗಿದೆ.

ಗಡಿಬಿಡಿಯಲ್ಲಿ ಸಮೀಕ್ಷೆ ಆರಂಭಿಸುವ ಬದಲು, ಕನಿಷ್ಠ ಒಂದು ತಿಂಗಳು ಮುಂದೂಡುವಂತೆ ಆಯೋಗದ ಸದಸ್ಯರ ಪೈಕಿ ಕೆಲವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

▶ 6

‘ವಿಕಾಸ ಮಿತ್ರ’ರಿಗೆ ₹25 ಸಾವಿರ
ಪಟ್ನಾ (ಪಿಟಿಐ): ವಿಧಾನಸಭೆ ಚುನಾವಣೆ ಸಮೀಪಿಸುತ್ತಿರುವಂತೆಯೇ ಬಿಹಾರದ ಎನ್‌ಡಿಎ ಸರ್ಕಾರ ವಿಕಾಸ ಮಿತ್ರರಿಗೆ ಟ್ಯಾಬ್ಲೆಟ್ ಖರೀದಿಗೆ ನೆರವು ಸೇರಿದಂತೆ ಹಲವು ಯೋಜನೆಗಳನ್ನು ಘೋಷಿಸಿದೆ.

ಸುದ್ದಿ ▶ 9

BACHPAN
ನಿಮ್ಮ ನಗರದಲ್ಲಿ ಬಚ್‌ಪನ್ ಪ್ಲೇ ಸ್ಕೂಲ್ ಪ್ರಾರಂಭಿಸಿ
1200+ School | 2 Lakh Students | 400+ Cities | 25 States
| ಪಠ್ಯಕ್ರಮ ಮತ್ತು ವ್ಯವಸ್ಥೆಗಳ ಬೆಂಬಲ
| ನಿಮ್ಮ ಪ್ರಸಕ್ತ ಶಾಲೆಯನ್ನು ಪ್ರಾಥಮಿಕ/ಕೆ-12 ಮಾದರಿಯಲ್ಲಿ ಬದಲಾಯಿಸಿ
| ₹15+ ಲಕ್ಷ ಬಂಡವಾಳ ಮತ್ತು 225 ಚ.ಯಾರ್ಡ್ಸ್ ಜಾಗ
ಕರ್ನಾಟಕದಾದ್ಯಂತ ಎಲ್ಲಾ ಬಚ್ಪನ್ ವಿಚಾರಣೆಗಳಿಗೆ ಸ್ವಾಗತ
Yeshvanth Gowda 8123065553 | Charu Khindria 9900083744
ADMISSION OPEN FOR SESSION 2025-26 • Arasinakunte - 9980833955 • Avalahalli - 9591522979 • AECS Layout - 9880978590 • Akshayanagar - 9741132614 • Avalahalli-Yelahanka - 9900920600 • Arekere - 9900056977 • Attibele - 9738211888 • Ayyappa Nagar - 9148029955 • Budigere Cross - 9008421983 • Bagalur KIADB Road - 9880282699 • B Narayanpura - 9902901454 • Borewell Road - 8618255235 • Bagalur Road - 6364898686 • Balagere - 6364619999 • Basaveshwar Nagar - 9148005047 • Byrathi - 9986004391 • Chokkanahalli - 8050809798 • Dommasandra - 9381642771 • Domlur - 9916246426 • Electronic City -9900408935 • Gottigere - 9844609296 • Gunjur - 9845141485 • Haralur Road - 9900052789 • HBR Layout - 9591652552 • Horamavu - 9632317733 • Hongasandra - 9845951144 • Hosakote - 8494924999 • Hebbal kampapura - 9686652694 • HSR Layout - 9900094177 • ISRO Layout - 7975323917 • J.P. Nagar Dollars Colony - 7411216399 • Jalahalli Cross - 9845208633 • J.P. Nagar 7th Phase - 9900061977 • Jakkur - 9606676120 • K. Channasandra - 99025 00998 • Kaggadasapura - 9739000600 • Kengeri Shirke Circle - 8217694499 • Kasturi Nagar - 7406588877 • Kithaganur - 6366414488 • Kodigehalli - 8971857455 • Koramangala - 9686044111 • KR Puram - 9148029955 • Manyata Tech Park - 9900920600 • Manorayana Palya - 7411353555 • Munnekolala - 7338567423 • New Thippasandra - 9916768811 • Nandini Layout - 9449513005 • Nagarbhavi - 9686033399 • Padmanabhnagar - 9019254629 • Panathur - 9901053610 • Rayasandra Circle - 9739006066 • Ramurthynagar - 9108323555 • Rajankunte - 7760553167 • R.T. Nagar - 7411353555 • Sanjay Nagar - 9964353555 • Sarjapur Road - 9900085177 • Seegehalli - 9606299494 • Soukya Road - 9448040193 • Srinivasapura R.R Nagar - 9606063144 • Surya Nagar phase -1 - 9916969459 • Silk Institute - 8105190701 • Sompura Gate -7795413036 • TC Palya - 9591793344 • Varthur - 9986111881 • Whitefield - 9900038268 • Yelahanka - 7022055537
OPENING SHORTLY • Nagasandra - 7259570236
For ADMISSIONS call us at 7290047000 ; QR School Locator
Web : www.bachpanglobal.com ; Mail : franchise@bachpanglobal.com
Phone : 011-35106666/7777 ; CIN : U74899DL1999PTC10125
Regd. S.K Tower, 9988/B-1, Sarai Rohilla, New Rohtak Road, Delhi-110005

ಚಿನಕುರುಳಿ — ಪ್ರಕಾಶ್ ಶೆಟ್ಟಿ

ಪೀಠದಿಂದ ಜಯಮೃತ್ಯುಂಜಯ ಸ್ವಾಮೀಜಿ ಉಚ್ಚಾಟನೆ

ಪ್ರಜಾವಾಣಿ ವಾರ್ತೆ

ಜಯ ಮೃತ್ಯುಂಜಯ ಸ್ವಾಮೀಜಿ

ಕೂಡಲಸಂಗಮ (ಬಾಗಲಕೋಟೆ ಜಿಲ್ಲೆ): ಇಲ್ಲಿನ ಲಿಂಗಾಯತ ಪಂಚಮಸಾಲಿ ಪೀಠದಲ್ಲಿ ಭಾನುವಾರ ನಡೆದ ಅಖಿಲ ಭಾರತ ಲಿಂಗಾಯತ ಪಂಚಮಸಾಲಿ ಟ್ರಸ್ಟ್ ಕಾರ್ಯಕಾರಿಣಿ ಸಭೆಯಲ್ಲಿ ಪಂಚಮಸಾಲಿ ಪೀಠಾಧ್ಯಕ್ಷ ಸ್ಥಾನದಿಂದ ಬಸವ ಜಯಮೃತ್ಯುಂಜಯ ಸ್ವಾಮೀಜಿ ಅವರನ್ನು ಉಚ್ಚಾಟಿಸಲು ನಿರ್ಧರಿಸಲಾಯಿತು.

ಸ್ವಾಮೀಜಿ ಅವರು ಟ್ರಸ್ಟ್ ವಿರುದ್ಧವಾಗಿ ನಡೆದುಕೊಂಡ ಬಗ್ಗೆ ಸಭೆಯಲ್ಲಿ ಪ್ರಸ್ತಾಪವಾಯಿತು. ಚರ್ಚೆಯ ನಂತರ ಟ್ರಸ್ಟಿಗಳು, ಸಮಾಜದ ಮುಖಂಡರು ಒಪ್ಪಿಗೆ ಸೂಚಿಸಿದರು ಎಂದು ಟ್ರಸ್ಟ್ ಪ್ರಧಾನ ಕಾರ್ಯದರ್ಶಿ ನೀಲಕಂಠ ಅಸೂಟಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

▶ 6

ಹಿಂದೂ–ಮುಸ್ಲಿಂ ಪ್ರೇಮಿಗಳ ಅರ್ಧ ತಲೆ ಬೋಳಿಸಿದ ಐವರ ಬಂಧನ

ಪ್ರಜಾವಾಣಿ ವಾರ್ತೆ

ಕನಕಪುರ (ರಾಮನಗರ): ಹಿಂದೂ ಮತ್ತು ಮುಸ್ಲಿಂ ಧರ್ಮಕ್ಕೆ ಸೇರಿದ ಪ್ರೇಮಿಗಳಿಬ್ಬರ ಮೇಲೆ ಗುಂಪೊಂದು ಚಪ್ಪಲಿಯಿಂದ ಹಲ್ಲೆ ನಡೆಸಿದೆ. ಇಬ್ಬರ ತಲೆಯನ್ನು ಅರ್ಧ ಬೋಳಿಸಿ ಮತೀಯ ಗೂಂಡಾಗಿರಿ ಪ್ರದರ್ಶಿಸಿದೆ.

ಈ ಘಟನೆ ಪಟ್ಟಣದ ಇಂದಿರಾನಗರದಲ್ಲಿ ಶನಿವಾರ ನಡೆದಿದೆ. ಮಹೇಶ್ ಮತ್ತು ಆಸಿನ್ ತಾಜ್ ಹಲ್ಲೆಗೊಳಗಾದವರು.

ಘಟನೆಗೆ ಸಂಬಂಧಿಸಿದಂತೆ ಮಹೇಶ್ ಮತ್ತು ಆಸಿನ್ ನೀಡಿರುವ ಪ್ರತ್ಯೇಕ ದೂರಿನ ಮೇರೆಗೆ ಆಸಿನ್ ಕಡೆಯವರಾದ ಶೇಕ್ ಕಬೀರ್, ಸುಹೇಲ್ ಷರೀಫ್, ಸೈಯದ್ ನಯಾಜ್, ನವಾಜ್ ಖಾನ್, ಸಾಜಿದಾ ಬೇಗಂ, ಸಯಿದಾ ಸೇರಿ 7 ಮಂದಿ ವಿರುದ್ಧ ಕನಕಪುರ ಟೌನ್ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಈ ಪೈಕಿ ಐವರನ್ನು ಬಂಧಿಸಿ, ಉಳಿದವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದಾರೆ.

ವಿವಾಹಿತರು: 15 ವರ್ಷಗಳ ಹಿಂದೆಯೇ ಮದುವೆಯಾಗಿರುವ ಆಸಿನ್ ತಾಜ್‌ಗೆ ಪುತ್ರನಿದ್ದು, ಪತಿ ಆರು ತಿಂಗಳ ಹಿಂದೆ ಬಿಟ್ಟು ಹೋಗಿದ್ದಾರೆ. ಇವರು ಇಂದಿರಾನಗರದ ಮಹೇಶ್ ಅವರನ್ನು ಮೂರು ವರ್ಷದಿಂದ ಪ್ರೀತಿಸುತ್ತಿದ್ದರು.

▶ 9

ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ಮೈಸೂರು ದಸರಾ
ಕ್ರಿ.ಶ 1610 ರಿಂದ ಆಚರಣೆ

ವಿಶ್ವವಿಖ್ಯಾತ ಮೈಸೂರು ದಸರಾ
ಸೌಹಾರ್ದ ಸಂಭ್ರಮದ ಮೆರುಗು
ದಿವ್ಯ ಸಾಂಸ್ಕೃತಿಕ ಉನ್ನತಿಯ ಬೆಳಗು
ನಾಡದೇವತೆ ಶ್ರೀ ಚಾಮುಂಡೇಶ್ವರಿ ದೇವಿಯ ಅಗ್ರಪೂಜೆಯೊಂದಿಗೆ
2025ರ ದಸರಾ ಮಹೋತ್ಸವ ಉದ್ಘಾಟನಾ ಸಮಾರಂಭ
ದಿನಾಂಕ: 22.09.2025, ಬೆಳಿಗ್ಗೆ 10.10 ಗಂಟೆ
ಸ್ಥಳ: ಚಾಮುಂಡಿ ಬೆಟ್ಟ, ಮೈಸೂರು

2025ರ ಅಂತಾರಾಷ್ಟ್ರೀಯ ಬೂಕರ್ ಬಹುಮಾನ ವಿಜೇತರಾದ ಸಾಹಿತಿ ಶ್ರೀಮತಿ ಬಾನು ಮುಷ್ತಾಕ್ ಮತ್ತು ಇಂಗ್ಲೀಷ್ ಅನುವಾದಕರಾದ ಶ್ರೀಮತಿ ದೀಪ ಭಸ್ತಿ ಅವರನ್ನು ಮಾನ್ಯ ಮುಖ್ಯಮಂತ್ರಿಯವರಾದ ಶ್ರೀ ಸಿದ್ದರಾಮಯ್ಯರವರು ವಿಧಾನಸೌಧದಲ್ಲಿ ಸನ್ಮಾನಿಸಿದ ಸಂದರ್ಭ
“ ನಾಡಹಬ್ಬ ಮೈಸೂರು ದಸರಾ ಮಹೋತ್ಸವವು ನಮ್ಮ ರಾಜ್ಯದ ಐತಿಹಾಸಿಕ, ಸಾಂಸ್ಕೃತಿಕ ಪರಂಪರೆ ಮತ್ತು ಸಮೂಹ ಸೌಹಾರ್ದತೆಯ ಪ್ರತೀಕವಾಗಿದೆ. ಮೊದಲ ಬಾರಿಗೆ ಪ್ರತಿಷ್ಠಿತ ಅಂತಾರಾಷ್ಟ್ರೀಯ ಬೂಕರ್ ಬಹುಮಾನವನ್ನು ಕನ್ನಡ ಸಾಹಿತ್ಯಕ್ಕೆ ತಂದು ಕೊಡುವ ಮೂಲಕ ಕನ್ನಡ ಕೀರ್ತಿಯನ್ನು ವಿಶ್ವಮಟ್ಟಕ್ಕೆ ಏರಿಸಿದ ಶ್ರೀಮತಿ ಬಾನು ಮುಷ್ತಾಕ್ ಅವರು ದಸರಾ ಉದ್ಘಾಟಿಸಲಿರುವುದು ಸಂತಸದ ಸಂಗತಿಯಾಗಿದೆ.
ನಾವೆಲ್ಲರೂ ಒಗ್ಗಟ್ಟಿನಿಂದ, ಸಹಭಾಗಿತ್ವದಿಂದ, ಕನ್ನಡ ನಾಡು-ನುಡಿಗೆ ಗೌರವ ನೀಡಲು ಕೈಜೋಡಿಸೋಣ.
ನಾಡಿನ ಸಮಸ್ತ ಜನತೆಗೆ ನಾಡಹಬ್ಬ ಮೈಸೂರು ದಸರಾದ ಹಾರ್ದಿಕ ಶುಭಾಶಯಗಳು ”
-ಸಿದ್ದರಾಮಯ್ಯ, ಮುಖ್ಯಮಂತ್ರಿ
ಉದ್ಘಾಟನೆ
ಶ್ರೀಮತಿ ಬಾನು ಮುಷ್ತಾಕ್
ಸಾಹಿತಿಗಳು ಹಾಗೂ 2025ರ ಅಂತಾರಾಷ್ಟ್ರೀಯ ಬೂಕರ್ ಬಹುಮಾನ ವಿಜೇತರು
ಘನ ಉಪಸ್ಥಿತಿ
ಶ್ರೀ ಸಿದ್ದರಾಮಯ್ಯ, ಮಾನ್ಯ ಮುಖ್ಯಮಂತ್ರಿಗಳು
ಶ್ರೀ ಡಿ.ಕೆ. ಶಿವಕುಮಾರ್, ಮಾನ್ಯ ಉಪ ಮುಖ್ಯಮಂತ್ರಿಗಳು
ಮುಖ್ಯ ಅತಿಥಿಗಳು
ಶ್ರೀಮತಿ ನಿರ್ಮಲಾ ಸೀತಾರಾಮನ್, ಮಾನ್ಯ ಹಣಕಾಸು ಹಾಗೂ ಕಾರ್ಪೊರೇಟ್ ವ್ಯವಹಾರಗಳ ಸಚಿವರು, ಭಾರತ ಸರ್ಕಾರ
ಶ್ರೀ ಹೆಚ್.ಡಿ. ಕುಮಾರಸ್ವಾಮಿ, ಮಾನ್ಯ ಉಕ್ಕು ಮತ್ತು ಭಾರಿ ಕೈಗಾರಿಕೆ ಸಚಿವರು, ಭಾರತ ಸರ್ಕಾರ
ಶ್ರೀ ಪ್ರಲ್ಹಾದ ಜೋಶಿ, ಮಾನ್ಯ ಗ್ರಾಹಕ ವ್ಯವಹಾರಗಳು, ಆಹಾರ ಮತ್ತು ಸಾರ್ವಜನಿಕ ವಿತರಣೆ, ಹೊಸ ಮತ್ತು ನವೀಕರಿಸಬಹುದಾದ ಇಂಧನ ಸಚಿವರು, ಭಾರತ ಸರ್ಕಾರ
ಶ್ರೀ ವಿ. ಸೋಮಣ್ಣ, ಮಾನ್ಯ ಜಲಶಕ್ತಿ ಮತ್ತು ರೈಲ್ವೆ ಖಾತೆ ರಾಜ್ಯ ಸಚಿವರು, ಭಾರತ ಸರ್ಕಾರ
ಸುಶ್ರೀ ಶೋಭಾ ಕರಂದ್ಲಾಜೆ, ಮಾನ್ಯ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು ಹಾಗೂ ಕಾರ್ಮಿಕ ಮತ್ತು ಉದ್ಯೋಗ ಖಾತೆ ರಾಜ್ಯ ಸಚಿವರು, ಭಾರತ ಸರ್ಕಾರ
ಅಧ್ಯಕ್ಷತೆ
ಶ್ರೀ ಜಿ.ಟಿ ದೇವೇಗೌಡ, ಮಾನ್ಯ ಶಾಸಕರು, ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ
ಹಾಗೂ ರಾಜ್ಯ ಸಚಿವ ಸಂಪುಟದ ಮಾನ್ಯ ಸಚಿವರು, ಮಾನ್ಯ ಸಂಸದರು, ಮಾನ್ಯ ವಿಧಾನ ಪರಿಷತ್ ಮತ್ತು ವಿಧಾನಸಭೆ ಶಾಸಕರು, ನಿಗಮ, ಮಂಡಳಿ ಮತ್ತು ಪ್ರಾಧಿಕಾರಗಳ ಮಾನ್ಯ ಅಧ್ಯಕ್ಷರು ಹಾಗೂ ಗ್ರಾಮ ಪಂಚಾಯಿತಿಯ ಮಾನ್ಯ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು, ಸ್ಥಳೀಯ ಸಂಸ್ಥೆಗಳ ಚುನಾಯಿತ ಜನ ಪ್ರತಿನಿಧಿಗಳು ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.
ವೈಜ್ಞಾನಿಕ ಮನೋಧರ್ಮ ಬೆಳೆಸಿಕೊಳ್ಳುವುದು; ಪ್ರಶ್ನೆ ಮಾಡುವ ಮತ್ತು ಬದಲಾವಣೆಗೆ ಒಡ್ಡಿಕೊಳ್ಳುವ ಮನಃಸ್ಥಿತಿ ಬೆಳೆಸಿಕೊಳ್ಳುವುದು.- ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ
CMofKarnataka https://dipr.karnataka.gov.in/
ಕರ್ನಾಟಕ ವಾರ್ತೆ

ಜನರಿಗಾಗಿ.. ಜನಾನುರಾಗಿ...
ಎಸ್.ಎಸ್.ಮಲ್ಲಿಕಾರ್ಜುನ್

ಎಸ್.ಎಸ್.ಮಲ್ಲಿಕಾರ್ಜುನ್

ಪ್ರಸ್ತುತಿ: ಪಿ.ವಿ ಬ್ರ್ಯಾಂಡ್ ಸ್ಪಾಟ್

ದಾವಣಗೆರೆ ಜಿಲ್ಲೆಯಲ್ಲಿ ಪ್ರೀತಿಯ 'ಮಲ್ಲಣ್ಣ' ಎಂದೇ ಹೆಸರುವಾಸಿಯಾಗಿರುವ, ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರು ನಗರ ಮಾತ್ರವಲ್ಲದೇ ಇಡೀ ಜಿಲ್ಲೆಯಲ್ಲಿ ಅಭಿವೃದ್ಧಿಯ ಹೊಳೆಯನ್ನೇ ಹರಿಸಿದ್ದಾರೆ. ಎಲ್ಲೇ ಉತ್ತಮವಾಗಿರುವುದು ಕಂಡರೂ, ಅದು ಜಿಲ್ಲೆಯಲ್ಲೂ ಇರಬೇಕು ಎನ್ನುವ ಎಸ್.ಎಸ್.ಮಲ್ಲಿಕಾರ್ಜುನ್ ಅವರು ದಾವಣಗೆರೆಯನ್ನು ಅಭಿವೃದ್ಧಿಯ ಶಿಖರದತ್ತ ಕೊಂಡೊಯ್ಯುತ್ತಿದ್ದಾರೆ.

ಆರೋಗ್ಯ, ಶಿಕ್ಷಣ, ಕ್ರೀಡೆ ಸೇರಿದಂತೆ ಪ್ರತಿಯೊಂದು ಕ್ಷೇತ್ರದಲ್ಲಿಯೂ ಬಹುಕಾಲದ ವರೆಗೂ ಉಳಿಯುವಂತಹ ಅನುಪಮ ಸೇವೆಯನ್ನು ಅವರು ಸಲ್ಲಿಸುತ್ತಿದ್ದಾರೆ. ಎಸ್.ಎಸ್.ಮಲ್ಲಿಕಾರ್ಜುನ್ ಅವರು ಪ್ರತೀ ಬಾರಿ ವಿದೇಶಗಳಿಗೆ ಹೋದಾಗಲೂ ಅಭಿವೃದ್ಧಿಯ ಕನಸುಗಳನ್ನು ಹೊತ್ತು ಮರಳುತ್ತಾರೆ. ವಿದೇಶಗಳಲ್ಲಿ ಕಂಡ ಅತ್ಯುತ್ತಮ ಯೋಜನೆಗಳನ್ನು ಜಿಲ್ಲೆಯಲ್ಲಿ ಅನುಷ್ಠಾನಗೊಳಿಸಲು ಅವಿರತವಾಗಿ ಶ್ರಮಿಸುತ್ತಾರೆ.

ಎಸ್.ಎಸ್.ಮಲ್ಲಿಕಾರ್ಜುನ್ ಅವರು ಅಭಿವೃದ್ಧಿಯ ಕನಸುಗಾರರಾಗಿದ್ದಾರೆ. ಕನಸುಗಳನ್ನು ನನಸಾಗಿಸಿಯೇ ಬಿಡುವ 'ಛಲದಂಕಮಲ್ಲ'ರೂ ಹೌದು. ಅವರು ಒಮ್ಮೆ ಮಾತು ಕೊಟ್ಟರೆ ಕೆಲಸ ಆದಂತೆಯೇ ಎಂಬ ಮಾತು ದಾವಣಗೆರೆಯ ಜನಮಾನಸದಲ್ಲಿ ಕೇಳಿಬರುವುದು ಸಹಜವೇ ಆಗಿದೆ. ಚಿಣ್ಣರಿಂದ ಹಿಡಿದು ವೃದ್ಧರವರೆಗೆ ಎಲ್ಲಾ ವಯೋಮಾನದವರಿಗೂ 'ಮಲ್ಲಣ್ಣ' ಅಚ್ಚುಮೆಚ್ಚು. ಸರ್ವರನ್ನೂ ಮನೆಯ ಸದಸ್ಯರೆಂಬಂತೆ ಪ್ರೀತಿಯಿಂದಲೇ ಮಾತನಾಡಿಸುವ ಅವರ ಹೃದಯವಂತಿಕೆ ಎಲ್ಲರಿಗೂ ಅಚ್ಚುಮೆಚ್ಚಾಗಿದೆ.

1999 ರಿಂದ 2003ರ ವರೆಗೆ ಎಸ್.ಎಂ. ಕೃಷ್ಣ ಮುಖ್ಯಮಂತ್ರಿ ಆಗಿದ್ದ ಸಂದರ್ಭದಲ್ಲಿ ಎಸ್.ಎಸ್. ಮಲ್ಲಿಕಾರ್ಜುನ್ ಅವರು ಮೊದಲ ಬಾರಿ ಕ್ರೀಡಾ ಮತ್ತು ಯುವಜನ ಸೇವಾ ಇಲಾಖೆ ಸಚಿವರಾದರು. ಈ ವೇಳೆ ನಗರದಲ್ಲಿ 'ವಸತಿ ಕ್ರಾಂತಿ'ಯನ್ನೇ ಮಾಡಿದರು. ದಾವಣಗೆರೆಯ ಪ್ರಮುಖ ವೃತ್ತಗಳಲ್ಲಿ ಹೈಮಾಸ್ಟ್ ದೀಪಗಳು ಬೆಳಗುವಂತೆ ಮಾಡಿದರು. ಕುಂದುವಾಡ ಕೆರೆಗೆ ಕಾಯಕಲ್ಪ ಕೊಟ್ಟು ನಗರದ ಕುಡಿಯುವ ನೀರಿನ ಸಮಸ್ಯೆಗೆ ಪರಿಹಾರ ಕಲ್ಪಿಸಿದರು.

ಇನ್ನು 2016 ರಿಂದ 2018ರ ವರೆಗೆ 2ನೇ ಬಾರಿ ಸಚಿವರಾಗಿ ಅಧಿಕಾರ ವಹಿಸಿಕೊಂಡ ಎಸ್.ಎಸ್. ಮಲ್ಲಿಕಾರ್ಜುನ್ ಅವರು ಸಿಮೆಂಟ್ ರಸ್ತೆಗಳ ಕ್ರಾಂತಿಯನ್ನೇ ಮಾಡಿದರು. ಕಿಷ್ಕಿಂದೆಯಂತೆ ಇದ್ದ ಪಿ.ಬಿ. ರಸ್ತೆಯನ್ನು ವಿಶಾಲ ರಸ್ತೆಯನ್ನಾಗಿಸಲು ಶ್ರಮಿಸಿದರು.

2023ರಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದ ಕಾಂಗ್ರೆಸ್ ಸರ್ಕಾರದಲ್ಲಿ ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಇಲಾಖೆಯ ಸಚಿವರಾಗಿ, ಜಿಲ್ಲಾ ಉಸ್ತುವಾರಿ ಸಚಿವರಾಗಿ ಸೇವೆ ಸಲ್ಲಿಸುತ್ತಿರುವ ಎಸ್.ಎಸ್.ಮಲ್ಲಿಕಾರ್ಜುನ್ ಅವರು ಜನಪರ ಕಾರ್ಯಗಳಿಂದಲೇ ಜನಮನ್ನಣೆ ಗಳಿಸಿದ್ದಾರೆ.

ದಾವಣಗೆರೆಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲು ಆಗಮಿಸಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಅವರು ಚರ್ಚಿಸುತ್ತಿರುವುದು. ಗೃಹ ಸಚಿವ ಡಾ.ಜಿ.ಪರಮೇಶ್ವರ, ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ, ಸಂಸದರಾದ ಡಾ. ಪ್ರಭಾ ಮಲ್ಲಿಕಾರ್ಜುನ್ ಉಪಸ್ಥಿತರಿದ್ದರು

ದಾವಣಗೆರೆ ಉತ್ತರ ಮತ್ತು ದಕ್ಷಿಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ವಿವಿಧ ಇಲಾಖೆಗಳಿಂದ ಕೈಗೊಂಡ ಅಭಿವೃದ್ಧಿ ಕಾಮಗಾರಿಗಳ ವಿವರ ಇಲ್ಲಿದೆ.

ಜಿಲ್ಲಾ ಆಸ್ಪತ್ರೆ ನವೀಕರಣ

ದಾವಣಗೆರೆ ಜಿಲ್ಲಾ ಆಸ್ಪತ್ರೆಯ ಹಳೇ ಕಟ್ಟಡವನ್ನು ಪೂರ್ಣ ಪ್ರಮಾಣದಲ್ಲಿ ನವೀಕರಿಸುವುದರ ಜೊತೆಗೆ ಶವಾಗಾರ, ಉಪಾಹಾರ ಕೊಠಡಿ ಮತ್ತು ಲಾಂಡ್ರಿ ಕಾಮಗಾರಿಗಳನ್ನು ಮೊದಲ ಹಂತದಲ್ಲಿ ₹ 43 ಕೋಟಿ ಮೊತ್ತದಲ್ಲಿ ಕೈಗೊಳ್ಳಲಾಗಿದೆ. 2 ಮತ್ತು 3ನೇ ಹಂತದಲ್ಲಿ ಎಂ.ಸಿ.ಎಚ್. ಕಟ್ಟಡವನ್ನು ತೆರವುಗೊಳಿಸಿ ₹ 217 ಕೋಟಿ ಮೊತ್ತದಲ್ಲಿ 400 ಹಾಸಿಗೆಯ ನೂತನ ಕಟ್ಟಡ ನಿರ್ಮಿಸಲು ಉದ್ದೇಶಿಸಲಾಗಿದೆ.

ನೂತನ ಕೊಠಡಿಗಳು

ಶಿಕ್ಷಣ ಇಲಾಖೆ: ದಾವಣಗೆರೆ ನಗರ ಎಂ.ಸಿ.ಸಿ. ಬಿ ಬ್ಲಾಕ್‌ನಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ₹ 5 ಕೋಟಿ ಹಾಗೂ ಸರ್ಕಾರಿ ಪದವಿ ಪೂರ್ವ ಮಹಿಳಾ ಕಾಲೇಜಿನಲ್ಲಿ ಕೊಠಡಿಗಳ ನಿರ್ಮಾಣಕ್ಕೆ ₹ 5 ಕೋಟಿ ಮಂಜೂರಾಗಿದ್ದು, ಕಾಮಗಾರಿ ಪ್ರಗತಿಯಲ್ಲಿದೆ.

ಕರ್ನಾಟಕ ರಾಜ್ಯ ಮಿನರಲ್ಸ್ ಕಾರ್ಪೋರೇಷನ್: 2024–25 ನೇ ಸಾಲಿನ ಸಿ.ಎಸ್.ಆರ್. ಯೋಜನೆಯಡಿ ಕರ್ನಾಟಕ ರಾಜ್ಯ ಮಿನರಲ್ಸ್ ಕಾರ್ಪೋರೇಷನ್ ವತಿಯಿಂದ ದಾವಣಗೆರೆ ಉತ್ತರ ಮತ್ತು ದಕ್ಷಿಣ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ವಿವಿಧ ಶಾಲಾ ಕೊಠಡಿಗಳನ್ನು, ಪಶು ವೈದ್ಯಕೀಯ ಆಸ್ಪತ್ರೆ ಮತ್ತು ಅಂಗನವಾಡಿ ಕಟ್ಟಡಗಳನ್ನು ₹ 5 ಕೋಟಿ ಮೊತ್ತದಲ್ಲಿ ನಿರ್ಮಿಸಲಾಗಿದೆ. ಇನ್ನಿತರ ಕಾಮಗಾರಿಗಳಿಗೆ ₹ 2 ಕೋಟಿ ಮೊತ್ತದ ಕ್ರಿಯಾ ಯೋಜನೆಗೆ ಮಂಜೂರಾತಿ ಪಡೆದು ಕಾಮಗಾರಿ ಕೈಗೊಳ್ಳಲಾಗುತ್ತಿದೆ.

120 ಅಡಿ ಅಗಲದ ರಿಂಗ್ ರಸ್ತೆ

ಶಾಮನೂರು ರಸ್ತೆಯಿಂದ ಅಖ್ತರ್ ರಜಾವುಲ್ಲಾ ಸರ್ಕಲ್‌ವರೆಗೆ 120 ಅಡಿ ಅಗಲದ ರಿಂಗ್ ರಸ್ತೆಯ ಅಭಿವೃದ್ಧಿ ಕಾಮಗಾರಿ ಸ್ಮಾರ್ಟ್‌ಸಿಟಿ ವತಿಯಿಂದ ₹ 65 ಕೋಟಿ ವೆಚ್ಚದಲ್ಲಿ ಪೂರ್ಣಗೊಂಡಿದೆ.

ಜಿಲ್ಲಾ ಪಂಚಾಯತ್ ವತಿಯಿಂದ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ: 2024–25ನೇ ಸಾಲಿನ ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಜೆಜೆಎಂ ಯೋಜನೆಯಡಿ ಅಂದಾಜು ₹ 11.14 ಕೋಟಿ ಮೊತ್ತಕ್ಕೆ ವಿವಿಧ ಗ್ರಾಮಗಳ ಮನೆಗಳಿಗೆ ಮನೆ-ಮನೆಗೆ ನಳ ಸಂಪರ್ಕ ಕಲ್ಪಿಸಲು ₹ 10.6 ಕೋಟಿ ವೆಚ್ಚವಾಗಿದ್ದು, ಉಳಿದ ಕಾಮಗಾರಿ ಪ್ರಗತಿಯಲ್ಲಿವೆ. 2025–26 ನೇ ಸಾಲಿನಲ್ಲಿ ಜೆಜೆಎಂ ಯೋಜನೆಯಡಿ ಅಂದಾಜು ₹ 2.77 ಕೋಟಿ ಮೊತ್ತದಲ್ಲಿ ದೊಡ್ಡಬಾತಿ ಗ್ರಾಮದಲ್ಲಿ ನಳ ಸಂಪರ್ಕ ಕಲ್ಪಿಸಲು ಉದ್ದೇಶಿಸಿದ್ದು, ₹ 1.29 ಕೋಟಿ ವೆಚ್ಚವಾಗಿದೆ.

ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಜೆಜೆಎಂ ಯೋಜನೆಯಡಿ ₹ 17.34 ಕೋಟಿ ಮೊತ್ತದಲ್ಲಿ ವಿವಿಧ ಗ್ರಾಮಗಳ ಮನೆಗಳಿಗೆ ನಳ ಸಂಪರ್ಕ ಕಲ್ಪಿಸುತ್ತಿದ್ದು, ₹11.13 ಕೋಟಿ ವೆಚ್ಚವಾಗಿದೆ.

ಬೆಳವನೂರು, ಕೈದಾಳೆ, ಮುದಹದಡಿ ಮತ್ತು ಶಿರಮಗೊಂಡನಹಳ್ಳಿ ಗ್ರಾಮದ ಮನೆಗಳಿಗೆ ನಳ ಸಂಪರ್ಕ ಕಲ್ಪಿಸುತ್ತಿದ್ದು, ₹ 4.83 ಕೋಟಿ ವೆಚ್ಚವಾಗಿದೆ. ತುರ್ಚಘಟ್ಟ, ಮುದಹದಡಿ ಮತ್ತು ಜರೀಕಟ್ಟೆ ಗ್ರಾಮಗಳಲ್ಲಿ ₹ 3.24 ಕೋಟಿ ವೆಚ್ಚವಾಗಿದೆ. ಉಳಿದ ಕಾಮಗಾರಿ ಪ್ರಗತಿಯಲ್ಲಿವೆ.

ವಿದ್ಯಾರ್ಥಿ ನಿಲಯಗಳು

ಸಮಾಜ ಕಲ್ಯಾಣ ಇಲಾಖೆ: ಎಸ್‌ಸಿ, ಎಸ್‌ಟಿ ವಿದ್ಯಾರ್ಥಿಗಳಿಗೆ 3 ಸರ್ಕಾರಿ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯ ನಿರ್ಮಾಣಕ್ಕೆ ₹21.50 ಕೋಟಿ ಮಂಜೂರು ಆಗಿದೆ.

ಸರ್ಕ್ಯೂಟ್ ಹೌಸ್ ಬಳಿ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನ ನಿರ್ಮಿಸಲು ಅಂದಾಜು ₹ 5 ಕೋಟಿ ಮೊತ್ತಕ್ಕೆ ಮಂಜೂರಾತಿಗಾಗಿ ಅಂದಾಜು ಪಟ್ಟಿ ಸಲ್ಲಿಕೆಯಾಗಿದೆ.

ಹೈಟೆಕ್ ವಸತಿಗೃಹ ಕಟ್ಟಡ

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ: ದಾವಣಗೆರೆ ನಗರ ಕೆ.ಟಿ.ಜೆ. ನಗರದಲ್ಲಿ ಹೈಟೆಕ್ ಬಾಲಕಿಯರ ವಸತಿಗೃಹ ಕಟ್ಟಡ ನಿರ್ಮಾಣದ ಕಾಮಗಾರಿಯು (₹12 ಕೋಟಿ ಮೊತ್ತ) ಮುಕ್ತಾಯದ ಹಂತದಲ್ಲಿದೆ.

ಎಸ್‌ಸಿ, ಎಸ್‌ಟಿ ಫಲಾನುಭವಿಗಳಿಗೆ ಕೊಳವೆಬಾವಿ ಭಾಗ್ಯ

ಸಣ್ಣ ನೀರಾವರಿ ಉಪವಿಭಾಗದಿಂದ ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ₹7.55 ಕೋಟಿ ಅನುದಾನದಲ್ಲಿ ವಿವಿಧ ಹಳ್ಳಗಳಿಗೆ ತಡೆಗೋಡೆ ನಿರ್ಮಾಣ ಹಾಗೂ ಪರಿಶಿಷ್ಟ ಜಾತಿಯ 25 ಫಲಾನುಭವಿಗಳಿಗೆ, ಪರಿಶಿಷ್ಟ ಪಂಗಡದ 16 ಫಲಾನುಭವಿಗಳಿಗೆ ಕೊಳವೆ ಬಾವಿ ಕೊರೆದು ಪಂಪ್ ಅಳವಡಿಸಿ ಸಂಪರ್ಕ ಕಲ್ಪಿಸಲಾಗಿದೆ.

ದಾವಣಗೆರೆಯ ಬಿಐಇಟಿ ಸಭಾಂಗಣದಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ ಸ್ಪರ್ಧಾತ್ಮಕ ಪರೀಕ್ಷಾ ಉಚಿತ ತರಬೇತಿ ಕೇಂದ್ರ 'ಸಂಕಲ್ಪ'ವನ್ನು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರು ಉದ್ಘಾಟಿಸಿದ್ದರು

ಒಳಾಂಗಣ ಕ್ರೀಡಾಂಗಣ

ಕ್ರೀಡಾ ಪಟುಗಳಿಗೆ ಉತ್ತೇಜನ ನೀಡಲು ಸ್ಮಾರ್ಟ್‌ಸಿಟಿ ಯೋಜನೆಯಡಿ ಡಿ.ಸಿ.ಎಂ. ಟೌನ್‌ಶಿಪ್ ಆವರಣದಲ್ಲಿ ₹6.50 ಕೋಟಿ ವೆಚ್ಚದಲ್ಲಿ ಅನಿಲ್‌ಕುಂಬ್ಳೆ ಒಳಾಂಗಣ ಕ್ರೀಡಾಂಗಣ (ಇಂಡೋರ್ ಸ್ಟೇಡಿಯಂ) ನಿರ್ಮಿಸಲಾಗಿದೆ.

ದಾವಣಗೆರೆ ಸ್ಮಾರ್ಟ್‌ಸಿಟಿ ಯೋಜನೆಯಡಿ ಡಿ.ಸಿ.ಎಂ. ಟೌನ್‌ಶಿಪ್ ಆವರಣದಲ್ಲಿ ₹6.50 ಕೋಟಿ ವೆಚ್ಚದಲ್ಲಿ ನಿರ್ಮಾಣಗೊಂಡಿರುವ ಅನಿಲ್‌ಕುಂಬ್ಳೆ ಒಳಾಂಗಣ ಕ್ರೀಡಾಂಗಣ

ಶಾಲಾ– ಕಾಲೇಜುಗಳಿಗೆ ಮೂಲ ಸೌಲಭ್ಯ

ದಾವಣಗೆರೆಯ ಜಿಲ್ಲಾ ಪಂಚಾಯತ್ ಎಂಜಿನಿಯರ್ ವಿಭಾಗದಿಂದ 2024–25ನೇ ಸಾಲಿನ ಕರ್ನಾಟಕ ಪಬ್ಲಿಕ್ ಶಾಲೆಗಳಲ್ಲಿ ಮೂಲಭೂತ ಸೌಕರ್ಯ ಅಭಿವೃದ್ಧಿ ಯೋಜನೆಯಡಿ ದಾವಣಗೆರೆ ಡಯಟ್ ಕಾಲೇಜ್ ದುರಸ್ತಿ ಮತ್ತು ಹಳೇಬಾತಿಯ ಸ.ಹಿ.ಪ್ರಾ. ಶಾಲೆಗೆ ಹೆಚ್ಚುವರಿ ಕೊಠಡಿ ಹಾಗೂ ಶೌಚಾಲಯ ನಿರ್ಮಾಣ ಕಾಮಗಾರಿಗೆ ₹38.70 ಲಕ್ಷ ಮೊತ್ತಕ್ಕೆ ಟೆಂಡರ್ ಕರೆಯಲಾಗಿದೆ.

2023–24 ಮತ್ತು 2024-25ನೇ ಸಾಲಿನ ಲೆಕ್ಕ ಶೀರ್ಷಿಕೆ 5054 ಎಸ್.ಸಿ.ಪಿ/ಟಿ.ಎಸ್.ಪಿ. ಯೋಜನೆಯಡಿ ₹1 ಕೋಟಿ ಮೊತ್ತದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ.

2022–23ನೇ ಸಾಲಿನ ವಿವೇಕ ಯೋಜನೆಯಡಿ ಸರ್ಕಾರಿ ಮೋತಿವೀರಪ್ಪ ಪಿಯು ಕಾಲೇಜ್, ಮಾಗನಹಳ್ಳಿ ಸರ್ಕಾರಿ ಪದವಿ ಪೂರ್ವ ಕಾಲೇಜ್, ರಾಜನಹಳ್ಳಿ ಸೀತಮ್ಮ ಪದವಿ ಪೂರ್ವ ಕಾಲೇಜ್, ಸರ್ಕಾರಿ ಪದವಿ ಪೂರ್ವ ಕಾಲೇಜ್, ಎಕ್ಸ್ ಮುನ್ಸಿಪಲ್ ಮತ್ತು ದೊಡ್ಡಬಾತಿಯಲ್ಲಿನ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಕಟ್ಟಡ ನಿರ್ಮಿಸಲು ₹ 5.82 ಕೋಟಿ ಮೊತ್ತದ ಕಾಮಗಾರಿ ಪೂರ್ಣಗೊಂಡಿದೆ.

2024–25ನೇ ಸಾಲಿನ ಲೆಕ್ಕ ಶೀರ್ಷಿಕೆ 5054ರ ಗ್ರಾಮೀಣ ರಸ್ತೆ ಮತ್ತು ಸೇತುವೆಗಳ ಕಾಮಗಾರಿಗಳಿಗೆ ₹20 ಕೋಟಿ ಮೊತ್ತಕ್ಕೆ (ಉತ್ತರ ಮತ್ತು ದಕ್ಷಿಣ) ಟೆಂಡರ್ ಕರೆಯಲಾಗಿದೆ.

2024–25ನೇ ಸಾಲಿನ ಸಾರ್ವಜನಿಕ ಶಿಕ್ಷಣ ಇಲಾಖೆಯ ಪ್ರಾಥಮಿಕ / ಪ್ರೌಢಶಾಲೆಗಳ ಕಟ್ಟಡ ದುರಸ್ತಿ ಕಾಮಗಾರಿಗಳಿಗೆ ₹1.08 ಕೋಟಿ ಮೊತ್ತಕ್ಕೆ ಟೆಂಡರ್ ಕರೆಯಲಾಗಿದೆ.

'ಧೂಡಾ'ದಿಂದ ನಿವೇಶನಗಳ ಹಂಚಿಕೆ

ದಾವಣಗೆರೆ- ಹರಿಹರ ನಗರಾಭಿವೃದ್ಧಿ ಪ್ರಾಧಿಕಾರ (ಧೂಡಾ): 2023–24ನೇ ಸಾಲಿನಿಂದ ಇಲ್ಲಿಯವರೆಗೆ ₹ 70.19 ಕೋಟಿ ಮೊತ್ತಕ್ಕೆ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಮಂಜೂರಾತಿ ದೊರಕಿದ್ದು, ಕೆಲವು ಕಾಮಗಾರಿಗಳು ಪ್ರಗತಿಯಲ್ಲಿವೆ. ಬಾಕಿ ಕಾಮಗಾರಿಗಳು ಟೆಂಡರ್ ಪ್ರಕ್ರಿಯೆಯಲ್ಲಿವೆ.

ದಾವಣಗೆರೆ ಅಖ್ತರ್ ರಜಾವುಲ್ಲಾ ಸರ್ಕಲ್‌ನಿಂದ ಮಾಗಾನಹಳ್ಳಿ ರಸ್ತೆಯವರೆಗೆ ರಿಂಗ್ ರಸ್ತೆಯಲ್ಲಿದ್ದ ಅನಧಿಕೃತವಾಗಿ ಗುಡಿಸಲುಗಳಲ್ಲಿ ವಾಸಿಸುತ್ತಿದ್ದ ಬಿಪಿಎಲ್ ಕುಟುಂಬದವರನ್ನು ತೆರವುಗೊಳಿಸಿ ಅವರಿಗೆ ಅಧಿಕೃತ ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ. ರಿಂಗ್ ರಸ್ತೆಯನ್ನು ಅಂದಾಜು ₹4.95 ಕೋಟಿ ವೆಚ್ಚದಲ್ಲಿ ಅಭಿವೃದ್ಧಿ ಪಡಿಸಲಾಗುತ್ತಿದೆ. ಸಿ.ಸಿ. ಚರಂಡಿ ನಿರ್ಮಾಣದ ಕಾಮಗಾರಿ ಕೈಗೊಳ್ಳಲಾಗಿದೆ. ಪಾದಚಾರಿ ರಸ್ತೆ ನಿರ್ಮಾಣ ಹಾಗೂ ಬೀದಿ ದೀಪಗಳನ್ನು ಅಳವಡಿಸುವ ಕಾಮಗಾರಿಗೆ ₹ 85 ಲಕ್ಷ ಮೊತ್ತಕ್ಕೆ ಅಂದಾಜು ಪಟ್ಟಿಗೆ ಅನುಮತಿ ಪಡೆಯಲಾಗಿದೆ.

ಬಾತಿ ಕೆರೆ ಅಭಿವೃದ್ಧಿಪಡಿಸಲು ಅಂದಾಜು ₹ 9.33 ಕೋಟಿ ಮೊತ್ತ ಹಾಗೂ ನಾಗನೂರು ಕೆರೆಯನ್ನು ಅಭಿವೃದ್ಧಿಪಡಿಸಲು ಅಂದಾಜು ₹ 2.30 ಕೋಟಿ ಮೊತ್ತಕ್ಕೆ ಮಂಜೂರಾತಿ ಪಡೆದಿದ್ದು, ಟೆಂಡರ್ ಕರೆದು ಕಾಮಗಾರಿ ಅನುಷ್ಠಾನಗೊಳಿಸಲಾಗುತ್ತಿದೆ.

ದಾವಣಗೆರೆಯ ವಿವಿಧ ಉದ್ಯಾನವನಗಳನ್ನು ಅಭಿವೃದ್ಧಿಪಡಿಸಲು ಅಂದಾಜು ₹ 5.20 ಕೋಟಿಗಳ ಮೊತ್ತಕ್ಕೆ ಟೆಂಡರ್ ಕರೆಯಲಾಗಿದೆ.

ನಾಗನೂರು ರಸ್ತೆಯಿಂದ ಶಾಮನೂರು ಗ್ರಾಮದ ಶಿವ-ಪಾರ್ವತಿ ಬಡಾವಣೆವರೆಗೆ ಮುಖ್ಯ ರಸ್ತೆಯನ್ನು ಅಭಿವೃದ್ಧಿಪಡಿಸಲು ಅಂದಾಜು ₹ 3 ಕೋಟಿ ಮೊತ್ತಕ್ಕೆ ವರದಿ ತಯಾರಿಸಿದ್ದು, ಅನುಮೋದನೆಗಾಗಿ ಕಳುಹಿಸಲಾಗಿದೆ.

ದೇವರಾಜ್ ಅರಸ್ ಬಡಾವಣೆಯ ವರ್ತುಲ ರಸ್ತೆಯಲ್ಲಿ (ಆರ್.ಟಿ.ಒ. ಆಫೀಸ್ ಎದುರುಗಡೆ) ಪ್ರಾಧಿಕಾರದ ನಿವೇಶನದಲ್ಲಿ ವಾಣಿಜ್ಯ ಮಳಿಗೆ ಸಂಕೀರ್ಣ ನಿರ್ಮಿಸಲು ₹ 5 ಕೋಟಿ ಮೊತ್ತ ಮಂಜೂರಾಗಿದ್ದು, ಕಾಮಗಾರಿ ಪ್ರಗತಿಯಲ್ಲಿದೆ.

ಹೊಳಪು ಕಂಡ ರಸ್ತೆಗಳು

ಲೋಕೋಪಯೋಗಿ ಇಲಾಖೆ: ಕೊಂಡಜ್ಜಿ ಬಸಪ್ಪ ವೃತ್ತದಿಂದ ರಾಜನಹಳ್ಳಿ ಹನುಮಂತಪ್ಪ ಛೌತ್ರಿ ವರಗೆ ₹ 45 ಕೋಟಿ ಮೊತ್ತದಲ್ಲಿ ಮಲ್ಪೆ– ಮೊಳಕಾಲ್ಮೂರು ರಾಜ್ಯ ಹೆದ್ದಾರಿ 65ರ ಅಭಿವೃದ್ಧಿ ಕಾಮಗಾರಿ, ದಾವಣಗೆರೆ- ಲೋಕಿಕೆರೆ ಜಿಲ್ಲಾ ಮುಖ್ಯ ರಸ್ತೆ (ಹದಡಿ ರಸ್ತೆಯಲ್ಲಿರುವ ಗಣೇಶ ದೇವಸ್ಥಾನದಿಂದ ಚಾನಲ್‌ವರೆಗೆ ಮತ್ತು ಚಾನಲ್‌ನಿಂದ ಬೆಳವನೂರುವರೆಗೆ), ದಾವಣಗೆರೆ-ಮಲೇಬೆನ್ನೂರು ರಾಜ್ಯ ಹೆದ್ದಾರಿ (ಶಾಮನೂರಿನಿಂದ ಜರೀಕಟ್ಟೆವರೆಗೆ) ಹಾಗೂ ದಾವಣಗೆರೆ-ಹುಣಸೆಕಟ್ಟೆ ರಾಜ್ಯ -ಹೆದ್ದಾರಿ (ಬಂಬೂಬಜಾರ್‌ನಿಂದ ಬಸಾಪುರ ಗ್ರಾಮದ ವರೆಗೆ) ರಸ್ತೆ ಅಭಿವೃದ್ಧಿ ಕಾಮಗಾರಿಗಳು ಪ್ರಗತಿಯಲ್ಲಿವೆ.

ರಾಜ್ಯ ಹೆದ್ದಾರಿ ಸುಧಾರಣೆಯಲ್ಲಿ ಒಟ್ಟು ₹21 ಕೋಟಿ ಮೊತ್ತಕ್ಕೆ ಐಟಿಐ ಕಾಲೇಜ್‌ನಿಂದ ಗಣೇಶ ದೇವಸ್ಥಾನದ ವರೆಗೆ, ಹಳೇ ಪೂನಾ-ಬೆಂಗಳೂರು ರಸ್ತೆಯಲ್ಲಿರುವ ಬಿ.ಎಸ್.ಎನ್.ಎಲ್. ಕಚೇರಿಯಿಂದ ಮಹಾತ್ಮಗಾಂಧಿ ವೃತ್ತದವರೆಗೆ, ಐಟಿಐ ಕಾಲೇಜ್‌ನಿಂದ ಹದಡಿ ರಸ್ತೆಯ ಮುಖಾಂತರ ಸೋಮೇಶ್ವರ ಆಸ್ಪತ್ರೆವರೆಗೆ, ಹಳೇ ಪೂನಾ-ಬೆಂಗಳೂರು ರಸ್ತೆಯಲ್ಲಿರುವ ದೊಡ್ಡಬಾತಿ ಗ್ರಾಮದ ಪರಿಮಿತಿಯಲ್ಲಿ ಸಿ.ಸಿ. ಚರಂಡಿ ಮತ್ತು ಪಾದಚಾರಿ ನಿರ್ಮಾಣದ ಕಾಮಗಾರಿ, ದಾವಣಗೆರೆ -ಹೊಳಲು ರಾಜ್ಯ ಹೆದ್ದಾರಿ ಅಭಿವೃದ್ಧಿ ಕಾಮಗಾರಿಗಳು ಪ್ರಗತಿಯಲ್ಲಿವೆ.

ಮಲ್ಪೆ -ಮೊಳಕಾಲ್ಮೂರು ರಾಜ್ಯಹೆದ್ದಾರಿ-65 ರಸ್ತೆಯ ಬೇತೂರು ಹಳ್ಳಕ್ಕೆ ಸೇತುವೆ ನಿರ್ಮಾಣದ ಕಾಮಗಾರಿಗೆ ₹20 ಕೋಟಿ ಮಂಜೂರಾಗಿದೆ.

ಬೇತೂರು- ದೊಡ್ಡಬಾತಿ ಜಿಲ್ಲಾ ಮುಖ್ಯ ರಸ್ತೆಯ ದೊಡ್ಡಬೂದಿಹಾಳ ಹತ್ತಿರವಿರುವ ಹಳ್ಳಕ್ಕೆ ಸೇತುವೆ ನಿರ್ಮಾಣ ಕಾಮಗಾರಿಗೆ ಅಂದಾಜು ₹ 5 ಕೋಟಿ ಮೊತ್ತಕ್ಕೆ ಟೆಂಡರ್ ಕರೆಯಲಾಗಿದೆ.

ಬಾಡಾ ರಸ್ತೆಯಲ್ಲಿರುವ ಆಂಜನೇಯ ಕಾಟನ್ ಮಿಲ್‌ನಿಂದ ಕುರ್ಕಿ ಗ್ರಾಮದ ಸಾಯಿಬಾಬಾ ದೇವಸ್ಥಾನದವರೆಗೆ ಬೀದಿ ದೀಪ ಅಳವಡಿಸುವ ₹ 5.15 ಕೋಟಿ ವೆಚ್ಚದ ಕಾಮಗಾರಿ ಮುಗಿಯುವ ಹಂತದಲ್ಲಿದೆ.

ದಾವಣಗೆರೆ ಜಿಲ್ಲೆಯಲ್ಲಿ ಪಂಚ ಗ್ಯಾರಂಟಿ ಯೋಜನೆಗಳು

(2025ರ ಅಗಸ್ಟ್ ಅಂತ್ಯಕ್ಕೆ)

- **ಗೃಹಜ್ಯೋತಿ ಯೋಜನೆಯಡಿ ಆರ್.ಆರ್.ಸಂಖ್ಯೆ ಹೊಂದಿದ ಕುಟುಂಬಗಳಿಗೆ ₹ *465.64* ಕೋಟಿ ವಿದ್ಯುತ್ ಸಬ್ಸಿಡಿ**
- **ಯುವನಿಧಿ ಯೋಜನೆಯಡಿ *8704* ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ ₹ *19.58* ಕೋಟಿ ಜಮೆ**
- **ಅನ್ನಭಾಗ್ಯ ಯೋಜನೆಯಡಿ *9.55* ಲಕ್ಷ ಕಾರ್ಡ್‌ದಾರರು ಹಾಗೂ *69.13* ಲಕ್ಷ ಫಲಾನುಭವಿಗಳಿಗೆ *4.22* ಲಕ್ಷ ಟನ್ ಆಹಾರ ಧಾನ್ಯ ವಿತರಣೆ**
- **ಗೃಹಲಕ್ಷ್ಮಿ ಯೋಜನೆಯಡಿ *3.62* ಲಕ್ಷ ಯಜಮಾನಿಯರ ಬ್ಯಾಂಕ್ ಖಾತೆಗೆ ₹ *1,472* ಕೋಟಿ ಜಮೆ**
- **ಶಕ್ತಿ ಯೋಜನೆಯಡಿ ಕೆಎಸ್‌ಆರ್‌ಟಿಸಿ ದಾವಣಗೆರೆ ವಿಭಾಗಕ್ಕೆ ₹ *301.22* ಕೋಟಿ ಆದಾಯ**

ಪಾಲಿಕೆಯಿಂದ ಅಭಿವೃದ್ಧಿ ಕಾರ್ಯ

ದಾವಣಗೆರೆ ಮಹಾನಗರ ಪಾಲಿಕೆ ವತಿಯಿಂದ 2024–25ನೇ ಸಾಲಿನ ಎಂ.ಜಿ.ಎನ್.ವೈ ಯೋಜನೆಯಡಿ ಒಟ್ಟು ₹ 200 ಕೋಟಿ ಮೊತ್ತ ಮಂಜೂರಾಗಿದೆ. ₹ 128 ಕೋಟಿ ಮೊತ್ತದಲ್ಲಿ ಸಿ.ಸಿ.ರಸ್ತೆ, ಸಿ.ಸಿ.ಚರಂಡಿ, ಪಾದಚಾರಿ ರಸ್ತೆ ನಿರ್ಮಾಣ ಮತ್ತು ರಿಂಗ್ ರಸ್ತೆ ಅಭಿವೃದ್ಧಿಪಡಿಸಲಾಗುತ್ತಿದೆ. ಬಸಾಪುರ ಗ್ರಾಮದಿಂದ ಆವರಗೆರೆ ಗ್ರಾಮದ ಹತ್ತಿರ ಹಳೆ ಪಿ.ಬಿ.ರಸ್ತೆಗೆ ಸೇರುವ ರಿಂಗ್ ರಸ್ತೆಯನ್ನು ಅಭಿವೃದ್ಧಿಪಡಿಸಲು ₹ 62 ಕೋಟಿ ಮೊತ್ತದ ಕಾಮಗಾರಿ ಪ್ರಾರಂಭಿಸಲಾಗುತ್ತಿದೆ.

2023–24, 2024–25ನೇ ಸಾಲಿನ 15ನೇ ಹಣಕಾಸು ಯೋಜನೆ ಬೇಸಿಕ್ ಅನುದಾನದಡಿ ರಸ್ತೆ ಅಭಿವೃದ್ಧಿ ಉದ್ಯಾನವನ ಅಭಿವೃದ್ಧಿ, ಸಿಸಿ ಚರಂಡಿ, ಒಳಚರಂಡಿ ಕಾಮಗಾರಿ ಹಾಗೂ ಇತರೆ ಅಭಿವೃದ್ಧಿ ಕಾಮಗಾರಿಗಳನ್ನು ಕ್ರಮವಾಗಿ ₹ 11.95 ಕೋಟಿ, ₹ 13.03 ಕೋಟಿ ವೆಚ್ಚದಲ್ಲಿ ಪೂರ್ಣಗೊಳಿಸಲಾಗಿದೆ.

2023–24, 2024–25, 2025–26ನೇ ಸಾಲಿನ ಎಸ್.ಎಫ್.ಸಿ. ಅನ್‌ಟೈಡ್ ಕ್ಯಾಪಿಟಲ್ ಅಸೆಟ್ ಯೋಜನೆಯಡಿ ವಿಕಲಚೇತನರಿಗೆ ವಿದ್ಯಾಭ್ಯಾಸದ ಧನ ಸಹಾಯ, ರಸ್ತೆ ಅಭಿವೃದ್ಧಿ ಕಾಮಗಾರಿ, ಪಾದಚಾರಿ ರಸ್ತೆ ನಿರ್ಮಾಣ, ಸಿ.ಸಿ.ಚರಂಡಿ ನಿರ್ಮಾಣದ ಕಾಮಗಾರಿ, ವಿಕಲಚೇತನರಿಗೆ ಗ್ರಂಥಾಲಯದ ಕಟ್ಟಡ ಹಾಗೂ ಇತರೆ ಅಭಿವೃದ್ಧಿ ಕಾಮಗಾರಿಗಳನ್ನು ಕ್ರಮವಾಗಿ ₹ 9.75 ಕೋಟಿ, ₹ 8.12 ಕೋಟಿ ಮತ್ತು ₹ 1.38 ಕೋಟಿ ಮೊತ್ತದಲ್ಲಿ ನಿರ್ವಹಿಸಲಾಗಿದೆ.

ಪರಿಶಿಷ್ಟ ಜಾತಿ ಕಾಲೊನಿಗಳಲ್ಲಿ ರಸ್ತೆ ಅಭಿವೃದ್ಧಿ, ಸಿ.ಸಿ.ಚರಂಡಿ, ಒಳಚರಂಡಿ ಕಾಮಗಾರಿಗಳನ್ನು ಕ್ರಮವಾಗಿ ₹89 ಲಕ್ಷ, ₹ 84 ಲಕ್ಷ ಮತ್ತು ₹84 ಲಕ್ಷ ಮೊತ್ತದಲ್ಲಿ ನಿರ್ವಹಿಸಲಾಗಿದೆ.

ಪರಿಶಿಷ್ಟ ಪಂಗಡದ ಕಾಲೊನಿಗಳಲ್ಲಿ ರಸ್ತೆ ಅಭಿವೃದ್ಧಿ, ಸಿ.ಸಿ.ಚರಂಡಿ, ಒಳಚರಂಡಿ ಕಾಮಗಾರಿಗಳನ್ನು ಕ್ರಮವಾಗಿ ₹39 ಲಕ್ಷ, ₹34 ಲಕ್ಷ ಮತ್ತು ₹35 ಲಕ್ಷ ಮೊತ್ತದಲ್ಲಿ ನಿರ್ವಹಿಸಲಾಗಿದೆ.

2023–24, 2024–25, 2025–26ನೇ ಸಾಲಿನ ಎಸ್.ಎಫ್.ಸಿ. ಕುಡಿಯುವ ನೀರು ಅನುದಾನದಡಿ ವಿವಿಧ ಬಡಾವಣೆಗಳಲ್ಲಿ ಕೊಳವೆ ಬಾವಿ ಕೊರೆದು ಮೋಟರ್ ಅಳವಡಿಸುವ ಕಾಮಗಾರಿಗಳನ್ನು ಅಂದಾಜು ₹ 9.04 ಲಕ್ಷ, ₹ 10 ಲಕ್ಷ ಮತ್ತು ₹ 10 ಲಕ್ಷ ಮೊತ್ತಕ್ಕೆ ನಿರ್ವಹಿಸಲಾಗಿದೆ.

ಇದೇ ಅವಧಿಯಲ್ಲಿ ಮಹಾನಗರ ಪಾಲಿಕೆ ಅನುದಾನದಡಿ ರಸ್ತೆ ಅಭಿವೃದ್ಧಿ, ಚರಂಡಿ, ಒಳಚರಂಡಿ ನೀರು ಸರಬರಾಜು, ಘನತ್ಯಾಜ್ಯ ವಸ್ತು ನಿರ್ವಹಣೆ, ಬೀದಿ ದೀಪ ಅಳವಡಿಸುವ ಕಾಮಗಾರಿಗಳನ್ನು ಕ್ರಮವಾಗಿ ₹ 71.18 ಕೋಟಿ, ₹89.60 ಕೋಟಿ ಮತ್ತು ₹ 38.34 ಕೋಟಿ ಮೊತ್ತದಲ್ಲಿ ನಿರ್ವಹಿಸಲಾಗಿದೆ.

ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ

ದಾವಣಗೆರೆ ಸ್ಮಾರ್ಟ್ ಸಿಟಿ ಮತ್ತು ಕೆಎಸ್‌ಆರ್‌ಟಿಸಿ ಸಹಯೋಗದೊಂದಿಗೆ ಬಸ್ ನಿಲ್ದಾಣದ ಪುನರ್ ಅಭಿವೃದ್ಧಿ ಕಾಮಗಾರಿಯು ₹ 120 ಕೋಟಿ ಮೊತ್ತದಲ್ಲಿ ಪೂರ್ಣಗೊಂಡಿದ್ದು, ಸುಸಜ್ಜಿತ ಬಸ್ ನಿಲ್ದಾಣ ಲೋಕಾರ್ಪಣೆಗೊಂಡಿದೆ.

ದಾವಣಗೆರೆ ನಗರದಲ್ಲಿರುವ ಅತ್ಯಾಧುನಿಕ ಸೌಲಭ್ಯ ಹೊಂದಿರುವ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ

ಸೋಮವಾರ, ಸೆಪ್ಟೆಂಬರ್ 22, 2025 | ₹ 7.00

prajavani.net prajavani

www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಭರತ ನಾಟ್ಯ

ಹುಬ್ಬಳ್ಳಿಯಲ್ಲಿ ಭಾನುವಾರ ನಡೆದ ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಭರತನಾಟ್ಯ ಪ್ರದರ್ಶಿಸಿದ ಕುಮಾರಿ ಪೃಥ್ವಿ

ನಾಡಹಬ್ಬಕ್ಕೆ ಸಿದ್ಧತೆ

ಮೈಸೂರು ದಸರಾ ಉದ್ಘಾಟನೆಗಾಗಿ ಚಾಮುಂಡಿಬೆಟ್ಟದಲ್ಲಿ ಚಾಮುಂಡೇಶ್ವರಿ ದೇವಿಯ ಉತ್ಸವಮೂರ್ತಿಯನ್ನು ಪ್ರಧಾನ ಅರ್ಚಕ ಶಶಿಶೇಖರ್ ದೀಕ್ಷಿತ್ ಸಿದ್ಧಗೊಳಿಸಿದರು

‘ರಾಜ್ಯಗಳ ಮೇಲೆ ಭಾಷಾ ಹೇರಿಕೆ ಇಲ್ಲ’ 9

ನಿವೃತ್ತಿ ಜೀವನ: ಯಾವುದು ಉತ್ತಮ? 8

ಪರಿಷ್ಕೃತ ಜಿಎಸ್‌ಟಿ ಇಂದಿನಿಂದ

ಎಫ್‌ಎಂಸಿಜಿ, ಎಲೆಕ್ಟ್ರಾನಿಕ್ಸ್ ಉಪಕರಣ ಸೇರಿ ಹಲವು ವಸ್ತುಗಳು ಅಗ್ಗ

ನವದೆಹಲಿ (ಪಿಟಿಐ): ನಿತ್ಯ ಬಳಕೆಯ ಉತ್ಪನ್ನಗಳು, ಆಹಾರ ಉತ್ಪನ್ನಗಳು, ವಾಹನಗಳು ಸೇರಿದಂತೆ ಸರಿಸುಮಾರು 375 ಉತ್ಪನ್ನಗಳ ಬೆಲೆಯು ನವರಾತ್ರಿಯ ಮೊದಲ ದಿನವಾದ ಸೋಮವಾರದಿಂದ ಕಡಿಮೆ ಆಗಲಿವೆ.

ವಿವಿಧ ಉತ್ಪನ್ನಗಳು ಹಾಗೂ ಸೇವೆಗಳ ಮೇಲಿನ ತೆರಿಗೆ ಪ್ರಮಾಣವನ್ನು ಜಿಎಸ್‌ಟಿ ಮಂಡಳಿ ಪರಿಷ್ಕರಿಸಿದ್ದು, ಪರಿಷ್ಕೃತ ದರಗಳು ಸೋಮವಾರದಿಂದ ಜಾರಿಗೆ ಬರುತ್ತಿವೆ. ಇದರ ಪ್ರಯೋಜನವನ್ನು ಬಹುತೇಕ ಕಂಪನಿಗಳು ಗ್ರಾಹಕರಿಗೆ ವರ್ಗಾವಣೆ ಮಾಡಿವೆ.

ಇಷ್ಟು ವರ್ಷ ಜಿಎಸ್‌ಟಿ ವ್ಯವಸ್ಥೆಯ ಅಡಿಯಲ್ಲಿ ನಾಲ್ಕು ತೆರಿಗೆ ಹಂತಗಳು (ಶೇ 5, 12, 18 ಮತ್ತು 28) ಇದ್ದವು. ಆದರೆ ಇನ್ನು ಮುಂದೆ ಜಿಎಸ್‌ಟಿ ವ್ಯವಸ್ಥೆಯ ಅಡಿಯಲ್ಲಿ ಎರಡು ತೆರಿಗೆ ಹಂತಗಳು (ಶೇ 5 ಮತ್ತು 18) ಇರಲಿವೆ. ಐಷಾರಾಮಿ ಉತ್ಪನ್ನಗಳು ಹಾಗೂ ತಂಬಾಕಿನ ಉತ್ಪನ್ನಗಳಿಗೆ ಶೇ 40ರಷ್ಟು ತೆರಿಗೆ ಇರಲಿದೆ. ಈ ಬದಲಾವಣೆಗಳ ಪರಿಣಾಮವಾಗಿ ದೇಶದ ಮಾರುಕಟ್ಟೆಯಲ್ಲಿ ಮುಂದಿನ ದಿನಗಳಲ್ಲಿ ಬೇಡಿಕೆ ಹೆಚ್ಚಾಗಲಿದೆ ಎಂದು ನಿರೀಕ್ಷಿಸಲಾಗಿದೆ.

ತ್ವರಿತವಾಗಿ ಬಿಕರಿಯಾಗುವ ಗ್ರಾಹಕ ಬಳಕೆ ಉತ್ಪನ್ನಗಳನ್ನು (ಎಫ್‌ಎಂಸಿಜಿ) ತಯಾರಿಸುವ ಕಂಪನಿಗಳು ಪರಿಷ್ಕೃತ ದರವನ್ನು ಪ್ರಕಟಿಸಿವೆ. ಸೋಪು, ಶಾಂಪೂ, ಟೂತ್‌ಪೇಸ್ಟ್ ಸೇರಿದಂತೆ ತಮ್ಮ ಹತ್ತು ಹಲವು ಉತ್ಪನ್ನಗಳ ಮೇಲೆ ಹೊಸ ಎಂಆರ್‌ಪಿ ನಮೂದಿಸಿವೆ.

ಕುರುಕಲು, ಕಾಫಿ ಮತ್ತು ಚಹಾ ಪುಡಿ, ಐಸ್‌ಕ್ರೀಂ, ಚಾಕೊಲೇಟ್ ಹಾಗೂ ಇತರ ಆಹಾರ ವಸ್ತುಗಳ ತಯಾರಿಕಾ ಕಂಪನಿಗಳು ಕೂಡ ತೆರಿಗೆ ಇಳಿಕೆಯ ಪ್ರಯೋಜನವನ್ನು ಗ್ರಾಹಕರಿಗೆ ವರ್ಗಾಯಿಸಲು ಸಜ್ಜಾಗಿವೆ.

8

ತೆರಿಗೆ ಕಡಿತ: ಯಾವುದಕ್ಕೆ ಎಷ್ಟು?



* ₹2,500ಕ್ಕಿಂತ ಕಡಿಮೆ ಬೆಲೆಯವು ** ಹೋಟೆಲ್ ಕೊಠಡಿಗಳ ಬಾಡಿಗೆ ಶುಲ್ಕ ₹7,500ವರೆಗೆ

ಆರ್ಥಿಕ ಬೆಳವಣಿಗೆಗೆ ವೇಗ: ಪ್ರಧಾನಿ

ಜಿಎಸ್‌ಟಿ ದರಗಳಲ್ಲಿನ ಪರಿಷ್ಕರಣೆಯು ಭಾರತದ ಆರ್ಥಿಕ ಬೆಳವಣಿಗೆ ದರವನ್ನು ಹೆಚ್ಚಿಸಲಿದೆ ಎಂದು ಹೇಳಿರುವ ಪ್ರಧಾನಿ ನರೇಂದ್ರ ಮೋದಿ, ಆತ್ಮನಿರ್ಭರ ಭಾರತ ನಿರ್ಮಾಣಕ್ಕೆ ಇದು ದೊಡ್ಡದಾದ ಹಾಗೂ ಮುಖ್ಯವಾದ ಹೆಜ್ಜೆ ಎಂದು ಹೇಳಿದ್ದಾರೆ.

ಅಲ್ಲದೆ, ಸ್ವದೇಶಿ ಉತ್ಪನ್ನಗಳ ಬಳಕೆಯು ದೇಶದ ಸಮೃದ್ಧಿಗೆ ಇರುವ ಮಾರ್ಗ ಎಂದು ಪ್ರತಿಪಾದಿಸಿದ್ದಾರೆ.

ಜಿಎಸ್‌ಟಿ ಸುಧಾರಣಾ ಕ್ರಮಗಳು ಜಾರಿಗೆ ಬರುವ ಹಿಂದಿನ ದಿನವಾದ ಭಾನುವಾರ ದೇಶವನ್ನು ಉದ್ದೇಶಿಸಿ ಮಾತನಾಡಿದ ಮೋದಿ ಅವರು, ಸ್ವದೇಶಿ ಉತ್ಪನ್ನಗಳ ಬಳಕೆಯು ದೇಶದ ಸ್ವಾತಂತ್ರ್ಯ ಚಳವಳಿಗೆ ಬಲ ನೀಡಿದ್ದ ಬಗೆಯಲ್ಲೇ ದೇಶದ ಸಮೃದ್ಧಿಗೂ ಬಲ ತಂದುಕೊಡುತ್ತದೆ ಎಂದಿದ್ದಾರೆ.

8

ಸಮೀಕ್ಷೆಯನ್ನು ಮುಂದೂಡಲು ಆಗ್ರಹ

ಕಲಬುರಗಿ: ‘ರಾಜ್ಯ ಹಿಂದುಳಿದ ವರ್ಗಗಳ ಆಯೋಗ ನಡೆಸಲು ಉದ್ದೇಶಿಸಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯನ್ನು ಮುಂದೂಡಬೇಕು’ ಎಂದು ಪಂಚಪೀಠಾಧಿಪತಿಗಳು ಒತ್ತಾಯಿಸಿದ್ದಾರೆ.

ವಿವರ 6

ಕೆಐಒಸಿಎಲ್ ವಿರುದ್ಧ ಗ್ರಾಮಸಭೆ ನಿರ್ಣಯ

● ಹರಿಶಂಕರ್ ಆರ್.

ಬಳ್ಳಾರಿ: ಕುದುರೆಮುಖ ಕಬ್ಬಿಣದ ಅದಿರು ಕಂಪನಿಯ (ಕೆಐಒಸಿಎಲ್) ಉದ್ದೇಶಿತ ದೇವದಾರಿ ಗಣಿಗೆ ಮತ್ತೊಂದು ಅಡ್ಡಿ ಎದುರಾಗಿದೆ. ಗಣಿಯ ವಿರುದ್ಧ ಸ್ಥಳೀಯ ಗ್ರಾಮ ಪಂಚಾಯಿತಿಯ ವಿಶೇಷ ಗ್ರಾಮಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗಿದೆ.

ದೇವದಾರಿ ಗಣಿಗೆ ಸಂಬಂಧಿಸಿ ಕೆಐಒಸಿಎಲ್ ಮತ್ತು ಅರಣ್ಯ ಇಲಾಖೆ ನಡುವಿನ ನ್ಯಾಯಾಂಗ ಹೋರಾಟದಲ್ಲಿ ಕೋರ್ಟ್ ಕೆಐಒಸಿಎಲ್ ಪರ ಇತ್ತೀಚೆಗೆ ಆದೇಶ ನೀಡಿದೆ. ಈ ಮಧ್ಯೆ, ಸಂಡೂರು ತಾಲ್ಲೂಕಿನ ನರಸಿಂಗಪುರ ಗ್ರಾಮ ಪಂಚಾಯಿತಿಯ ವಿಶೇಷ ಗ್ರಾಮ ಸಭೆ ಶನಿವಾರ ಜರುಗಿತು.

6

ಗ್ರಾಮದ ಹಿತದ ನಿರ್ಣಯವನ್ನು ಚರ್ಚಿಸಿ ಕೈಗೊಂಡಿದ್ದೇವೆ. ಇದನ್ನೂ ಮೀರಿ ಕೆಐಒಸಿಎಲ್ ಗಣಿಗಾರಿಕೆಗೆ ಮುಂದಾದರೆ ಅಪ್ಪಿಕೊ ಚಳವಳಿ ಆರಂಭಿಸುತ್ತೇವೆ

ಮೌನೇಶ್, ನರಸಿಂಗಪುರ ಗ್ರಾಮಸ್ಥ

ಗ್ರಾಮಸಭೆಯ ನಿರ್ಣಯಗಳಿಗೆ ಮಾನ್ಯತೆ ಇರುವುದೇನೋ ನಿಜ. ಆದರೆ, ಮುಂದಿನ ಸಭೆಗಳಲ್ಲಿ ಬದಲಿಸಲು ಅವಕಾಶಗಳಿವೆ

ಮೊಹಮದ್ ಹ್ಯಾರಿಸ್ ಸುಮೇರ್, ಜಿಲ್ಲಾ ಪಂಚಾಯಿತಿ ಸಿಇಒ

ಸೆ.30ರೊಳಗೆ ಎಸ್‌ಐಆರ್‌ಗೆ ಸಜ್ಜಾಗಿ

ನವದೆಹಲಿ (ಪಿಟಿಐ): ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಗೆ ಸೆಪ್ಟೆಂಬರ್ 30ರೊಳಗೆ ಸಜ್ಜಾಗುವಂತೆ ಕೇಂದ್ರ ಚುನಾವಣಾ ಆಯೋಗವು (ಸಿಇಸಿ) ವಿವಿಧ ರಾಜ್ಯಗಳ ಮುಖ್ಯ ಚುನಾವಣಾ ಅಧಿಕಾರಿಗಳಿಗೆ ಸೂಚಿಸಿದೆ. ಈ ಮೂಲಕ ಅಕ್ಟೋಬರ್–ನವೆಂಬರ್ ವೇಳೆಗೆ ದೇಶದಾದ್ಯಂತ ಎಸ್‌ಐಆರ್ ನಡೆಸುವ ಸೂಚನೆ ನೀಡಿದೆ.

ಎಸ್‌ಐಆರ್ ಕುರಿತು ವಿವಿಧ ರಾಜ್ಯಗಳ ಮುಖ್ಯ ಚುನಾವಣಾ ಅಧಿಕಾರಿಗಳೊಂದಿಗೆ ಆಯೋಗದ ಹಿರಿಯ ಅಧಿಕಾರಿಗಳು ಈಚೆಗೆ ಮಹತ್ವದ ಸಭೆ ನಡೆಸಿದ್ದರು. ಎಸ್‌ಐಆರ್ ಪ್ರಕ್ರಿಯೆಗೆ ಸಜ್ಜಾಗಲು ಸೆಪ್ಟೆಂಬರ್ 30ರ ಗಡುವು ನಿಗದಿಪಡಿಸಲಾಗಿದೆ ಎಂದು ಆಯೋಗದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

9

ಆಧಾರ್‌ಗೆ ಚಿಪ್ ಅಳವಡಿಸಿ

ಲಖನೌ: ನಕಲಿ ಆಧಾರ್ ಕಾರ್ಡ್‌ಗಳನ್ನು ಹೊಂದುವುದನ್ನು ತಪ್ಪಿಸಲು ಆಧಾರ್ ಕಾರ್ಡ್‌ಗಳಿಗೆ ಚಿಪ್ ಅಳವಡಿಸುವ ವ್ಯವಸ್ಥೆ ಜಾರಿಯಾಗಬೇಕು ಎಂದು ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಆಗ್ರಹಿಸಿದ್ದಾರೆ.

ಔರೈಯಾ ಜಿಲ್ಲೆಯ ಪಕ್ಷದ ಮುಖಂಡರ ಜತೆ ಚುನಾವಣಾ ಸಿದ್ಧತೆಗಳ ಕುರಿತು ಅವರು ಭಾನುವಾರ ಚರ್ಚೆ ನಡೆಸಿದರು. ‘ನಕಲಿ ಆಧಾರ್ ಕಾರ್ಡ್ ಬಳಸಿ ಚುನಾವಣೆಯಲ್ಲಿ ಮತ ಹಾಕುವುದನ್ನು ತಪ್ಪಿಸಲು ಆಧಾರ್ ಕಾರ್ಡ್‌ಗಳಿಗೆ ಚಿಪ್ ಅಳವಡಿಸಬೇಕು’ ಎಂದು ಅವರು ಈ ವೇಳೆ ಹೇಳಿದ್ದಾರೆ.

* Applicable only on selected models. ** Finance at the sole discretion of the financier. # Ex-showroom price of select variants in Karnataka. Price mentioned are applicable from 22nd September, 2025. ## Price benefit from revised GST rates on TVS Raider SX variant. Accessories shown may not be part of the standard fitment. Limited period offer. T&C apply.

FOR ALL INSTITUTIONAL/BULK REQUIREMENTS PLEASE MAIL corporate.customersupport@tvsmotor.com

dentsu/pv blr/10/25

ಬನ್ನಿ, ಪಂಗಡರಹಿತವಾದ "ರೆಡ್ಡಿ" ಸಮಾಜವನ್ನು ಕಟ್ಟಲು ಒಗ್ಗೂಡೋಣ, ಐಕ್ಯತೆಯನ್ನು ಪ್ರದರ್ಶಿಸೋಣ

"ರೆಡ್ಡಿ ಕುಲಬಾಂಧವರಲ್ಲಿ ಮನವಿ"

ಆತ್ಮೀಯರೇ,

ನಮ್ಮ ರೆಡ್ಡಿ ಸಮುದಾಯವು ಸಾವಿರಾರು ವರ್ಷಗಳ ಇತಿಹಾಸ ಹೊಂದಿರುವ ಪ್ರಮುಖ ಸಮುದಾಯ. ನಮ್ಮವರು ಮೂಲತಃ ಕೃಷಿಯನ್ನೇ ಅವಲಂಬಿಸಿದ್ದು, ಅದಕ್ಕಾಗಿ ನದಿ, ಹಳ್ಳಗಳು ಮತ್ತು ನೀರಿನ ಸರವುಗಳನ್ನು ಹೊಂದಿರುವ ಇಕ್ಕೆಲಗಳಲ್ಲಿ ಕರ್ನಾಟಕ, ಮಹಾರಾಷ್ಟ್ರ, ಆಂಧ್ರಪ್ರದೇಶ, ತೆಲಂಗಾಣ, ತಮಿಳುನಾಡು, ಪುದುಚೇರಿ ಹಾಗೂ ಕೇರಳ ರಾಜ್ಯಗಳಲ್ಲಿ ಹರಡಿಕೊಂಡಿರುತ್ತಾರೆ.

ನಮ್ಮ ಸಮುದಾಯದಿಂದ ಮೈಸೂರು ರಾಜ್ಯದ ಮೊದಲ ಸನ್ಮಾನ್ಯ ಮುಖ್ಯಮಂತ್ರಿಗಳು ಶ್ರೀ ಕೆ.ಸಿ. ರೆಡ್ಡಿಯವರು, ತಮಿಳುನಾಡಿನ ಮೊದಲ ಸನ್ಮಾನ್ಯ ಮುಖ್ಯಮಂತ್ರಿಗಳು ಶ್ರೀ ಓಮಂದೂರು ರಾಮಸ್ವಾಮಿ ರೆಡ್ಡಿಯಾರ್, ಪುದುಚೇರಿಯ ಮೊದಲ ಸನ್ಮಾನ್ಯ ಮುಖ್ಯಮಂತ್ರಿಗಳು ಶ್ರೀ ವಿ. ವೆಂಕಟಾಸುಬ್ಬಾ ರೆಡ್ಡಿಯಾರ್, ಆಂಧ್ರಪ್ರದೇಶದ ಮೊದಲ ಸನ್ಮಾನ್ಯ ಮುಖ್ಯಮಂತ್ರಿಗಳು ಶ್ರೀ ನೀಲಂ ಸಂಜೀವರೆಡ್ಡಿಯವರು ರಾಜ್ಯಗಳನ್ನು ಪ್ರತಿನಿಧಿಸಿ ಮೊದಲ ಮುಖ್ಯಮಂತ್ರಿಗಳಾಗಿರುವುದು ನಮ್ಮ ಗೌರವ ಮತ್ತು ಹೆಮ್ಮೆ.

ಕರ್ನಾಟಕ ರಾಜ್ಯದಲ್ಲಿ ಕಾಲಾನುಘಟ್ಟದಲ್ಲಿ ಆಯಾಯ ಪ್ರಾಂತ್ಯದಲ್ಲಿ ಭೌಗೋಳಿಕ ಹಾಗೂ ಪರಿಸರಕ್ಕನುಗುಣವಾಗಿ ರೂಢಿಸಿಕೊಂಡ ಆಚಾರ–ವಿಚಾರಗಳು ಮತ್ತು ಸಂಪ್ರದಾಯಗಳೇ ವಿವಿಧ ಪಂಗಡಗಳಾಗಿರುವುದು ವಿಷಾದನೀಯ. ನಾವು ಆಹಾರ ಪದ್ಧತಿಗಳಿಂದ, ಪೂಜಾ ವಿಧಿ–ವಿಧಾನಗಳಿಂದ ವಿಭಿನ್ನತೆಗಳನ್ನು ಹೊಂದಿದ್ದರೂ ಸಹ, ರೆಡ್ಡಿಗಳ ಮೂಲ ಮಾತ್ರ ಒಂದೇ ಎಂದು ಹಲವಾರು ಸಂಶೋಧನೆಗಳಿಂದ ತಿಳಿದು ಬಂದಿರುತ್ತದೆ.

ಸ್ವಾತಂತ್ರ್ಯಾ ನಂತರ ಕೆಲವರು ರೆಡ್ಡಿ ಸಮುದಾಯವನ್ನು ರಾಜಕೀಯಕ್ಕಾಗಿ ಮಾತ್ರ ಉಪಯೋಗಿಸಿಕೊಂಡರೇ ವಿನಃ ಸಮುದಾಯವನ್ನು ಸಂಘಟಿಸುವ ಹಾಗೂ ಒಗ್ಗೂಡಿಸುವ ಯಾವ ಪ್ರಯತ್ನಗಳನ್ನೂ ಮಾಡಲಿಲ್ಲ ಎಂಬುದು ದುಃಖದ ಸಂಗತಿ. ಅತ್ಯಂತ ಪ್ರಬಲವಾದ ನಮ್ಮ ರೆಡ್ಡಿ ಸಮುದಾಯ ಸ್ವಂತಿಕೆಯೇ ಇಲ್ಲದೆ, ಬೇರೆಯವರ ನೆರಳಲ್ಲೇ ಆಶ್ರಯ ಪಡೆಯುತ್ತಿತ್ತು. ಈ ನಿಟ್ಟಿನಲ್ಲಿ ಚಿಂತನೆ ಮಾಡಿದ ರೆಡ್ಡಿ ಸಮುದಾಯದ ಹಿರಿಯರು ರೆಡ್ಡಿ ಸಮಾಜವನ್ನು ಒಗ್ಗೂಡಿಸಬೇಕೆಂಬ ಸದುದ್ದೇಶದಿಂದ ಸಮುದಾಯದ ಎಲ್ಲಾ ಪಂಗಡಗಳನ್ನೊಳಗೊಂಡ ಐತಿಹಾಸಿಕ ಸಮಾವೇಶವನ್ನು ದಿನಾಂಕ: 29–1–2017 ರಂದು ಹಾಲಿ ಮಂತ್ರಿಗಳಾದ ಸನ್ಮಾನ್ಯ ಶ್ರೀ ಎಚ್.ಕೆ. ಪಾಟೀಲ್‌ರವರ ಹಾಗೂ ಸನ್ಮಾನ್ಯ ಶ್ರೀ ರಾಮಲಿಂಗಾ ರೆಡ್ಡಿಯವರ ನೇತೃತ್ವದಲ್ಲಿ ಸುಮಾರು ಐದು ಲಕ್ಷಕ್ಕೂ ಹೆಚ್ಚು ಜನ ಬೆಂಬಲದೊಂದಿಗೆ ಬೃಹತ್ ಸಮಾವೇಶವನ್ನು ಬೆಂಗಳೂರಿನ ಅರಮನೆ ಮೈದಾನದಲ್ಲಿ ನಡೆಸಲಾಗಿತ್ತು. ಇದರ ಫಲಶೃತಿಯಾಗಿ ರಾಜ್ಯದಾದ್ಯಂತ ರೆಡ್ಡಿ ಸಮಾಜವು ಒಗ್ಗೂಡಿ ಸಾಕಷ್ಟು ಬೆಳವಣಿಗೆಯನ್ನು ಕಂಡುಕೊಂಡಿತು. ಆದರೆ ಇತ್ತೀಚಿಗೆ ಕೆಲ ಪಟ್ಟಭದ್ರ ಹಿತಾಸಕ್ತಿಗಳು ತಮ್ಮ ಸ್ವ–ರಾಜಕೀಯ ಹಿತಾಸಕ್ತಿಗಾಗಿ, ಸಮಾಜವನ್ನು ವಿಂಗಡಿಸುವ ಹುನ್ನಾರ ಮಾಡುತ್ತಿದ್ದಾರೆ. ಕರ್ನಾಟಕ ರಾಜ್ಯ ಸರ್ಕಾರದ ವತಿಯಿಂದ ಸೆಪ್ಟೆಂಬರ್ 22, 2025ರ ನಂತರ ಸಾಮಾಜಿಕ, ಶೈಕ್ಷಣಿಕ ಹಾಗೂ ಜಾತಿ ಸಮೀಕ್ಷೆಯು ನಡೆಯಲಿದೆ.

ಈ ಸಮೀಕ್ಷೆಯಲ್ಲಿ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಹಾಗೂ ಶ್ರೀ ಮಹಾಯೋಗಿ ವೇಮನರ ಅನುಯಾಯಿಗಳಾದ ನಾವುಗಳು, ಧರ್ಮದ ಕಾಲಂನಲ್ಲಿ "ಹಿಂದೂ" ಎಂದು ಹಾಗೂ "ಜಾತಿಯ-ಉಪಜಾತಿ" ಸಮನಾಂತರ ಜಾತಿಯ ಕಾಲಂಗಳಲ್ಲಿ ಕೇವಲ "ರೆಡ್ಡಿ" ಎಂದು ಮಾತ್ರ ನಮೂದಿಸಬೇಕೆಂದು ವಿನಂತಿಸಿಕೊಳ್ಳುತ್ತೇವೆ.

ಶೈಕ್ಷಣಿಕ, ಉದ್ಯೋಗ ಮತ್ತು ಸರ್ಕಾರಿ ಮೀಸಲಾತಿಯನ್ನು ಪಡೆದುಕೊಳ್ಳುವುದಕ್ಕಾಗಿ ನಾವೆಲ್ಲರೂ "ಪ್ರವರ್ಗ–3ಎ" ರ ಮೀಸಲಾತಿಯನ್ನೇ ಪಡೆದುಕೊಳ್ಳುತ್ತಿದ್ದೇವೆ. ಹಾಗೂ ಮುಂದೆಯೂ ಸಹ ಈ ಸೌಲಭ್ಯವನ್ನು ಪಡೆಯಬೇಕಾಗಿರುತ್ತದೆ. ಕಾರಣ "ಪ್ರವರ್ಗ–3ಎ" ರಲ್ಲಿ ಕೇವಲ 11 ಸಮುದಾಯಗಳು ಸೇರ್ಪಡೆಯಾಗಿದ್ದು, ಸದರಿ ಸಮುದಾಯಗಳ ಜನ ಸಂಖ್ಯೆಯು ಕಡಿಮೆ ಪ್ರಮಾಣದಲ್ಲಿ ಇರುತ್ತದೆ. ಈ ಪ್ರವರ್ಗಕ್ಕೆ ಶೇಕಡ 4ರಷ್ಟು ಮೀಸಲಾತಿಯಿದ್ದು, ಇದರಿಂದ ಸಮುದಾಯಕ್ಕೆ ಹೆಚ್ಚು ಅನುಕೂಲಕರವಾಗಿರುತ್ತದೆ.

ಕೆಲವರು ರಾಜಕೀಯ ದುರುದ್ದೇಶದಿಂದ ನಮ್ಮ ರೆಡ್ಡಿ ಸಮುದಾಯವನ್ನು "ಪ್ರವರ್ಗ 3 ಬಿ" ಗೆ ಸೇರಿಸುವಂತೆ ತಪ್ಪು ದಾರಿಗೆಳೆಯುವ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಿರುತ್ತಾರೆ. ಈ ರೀತಿಯ ಪ್ರಕಟಣೆ ನೀಡಿರುವುದು ರಾಜಕೀಯ ವ್ಯಕ್ತಿಗಳಾಗಿದ್ದು, ಇದು ರಾಜಕೀಯ ಹಾಗೂ ಸ್ವ–ಹಿತಾಸಕ್ತಿಯನ್ನು ಮಾತ್ರವೇ ಒಳಗೊಂಡಿದ್ದು, ಯಾವುದೇ ರೀತಿಯಲ್ಲೂ ಸಮುದಾಯದ ಹಿತ ಕಾಪಾಡುವ ಉದ್ದೇಶ ಹೊಂದಿರುವುದಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಇವರ ಈ ದುರುದ್ದೇಶದ ಪ್ರಕಟಣೆಯಿಂದ ನಮ್ಮ ಸಮುದಾಯದ ಜನರು ಈಗಿರುವ "ಪ್ರವರ್ಗ 3 ಎ" ಮೀಸಲಾತಿ ಸೌಲಭ್ಯದಿಂದ ವಂಚಿತರಾಗುತ್ತಾರೆ.

"ಪ್ರವರ್ಗ 3 ಬಿ" ರಲ್ಲಿ 104 ಉಪಜಾತಿಗಳಿದ್ದು, ಅವುಗಳಲ್ಲಿ ಸಾಕಷ್ಟು ಪ್ರಬಲ ಜಾತಿಗಳು ಒಳಗೊಂಡಿರುತ್ತವೆ. ಜನಸಂಖ್ಯೆಯೂ ಸಹ ಹೆಚ್ಚು ಇರುವುದರಿಂದ ಮತ್ತು ಈ ಪ್ರವರ್ಗಕ್ಕೆ ಮೀಸಲಾತಿಯು ಶೇ.5% ರಷ್ಟು ಮಾತ್ರ ಇರುವುದರಿಂದ ಅವಕಾಶಗಳು ದೊರೆಯುವ ಸಾಧ್ಯತೆ ಕಡಿಮೆ ಪ್ರಮಾಣದ್ದಾಗಿರುತ್ತದೆ. ಆದರೆ "ಪ್ರವರ್ಗ 3 ಬಿ" ರಲ್ಲಿ ಹೆಚ್ಚಿನ ಸೌಲಭ್ಯ / ಅವಕಾಶಗಳು ಸಮುದಾಯಕ್ಕೆ ಲಭ್ಯವಾಗುತ್ತದೆ ಎಂದು ಪತ್ರಿಕಾ ಪ್ರಕಟಣೆ ನೀಡಿರುವುದು ಗೊಂದಲ ಮೂಡಿಸುವ ಹುನ್ನಾರವಾಗಿರುತ್ತದೆ.

ಹಾಸ್ಯಾಸ್ಪದ ಮತ್ತು ಅಪಪ್ರಚಾರದ ಹುನ್ನಾರ

ನಮ್ಮ ಸಮುದಾಯದ ಒಗ್ಗಟ್ಟನ್ನು ಒಡೆಯಬೇಕೆಂಬ ಉದ್ದೇಶದಿಂದ, ಹಾಲಿ "3 ಎ ಪ್ರವರ್ಗ" ದ ಬೆಂಗಳೂರು ಮತ್ತು ಮೈಸೂರು ಭಾಗದ ಪ್ರತಿಭಾನ್ವಿತ ವಿದ್ಯಾರ್ಥಿಗಳೊಂದಿಗೆ ಸ್ಪರ್ಧೆ ಮಾಡಬೇಕಾಗಿರುತ್ತದೆ ಎಂಬ ಕಾರಣದಿಂದ "ಪ್ರವರ್ಗ 3 ಬಿ" ರಲ್ಲಿ ಮೀಸಲಾತಿಯನ್ನು ಪಡೆಯಬೇಕೆಂದು ತಪ್ಪು ಮಾಹಿತಿಯನ್ನು ಪ್ರಚಾರ ಮಾಡುತ್ತಿದ್ದಾರೆ.

ಉತ್ತರ ಕರ್ನಾಟಕದ 12 ಜಿಲ್ಲೆಗಳ 60 ತಾಲ್ಲೂಕುಗಳಲ್ಲಿ ನಮ್ಮ ರೆಡ್ಡಿ ಸಮುದಾಯದ ಜನರು ಹೆಚ್ಚಿನ ಸಂಖ್ಯೆಯಲ್ಲಿ ನೆಲೆಸಿದ್ದು (ಉತ್ತರ ಕರ್ನಾಟಕದ ಬೆಳಗಾವಿ ಜಿಲ್ಲೆಯ 5 ತಾಲ್ಲೂಕು, ಬಿಜಾಪುರ ಜಿಲ್ಲೆಯ 5 ತಾಲ್ಲೂಕು, ರಾಯಚೂರು ಜಿಲ್ಲೆಯ 6 ತಾಲ್ಲೂಕು, ಕೊಪ್ಪಳ ಜಿಲ್ಲೆಯ 7 ತಾಲ್ಲೂಕು, ಬಾಗಲಕೋಟೆ ಜಿಲ್ಲೆಯ 6 ತಾಲ್ಲೂಕು, ಧಾರವಾಡ ಜಿಲ್ಲೆಯ 4 ತಾಲ್ಲೂಕು, ಬೀದರ್ ಜಿಲ್ಲೆಯ 5 ತಾಲ್ಲೂಕು, ಕಲಬುರ್ಗಿ ಜಿಲ್ಲೆಯ 3 ತಾಲ್ಲೂಕು, ಯಾದಗಿರಿ ಜಿಲ್ಲೆಯ 4 ತಾಲ್ಲೂಕು, ಬಳ್ಳಾರಿ ಜಿಲ್ಲೆಯ 5 ತಾಲ್ಲೂಕು, ದಾವಣಗೆರೆ ಜಿಲ್ಲೆಯ 4 ತಾಲ್ಲೂಕು, ಗದಗ ಜಿಲ್ಲೆಯ 4 ತಾಲ್ಲೂಕು) ಇವರಿಗೆ ಮೈಸೂರು ಭಾಗದ ಕೇವಲ 6 ಜಿಲ್ಲೆಗಳಲ್ಲಿನ 11 ತಾಲ್ಲೂಕುಗಳಲ್ಲಿ (ಹಳೆ ಮೈಸೂರು ಭಾಗದ ಆನೇಕಲ್, ಬೆಂಗಳೂರು ದಕ್ಷಿಣ, ಮಧುಗಿರಿ, ಪಾವಗಡ, ಗೌರಿಬಿದನೂರು, ಮುಳಬಾಗಿಲು, ಬಂಗಾರಪೇಟೆ, ಬಾಗೇಪಲ್ಲಿ, ಮಾಲೂರು, ಚಳ್ಳಕೆರೆ ಮತ್ತು ಚಿತ್ರದುರ್ಗ) ದಲ್ಲಿ ನೆಲೆಸಿರುವಂತಹ ಸಮುದಾಯದವರಿಂದ ತೊಂದರೆಯಾಗುತ್ತದೆ ಎಂದು ಹೇಳಿರುವುದು ಹಾಸ್ಯಾಸ್ಪದವಾಗಿದೆ.

ಇದು ಸಂಪೂರ್ಣ ನಿರಾಧಾರವಾದದ್ದು ಮತ್ತು ಸತ್ಯಕ್ಕೆ ದೂರವಾಗಿದೆ. ಇದು ಕೇವಲ ಕೆಲವು ಪಟ್ಟಭದ್ರ ಹಿತಾಸಕ್ತಿಗಳನ್ನೊಳಗೊಂಡ ವ್ಯಕ್ತಿಗಳ ರಾಜಕೀಯ ದುರುದ್ದೇಶಗಳ ಅಪಪ್ರಚಾರವಾಗಿರುತ್ತವೆ.

ಆದ್ದರಿಂದ ಯಾವುದೇ ರೀತಿಯ ಅಪಪ್ರಚಾರಕ್ಕೆ ಕಿವಿಗೊಡದೆ, ಪಂಗಡ ರಹಿತವಾದ ಒಗ್ಗೂಡುವಿಕೆಯಿಂದ ರೆಡ್ಡಿ ಸಮುದಾಯದವನ್ನು ಸದೃಢಗೊಳಿಸಲು, ಹಲವು ದಿನಗಳ ಬೇಡಿಕೆಗಳಾದ ಕೇಂದ್ರ ಸರ್ಕಾರದ ಓ.ಬಿ.ಸಿ. ಪ್ರವರ್ಗದಲ್ಲಿ ಮೀಸಲಾತಿ ಪಡೆಯಲು ಹಾಗೂ ರಾಜ್ಯ ಸರ್ಕಾರದಿಂದ ಪ್ರತ್ಯೇಕ "ರೆಡ್ಡಿ ಅಭಿವೃದ್ಧಿ ಪ್ರಾಧಿಕಾರ" ಸ್ಥಾಪಿಸಲು ನಮ್ಮ ಒಗ್ಗಟ್ಟು ಸಹಕಾರಿಯಾಗಬೇಕು.

ನಮ್ಮ ಸಮುದಾಯದ ಮಕ್ಕಳ ಶಿಕ್ಷಣ ಹಾಗೂ ಉದ್ಯೋಗದ ಉಜ್ವಲ ಭವಿಷ್ಯಕ್ಕಾಗಿ ಯೋಚಿಸಿ. ಈ ಮೇಲಿನ ವಿವರಣೆಯಿಂದ ಎಚ್ಚೆತ್ತುಕೊಳ್ಳಿ ಹಾಗೂ ಜಾಗೃತರಾಗಿರಿ.

ಪ್ರಕಟಣೆ

ಶ್ರೀ ಆರ್. ವಿ. ಮುಳ್ಳೂರ್
ಅಧ್ಯಕ್ಷರು, ಜಿಲ್ಲಾ ರೆಡ್ಡಿ ಸಂಘ, ಬೆಳಗಾವಿ

ಶ್ರೀ ಸುರೇಶ ದೇಸಾಯಿ
ಅಧ್ಯಕ್ಷರು, ಜಿಲ್ಲಾ ರೆಡ್ಡಿ ಸಂಘ, ಬಿಜಾಪುರ

ಶ್ರೀ ರಾಮಚಂದ್ರ ರೆಡ್ಡಿ
ಅಧ್ಯಕ್ಷರು, ಜಿಲ್ಲಾ ರೆಡ್ಡಿ ಸಂಘ, ರಾಯಚೂರು

ಡಾ. ಬಸವನಗೌಡ
ಅಧ್ಯಕ್ಷರು, ಹೇಮರೆಡ್ಡಿ ಮಲ್ಲಮ್ಮ ಸಮಾಜ,ರಾಯಚೂರು

ಶ್ರೀ ಡಾ. ಮನೋಜ್ ಸಾಹುಕಾರ
ಅಧ್ಯಕ್ಷರು, ಜಿಲ್ಲಾ ರೆಡ್ಡಿ ಸಂಘ, ಹಾವೇರಿ

ಶ್ರೀ ಎಸ್. ಜಯರಾಮ ರೆಡ್ಡಿ
ಅಧ್ಯಕ್ಷರು, ಕರ್ನಾಟಕ ರೆಡ್ಡಿಜನ ಸಂಘ, ಬೆಂಗಳೂರು

ರಾಷ್ಟ್ರಕೂಟ ರೆಡ್ಡಿ ಪರಿವಾರ

ಪ್ರೊ. ಎ.ಆರ್. ಅಗಳವಾಡಿ
ಅಧ್ಯಕ್ಷರು, ಜಿಲ್ಲಾ ರೆಡ್ಡಿ ಸಂಘ, ಧಾರವಾಡ

ಡಾ. ಶರಣಬಸಪ್ಪ ಕಾಮರೆಡ್ಡಿ
ಅಧ್ಯಕ್ಷರು, ಜಿಲ್ಲಾ ರೆಡ್ಡಿ ಸಂಘ, ಕಲಬುರ್ಗಿ

ಶ್ರೀ ಎನ್. ಪ್ರತಾಪ್ ರೆಡ್ಡಿ
ಅಧ್ಯಕ್ಷರು, ಜಿಲ್ಲಾ ರೆಡ್ಡಿ ಸಂಘ, ಬಳ್ಳಾರಿ

ಶ್ರೀ ರಮೇಶ್ ಜಂಗಲ್
ಉಪಾಧ್ಯಕ್ಷರು, ವೇಮನ ವಿದ್ಯಾವರ್ಧಕ ಸಂಘ, ಹುಬ್ಬಳ್ಳಿ

ಶ್ರೀ ಕೆ.ಎಲ್. ಪಾಟೀಲ
ಅಧ್ಯಕ್ಷರು, ರೆಡ್ಡಿ ಬ್ಯಾಂಕ್ ನಿಯಮಿತ, ಧಾರವಾಡ

ಶ್ರೀ ರಾಚನಗೌಡ ಮುದ್ನಾಳ್
ಅಧ್ಯಕ್ಷರು, ಜಿಲ್ಲಾ ರೆಡ್ಡಿ ಸಂಘ, ಯಾದಗಿರಿ

ಶ್ರೀ ಜಗದೀಶಪ್ಪ ಸಿಂಗನಾಳ
ಅಧ್ಯಕ್ಷರು, ಜಿಲ್ಲಾ ರೆಡ್ಡಿ ಸಂಘ, ಕೊಪ್ಪಳ

ಶ್ರೀ ಪ್ರಸನ್ನ ರೆಡ್ಡಿ
ಅಧ್ಯಕ್ಷರು, ಜಿಲ್ಲಾ ರೆಡ್ಡಿ ಸಂಘ, ಚಿತ್ರದುರ್ಗ

ಶ್ರೀ ಶ್ರೀನಿವಾಸ ರೆಡ್ಡಿ
ಅಧ್ಯಕ್ಷರು, ಜಿಲ್ಲಾ ರೆಡ್ಡಿ ಸಂಘ, ತುಮಕೂರು

ಶ್ರೀ ಕೇಶವ ರೆಡ್ಡಿ
ಅಧ್ಯಕ್ಷರು, ಜಿಲ್ಲಾ ರೆಡ್ಡಿ ಸಂಘ, ಚಿಕ್ಕಬಳ್ಳಾಪುರ

ಶ್ರೀ ಆರ್. ಎಲ್. ಕಟಗೇರಿ
ಅಧ್ಯಕ್ಷರು, ಜಿಲ್ಲಾ ರೆಡ್ಡಿ ಸಂಘ, ಬಾಗಲಕೋಟ

ಶ್ರೀ ಚಿಟ್ಟಾ ಶಂಕರ ರೆಡ್ಡಿ
ಅಧ್ಯಕ್ಷರು, ಜಿಲ್ಲಾ ರೆಡ್ಡಿ ಸಂಘ, ಬೀದರ್

ಶ್ರೀ ರವೀಂದ್ರನಾಥ ಮೂಲಿಮನಿ
ಅಧ್ಯಕ್ಷರು, ಜಿಲ್ಲಾ ರೆಡ್ಡಿ ಸಂಘ, ಗದಗ

ಶ್ರೀ ಕೆ. ವೆಂಕಟರಾಮ ರೆಡ್ಡಿ
ಅಧ್ಯಕ್ಷರು, ಜಿಲ್ಲಾ ರೆಡ್ಡಿ ಸಂಘ, ದಾವಣಗೆರೆ

ಶ್ರೀ ಕೃಷ್ಣಾ ರೆಡ್ಡಿ
ಅಧ್ಯಕ್ಷರು, ಜಿಲ್ಲಾ ರೆಡ್ಡಿ ಸಂಘ, ಕೋಲಾರ

ಜಿಬಿಎ: ಜಾತಿವಾರು ಸಮೀಕ್ಷೆ ವಿಳಂಬ

ಆಡಳಿತ ದೃಷ್ಟಿಯಿಂದ ಕೆಲವು ಪ್ರಕ್ರಿಯೆಗಳು ನಡೆದಿರುವುದರಿಂದ ಸ್ವಲ್ಪ ತಡ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಆಯೋಗದ ಅಧ್ಯಕ್ಷ ಮಧುಸೂದನ್ ಆರ್. ನಾಯ್ಕ್ ಮಾಹಿತಿ
- ಶಿಕ್ಷಕರ ಕೊರತೆ: ಇತರೆ ಇಲಾಖೆ ನೌಕರರ ಬಳಕೆ

ಬೆಂಗಳೂರು: 'ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ವ್ಯಾಪ್ತಿಯಲ್ಲಿ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯು ವಿಳಂಬವಾಗಿ ಆರಂಭವಾಗಲಿದೆ' ಎಂದು ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಮಧುಸೂದನ್ ಆರ್. ನಾಯ್ಕ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಜಿಬಿಎ (ಬಿಬಿಎಂಪಿ) ವ್ಯಾಪ್ತಿಯಲ್ಲಿ ಈಗಾಗಲೇ ಒಂದು ಸುತ್ತಿನ ತರಬೇತಿ ಮುಗಿದಿದ್ದು, ಎರಡನೇ ಸುತ್ತಿನ ತರಬೇತಿ ನಡೆದಿದೆ. ಹೀಗಾಗಿ ಸೋಮವಾರದಿಂದ (ಸೆ.22) ಸಮೀಕ್ಷೆ ಆರಂಭಿಸಲು ಪ್ರಯತ್ನ ನಡೆದಿದ್ದರೂ ಕೆಲವು ದಿನ ವಿಳಂಬವಾಗುವ ಸಾಧ್ಯತೆ ಇದೆ. ಇತ್ತೀಚೆಗಷ್ಟೇ ಜಿಬಿಎ ರಚನೆಯಾಗಿದೆ. ಆಡಳಿತ ದೃಷ್ಟಿಯಿಂದ ಕೆಲವು ಪ್ರಕ್ರಿಯೆಗಳು ನಡೆದಿರುವುದರಿಂದ ಸ್ವಲ್ಪ ವಿಳಂಬವಾಗಲಿದೆ. ಶಿಕ್ಷಕರ ಕೊರತೆ ಇರುವುದರಿಂದ ಆಯ್ದ ಇತರೆ ಇಲಾಖೆಯ ನೌಕರರಿಗೂ ತರಬೇತಿ ನೀಡಿ ಸಮೀಕ್ಷೆಗೆ ಸಜ್ಜುಗೊಳಿಸಲಾಗುತ್ತಿದೆ' ಎಂದರು.

ಆಯೋಗದ ಸದಸ್ಯ ಕಾರ್ಯದರ್ಶಿ ಕೆ.ಎ. ದಯಾನಂದ ಮಾತನಾಡಿ, 'ಮೂರು ರೀತಿಯಲ್ಲಿ ಸಮೀಕ್ಷೆಗೆ ವ್ಯವಸ್ಥೆ ಇರಲಿದೆ. ಸಮೀಕ್ಷಕರು ಮನೆ ಮನೆಗೆ ಭೇಟಿ ನೀಡಿ ದತ್ತಾಂಶ ಸಂಗ್ರಹಿಸಲಿದ್ದಾರೆ. ಅನ್ಯಕಾರ್ಯದ ಕಾರಣ ಮನೆಯಿಂದ ಹೊರಗಿದ್ದರೆ ಆಧಾರ್ ದೃಢೀಕರಣದ ಮೂಲಕ ಆನ್‌ಲೈನ್‌ನಲ್ಲೂ ಸಮೀಕ್ಷೆಗೆ ದತ್ತಾಂಶ ದಾಖಲಿಸುವ ವ್ಯವಸ್ಥೆ ಕಲ್ಪಿಸಲಾಗಿದೆ' ಎಂದರು.

'ಗಣತಿದಾರರು ಮನೆಗೆ ಭೇಟಿ ನೀಡಿದಾಗ ನಿವಾಸಿಗಳು ಇಲ್ಲದಿದ್ದರೆ ತಮ್ಮ ಮೊಬೈಲ್ ಸಂಖ್ಯೆಯ ವಿವರ ಹಂಚಿಕೊಳ್ಳುತ್ತಾರೆ. ಬಳಿಕ ಗಣತಿದಾರರನ್ನು ಸಂಪರ್ಕಿಸಿ ಸಮಯ ಕಾಯ್ದಿರಿಸಿಕೊಂಡು ಸಮೀಕ್ಷೆಗೆ ಮಾಹಿತಿ ನೀಡುವ ವ್ಯವಸ್ಥೆಯನ್ನೂ ರೂಪಿಸಲಾಗಿದೆ' ಎಂದರು.

'ಜಿಬಿಎ ವ್ಯಾಪ್ತಿಯಲ್ಲಿ ಸಮೀಕ್ಷೆಯನ್ನು ಪರಿಣಾಮಕಾರಿಯಾಗಿ ಕೈಗೊಳ್ಳುವ ಸಲುವಾಗಿ ನಗರವಾಸಿಗಳು ಸಮಯ ಕಾಯ್ದಿರಿಸಿಕೊಂಡು ದತ್ತಾಂಶ ನೀಡುವ ವ್ಯವಸ್ಥೆ ರೂಪಿಸಲಾಗುತ್ತಿದೆ. ಈ ಪ್ರಕ್ರಿಯೆಗೆ ಜಿಬಿಎ ನಿಯಂತ್ರಣ ಕೊಠಡಿ ಸ್ಥಾಪಿಸಿ, ಹೆಚ್ಚುವರಿ ಗಣತಿದಾರರನ್ನು ನಿಯೋಜಿಸಲಾಗುವುದು. ಜನರು ನಿರ್ದಿಷ್ಟ ದಿನಾಂಕ, ಸಮಯ ಗೊತ್ತುಪಡಿಸಿದರೆ ಆ ಸಮಯಕ್ಕೆ ಸರಿಯಾಗಿ ಗಣತಿದಾರರು ತೆರಳಿ ದತ್ತಾಂಶ ಸಂಗ್ರಹಿಸಲಿದ್ದಾರೆ. ಈ ಸಂಬಂಧ ಸಹಾಯವಾಣಿ ವಿವರವನ್ನು ಜಿಬಿಎ ಆಡಳಿತ ಪ್ರಕಟಿಸಲಿದೆ' ಎಂದರು.

'ಬಿಜೆಪಿಯಿಂದ ಹಿಂದೂ ಮುಸ್ಲಿಂ ಧ್ರುವೀಕರಣ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಜೆಪಿಯು ತನ್ನ ರಾಜಕೀಯ ತಂತ್ರವಾಗಿ ಹಿಂದೂ–ಮುಸ್ಲಿಂ ಧ್ರುವೀಕರಣವನ್ನು ನಿರಂತರವಾಗಿ ಮಾಡಿಕೊಂಡು ಬರುತ್ತಿದೆ. ಯಾವ ವಿಷಯವಾದರೂ, ಯಾವ ಸಂದರ್ಭವಾದರೂ ಜನರಲ್ಲಿ ಭಯ ಹುಟ್ಟಿಸಿ 'ಶತ್ರು'ವಿನ ಕಲ್ಪನೆಯನ್ನು ಮೂಡಿಸುವ ಅವಕಾಶ ಸಿಕ್ಕರೆ ಬಿಜೆಪಿ ಬಿಡುವುದೇ ಇಲ್ಲ' ಎಂದು ಕಾಂಗ್ರೆಸ್‌ನ ನಾಯಕ ಬಿ.ಕೆ.ಚಂದ್ರಶೇಖರ್ ಅವರು ಹೇಳಿದ್ದಾರೆ.

ಚಂದ್ರಶೇಖರ್

ಪತ್ರಿಕಾ ಪ್ರಕಟಣೆ ನೀಡಿರುವ ಅವರು, 'ಬಿಜೆಪಿಯ ನಿಜವಾದ ರಾಜಕೀಯ ತಂತ್ರ ಇದು. ಗೋಧ್ರಾ ಹತ್ಯಾಕಾಂಡವಾಗಲಿ, ಎಲ್.ಕೆ. ಅಡ್ವಾಣಿಯವರ ರಾಮ ರಥಯಾತ್ರೆಯಾಗಲಿ, ಅಯೋಧ್ಯೆಯ ರಾಮಮಂದಿರ ನಿರ್ಮಾಣವಾಗಲಿ... ಚುನಾವಣೆ ಗೆಲ್ಲಲು ಇದುವೇ ಬಿಜೆಪಿಯ ಕಾರ್ಯಸೂಚಿ' ಎಂದಿದ್ದಾರೆ.

'ಕರ್ನಾಟಕದಲ್ಲಿಯೂ ಬಿಜೆಪಿ ನಾಯಕರು ಇದೇ ಕಾರ್ಯಸೂಚಿಯನ್ನು ಭಿನ್ನ ಶೈಲಿಯಲ್ಲಿ ಮತ್ತು ಭಿನ್ನ ಸ್ವರದಲ್ಲಿ ಪಠಿಸುತ್ತಿದ್ದಾರೆ. ಈ ಬಾರಿ ಕನ್ನಡ ಲೇಖಕಿ ಬಾನು ಮುಷ್ತಾಕ್ ಅವರೇ ಬಿಜೆಪಿಯ ರಾಜಕೀಯ ಮತ್ತು ಭಾವನಾತ್ಮಕ ದಾಳಿಯ ಗುರಿಯಾಗಿದ್ದಾರೆ. ಮುಸ್ಲಿಂ ಕವಿ ನಿಸಾರ್ ಅಹಮದ್ ಅವರೂ ದಸರಾ ಮಹೋತ್ಸವವನ್ನು ಉದ್ಘಾಟಿಸಿದ್ದರು ಎಂಬ ಸತ್ಯವನ್ನು ರಾಜ್ಯದ ಬಿಜೆಪಿ ನಾಯಕರು ಸಂಪೂರ್ಣವಾಗಿ ಮರೆತಿರುವುದು ಉದ್ದೇಶಪೂರ್ವಕವಲ್ಲವೇ' ಎಂದು ಅವರು ಪ್ರಶ್ನಿಸಿದ್ದಾರೆ.

'ವಿವೇಕಾನಂದರು ಹಿಂದೂ–ಮುಸ್ಲಿಂ ಏಕತೆಯೇ ಭಾರತದ ನಿಜವಾದ ಶಕ್ತಿಯ ಮೂಲ ಎಂದು ಘೋಷಿಸಿದ್ದರು. ಈ ಎರಡು ಸಮುದಾಯಗಳು ಒಟ್ಟಾಗಿ ಬಂದಾಗ ಮಾತ್ರ ಭಾರತವು ಬಲಿಷ್ಠ ಮತ್ತು ಸ್ವಾವಲಂಬಿ ರಾಷ್ಟ್ರವಾಗುತ್ತದೆ ಎಂದು ಅವರು ದೃಢವಾಗಿ ನಂಬಿದ್ದರು. ವಿವೇಕಾನಂದರ ಈ ಮಾತುಗಳನ್ನು ತಳ್ಳಿಹಾಕಲು ಬಿಜೆಪಿಗೆ ಸಾಧ್ಯವೇ' ಎಂದು ಚಂದ್ರಶೇಖರ್ ಅವರು ಪ್ರಶ್ನಿಸಿದ್ದಾರೆ.

ಮಣಿವಣ್ಣನ್ ಹೆಸರಲ್ಲಿ ನಕಲಿ ಫೇಸ್‌ಬುಕ್ ಖಾತೆ

ಬೆಂಗಳೂರು: ಸಮಾಜ ಕಲ್ಯಾಣ ಇಲಾಖೆ ಪ್ರಧಾನ ಕಾರ್ಯದರ್ಶಿ ಪಿ.ಮಣಿವಣ್ಣನ್ ಹೆಸರಿನಲ್ಲಿ ನಕಲಿ ಫೇಸ್‌ಬುಕ್ ಖಾತೆ ತೆರೆದು ವಂಚನೆ ಮಾಡಿದ ಆರೋಪಕ್ಕೆ ಸಂಬಂಧಿಸಿದಂತೆ ಬಾಣಸವಾಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಣಿವಣ್ಣನ್ ಅವರ ಹೆಸರು, ಫೋಟೊ ಬಳಸಿ ನಾಲ್ಕಕ್ಕೂ ಹೆಚ್ಚು ನಕಲಿ ಖಾತೆ ತೆರೆದಿರುವ ವಂಚಕರು ಮಣಿವಣ್ಣನ್ ಆಪ್ತರಿಗೆ, ಸ್ನೇಹಿತರಿಗೆ ಸಂದೇಶ ಕಳುಹಿಸಿದ್ದಾರೆ. 'ಸ್ನೇಹಿತರೊಬ್ಬರ ಮನೆಯ ಫರ್ನಿಚರ್ ಮಾರಾಟ ಮಾಡಬೇಕೆಂದಿದ್ದಾರೆ. ನೀವು ಖರೀದಿಸಿ' ಎಂದು ನಂಬಿಸಿ ಇಬ್ಬರು ವ್ಯಕ್ತಿಗಳಿಗೆ ವಂಚಿಸಿದ್ದಾರೆ ಎನ್ನಲಾಗಿದೆ.



ರಸ್ತೆ ಗುಂಡಿಮಯ: ಸಂಚಾರ ಅಯೋಮಯ

ಪಟ್ಟಂದೂರು ಅಗ್ರಹಾರ: ವಾಹನ ಸವಾರರಿಗೆ ತಪ್ಪದ ಗೋಳು • ಪಾದಚಾರಿಗಳಿಗೂ ಸವಾಲು

• ಶಿವರಾಜ್ ಮೌರ್ಯ

ಕೆ.ಆರ್.ಪುರ: ಇಕ್ಕಟ್ಟಾದ ರಸ್ತೆ, ಎಲ್ಲೆಂದರಲ್ಲಿ ಗುಂಡಿಗಳ ದರ್ಶನ, ಸದಾ ಜನಜಂಗುಳಿ ನಡುವೆ ತ್ರಾಸದಾಯಕ ನಡಿಗೆ, ಸಂಚಾರ ದಟ್ಟಣೆಯಿಂದ ರಸ್ತೆಯಲ್ಲಿ ನಿಲ್ಲುವ ವಾಹನಗಳು, ಪಾದಚಾರಿ ಮಾರ್ಗದಲ್ಲಿಯೇ ವ್ಯಾಪಾರ–ವಹಿವಾಟು ಮಾಡುವ ವ್ಯಾಪಾರಿಗಳು...

ಇವು ವೈಟ್‌ಫೀಲ್ಡ್ ಸಮೀಪದ ಪಟ್ಟಂದೂರು ಅಗ್ರಹಾರ– ನಲ್ಲೂರಹಳ್ಳಿ ಮುಖ್ಯರಸ್ತೆಯ ಸಮಸ್ಯೆಗಳು.

ಅಭಿವೃದ್ಧಿ ಹೆಸರಿನಲ್ಲಿ ಚೆನ್ನಾಗಿರುವ ರಸ್ತೆಗಳನ್ನು ಬೆಂಗಳೂರು ಜಲಮಂಡಳಿ ಹಾಗೂ ಪಾಲಿಕೆ ವತಿಯಿಂದ ಅಗೆದು ಹಾಗೆಯೇ ಬಿಡಲಾಗಿದೆ. ಇದರಿಂದ ಐಟಿಪಿಎಲ್, ಪಟ್ಟಂದೂರು ಅಗ್ರಹಾರಕ್ಕೆ ಸಂಪರ್ಕ ಕಲ್ಪಿಸುವ ಮುಖ್ಯರಸ್ತೆಗಳು ಗುಂಡಿಗಳಿಂದ ಕೂಡಿದ್ದು, ಸ್ಥಳೀಯ ನಿವಾಸಿಗಳು, ಟೆಕಿಗಳಿಗೆ ನಿತ್ಯ ದೂಳಿನ ಮಜ್ಜನವಾಗುತ್ತಿದೆ. ಇದರಿಂದ ಆರೋಗ್ಯದ ಮೇಲೆ ಪರಿಣಾಮ ಬೀರುತ್ತಿದೆ ಎಂಬುದು ಸ್ಥಳೀಯರ ಆರೋಪ.

ಐಟಿಪಿಎಲ್ ಸುತ್ತ ಮುತ್ತಲಿನ ಪ್ರದೇಶವು ನಿತ್ಯ ಜನಸಂದಣಿಯಿಂದ ಕೂಡಿರುತ್ತದೆ. ಇಲ್ಲಿ ಸಾಫ್ಟ್‌ವೇರ್ ಕಂಪನಿಗಳು, ಆಸ್ಪತ್ರೆಗಳು, ಮಾಲ್‌ಗಳಿವೆ. ಆದರೆ ಸರಿಯಾದ ರಸ್ತೆಗಳಿಲ್ಲದ ಕಾರಣ ಸಂಚಾರವೇ ದುಸ್ತರವಾಗಿದೆ. ಗುಂಡಿಗಳೇ ತುಂಬಿರುವ ರಸ್ತೆಗಳಲ್ಲಿ ವಾಹನ ಚಲಾಯಿಸುವುದು ಸವಾಲಾಗಿದೆ ಎಂದು ಐಟಿ ಉದ್ಯೋಗಿ ನವೀನ್ ಕುಮಾರ್ ದೂರಿದರು.

ಪಟ್ಟಂದೂರು ಅಗ್ರಹಾರ ಮುಖ್ಯರಸ್ತೆಯ ಮೂಲಕ ನಲ್ಲೂರಹಳ್ಳಿ, ಸಿದ್ಧಾಪುರ, ವೈಟ್‌ಫೀಲ್ಡ್, ಹೂಡಿ, ಹೋಪ್ ಫಾರಂ ಮುಂತಾದ ಸ್ಥಳಗಳಿಗೆ ತೆರಳಬೇಕಿದೆ. ಕಳೆದ ಕೆಲ ದಿನಗಳಿಂದ ಜಲಮಂಡಳಿ ರಸ್ತೆಗಳನ್ನು ಅಗೆದು ಹಾಗೆಯೇ ಬಿಟ್ಟಿದೆ. ಇದರಿಂದ ರಸ್ತೆಯಲ್ಲಿ ಗುಂಡಿಗಳು ನಿರ್ಮಾಣವಾಗಿದ್ದು, ವಾಹನ ಸಂಚಾರಕ್ಕೆ ಸಂಚಕಾರ ಬಂದಿದೆ. ಇಲ್ಲಿ ನಿತ್ಯ ಒಂದಿಲ್ಲೊಂದು ಅಪಘಾತಗಳು ಸಂಭವಿಸುತ್ತಿವೆ ಎಂದು ಪಟ್ಟಂದೂರು ಅಗ್ರಹಾರ ನಿವಾಸಿ ಎಂ. ಮಂಜುನಾಥ್ ಸಮಸ್ಯೆ ಬಿಚ್ಚಿಟ್ಟರು.

'ರಸ್ತೆಯಲ್ಲಿ ಸಂಚಾರ ಮಾಡದ ಸ್ಥಿತಿಗೆ ತಲುಪಿದ್ದೇವೆ. ಮಳೆ ಬಂದರೆ ಪರಿಸ್ಥಿತಿ ಇನ್ನಷ್ಟು ಬಿಗಡಾಯಿಸುತ್ತದೆ. ಅಧಿಕಾರಿಗಳ ನಿರ್ಲಕ್ಷ್ಯದಿಂದಾಗಿ ಸಾರ್ವಜನಿಕರು ತೊಂದರೆ ಅನುಭವಿಸುವಂತಾಗಿದೆ' ಎಂದು ಪಟ್ಟಂದೂರು ಅಗ್ರಹಾರ ನಿವಾಸಿ ನಾಗರಾಜ್ ಅಸಮಾಧಾನ ವ್ಯಕ್ತಪಡಿಸಿದರು.

ಎಸ್.ಜೆ. ಆರ್, ಒರಾಕಲ್, ಇಂಟರ್‌ನ್ಯಾಷನಲ್ ಟೆಕ್ ಪಾರ್ಕ್ ಮುಂತಾದ ಸಾಫ್ಟ್‌ವೇರ್ ಕಂಪನಿಗಳಿರುವ, ಶಾಂತಿನಿಕೇತನ್ ಮಾಲ್, ಶ್ರೀಸತ್ಯಸಾಯಿ ಆಸ್ಪತ್ರೆ, ವೈದೇಹಿ ಆಸ್ಪತ್ರೆಗಳಿರುವ ಮಹದೇವಪುರ ಕ್ಷೇತ್ರಕ್ಕೆ ಗುಂಡಿ, ಕೆಸರು ತುಂಬಿರುವ ರಸ್ತೆಗಳೇ ಕಪ್ಪುಚುಕ್ಕೆಯಾಗಿವೆ. ಜನಪ್ರತಿನಿಧಿಗಳು ಮೂಲ ಸೌಕರ್ಯವನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿದ್ದಾರೆ ಎಂದು ಸ್ಥಳೀಯರು ದೂರಿದರು.

ಪಟ್ಟಂದೂರು ಅಗ್ರಹಾರ ರಸ್ತೆಯಲ್ಲಿ ಲಾರಿ ಸಿಕ್ಕಿ ಹಾಕಿಕೊಂಡಿತ್ತು

ಹೋರಾಟದ ಎಚ್ಚರಿಕೆ

ಪಟ್ಟಂದೂರು ಅಗ್ರಹಾರ ಮುಖ್ಯರಸ್ತೆಯಲ್ಲಿ ಕೆಲ ದಿನಗಳಿಂದ ಸಮಸ್ಯೆ ಹೆಚ್ಚಾಗಿದ್ದು, ಕೂಡಲೇ ರಸ್ತೆ ಸರಿಪಡಿಸಬೇಕು. ದಸರಾ ಹಬ್ಬ ಆಚರಣೆಗೆ ರಸ್ತೆಗಳಿಂದ ತೊಡಕುಂಟಾದರೆ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ಸಾರ್ವಜನಿಕರು ಎಚ್ಚರಿಕೆ ನೀಡಿದ್ದಾರೆ.

ದಸರಾ ಹಬ್ಬದ ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ಉತ್ಸವವು ಪಟ್ಟಂದೂರು ಅಗ್ರಹಾರ ಗ್ರಾಮದಲ್ಲಿ ಅದ್ದೂರಿಯಾಗಿ ನಡೆಯುತ್ತದೆ. ಆದ್ದರಿಂದ ಇಲ್ಲಿಗೆ ಸಂಪರ್ಕ ಕಲ್ಪಿಸುವ ರಸ್ತೆಗಳಿಗೆ ಡಾಂಬರೀಕರಣ ಮಾಡಬೇಕು ಎಂದು ಆಗ್ರಹಿಸಿದ್ದಾರೆ.

ಪಟ್ಟಂದೂರು ಅಗ್ರಹಾರ – ನಲ್ಲೂರಹಳ್ಳಿ ಮುಖ್ಯರಸ್ತೆಯ ದುಸ್ಥಿತಿ

ಬಳ್ಳಾರಿ ರಸ್ತೆಯ ಮೇಖ್ರಿ ವೃತ್ತದ ಕೆಳ ಸೇತುವೆಯ ರಸ್ತೆಯಲ್ಲಿ ಗುಂಡಿಗಳು ಬಿದ್ದಿವೆ

ಸಾಮಾಜಿಕ ಜಾಲತಾಣದಲ್ಲಿ ವಿಡಿಯೊ ಹಂಚಿಕೊಂಡ ಜನ; ಆಕ್ರೋಶ

ಕೆರೆ–ಕಾಲುವೆಯಲ್ಲ, ಇದು ರಸ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಇದು ಕೆರೆಯಲ್ಲ.. ಕಾಲುವೆಯೂ ಅಲ್ಲ.. ಮಾರತ್‌ಹಳ್ಳಿ–ಕಾಡುಬೀಸನಹಳ್ಳಿ ರಸ್ತೆ' ಎಂದು ಕೆಸರು ತುಂಬಿದ ರಸ್ತೆಯಲ್ಲಿ ವಾಹನಗಳು ಸಂಚರಿಸಲು ಪರದಾಡುವ ವಿಡಿಯೊವನ್ನು ಸ್ಥಳೀಯರು ಹಂಚಿಕೊಂಡು ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಇದಕ್ಕೆ ಅನೇಕ ನೆಟ್ಟಿಗರು ಧ್ವನಿಗೂಡಿಸಿದ್ದಾರೆ.

ಮಧುಕುಮಾರ್ ವಿ.ಪಿ. ಅವರು 'ಎಕ್ಸ್' ಖಾತೆಯಲ್ಲಿ ವಿಡಿಯೊ ಹಂಚಿಕೊಂಡಿದ್ದು, 'ಬೆಂಗಳೂರಿನವರು ಉತ್ತಮ ರಸ್ತೆ ಮತ್ತು ಮೂಲಸೌಕರ್ಯಗಳನ್ನು ಕೇಳಿದರೆ, ಸರ್ಕಾರವನ್ನು ಬ್ಲ್ಯಾಕ್ ಮೇಲ್ ಮಾಡಬೇಡಿ ಎಂದು ಉಪಮುಖ್ಯಮಂತ್ರಿ ಹೇಳುತ್ತಾರೆ' ಎಂದೂ ತಿಳಿಸಿದ್ದಾರೆ.

ಆಟೊದಲ್ಲಿ ಸಾಗುವಾಗ ಮಾಡಿರುವ ಕೆಸರುಮಯ ರಸ್ತೆಯ ವಿಡಿಯೊವನ್ನು ವೈಟಿಕೆಟಿ ಇಂಡಿಯಾ ಎಂಬ 'ಎಕ್ಸ್' ಖಾತೆಯಲ್ಲಿ ಹಂಚಿಕೊಳ್ಳಲಾಗಿದೆ. 'ಇದು ರಸ್ತೆಯಲ್ಲ. ನಾಗರಿಕರಿಗೆ ರಾಜ್ಯ ಪ್ರಾಯೋಜಿತ ಚಿತ್ರಹಿಂಸೆ' ಎಂದು ಘೋಷವಾಕ್ಯ ನೀಡಲಾಗಿದೆ. ಭಾರತದ ಸಿಲಿಕಾನ್ ವ್ಯಾಲಿ ಎಂದು ಕರೆಯಲಾಗುವ ನಮ್ಮ ಬೆಂಗಳೂರಿಗೆ ಸುಸ್ವಾಗತ. ಇಲ್ಲಿ ಗುಂಡಿಗಳು ಶಾಶ್ವತ. ಇಲ್ಲಿನ ನಿವಾಸಿಗಳಿಗೆ ನರಕ ನಿರಂತರ ಎಂದು ಬರೆದುಕೊಂಡಿದ್ದಾರೆ.

ಈ ವಿಡಿಯೊಗಳಿಗೆ ಅನೇಕರು ಆಕ್ರೋಶದಿಂದ, ಕೆಲವರು ವ್ಯಂಗ್ಯವಾಗಿ ಪ್ರತಿಕ್ರಿಯಿಸಿದ್ದಾರೆ. ರಾಜಕೀಯ ಚರ್ಚೆಗೂ, ಪಕ್ಷಗಳ ಪರ–ವಿರೋಧ ವಾದಿಸುವುದಕ್ಕೂ ಈ ವಿಡಿಯೊ ಕಾರಣವಾಗಿದೆ.

'ನೀವು ಕಾಂಗ್ರೆಸ್ ಅನ್ನು ತರಲು ಆದ್ಯತೆ ನೀಡಿದ್ದೀರಿ. ಈಗ ಅವರೊಂದಿಗೆ ಮಾತನಾಡಿ' ಎಂದು ಒಬ್ಬರು ಸಲಹೆ ನೀಡಿದ್ದಾರೆ. 'ಯಾರು ಇಲ್ಲಿನ ಸ್ಥಳೀಯ ಶಾಸಕರು, ಸಂಸದರು?' ಎಂದು ಮತ್ತೊಬ್ಬರು ಪ್ರಶ್ನೆ ಎತ್ತಿದ್ದಾರೆ. ಮಹದೇವಪುರದ ಜನರು ಕಳೆದ 20 ವರ್ಷಗಳಿಂದ ಬಿಜೆಪಿಯ ಕೋಡಂಗಿ ಮತ್ತು ಅವರ ಕುಟುಂಬವನ್ನು ಆಯ್ಕೆ ಮಾಡುತ್ತಿದೆ' ಎಂದು ಒಬ್ಬರು ಉತ್ತರಿಸಿದ್ದಾರೆ. 'ಇಲ್ಲಿ ಅಧಿಕ ಗುಂಡಿಗಳಿದ್ದರೂ ಸ್ವಲ್ಪವೂ ತಲೆಕೆಡಿಸಿಕೊಂಡಿಲ್ಲ' ಎಂದು ಇನ್ನೊಬ್ಬರು ದೂರಿದ್ದರೆ, 'ಪದೇ ಪದೇ ಅವರನ್ನೇ ಆಯ್ಕೆ ಮಾಡಿ ಎಂದು ವಿನಂತಿ ಮಾಡುತ್ತೇನೆ' ಎಂದು ಇನ್ನೊಬ್ಬರು ವ್ಯಂಗ್ಯ ಮಾಡಿದ್ದಾರೆ. ಮೂಲಸೌಕರ್ಯಕ್ಕಿಂತ ಉಚಿತ ಯೋಜನೆಗಳು ಮುಖ್ಯ ಎಂದು ಕೆಲವರು ಗ್ಯಾರಂಟಿ ಯೋಜನೆಗಳನ್ನು ಅಣಕಿಸಿದ್ದಾರೆ.

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಟ್ಯಾಗ್ ಮಾಡಿ ಅನೇಕರು ಪ್ರಶ್ನೆ ಕೇಳಿದ್ದಾರೆ.

'ಇಲ್ಲಿನ ನಿವಾಸಿಗಳೇ ನೀವು ಯಾಕೆ ಮೂಲ ಸೌಕರ್ಯ ಇಲ್ಲದ ಈ ಜಾಗವನ್ನು ವಾಸಿಸಲು ಆಯ್ಕೆ ಮಾಡಿಕೊಂಡಿದ್ದೀರಿ' ಎಂದು ಒಬ್ಬರು ಕೇಳಿದ್ದಾರೆ. ದೇಶದ ಎಲ್ಲ ನಗರಗಳಲ್ಲಿ ಇಂಥ ಸಮಸ್ಯೆಗಳಿವೆ. ಬೆಂಗಳೂರು ಒಂದನ್ನೇ ಹೈಲೈಟ್ ಮಾಡಬೇಡಿ ಎಂದು ಬೆಂಗಳೂರು ಪ್ರಿಯರೊಬ್ಬರು ಮನವಿ ಮಾಡಿಕೊಂಡಿದ್ದಾರೆ.

'ಪ್ರಶ್ನೆ ಏನೆಂದರೆ ಇಲ್ಲಿ ರಸ್ತೆ ಎಲ್ಲಿದೆ?', 'ಶಾಸಕರು, ಸಂಸದರು ಅಗತ್ಯವಾಗಿ ಇಲ್ಲಿ ವಾಸಿಸಬೇಕು', '50 ಟ್ರಿಲಿಯನ್ ಎಕಾನಮಿ' ಹೀಗೆ ಅನೇಕ ರೀತಿಯ ಪ್ರತಿಕ್ರಿಯೆಗಳು ಬಂದಿವೆ.

ಮಾರತ್‌ಹಳ್ಳಿ–ಕಾಡುಬೀಸನಹಳ್ಳಿ ರಸ್ತೆಯು ಕೆಸರುಗದ್ದೆಯಂತಾಗಿದ್ದು, ವಾಹನಗಳು ಸಂಚರಿಸಿದವು

ಮಾರತ್‌ಹಳ್ಳಿ–ಕಾಡುಬೀಸನಹಳ್ಳಿ ರಸ್ತೆಯಲ್ಲಿ ದೊಡ್ಡ ಗಾತ್ರದ ಗುಂಡಿಗಳು ಬಿದ್ದಿದ್ದು, ಮಳೆ ನೀರು ಸಂಗ್ರಹಗೊಂಡಿತ್ತು

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164
9845114560 / 9731810277/ 9886213331

BUSINESS

Business Offers

Finance

AVAIL MSME LOANS EASILY Business Owners can now Avail MSME Loans Upto 1 crore against GST/UDYAM Certificates UNSECURED LOANS Available for both Existing Businesses& Startups Contact-7204995189

Agents Wanted

ಕೊರಿಯರ್ ಸೇವೆಗಳಿಗೆ ಏಜೆಂಟರು ಬೇಕಾಗಿದ್ದಾರೆ

ನಾವು ಕೆಳಗಿನ ಪಿನ್ ಕೋಡ್‌ಗಳಲ್ಲಿ ಡೆಲಿವರಿ ಮತ್ತು ಪಿಕ್‌ಅಪ್ ಕಾರ್ಯಗಳಿಗಾಗಿ ಅನುಭವ ಹೊಂದಿದ ಏಜೆಂಟರನ್ನು ಹುಡುಕುತ್ತಿದ್ದೇವೆ:
560066 | 560067 | 560048 | 560049 | 562152

ಅರ್ಹತೆ ಮತ್ತು ಆದ್ಯತೆ:

- ಕೇವಲ ಅನುಭವ ಹೊಂದಿದ ಅಭ್ಯರ್ಥಿಗಳು ಮಾತ್ರ ಸಂಪರ್ಕಿಸಬಹುದು
- ಈಗಾಗಲೇ ಡೆಲಿವರಿ / ಪಿಕ್‌ಅಪ್ ಸೌಲಭ್ಯ ಹೊಂದಿರುವವರಿಗೆ ಪ್ರಾಶಸ್ತ್ಯ ನೀಡಲಾಗುತ್ತದೆ
- ಈಗಾಗಲೇ ಬೇರೆ ತರಹದ ಬಿಸಿನೆಸ್ ಹೊಂದಿರುವವರು ಕೊರಿಯರ್ ಕಲೆಕ್ಷನ್ ಸೆಂಟರ್ ಗಳಿಗೆ ಸಂಪರ್ಕಿಸಬಹುದು
- ಅಭ್ಯರ್ಥಿಗಳು ಪ್ಯಾನ್, ಆಧಾರ್ ಮತ್ತು GST ನೋಂದಣಿ ಹೊಂದಿರಬೇಕು

ಸಂಪರ್ಕಿಸಿ : 9591907777
ಸಮಯ: ಬೆಳಗ್ಗೆ 11:00 ರಿಂದ ಸಂಜೆ 6:00 ವರೆಗೂ

Wanted

SSRC LOGISTICS PVT LTD. Makali Bangalore. Wanted Female DATA Entry Operator. Salary Rs. 12,000-20,000/-. Min. B.Com, Hindi, Kannada, English. M. 9742121211, 9986022251. Interview 10 am to 04 pm.

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

Business to Business

Business

PROPERTY COLLATERALS/ Joint Developments/ Take overs) R/E Buying Selling School/ Colleges/ Hospitals. Hot Drinks Factory (GOA). Dr. Swamy, Vamshadhara Projects/ Services- 93422247637.

Finance

'ALL LOANS from Bank/Pvt. (Direct): Mortgage, (any property- with/ without income), project, collatrals, sharing, subsidy, startup Cibil no issue. Low int. DSA, Mediators also welcome. Cont :9019388175.

JOB OPPORTUNITIES

Graphic Designers

WANTED MALE Graphic Designer (Corel Draw Photoshop Illustrator) Pvt Ltd Company around Rajajinagar Contact: 9108458798/ 9845579620

PUBLIC NOTICE

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ, ನನ್ನ ಕಕ್ಷಿದಾರರು ಕೆಳಗೆ ವಿವರಿಸಿರುವ ನಿರ್ದಿಷ್ಟ ಆಸ್ತಿಯನ್ನು ಶ್ರೀ ಸುಭಾಕರ ರಾವ್ ಸುರಪನೇನಿ ರವರಿಂದ ಖರೀದಿಸಲು ಉದ್ದೇಶಿಸಿದ್ದಾರೆ. ಈ ನಿರ್ದಿಷ್ಟ ಆಸ್ತಿಗೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿ, ಸಂಸ್ಥೆ, ಬ್ಯಾಂಕ್, ಕಾರ್ಪೊರೇಟ್ ಸಂಸ್ಥೆ ಅಥವಾ ಯಾವುದೇ ಪ್ರಾಧಿಕಾರವು, ಹಕ್ಕು/ ಸ್ವಾಮ್ಯ, ಶೀರ್ಷಿಕೆ, ಹಿತಾಸಕ್ತಿ, ಹೊಣೆಗಾರಿಕೆ, ಶುಲ್ಕ,ಋಣ ಭಾರ, ಅಡಮಾನ, ಗುತ್ತಿಗೆ/ಕಬ್ಜ, ಉಪಯೋಗ ಹಕ್ಕು, ಒಪ್ಪಂದ, ವ್ಯಾಜ್ಯ ಅಥವಾ ಇನ್ನಾವುದೇ ಆಕ್ಷೇಪಣೆಯನ್ನು ಹೊಂದಿದ್ದರೆ, ಅವರು ಈ ಪ್ರಕಟಣೆಯನ್ನು ಪ್ರಕಟಿಸಿದ ದಿನಾಂಕದಿಂದ 7 (ಏಳು) ದಿನಗಳ ಒಳಗಾಗಿ ತಮ್ಮ ಆಕ್ಷೇಪಣೆಗಳನ್ನು ಸಮರ್ಥಿಸುವ ದಾಖಲೆಗಳೊಂದಿಗೆ ಕೆಳಗೆ ನೀಡಿದ ವಿಳಾಸಕ್ಕೆ ಲಿಖಿತವಾಗಿ ಸಲ್ಲಿಸಬೇಕು. ಕೆಳಗೆ ವಿಳಾಸವನ್ನು ನೀಡಲಾಗಿದೆ.

ನಿಗದಿಪಡಿಸಿದ ಅವಧಿಯೊಳಗೆ ಯಾವುದೇ ಆಕ್ಷೇಪಣೆಗಳು ಬಾರದಿದ್ದರೆ, ಯಾವುದೇ ಹಕ್ಕುಗಳು/ಆಕ್ಷೇಪಣೆಗಳಿಲ್ಲವೆಂದು ಭಾವಿಸಲಾಗುವುದು ಮತ್ತು ಉದ್ದೇಶಿತ ವಹಿವಾಟು ಮುಂದುವರೆಯುವುದು. ಆನಂತರ ಬರುವ ಯಾವುದೇ ಹಕ್ಕುಗಳು/ಆಕ್ಷೇಪಣೆಗಳನ್ನು ಖರೀದಿದಾರರಿಗೆ ಸಂಬಂಧಿಸಿದಂತೆ ಪರಿಗಣಿಸಲಾಗುವುದಿಲ್ಲ.

ಈ ಪ್ರಕಟಣೆ ಶುದ್ಧ ಸತ್ಸಂಕಲ್ಪದಿಂದ, ಯಾವುದೇ ಹಕ್ಕು ಹೂಡುವವರನ್ನು ಆಹ್ವಾನಿಸುವ ಉದ್ದೇಶದಿಂದ, ನಿರೀಕ್ಷಿತ ಖರೀದಿದಾರರ ಪರವಾಗಿ ಹೊರಡಿಸಲಾಗಿದೆ. ಸುಳ್ಳು ಅಥವಾ ಅಸಂಬದ್ಧ ಹಕ್ಕುಹೂಡಿಕೆಗಳನ್ನು ಕಾನೂನಿನ ಪ್ರಕಾರ ಕ್ರಮಕ್ಕೆ ಒಳಪಡಿಸಲಾಗುವುದು. ಈ ಪ್ರಕಟಣೆಯನ್ನು ಯಾವುದೇ ಹಕ್ಕಿನ ದೋಷವನ್ನು ಒಪ್ಪಿಕೊಳ್ಳಲಾಗಿದೆ ಎಂದುಕೊಳ್ಳುವುದಾಗಲಿ ಅಥವಾ ನಿರೀಕ್ಷಿತ ಖರೀದಿದಾರರ ಹಕ್ಕುಗಳನ್ನು ತ್ಯಜಿಸಲಾಗಿದೆ ಎಂದುಕೊಳ್ಳುವುದಾಗಲಿ ಪರಿಗಣಿಸಲಾಗುವುದಿಲ್ಲ.

ಷೆಡ್ಯೂಲ್ ಆಸ್ತಿಯ ವಿವರ:

ಸ್ಥಿರಾಸ್ತಿ ಸಂಬಂಧಿಸಿದ ಎಲ್ಲಾ ಆಸ್ತಿ ಭಾಗವು ವಾಸಸ್ಥಾನದ ಮನೆ ಆಗಿದ್ದು, ಸರಿಸುಮಾರು 5500 ಚ.ಅಡಿ ವಿಸ್ತೀರ್ಣವಿದೆ. ಈ ಮನೆಗೆ ಪುರಸಭೆ ನಂ. 5 (ಹಳೆಯ ನಂ. 281), ಬಿಬಿಎಂಪಿ ಪಿಐಡಿ ನಂ. 99–16–5 ಹೊಂದಿದ್ದು, ಬಿಬಿಎಂಪಿ ವಾರ್ಡ್ ನಂ. 35, ಅರಮನೆನಗರ, 17ನೇ ಕ್ರಾಸ್, ಸದಾಶಿವನಗರ (ಹಿಂದೆ "ಪ್ಯಾಲೆಸ್ ಅಪರ್ ಆರ್ಚರ್ಡ್ಸ್ ಎಕ್ಸ್‌ಟೆನ್ಷನ್" ಎಂದೂ ಕರೆಯಲ್ಪಡುತ್ತಿತ್ತು), ಬೆಂಗಳೂರು–560080 ನಲ್ಲಿ ಇದೆ ಮತ್ತು ಈ ಕೆಳಗಿನಂತೆ ಗಡಿಗಳನ್ನು ಹೊಂದಿದೆ;

ಪೂರ್ವಕ್ಕೆ: ರಸ್ತೆ;
ಪಶ್ಚಿಮಕ್ಕೆ: ಆಸ್ತಿ ನಂ. 298;
ಉತ್ತರಕ್ಕೆ: ಆಸ್ತಿ ನಂ. 282;
ದಕ್ಷಿಣಕ್ಕೆ: ಆಸ್ತಿ ನಂ. 280.

ಸ್ಥಳ: ಬೆಂಗಳೂರು
ದಿನಾಂಕ: 22 ಸೆಪ್ಟೆಂಬರ್ 2025

ಸಹಿ/–
ಸೋಮಣ್ಣ ಸಿ.ಪಿ., ವಕೀಲರು. "ಎಸ್ & ಪಿ ಅಡ್ವೋಕೇಟ್ಸ್ ಅಂಡ್ ಸಾಲಿಸಿಟರ್ಸ್", ನಂ. 15, 2ನೇ ಮಹಡಿ, ಎನ್.ಎಸ್. ಐಯ್ಯಂಗಾರ್ ರಸ್ತೆ, 3ನೇ ಕ್ರಾಸ್, ಕುಮಾರ ಪಾರ್ಕ್ ಪಶ್ಚಿಮ, ಶೇಷಾದ್ರಿಪುರಂ ಕಾಲೇಜು ಎದುರು, ಬೆಂಗಳೂರು, ಕರ್ನಾಟಕ – 560020
+91 9481251220 | E-mail: cpsomanna11@gmail.com

ರಸ್ತೆ ಗುಂಡಿ ಕಂಡರೆ ಫೋಟೊ ಕಳುಹಿಸಿ

ನಾಗರಿಕರು ತಾವು ವಾಸಿಸುವ ಹಾಗೂ ಸಂಚರಿಸುವ ರಸ್ತೆಗಳಲ್ಲಿ ಗುಂಡಿ ಕಂಡರೆ ಅದರ ಚಿತ್ರ ಸಹಿತ ಮಾಹಿತಿಯನ್ನು 'ಪ್ರಜಾವಾಣಿ'ಗೆ ಕಳುಹಿಸಿಕೊಡಬಹುದು. ನಿಮ್ಮ ಹೆಸರು ಹಾಗೂ ವಿಳಾಸವಿರಲಿ. ವಾಟ್ಸ್‌ಆ್ಯಪ್: **9606038256**

ಮುಖ್ಯಮಂತ್ರಿಯವರ ನಿವಾಸದಿಂದ ಕೂಗಳತೆ ದೂರದಲ್ಲಿರುವ ವಿಂಡ್ಸರ್‌ಮ್ಯಾನರ್ ವೃತ್ತದ ಬಳಿ ರಸ್ತೆಯಲ್ಲಿ ಗುಂಡಿಗಳು ಬಿದ್ದಿವೆ –ಪ್ರಜಾವಾಣಿ ಚಿತ್ರಗಳು

ಕಬ್ಬನ್ ಉದ್ಯಾನದ ಹಳೆಯ ಕೆಜಿಐಡಿ ಕಟ್ಟಡದ ಮುಂಭಾಗದ ರಸ್ತೆಯಲ್ಲಿ ಗುಂಡಿಗಳು ಬಿದ್ದಿವೆ

ಮೈಸೂರು ರಸ್ತೆಯ ನಾಯಂಡಹಳ್ಳಿ ಮೇಲ್ಸೇತುವೆ ಬಳಿಯ ರಸ್ತೆಯಲ್ಲಿ ಬೃಹತ್ ಗುಂಡಿಗಳು ಬಿದ್ದಿವೆ

ರಾಜಾಜಿನಗರದ ಎಂಟನೇ ಮುಖ್ಯರಸ್ತೆಯಲ್ಲಿ ಬೃಹತ್ ಗುಂಡಿ ಬಾಯ್ತೆರೆದುಕೊಂಡಿದೆ

ಫುಡ್ ಡೆಲಿವರಿ ನೆಪದಲ್ಲಿ ಕಳ್ಳತನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಹಾರ ಪದಾರ್ಥ ತಲುಪಿಸುವ ನೆಪದಲ್ಲಿ ಅಂಗಡಿಗಳಲ್ಲಿ ಕಳ್ಳತನ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ಸಿದ್ದಾಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ರಾಜಸ್ಥಾನದ ಪ್ರೇಮ್‌ರಾಮ್ (35), ಲಕ್ಷ್ಮಣ್ ರಾಮ್ (32) ಎಂಬವರನ್ನು ಬಂಧಿಸಿ, ದ್ವಿಚಕ್ರ ವಾಹನ, ವಿವಿಧ ಕಂಪನಿಗಳ ವೈರ್ ಕಾಯಿಲ್ ಸೇರಿ ₹5 ಲಕ್ಷ ಮೌಲ್ಯದ ವಸ್ತುಗಳನ್ನು ವಶಕ್ಕೆ ಪಡೆದಿದ್ದಾರೆ.

ಜಯನಗರ 1ನೇ ಬ್ಲಾಕ್‌ನ ಅಶೋಕ್ ಕುಮಾರ್ ಜಯನಗರ 2ನೇ ಬ್ಲಾಕ್‌ನಲ್ಲಿ ವೈರ್ ಕಾಯಿಲ್ ವ್ಯಾಪಾರ ನಡೆಸುತ್ತಿದ್ದಾರೆ. ಆ.18ರಂದು ರಾತ್ರಿ ಬೀಗ ಹಾಕಿಕೊಂಡು ಹೋಗಿದ್ದರು. ಮರುದಿನ ಅಂಗಡಿಗೆ ಬಂದಾಗ ಬಾಗಿಲು ಅರ್ಧ ತೆರೆದಿರುವುದನ್ನು ನೋಡಿದಾಗ 80 ರಿಂದ 90 ವೈರ್ ಕಾಯಿಲ್‌ಗಳನ್ನು ಕಳವು ಮಾಡಲಾಗಿತ್ತು. ಈ ಬಗ್ಗೆ ಸಿದ್ದಾಪುರ ಠಾಣೆ ಪೊಲೀಸರಿಗೆ ದೂರು ನೀಡಿದ್ದರು.

ಸಿ.ಸಿ.ಟಿ.ವಿ ಕ್ಯಾಮೆರಾ, ಬಾತ್ಮಿದಾರರ ಮಾಹಿತಿ ಆಧರಿಸಿ ಕಾರ್ಯಾಚರಣೆ ನಡೆಸಿದ ಪೊಲೀಸರು, ಮಾಗಡಿ ಮುಖ್ಯ ರಸ್ತೆ ಬ್ಯಾಡರಹಳ್ಳಿಯಲ್ಲಿ ಇಬ್ಬರನ್ನು ವಾಹನ ಸಮೇತ ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಕಳವು ಮಾಡಿರುವುದನ್ನು ತಿಳಿಸಿದ್ದಾರೆ.

ಫುಡ್ ಡೆಲಿವರಿ ಮಾಡುವ ನೆಪದಲ್ಲಿ ಅಂಗಡಿಗಳನ್ನು ಗುರುತಿಸಿ, ರಾತ್ರಿ ವೇಳೆ ಕಟ್ಟರ್, ಕಬ್ಬಿಣದ ರಾಡ್‌ಗಳಿಂದ ಬಾಗಿಲು ಮೀಟಿ ಕಳ್ಳತನ ಮಾಡುತ್ತಿದ್ದರು. ಆರೋಪಿಗಳಿಂದ 72 ವಿವಿಧ ಕಂಪನಿಯ ವೈರ್ ಕಾಯಿಲ್, ಕಟ್ಟರ್, ಕಬ್ಬಿಣದ ರಾಡ್ ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ರಾತ್ರಿಯಿಡೀ ಪೊಲೀಸರ ವಿಶೇಷ ಗಸ್ತು

ಬೆಂಗಳೂರು: ನಗರದಲ್ಲಿ ಅಪರಾಧ ತಡೆಗಟ್ಟಲು, ಪುಂಡರ ಹಾವಳಿ ನಿಯಂತ್ರಿಸಲು ಶನಿವಾರ ರಾತ್ರಿ 11ರಿಂದ ಭಾನುವಾರ ಮುಂಜಾನೆ 5 ಗಂಟೆವರೆಗೂ ನಗರ ಪೊಲೀಸರು ಗಸ್ತು ನಡೆಸಿದರು.

ನಗರ ಪೊಲೀಸ್ ಕಮಿಷನರ್ ಸೀಮಾಂತ್ ಕುಮಾರ್ ಸಿಂಗ್ ಸಹ ಗಸ್ತಿನಲ್ಲಿ ಪಾಲ್ಗೊಂಡು, ಕಿರಿಯ ಅಧಿಕಾರಿಗಳಿಗೆ ಕೆಲವು ಸಲಹೆ ಹಾಗೂ ಸೂಚನೆಗಳನ್ನು ನೀಡಿದರು.

ಸ್ಥಾಪನೆ: 1970

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ

ರಾಜಾರಾಂ ಮೋಹನ್‌ರಾಯ್ ರಸ್ತೆ, ಸಂಪಂಗಿರಾಮನಗರ, ಬೆಂಗಳೂರು–560 027

2024–25ನೇ ಸಾಲಿನ 48ನೇ ವಾರ್ಷಿಕ ಸರ್ವ ಸದಸ್ಯರ ಮಹಾಸಭೆ

ಮೇಲ್ಕಂಡ ಸಂಘದ 48ನೇ ಸರ್ವ ಸದಸ್ಯರ ಮಹಾಸಭೆಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಪದವಿ ಪೂರ್ವ ಕಾಲೇಜು, ಬನ್ನಪ್ಪ ಪಾರ್ಕ್ ಆವರಣದಲ್ಲಿ ದಿನಾಂಕ:25/9/2025ರ ಗುರುವಾರ ಬೆಳಗ್ಗೆ 10:00 ಗಂಟೆಗೆ ಸಂಘದ ಅಧ್ಯಕ್ಷರಾದ ಶ್ರೀ ಆರ್.ಸುಬ್ರಮಣ್ಯಂರವರ ಅಧ್ಯಕ್ಷತೆಯಲ್ಲಿ ಏರ್ಪಡಿಸಲಾಗಿದೆ. ಮಾನ್ಯ ಸದಸ್ಯರುಗಳಿಗೆ ಅಂಚೆ ಮೂಲಕ ಸರ್ವಸದಸ್ಯರ ಮಹಾಸಭೆಯ ತಿಳುವಳಿಕೆ ಪತ್ರವನ್ನು ಈಗಾಗಲೇ ಕಳುಹಿಸಲಾಗಿದೆ. ತಿಳುವಳಿಕೆ ಪತ್ರವು ತಲುಪದೆ ಇದ್ದಲ್ಲಿ ಈ ಪ್ರಕಟಣೆಯನ್ನು ತಿಳುವಳಿಕೆ ಪತ್ರ ಎಂದು ಭಾವಿಸಿ ಸಂಘದ ಸದಸ್ಯರುಗಳು ಸಕಾಲಕ್ಕೆ ಹಾಜರಾಗಿ ಕಾರ್ಯಕಲಾಪಗಳಲ್ಲಿ ಭಾಗವಹಿಸಬೇಕಾಗಿ ಕೋರಿದೆ.

ಸಂಘಕ್ಕೆ ಪಾವತಿಸಿರುವ ಷೇರುಧನವನ್ನು ಹಿಂದೆ ಇದ್ದ 100ರೂ.ಗಳನ್ನು 1000ರೂ.ಗಳಿಗೆ ಹೆಚ್ಚಿಸಿ, 2014ರಿಂದಲೇ ಪಾವತಿಸಬೇಕೆಂದು ಈಗಾಗಲೇ ಹಲವುಬಾರಿ ಸುತ್ತೋಲೆ ಮುಖಾಂತರ ಪಾವತಿಸಿಲ್ಲದ ಸದಸ್ಯರುಗಳಿಗೆ ತಿಳಿಸಲಾಗಿದೆ. ಈಗಲೂ ಸಹ ಬಾಕಿ ಷೇರು ಧನವನ್ನು ಪಾವತಿಸದೆ ಇರುವ ಸದಸ್ಯರುಗಳು ಸಂಘದ ಕಛೇರಿಗೆ ಬಂದು ಷೇರುಧನವನ್ನು ಪಾವತಿಸಿ 48ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆಗೆ ಹಾಜರಾಗಲು ಕೋರಿದೆ.

ಕಾರ್ಯನಿರ್ವಾಹಕ ಮಂಡಳಿ ಅಪ್ಪಣೆ ಮೇರೆಗೆ,
ಸಹಿ/–
ಆರ್.ಸುಬ್ರಮಣ್ಯಂ
ಅಧ್ಯಕ್ಷರು

ಆಸ್ತಿಗಾಗಿ ತಂದೆ ಕೊಂದ ಮಗ; ಸ್ನೇಹಿತನ ಬಂಧನ

ಬೆಂಗಳೂರು: ಆಸ್ತಿಯ ಆಸೆಗಾಗಿ ಸ್ನೇಹಿತನ ಜತೆ ಸೇರಿ ತಂದೆಯನ್ನು ಉಸಿರುಗಟ್ಟಿಸಿ ಕೊಲೆ ಮಾಡಿರುವ ಘಟನೆ ಬಾಗಲಗುಂಟೆ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದು, ಈ ಸಂಬಂಧ ಸ್ನೇಹಿತನನ್ನು ಬಂಧಿಸಲಾಗಿದೆ.

ದಾಸರಹಳ್ಳಿ ಕೆಂಪೇಗೌಡ ನಗರದ ಮಂಜಣ್ಣ (55) ಕೊಲೆಯಾದವರು.

ಸೆ.2 ರಂದು ಮನೆಯ ಸೋಫಾದ ಮೇಲೆ ಮಲಗಿದ್ದ ಮಂಜಣ್ಣ ಅವರನ್ನು ಮಗ ಮನೋಜ್ ಮತ್ತು ಆತನ ಸ್ನೇಹಿತ ಪ್ರವೀಣ್ ರೆಡ್ಡಿ ಕುತ್ತಿಗೆಗೆ ಟವಲ್ ಬಿಗಿದು ಉಸಿರುಗಟ್ಟಿಸಿ ಕೊಲೆ ಮಾಡಿದ್ದರು. ಬಳಿಕ ಹೃದಯಾಘಾತದಿಂದ ತಂದೆ ಮೃತಪಟ್ಟಿದ್ದಾರೆ ಎಂದು ಬಿಂಬಿಸಲಾಗಿತ್ತು. ಮರಣೋತ್ತರ ಪರೀಕ್ಷೆಯಲ್ಲಿ ಉಸಿರುಗಟ್ಟಿಸಿ ಕೊಲೆ ಮಾಡಿರುವುದು ದೃಢಪಟ್ಟಿದೆ. ಆರೋಪಿ ಪ್ರವೀಣ್ ರೆಡ್ಡಿಯನ್ನು ಬಂಧಿಸಿದ್ದಾರೆ. ಮನೋಜ್‌ಗಾಗಿ ಶೋಧ ನಡೆಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮಂಜಣ್ಣ ಐದಾರು ವಾಣಿಜ್ಯ ಮಳಿಗೆಗಳು, 4 ನಿವೇಶನ, ಒಂದು ವುಡ್ ವರ್ಕ್ಸ್ ಫ್ಯಾಕ್ಟರಿ ಹೊಂದಿದ್ದರು. ಇಬ್ಬರು ಗಂಡು ಮಕ್ಕಳ ಪೈಕಿ ಹಿರಿಯ ಮಗ ಮನೋಜ್ ಕೆಲಸ ಮಾಡದೇ ಸುತ್ತಾಡಿಕೊಂಡಿದ್ದ. ದುಶ್ಚಟಗಳ ದಾಸನಾಗಿದ್ದು, ಹಣಕ್ಕಾಗಿ ತಂದೆಯನ್ನು ಪೀಡಿಸುತ್ತಿದ್ದ.

ತಂದೆಯನ್ನು ಕೊಲೆ ಮಾಡಿದರೆ ತನಗೆ ಆಸ್ತಿ ಬರಲಿದೆ ಎಂದು ಭಾವಿಸಿದ್ದ ಮನೋಜ್, ಈ ವಿಚಾರವನ್ನು ಸ್ನೇಹಿತ ಪ್ರವೀಣ್ ರೆಡ್ಡಿಗೂ ಹೇಳಿದ್ದ. ಕೃತ್ಯಕ್ಕೆ ಸಹಕರಿಸಿದರೆ ಆಸ್ತಿ ಬಂದ ಬಳಿಕ ₹10 ಲಕ್ಷ ಕೊಡುವುದಾಗಿ ಆಮಿಷವೊಡ್ಡಿದ್ದ. ವುಡ್ ವರ್ಕ್ಸ್ ಫ್ಯಾಕ್ಟರಿಯಲ್ಲಿದ್ದ ತಂದೆಗೆ ಮನೆಗೆ ಹೋಗಿ ವಿಶ್ರಾಂತಿ ತೆಗೆದುಕೊಳ್ಳುವಂತೆ ಮನೋಜ್ ಹೇಳಿದ್ದ. ಅದರಂತೆ ಅವರು ಮನೆಗೆ ಹೋಗಿ ಸೋಫಾದ ಮೇಲೆ ನಿದ್ದೆಗೆ ಜಾರಿದ್ದರು.

ಇದಾದ ಕೆಲ ಹೊತ್ತಿನ ಬಳಿಕ ಮನೆಗೆ ಬಂದ ಮನೋಜ್ ಹಾಗೂ ಪ್ರವೀಣ್ ರೆಡ್ಡಿ, ಮಂಜಣ್ಣ ಅವರ ಕುತ್ತಿಗೆಗೆ ಟವೆಲ್ ಬಿಗಿದು ಉಸಿರುಗಟ್ಟಿಸಿ ಕೊಲೆ ಮಾಡಿ ಪರಾರಿಯಾಗಿದ್ದರು.

ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಾವಳಿ ಪರಿಶೀಲನೆ

ಮರಣೋತ್ತರ ಪರೀಕ್ಷಾ ವರದಿ ಬಂದ ಬಳಿಕ ತನಿಖೆ ನಡೆಸಿದ ಪೊಲೀಸರು, ಮೃತ ವ್ಯಕ್ತಿಯ ಮನೆ ಸುತ್ತಮುತ್ತ ಕಟ್ಟಡಗಳ ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಾವಳಿ ಪರಿಶೀಲಿಸಿದರು. ಸೆಪ್ಟೆಂಬರ್ 2ರ ಮಧ್ಯಾಹ್ನ ಮನೋಜ್, ಪ್ರವೀಣ್ ರೆಡ್ಡಿ ಮನೆ ಪ್ರವೇಶಿಸಿ ಕೆಲ ಹೊತ್ತಿನ ಬಳಿಕ ಗಾಬರಿಯಲ್ಲಿ ಹೊರಗೆ ಹೋಗಿರುವುದು ಗೊತ್ತಾಗಿದೆ. ಈ ಬಗ್ಗೆ ಅನುಮಾನಗೊಂಡ ಪೊಲೀಸರು ಇಬ್ಬರ ಮೊಬೈಲ್ ಕರೆಗಳ ವಿವರ ಸಂಗ್ರಹಿಸಿ ಪರಿಶೀಲಿಸಿದ್ದಾರೆ. ನಂತರ ಪ್ರವೀಣ್ ರೆಡ್ಡಿಯನ್ನು ವಶಕ್ಕೆ ಪಡೆದು ವಿಚಾರಣೆ ಮಾಡಿದಾಗ ಕೊಲೆ ರಹಸ್ಯ ತಿಳಿಸಿದ್ದಾನೆ. ಬಳಿಕ ಆತನನ್ನು ಬಂಧಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ನಗರದಲ್ಲಿ ಇಂದು

ಅನಂತಕುಮಾರ್ ಅವರ ಜನ್ಮದಿನದ ಅಂಗವಾಗಿ 'ಅನಂತ ಸ್ಮರಣೆ–ಅನಂತ ಪ್ರೇರಣೆ': ಆಯೋಜನೆ: ಅದಮ್ಯ ಚೇತನ, ಅನಂತಕುಮಾರ್ ಪ್ರತಿಷ್ಠಾನ, ಸ್ಥಳ: ಧೋಂಡುಸಾ, ಕಲ್ಯಾಣ ಮಂಟಪ ಅದಮ್ಯ ಚೇತನ ಎದುರು, ಪೂರ್ಣಚಂದ್ರ ತೇಜಸ್ವಿ ರಸ್ತೆ, ಗವಿಪುರ, ಬೆಳಿಗ್ಗೆ 10.30

ಪಿ.ಬಿ. ಶ್ರೀನಿವಾಸ್ ಸ್ಮರಣಾರ್ಥ ಸಂಗೀತ ಕಛೇರಿ: ಸ್ಥಳ: ಸಾಯಿ ಸದ್ಗುರು ಚಾರಿಟಬಲ್ ಟ್ರಸ್ಟ್, ಪಟ್ಟರೆಡ್ಡಿ ಪಾಳ್ಯ, ಕನಕಪುರ ರಸ್ತೆ, ಸಂಜೆ 4.30

42ನೇ ಅಂತರ ವಿಭಾಗ ನಾಟಕ ಸ್ಪರ್ಧೆ: 'ದಫನ್' ನಾಟಕ ಪ್ರದರ್ಶನ: ನಿರ್ದೇಶನ: ಪುನೀತ್ ಕುಮಾರ್, ಆಯೋಜನೆ: ಕನ್ನಡ ಸಾಹಿತ್ಯ ಕೂಟ, ಸ್ಥಳ: ರಾಷ್ಟ್ರಕವಿ ಕುವೆಂಪು ಕಲಾಕ್ಷೇತ್ರ, ಜಾಲಹಳ್ಳಿ, ಸಂಜೆ 5.30

ಕಪ್ಪಣ್ಣ ಅಂಗಳ ದಶಮಾನೋತ್ಸವ: 'ವರ್ಣ ಪಟಲ' ಚಲನಚಿತ್ರ ಪ್ರದರ್ಶನ, ಸ್ಥಳ: ಕಪ್ಪಣ್ಣ ಅಂಗಳ, ಐದನೇ ಮುಖ್ಯರಸ್ತೆ, ಐಟಿಐ ಕಾಲೊನಿ, ಜೆ.ಪಿ. ನಗರ ಮೊದಲ ಹಂತ, ಸಂಜೆ 6.30

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ನವರಾತ್ರಿ ವಿಶೇಷ

ನವರಾತ್ರಿ ಮಹೋತ್ಸವದ ಅಂಗವಾಗಿ 'ಧಾತು' ಗೊಂಬೆಗಳ ಪ್ರದರ್ಶನ: ಆಯೋಜನೆ: ಧಾತು ಕ್ರಿಯೇಟಿವ್, ಸ್ಥಳ: ಮಂಡಲ ಕಲ್ಚರಲ್ ಸೆಂಟರ್, ಕನಕಪುರ ರಸ್ತೆ, ಬೆಳಿಗ್ಗೆ 10.30

ನವರಾತ್ರಿ ಉತ್ಸವ: 'ಭಾರತೀಯ ಸಂಪ್ರದಾಯದಲ್ಲಿ ಗೊಂಬೆಗಳು' ಉಪನ್ಯಾಸ: ಎಸ್.ಆರ್. ಲೀಲಾ, ಆಯೋಜನೆ ಮತ್ತು ಸ್ಥಳ: ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಬೆಳಿಗ್ಗೆ 11

ವಚನ ದಸರಾ ಉದ್ಘಾಟನೆ: ಹಾಜ್ವೀರಾ ಖಾನಂ, ಅಧ್ಯಕ್ಷತೆ: ಎಸ್. ಪಿನಾಕಪಾಣಿ, ಅತಿಥಿಗಳು: ಬಿ.ಎಂ. ಪಂಚಾಕ್ಷರಿ, ಎ. ಮಲ್ಲಿಕಾರ್ಜುನಯ್ಯ, ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ಬಸವ ಬೆಳಕು, ಕಲ್ಯಾಣ ಗೃಹನಿರ್ಮಾಣ ಸಹಕಾರ ಸಂಘ ಬಡಾವಣೆ, ಸಂಜೆ 5

ದೇವಿಯರಿಗೆ ಹೂವಿನ ಅಲಂಕಾರ: ಆಯೋಜನೆ ಮತ್ತು ಸ್ಥಳ: ದೇವಿ ಸಲ್ಲಾಪುರಮ್ಮ, ದೇವಿ ರೇಣುಕಾಯಲ್ಲಮ್ಮ ದೇವಸ್ಥಾನ, ಮಾರೇನಹಳ್ಳಿ ಗ್ರಾಮ, ಜೆ.ಪಿ. ನಗರ, ಸಂಜೆ 5.30

ಯುವ ದಸರಾ: ಭಕ್ತಿ ಸಂಕೀರ್ತನೆ: ವಿದ್ಯಾ ಭೂಷಣ, ಆಯೋಜನೆ: ಯುವಕ ಸಂಘ, ಸ್ಥಳ: ಯುವ ಪಥ, 4ನೇ ಬ್ಲಾಕ್, ಜಯನಗರ, ಸಂಜೆ 5.45

ದೇವಿಗೆ ಅಲಂಕಾರ: ಅರಿಸಿನ ಕುಂಕುಮ, ಆಯೋಜನೆ, ಸ್ಥಳ: ಯಲ್ಲಮ್ಮ ದೇವಿ ದೇಗುಲ, ದೇಶದಪೇಟೆ ರಸ್ತೆ, ಯಲಹಂಕ, ಸಂಜೆ 6

ದೇವಿಗೆ ಅಲಂಕಾರ: ಸಂತಾನ ಲಕ್ಷ್ಮಿ, ಭಜನೆ: ಸ್ಮಿತಾ ಮತ್ತು ತಂಡ, ಆಯೋಜನೆ ಹಾಗೂ ಸ್ಥಳ: ದುರ್ಗಾ ಮಹೇಶ್ವರಮ್ಮ ದೇಗುಲ, ಕೆ.ಆರ್.ಪುರ, ಸಂಜೆ 6

ದೇವಿಗೆ ಅಲಂಕಾರ: ಹರಿದ್ರಾ–ಕುಂಕುಮ, ಕರ್ನಾಟಕ ಶಾಸ್ತ್ರೀಯ ಸಂಗೀತ, ದೇವರನಾಮ: ಪ್ರಸನ್ನ ಲಕ್ಷ್ಮಿ ಹಾಗೂ ತಂಡ, ಆಯೋಜನೆ ಮತ್ತು ಸ್ಥಳ: ವರಸಿದ್ಧಿ ವಿನಾಯಕ ದೇವಾಲಯ, ಕೆನರಾ ಬ್ಯಾಂಕ್ ಕಾಲೊನಿ, ನಾಗರಬಾವಿ ರಸ್ತೆ, ಸಂಜೆ 6.30

ದೇವಿಗೆ ಅಲಂಕಾರ: ಬ್ರಾಹ್ಮಿ, ನವರಾತ್ರಿ ವೈಭವ, ಆಯೋಜನೆ ಮತ್ತು ಸ್ಥಳ: ಸರ್ಕಲ್ ಮಾರಮ್ಮ ದೇವಸ್ಥಾನ, ಮಲ್ಲೇಶ್ವರ, ಸಂಜೆ 6.30

ನವರಾತ್ರಿ ದಸರಾ ಉತ್ಸವ: ಭರತನಾಟ್ಯ ಪ್ರದರ್ಶನ: ಪುಲಿಕೇಶಿ ಕಸ್ತೂರಿ, ಆಯೋಜನೆ ಮತ್ತು ಸ್ಥಳ: ಶಾಂತಲಾ ಆರ್ಟ್ಸ್ ಟ್ರಸ್ಟ್, ಯಶವಂತಪುರ, ಸಂಜೆ 6.30

ದೇವಿಗೆ ಅಲಂಕಾರ: ಅರಿಸಿನ ಕುಂಕುಮ, ಆಯೋಜನೆ ಮತ್ತು ಸ್ಥಳ: ದೊಡ್ಡಮ್ಮ ದೇವಿ ಅಭಿವೃದ್ಧಿ ಸಮಿತಿ, ಚಿಕ್ಕದೇವಸಂದ್ರ, ಕೆ.ಆರ್. ಪುರ, ಸಂಜೆ 7.30

FESTIVAL OF SAVINGS
GST
28%
18%
ಗಿರಿಯಾಸ್
ಗೃಹಬಳಕೆ ವಸ್ತುಗಳ ವ್ಯಾಪಾರಿಗಳು 1971 ರಿಂದ
ನಿಶ್ಚಿತ ಕಡಿಮೆ ಬೆಲೆಯಲ್ಲಿ
ಇಂದಿನಿಂದ, ಎಲೆಕ್ಟ್ರಾನಿಕ್ಸ್ ಮತ್ತು ಗೃಹೋಪಯೋಗಿ ವಸ್ತುಗಳ ಮೇಲಿನ ಜಿಎಸ್‌ಟಿ ಕಡಿಮೆಯಾಗಿದೆ*
ಫೈನಾನ್ಸ್ ಬೊನಾಂಜಾ 1 ಇ.ಎಮ್.ಐ ಉಚಿತ UPTO ₹15,000 ಕ್ಯಾಶ್ ಬ್ಯಾಕ್*
ಕ್ಯಾಶ್‌ಬ್ಯಾಕ್ ಬೊನಾಂಜಾ Upto 20% ಕ್ಯಾಶ್ ಬ್ಯಾಕ್*
ಎಕ್ಸ್‌ಚೇಂಜ್ ಬೊನಾಂಜಾ UPTO ₹25,000 ವರೆಗೂ ಕಡಿತ ಹಳೆಯ ಎಲೆಕ್ಟ್ರಾನಿಕ್ಸ್ ಗೃಹೋಪಯೋಗಿ ವಸ್ತುಗಳ, ಮೊಬೈಲ್‌ಗಳು ಮತ್ತು ಲ್ಯಾಪ್‌ಟಾಪ್‌ಗಳು. ಎಕ್ಸ್‌ಚೇಂಜ್ ಮೇಲೆ
HDFC BANK We understand your world 10% OFF INSTANT CASH BACK ON CC & DC EMI* MIN TXN ₹17,000 MAX CAP ₹3,000 *T&C
DBS Live more, Bank less UPTO 5% OFF INSTANT CASH BACK ON CC EMI* MIN TXN ₹20,000 MAX CASHBACK ₹2,500 *T&C
ASSURED GIFTS ON ALL LG PRODUCTS* BT SPEAKER INDUCTION COOKER STEAM IRON KETTLE DRY IRON
SAMSUNG 100 CLASS NEO QLED SMART ಎಲ್.ಇ.ಡಿ 100QN80F ಹಳೆಯ ಬೆಲೆ ₹6,67,220 ಹೊಸ ಬೆಲೆ ₹6,15,093
SONY 98 BRAVIA 4K ULTRA HD SMART MINI ಎಲ್.ಇ.ಡಿ GOOGLE TV 98XR55A ಹಳೆಯ ಬೆಲೆ ₹6,17,490 ಹೊಸ ಬೆಲೆ ₹5,69,250
Haier 98 QLED 144HZ GOOGLE TV WITH HANDS FREE VOICE CONTROL & LOCAL DIMMING 98S9QT ಹಳೆಯ ಬೆಲೆ ₹4,58,610 ಹೊಸ ಬೆಲೆ ₹2,79,990 FREE: HAIER 43 4K UHD LED TV WORTH ₹52490
LG 75 4K ULTRA HD SMART ಎಲ್.ಇ.ಡಿ NANOCELL TV 75NANO83A6A ಹಳೆಯ ಬೆಲೆ ₹1,09,100 ಹೊಸ ಬೆಲೆ ₹1,00,580
LOWEST PRICE CHALLENGE 55 Q ಎಲ್.ಇ.ಡಿ 52% OFF ಹಳೆಯ ಬೆಲೆ ₹35,760 ಹೊಸ ಬೆಲೆ ₹32,960
DAIKIN 2.02 TON 3 STAR, INVERTER SPLIT AC ಹಳೆಯ ಬೆಲೆ ₹67,470 ಹೊಸ ಬೆಲೆ ₹62,200
Haier 1.5 TON 3 STAR INVERTER SPLIT AC ಹಳೆಯ ಬೆಲೆ ₹37,860 ಹೊಸ ಬೆಲೆ ₹34,900
IFB 1.5 TON 3 STAR INVERTER SPLIT AC ಹಳೆಯ ಬೆಲೆ ₹33,660 ಹೊಸ ಬೆಲೆ ₹31,030
VOLTAS 1 TON 3 STAR INVERTER SPLIT AC ಹಳೆಯ ಬೆಲೆ ₹31,160 ಹೊಸ ಬೆಲೆ ₹28,720
LG 14 PLACE SETTIN FREESTANDING DISHWASHER DFB532FP ಹಳೆಯ ಬೆಲೆ ₹53,330 ಹೊಸ ಬೆಲೆ ₹49,160
BOSCH SERIES 6 14 PLACE SETTINGS FREE-STANDING DISHWASHER ಹಳೆಯ ಬೆಲೆ ₹55,690 ಹೊಸ ಬೆಲೆ ₹51,500
IFB DEEPCLEAN® 8 KG FRONT LOAD WASHING MACHINE ಹಳೆಯ ಬೆಲೆ ₹39,730 ಹಬ್ಬದ ಬೆಲೆ ₹37,480
SAMSUNG 653 LTRS SIDE BY SIDE SMART REFRIGERATOR RS76CB81A333HL ಹಳೆಯ ಬೆಲೆ ₹1,13,980 ಹಬ್ಬದ ಬೆಲೆ ₹1,08,410
Godrej 600LTRS TOUGHENED GLASS DOOR SIDE BY SIDE REFRIGERATOR ಹಳೆಯ ಬೆಲೆ ₹72,390 ಹಬ್ಬದ ಬೆಲೆ ₹68,940
Haier 520LTRS LUMIERE 4 DOOR SIDE BY SIDE REFRIGERATOR ಹಳೆಯ ಬೆಲೆ ₹94,990 ಹಬ್ಬದ ಬೆಲೆ ₹91,330
hp VICTUS 10% CASH BACK • 13TH GEN I5 • 16GB, 512GB SSD • RTX GFX 3050A 4GB • WIN 11 MSO 24 ಇಎಂಐ ₹5,750 ಹಳೆಯ ಬೆಲೆ ₹71,990 ಹಬ್ಬದ ಬೆಲೆ ₹68,999 FREE: BAG, HP W/L KEYBAORD MOUSE + QH ANTIVIRUS WORTH ₹2990
vivo Y31 EFFECTIVE PRICE ₹15,499* (PRICE AFTER CASH BACK) ಇಎಂಐ ₹1,374 Onwards FREE: BT NECKBAND WORTH ₹1649
iPhone 17 / 17 Air EFFECTIVE PRICE ₹76,900* (PRICE AFTER CASH BACK) ಇಎಂಐ ₹3,454 Onwards FREE: COMPLETE DAMAGE PROTECTION 1YR + ZEB BT SPEAKER WORTH ₹12490
SAMSUNG FOLD 7 EFFECTIVE PRICE ₹1,62,999* (AFTER CASH BACK) ಇಎಂಐ ₹7,291 Onwards MAGSAFE W/L POWER BANK WORTH ₹7999 @ ₹99
xiaomi Redmi 15 SALE PRICE ₹14,999* ಇಎಂಐ ₹1,250 Onwards FREE: BT NECKBAND WORTH ₹1649
Lenovo LOQ 10% CASH BACK • RYZEN 5 7235HS • 24GB, 512GB SSD • RTX 3050 6GB • 15.6 FHD • WIN 11 MSO 21 ಇಎಂಐ ₹5,499 ಹಳೆಯ ಬೆಲೆ ₹71,490 ಹಬ್ಬದ ಬೆಲೆ ₹65,990 FREE: BAG, W/L MOUSE + 64GB PENDRIVE + QH ANTIVIRUS WORTH ₹2,490
Preethi MIXER GRINDER ZODIAC ಹಳೆಯ ಬೆಲೆ ₹9,700 ಹಬ್ಬದ ಬೆಲೆ ₹9,099
Racold GEYSER:CDR/DLX SP 25V ಹಳೆಯ ಬೆಲೆ ₹8,699 ಹಬ್ಬದ ಬೆಲೆ ₹8,299
VL WET GRINDER:PYRAMIDA ಹಳೆಯ ಬೆಲೆ ₹3,990 ಹಬ್ಬದ ಬೆಲೆ ₹3,599
EUREKA FORBES WATER PURIFIER:AQUAGUARD ENHANCE NXT 2X LIFE RO+UV+TA ಹಳೆಯ ಬೆಲೆ ₹17,500 ಹಬ್ಬದ ಬೆಲೆ ₹16,499
LG 28 LITERS CONVECTION MICROWAVE OVEN MC2846BR ಹಳೆಯ ಬೆಲೆ ₹15,210 ಹಬ್ಬದ ಬೆಲೆ ₹14,480
GIRIAS THE CONSUMER DURABLE PEOPLE Since 1971
ಅಂದ್ರಹಳ್ಳಿ 95918 35070 | ಅತ್ತಿಬೆಲೆ 99009 77747 | ಆರ್.ಟಿ.ನಗರ 91080 65665 | ಆನೇಕಲ್ 9036289556 | ಇಂದಿರಾನಗರ 9035499255 | ಕತ್ರಿಗುಪ್ಪೆ 9035499288 | ಕನಕಪುರ ಮುಖ್ಯ ರಸ್ತೆ 90082 20739 | ಕುಣಿಗಲ್ 90362 89546 | ಕೆಂಗೇರಿ 99009 77712 | ಕೆಜಿಎಫ್ 95917 98130 | ಕೆಆರ್ ಪುರಂ 9019929881 | ಕೋರಮಂಗಲ 90354 11200 | ಕೋಲಾರ 90082 20791 | ಗಾಂಧಿನಗರ 9035499311 | ಗುಬ್ಬಿ 9035027688 | ಗೌರಿಬಿದನೂರು 90354 99244 | ಚನ್ನಪಟ್ಟಣ 9035023186 | ಚಿಂತಾಮಣಿ 90362 89552 | ಚಿಕ್ಕಜಾಲ 95918 32080 | ಚಿಕ್ಕಬಳ್ಳಾಪುರ 9591561669 | ಜಯನಗರ 90354 99077 | ಜಾಲಹಳ್ಳಿ ಕ್ರಾಸ್ 9008220804 | ತಿಪಟೂರು 90362 89548 | ತುಮಕೂರು 90082 18009 | ದೊಡ್ಡಬಳ್ಳಾಪುರ 77602 12888 | ನಾಗರಭಾವಿ 90354 99191 | ನೆಲಮಂಗಲ 9606922798 | ಬಾಗೇಪಲ್ಲಿ 9036289562 | ಬ್ರಿಗೇಡ್ ರಸ್ತೆ 9035499066 | ಬಿಡದಿ 8792565415 | ಬನಶಂಕರಿ 9035499199 | ಬನ್ನೇರುಘಟ್ಟ ರೋಡ್ 9035422500 | ಭಾರ್ತಿಯಾ ಮಾಲ್ 9036289560 | ಬೊಮ್ಮನಹಳ್ಳಿ 9035499022 | ಮಾದನಾಯಕನಹಳ್ಳಿ 90362 89550 | ಮತ್ತಿಕೆರೆ 90352 22377 | ಮಲ್ಲೇಶ್ವರಂ 90354 99233 | ಮಳವಳ್ಳಿ 8792553793 | ಮಾಗಡಿರಸ್ತೆ 90362 89557 | ಮಾರತ್‌ಹಳ್ಳಿ 90354 99011 | ಮಾಲೂರು 9036984484 | ಮೈಸೂರು ರಸ್ತೆ 90354 99188 | ಯಲಹಂಕ 9036001315 | ರಾಜಾಜಿನಗರ 9035499144 | ರಾಮನಗರ 9606922697 | ವಿಜಯನಗರ 96069 22795 | ಶಿರಾ 9035023188 | ಸರ್ಜಾಪುರ 95911 03536 | ಸದಾಶಿವನಗರ 9035499088 | ಸಹಕಾರನಗರ 90199 29882 | ಹಿರಿಯೂರು 9035023185 | ಹೆಚ್‌ಆರ್‌ಬಿಆರ್ ಲೇಔಟ್ 90354 99177 | ಹೆಬ್ಬಗೋಡಿ 90350 50023 | ಹೆಸರಘಟ್ಟ ಮುಖ್ಯ ರಸ್ತೆ 90362 89551 | ಹೊಸಕೋಟೆ 90362 89545 | ಹೊಸೂರು 04344 243633
STORE LOCATOR
*ನಿಯಮಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ. ಹಣಕಾಸು ಕಂಪನಿಯ ಸ್ವಂತ ವಿವೇಚನೆಯಿಂದ ಹಣಕಾಸು. ಆಯ್ದ ಬ್ರಾಂಡ್‌ಗಳು ಮತ್ತು ಮಾದರಿಗಳ ಮೇಲೆ 20% ಕ್ಯಾಶ್‌ಬ್ಯಾಕ್ ಮತ್ತು 1 EMI ರಿಯಾಯಿತಿ. 3 EMI ಅನ್ನು ಕ್ಲಿಯರ್ ಮಾಡಿದ ನಂತರ ಕ್ಯಾಶ್ ಬ್ಯಾಕ್ / ವೋಚರ್‌ಗಳನ್ನು ಗ್ರಾಹಕರ ಬ್ಯಾಂಕ್ ಖಾತೆ / BFL ವ್ಯಾಲೆಟ್‌ಗೆ ಜಮಾ ಮಾಡಲಾಗುತ್ತದೆ. ರೂ.15000 ವರೆಗೆ ಬಜಾಜ್ ಕ್ಯಾಶ್ ಬ್ಯಾಕ್ / ವೋಚರ್‌ಗಳು ಆಯ್ದ ನಗರಗಳಲ್ಲಿ ಮಾತ್ರ ಮಾನ್ಯವಾಗಿರುತ್ತವೆ ಮತ್ತು ಆಯ್ದ REF ಮತ್ತು AC ಗಳಲ್ಲಿ ಮಾತ್ರ ಮಾನ್ಯವಾಗಿರುತ್ತವೆ. ಉತ್ತಮ ಕೆಲಸದ ಸ್ಥಿತಿಯಲ್ಲಿರಲು MRP ಮತ್ತು ಉತ್ಪನ್ನದ ಮೇಲೆ ವಿನಿಮಯ ಕೊಡುಗೆ ಮಾನ್ಯವಾಗಿರುತ್ತದೆ. ಟಿವಿ, AC ಮತ್ತು ಡಿಶ್‌ವಾಶರ್‌ಗಳ ಮೇಲೆ ಜಿಎಸ್‌ಟಿ ಕಡಿಮೆಯಾಗಿದೆ.
179 ಮೆಗಾ ಸ್ಟೋರ್ಸ್. ದಕ್ಷಿಣ ಭಾರತದ ನಂ.1 ಗೃಹೋಪಯೋಗಿ ವಸ್ತುಗಳ ಮಾರಾಟಗಾರರು.
SHOP ONLINE @ www.giriasindia.com
"like" us on facebook HTTPS://WWW.FACEBOOK.COM/GIRIAS.INDIA
WE SUPPORT ROUND TABLE INDIA LADIES CIRCLE INDIA

ಸಮೀಕ್ಷೆ ಮುಂದೂಡಲು ಆಗ್ರಹ

ವೀರಶೈವ ಸಮುದಾಯವನ್ನು ಒಂದೇ ಗುಂಪಾಗಿ ಪರಿಗಣಿಸಿ: ಒತ್ತಾಯ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಪಂಚಪೀಠಾಧಿಪತಿಗಳ ಜಂಟಿ ಹೇಳಿಕೆ
- ಸರ್ಕಾರಕ್ಕೆ ಆಗ್ರಹ

ಕಲಬುರಗಿ: 'ರಾಜ್ಯ ಹಿಂದುಳಿದ ವರ್ಗಗಳ ಆಯೋಗ ಸೆ. 22ರಿಂದ ನಡೆಸಲು ಉದ್ದೇಶಿಸಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಲ್ಲಿ ಬಹಳಷ್ಟು ಲೋಪ ದೋಷಗಳಿದ್ದು, ಸಮೀಕ್ಷೆಯನ್ನು ಮುಂದೂಡಬೇಕು' ಎಂದು ಪಂಚಪೀಠಾಧಿಪತಿಗಳು ರಾಜ್ಯ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಈ ಕುರಿತು ಜಂಟಿ ಪತ್ರಿಕಾ ಹೇಳಿ ಬಿಡುಗಡೆ ಮಾಡಿರುವ ಬಾಳೆಹೊನ್ನೂರು ರಂಭಾಪುರಿ ಮಠದ ಪ್ರಸನ್ನರೇಣುಕ ವೀರಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯ ಸ್ವಾಮೀಜಿ, ಉಜ್ಜಯನಿ ಪೀಠದ ಸಿದ್ಧಲಿಂಗ ರಾಜದೇಶಿಕೇಂದ್ರ ಸ್ವಾಮೀಜಿ, ಕೇದಾರ ಪೀಠದ ಭೀಮಾಶಂಕರ ಲಿಂಗ ಶಿವಾಚಾರ್ಯ ಸ್ವಾಮೀಜಿ, ಶ್ರೀಶೈಲ ಪೀಠದ ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಕಾಶಿ ಪೀಠದ ಚಂದ್ರಶೇಖರ ಶಿವಾಚಾರ್ಯರು ಮತ್ತು ಮಲ್ಲಿಕಾರ್ಜುನ ವಿಶ್ವಾರಾಧ್ಯ ಶಿವಾಚಾರ್ಯರು, 'ಹಿಂದುಳಿದ ಆಯೋಗವು ವೀರಶೈವ ಲಿಂಗಾಯತ ಸಮುದಾಯದ ಎಲ್ಲ ಒಳಪಂಗಡಗಳನ್ನು ಒಂದೇ ಗುಂಪಾಗಿ ಪರಿಗಣಿಸಬೇಕು' ಎಂದು ಆಗ್ರಹಿಸಿದ್ದಾರೆ.

'ರಾಜ್ಯದಲ್ಲಿರುವ ವೀರಶೈವ ಲಿಂಗಾಯತ ಸಮುದಾಯದಲ್ಲಿ ನೂರಾರು ಕಸುಬುಗಳನ್ನು ಮಾಡುವ ಉಪಪಂಗಡಗಳಿವೆ. ಆದರೆ ಆಯೋಗ ಪ್ರಕಟಿಸಿರುವ ಜಾತಿವಾರು ಪಟ್ಟಿಗಳಲ್ಲಿ ವೀರಶೈವ ಲಿಂಗಾಯತ ಸಮುದಾಯದ ಕೋಡ್ ಸಂಖ್ಯೆಗಳಲ್ಲಿ ಸಾಕಷ್ಟು ಗೊಂದಲಗಳಿವೆ' ಎಂದಿದ್ದಾರೆ.

'ಸಮುದಾಯದ ಜನರು ಗೊಂದಲಕ್ಕೊಳಗಾಗಿ ವೀರಶೈವ, ಲಿಂಗಾಯತ, ವೀರಶೈವ ಲಿಂಗಾಯತ, ಲಿಂಗಾಯತ ವೀರಶೈವ ಅಥವಾ ತಮ್ಮ ತಮ್ಮ ಉಪಜಾತಿಗಳ ಹೆಸರನ್ನು ಮೊದಲು ಬರೆದರೂ ಆ ಎಲ್ಲ ಪದಗಳನ್ನೂ ವೀರಶೈವ ಲಿಂಗಾಯತ ಎಂಬ ಒಂದೇ ಗುಂಪು ಎಂದು ಪರಿಗಣಿಸಿ ತಮ್ಮ ದತ್ತಾಂಶವನ್ನು ಸಿದ್ಧಪಡಿಸಬೇಕು' ಎಂದು ಮನವಿ ಮಾಡಿದ್ದಾರೆ.

'ಸಮೀಕ್ಷೆಯಲ್ಲಿ ಜಾತಿ ನಮೂದು ಮುಖ್ಯವಾಗಿದೆ. ಒಂದೊಮ್ಮೆ ಸಮೀಕ್ಷೆ ನಡೆದರೆ, ಧರ್ಮದ ಕಾಲಂನಲ್ಲಿ ಹಿಂದೂ ಎಂದು ಜಾತಿಯಲ್ಲಿ ವೀರಶೈವ ಲಿಂಗಾಯತ ಎಂದು ಉಪಜಾತಿಯಲ್ಲಿ ಅವರವರ ಪಂಗಡದ ಹೆಸರು ಬರೆಯಬೇಕು' ಎಂದು ತಿಳಿಸಿದ್ದಾರೆ.

'ಮಹಾಸಭಾ ವೈಯಕ್ತಿಕ ಆಸ್ತಿಯಲ್ಲ'

ಅರವಿಂದ ಬೆಲ್ಲದ

ಹುಬ್ಬಳ್ಳಿ: 'ಸಾಮಾಜಿಕ–ಶೈಕ್ಷಣಿಕ ಸಮೀಕ್ಷೆಯ ಧರ್ಮದ ಕಾಲಂನಲ್ಲಿ ಹಿಂದೂ ಎಂದೇ ಬರೆಸಬೇಕು. ವೀರಶೈವ ಲಿಂಗಾಯತ ಏಕತಾ ಸಮಾವೇಶದಲ್ಲಿ ಅವರವರ ವಿವೇಚನೆಗೆ ಬಿಟ್ಟಿದ್ದು ಎಂದಿರುವ ಸಚಿವ ಈಶ್ವರ ಖಂಡ್ರೆ ಹೇಳಿಕೆ ವೈಯಕ್ತಿವಾದದ್ದೇ ಹೊರತು, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ನಿರ್ಧಾರವಲ್ಲ' ಎಂದು ವಿಧಾನಸಭೆ ವಿರೋಧ ಪಕ್ಷದ ಉಪನಾಯಕ ಅರವಿಂದ ಬೆಲ್ಲದ ಹೇಳಿದರು.

ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಸಮಾವೇಶದಲ್ಲಿ ಕೆಲ ಸ್ವಾಮೀಜಿಗಳು ಧರ್ಮದ ಕುರಿತು ವಿತಂಡವಾದ ಮಂಡಿಸಿದ್ದಾರೆ. ಇವೆಲ್ಲ ರಾಜಕೀಯ ಪ್ರೇರಿತ ಹೇಳಿಕೆಗಳು. ಮಹಾಸಭಾ ಯಾರ ವೈಯಕ್ತಿಕ ಆಸ್ತಿಯಲ್ಲ' ಎಂದು ಕಿಡಿಕಾರಿದರು.

'ಎಡಪಂಥೀಯರ ಟೂಲ್‌ಕಿಟ್‌ನಿಂದ ಸಮಾಜವನ್ನು ದಾರಿ ತಪ್ಪಿಸಲಾಗುತ್ತಿದೆ' ಎಂದು ಆರೋಪಿಸಿದರು.

'ಸೋನಿಯಾಗಾಂಧಿ, ರಾಹುಲ್ ಗಾಂಧಿ ಅವರನ್ನು ಮೆಚ್ಚಿಸಲು, ಕ್ರಿಶ್ಚಿಯನ್‌ಗೆ ಸಂಬಂಧಿಸಿ ನಲವತ್ತಾರು ಜಾತಿಗಳನ್ನು ಸಿದ್ದರಾಮಯ್ಯ ಹೆಸರಿಸಿದ್ದಾರೆ. ಮತಾಂತರಕ್ಕೆ ಅನುಕೂಲವಾಗುವ ನಿಟ್ಟಿನಲ್ಲಿ ಜಾತಿ ಪಟ್ಟಿ ಸಿದ್ಧಪಡಿಸಲಾಗಿದೆ' ಎಂದು ಶಾಸಕ ಮಹೇಶ ಟೆಂಗಿನಕಾಯಿ ದೂರಿದರು. 'ಸಿದ್ದರಾಮಯ್ಯ ತಮ್ಮ ಅಧಿಕಾರಕ್ಕೆ ಧಕ್ಕೆ ಆದಾಗಲೆಲ್ಲ ಜಾತಿ, ಧರ್ಮವನ್ನು ಮುಂಚೂಣಿಗೆ ತರುತ್ತಾರೆ. ಹೈಕಮಾಂಡ್‌ಗೆ ಹತ್ತಿರವಾಗಬೇಕು ಎನ್ನುವುದು ಅವರ ಉದ್ದೇಶ' ಎಂದು ಶಾಸಕ ಎಂ.ಆರ್.ಪಾಟೀಲ ಟೀಕಿಸಿದರು.

'ಸಮಾವೇಶ ವಿಫಲ'

ವಚನಾನಂದ ಸ್ವಾಮೀಜಿ

ಗದಗ: 'ಹುಬ್ಬಳ್ಳಿಯಲ್ಲಿ ನಡೆದ ವೀರಶೈವ ಲಿಂಗಾಯತ ಏಕತಾ ಸಮಾವೇಶ ಕೇವಲ ಬೇಡ ಜಂಗಮರ ಸಮಾವೇಶ. ಅದು ವಿಫಲವಾಗಿದೆ' ಎಂದು ವಚನಾನಂದ ಶ್ರೀ ಟೀಕಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ವೇದಿಕೆ ಮೇಲೆ ಕೆಲವು ಸ್ವಾಮೀಜಿಗಳು ಕುಳಿತಿದ್ದರು. ಅವರನ್ನು ಬಿಟ್ಟರೆ ಉಳಿದವರೆಲ್ಲಾ ಊರ ಪುರೋಹಿತರೇ ಇದ್ದರು. ಸಮಾವೇಶದಲ್ಲಿ ಸ್ಪಷ್ಟತೆ ಇರಲಿಲ್ಲ. ಸಮಾವೇಶದ ಮೂಲಕ ಏನು ಸಂದೇಶ ಕೊಟ್ಟರು ಎಂಬುದೇ ಗೊತ್ತಾಗಲಿಲ್ಲ' ಎಂದು ಲೇವಡಿ ಮಾಡಿದರು.

'ನಾನು ಮತ್ತು ಕೂಡಲಸಂಗಮ ಸ್ವಾಮೀಜಿಯವರು ಹುಬ್ಬಳ್ಳಿ ಸಮಾವೇಶಕ್ಕೆ ಹೋಗಬಾರದು ಎಂದು ತಿಳಿಸಿದ್ದೆವು. ಭಕ್ತರು ನಮ್ಮ ಸೂಚನೆ ಪಾಲಿಸಿದ್ದು, ಅವರಿಗೆ ಧನ್ಯವಾದ ತಿಳಿಸಿದ್ದೇನೆ' ಎಂದರು.

'ರಾಜಕೀಯದ ಮೇಲೆ ಪರಿಣಾಮ' (ಕೊಪ್ಪಳ ವರದಿ): 'ರಾಜ್ಯ ಸರ್ಕಾರ ತರಾತುರಿಯಲ್ಲಿ ಮಾಡುತ್ತಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ವರದಿಯಿಂದಾಗಿ ರಾಜಕೀಯದ ಮೇಲೆ ವ್ಯಾಪಕ ಪರಿಣಾಮ ಬೀರುತ್ತದೆ' ಎಂದು ವಚನಾನಂದ ಸ್ವಾಮೀಜಿ ಹೇಳಿದರು.

'ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆಗಳನ್ನು ಗಮನದಲ್ಲಿಟ್ಟುಕೊಂಡು ಸಮೀಕ್ಷೆ ಮಾಡಿಸಲಾಗುತ್ತಿದೆ. ಜನಸಂಖ್ಯೆ ಕಡಿಮೆ ಇರುವ ಸಮುದಾಯದವರಿಗೆ ಚುನಾವಣೆಯಲ್ಲಿ ಟಿಕೆಟ್ ನೀಡುವುದಿಲ್ಲ' ಎಂದು ಸುದ್ದಿಗಾರರಿಗೆ ತಿಳಿಸಿದರು.

'ಸರ್ಕಾರ ಹಟಮಾರಿತನ ಬಿಡಲಿ'

ಕಲಬುರಗಿ: 'ರಾಜ್ಯದಲ್ಲಿ ಸಾಮಾಜಿಕ ಹಾಗೂ ಶೈಕ್ಷಣಿಕ ಸಮೀಕ್ಷೆಯನ್ನು ತರಾತುರಿಯಲ್ಲಿ ಮಾಡುವ ಹಟಮಾರಿತನ ಸರ್ಕಾರ ಬಿಡಬೇಕು. ಜನವರಿಯಲ್ಲಿ ಕೇಂದ್ರ ಸರ್ಕಾರ ಜಾತಿಗಣತಿ ಮಾಡುತ್ತದೆ. ಹೀಗಾಗಿ ರಾಜ್ಯ ಸರ್ಕಾರ ವ್ಯರ್ಥ ಕಸರತ್ತು ಮಾಡಬಾರದು' ಎಂದು ಬಾಳೆಹೊನ್ನೂರು ರಂಭಾಪುರಿ ಮಠದ ಪ್ರಸನ್ನರೇಣುಕ ವೀರಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯ ಸ್ವಾಮೀಜಿ ಆಗ್ರಹಿಸಿದರು.

ನಗರದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, 'ಈಗಾಗಲೇ ಒಕ್ಕಲಿಗ ಸಮುದಾಯದವರು ಕೂಡ ಸಮೀಕ್ಷೆ ಮುಂದೂಡುವಂತೆ ಒತ್ತಾಯಿಸಿದ್ದಾರೆ. ರಾಜ್ಯದ ಜನರ ಒಡಲಾಳದ ಆಶಯವನ್ನು ಡಿಸಿಎಂ ಡಿ.ಕೆ.ಶಿವಕುಮಾರ್ ಕಾಂಗ್ರೆಸ್‌ನ ರಾಷ್ಟ್ರೀಯ ನಾಯಕರಿಗೆ ಮನವರಿಕೆ ಮಾಡಿಕೊಡಬೇಕು' ಎಂದು ಒತ್ತಾಯಿಸಿದರು.

ಚಿಟಿಕೆ ಸುದ್ದಿ

'ಕ್ರೈಸ್ತ ಪಟ್ಟಿಯಿಂದ ಕೈಬಿಡಿ'

ಚಿತ್ರದುರ್ಗ: 'ವಡ್ಡ ಕ್ರಿಶ್ಚಿಯನ್ ಹಾಗೂ ಪರಿಶಿಷ್ಟ ಜಾತಿಗಳನ್ನು ಕ್ರೈಸ್ತ ಪಟ್ಟಿಯಿಂದ ಕೈಬಿಡಬೇಕು. ಆಮಿಷದಿಂದ ಕ್ರೈಸ್ತ ಧರ್ಮಕ್ಕೆ ಮತಾಂತರವಾದವರು ಎಚ್ಚೆತ್ತುಕೊಂಡು ಧರ್ಮದ ಕಾಲಂನಲ್ಲಿ ಹಿಂದೂ ಎಂದು ಬರೆಸಬೇಕು' ಎಂದು ಭೋವಿ ಗುರುಪೀಠದ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ತಿಳಿಸಿದರು.

ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ

'48 ಕ್ರೈಸ್ತ ಜಾತಿಗಳಲ್ಲಿ 33 ಜಾತಿಗಳನ್ನು ಕೈಬಿಡಲು ಹಿಂದುಳಿದ ವರ್ಗಗಳ ಆಯೋಗ ನಿರ್ಧರಿಸಿರುವ ಮಾಹಿತಿಯಿದೆ. ಆದರೆ ಅದನ್ನು ಅಧಿಕೃತವಾಗಿ ಸರ್ಕಾರ ಘೋಷಿಸಬೇಕು' ಎಂದು ಭಾನುವಾರ ಸುದ್ದಿಗೋಷ್ಠಿಯಲ್ಲಿ ಒತ್ತಾಯಿಸಿದರು.

'ಕ್ರೈಸ್ತ ಎಂದು ಬರೆಸಿದರೆ ಭವಿಷ್ಯದಲ್ಲಿ ಪರಿಶಿಷ್ಟ ಜಾತಿಯ ಮೀಸಲಾತಿಯಿಂದ ವಂಚಿತರಾಗುತ್ತೀರಿ. ಹೀಗಾಗಿ, ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ವೇಳೆ ಧರ್ಮದ ಕಾಲಂನಲ್ಲಿ- ಹಿಂದೂ, ಜಾತಿ ಕಾಲಂನಲ್ಲಿ ಭೋವಿ, ಉಪಜಾತಿ ಕಾಲಂನಲ್ಲಿ ವಡ್ಡರ ಎಂದು ಬರೆಯಿಸಬೇಕು' ಎಂದು ಸಲಹೆ ನೀಡಿದರು.

'ಸಮೀಕ್ಷೆ; ಧರ್ಮದ ಕಾಲಂನಲ್ಲಿ ಜೈನ ನಮೂದಿಸಿ'

ಹುಬ್ಬಳ್ಳಿ: 'ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆಯಲ್ಲಿ ಜೈನ ಸಮಾಜದವರು ಧರ್ಮದ ಕಾಲಂನಲ್ಲಿ 'ಜೈನ' ಎಂದು ನಮೂದಿಸಬೇಕು. ಹಿಂದೂ ಎಂದು ಬರೆಸಬಾರದು' ಎಂದು ಇಲ್ಲಿನ ವರೂರು ನವಗ್ರಹ ತೀರ್ಥ ಕ್ಷೇತ್ರದ ಗುಣಧರನಂದಿ ಮಹಾರಾಜರ ನೇತೃತ್ವದಲ್ಲಿ ಭಾನುವಾರ ಜೂಮ್ ಆ್ಯಪ್ ಮೂಲಕ ನಡೆದ ಜೈನ ಮಠಗಳ ಭಟ್ಟಾರಕರು, ಸಮಾಜದ ಪ್ರಮುಖರ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಯಿತು.

ಗುಣಧರನಂದಿ ಮಹಾರಾಜ

'ಸಮೀಕ್ಷೆ ವಿಷಯದಲ್ಲಿ ಸಾಕಷ್ಟು ಗೊಂದಲಗಳಿದ್ದು, ರಾಜ್ಯ ಸರ್ಕಾರ ಈವರೆಗೂ ಸ್ಪಷ್ಟನೆ ನೀಡಿಲ್ಲ. ಸಮಾಜದ ನಿಯೋಗವು ಅಧಿಕಾರಿಗಳನ್ನು ಭೇಟಿ ಮಾಡಿ ಚರ್ಚೆ ನಡೆಸಲಿದೆ. ಹೀಗಾಗಿ ಸಮಾಜದವರು ಸೆ.23ರಿಂದ ಗಣತಿದಾರರಿಗೆ ಮಾಹಿತಿ ನೀಡಬೇಕು' ಎಂದು ಗುಣಧರ ನಂದಿ ಮಹಾರಾಜರು ಹೇಳಿದರು. 'ಜೈನ ಸಮಾಜಕ್ಕೆ ಸಂಬಂಧ ಇಲ್ಲದ ಕೆಲವು ಜಾತಿಗಳು ಜಾತಿಪಟ್ಟಿಯಲ್ಲಿದ್ದು, ಅವುಗಳನ್ನು ತೆಗೆದು ಹಾಕಬೇಕು. ಸಮೀಕ್ಷೆ ಅವಧಿ ವಿಸ್ತರಿಸಬೇಕು' ಎಂದರು.

'ಮತಕಳವಿನ ಹಿಂದೆ ಕಾಣದ ಕೈಗಳು'

ಹುಬ್ಬಳ್ಳಿ: 'ಆಳಂದ ವಿಧಾನಸಭಾ ಕ್ಷೇತ್ರದಲ್ಲಿ ನಡೆದಿದೆ ಎನ್ನಲಾದ ಮತಕಳವು ಪ್ರಕರಣಕ್ಕೆ ಸಂಬಂಧಿಸಿ ಎಸ್ಐಟಿ ತನಿಖೆ ನಡೆಸಿ, ಸತ್ಯಾಂಶ ಹೊರಹಾಕಲಿದೆ' ಎಂದು ವಿಧಾನ ಪರಿಷತ್ ಮುಖ್ಯ ಸಚೇತಕ ಸಲೀಂ ಅಹ್ಮದ್ ಹೇಳಿದರು.

'ಮತಕಳವಿನ ಹಿಂದೆ ಕಾಣದ ಕೈಗಳು ಕೆಲಸ ಮಾಡಿದ್ದು, ಇದರಲ್ಲಿ ಚುನಾವಣಾ ಆಯೋಗ ಶಾಮೀಲಾಗಿದೆ. ಹೀಗಾಗಿ, ಕೆಲವು ಕಡೆ ಬಿಜೆಪಿ ಅಧಿಕಾರಕ್ಕೆ ಬಂದಿದೆ' ಎಂದು ದೂರಿದರು.

'ರಾಜ್ಯ ಸರ್ಕಾರ ನಡೆಸಲು ಉದ್ದೇಶಿಸಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಿಂದ ತುಳಿತಕ್ಕೊಳಗಾದ ಸಮಾಜಕ್ಕೆ ಶಕ್ತಿ ಸಿಗಲಿದೆ. ಯಾರೂ ಆತಂಕಪಡುವ ಅಗತ್ಯವಿಲ್ಲ. ಎಲ್ಲರೂ ಇದರಲ್ಲಿ ಭಾಗಿಯಾಗಬೇಕು' ಎಂದರು.

'ಸಮೀಕ್ಷೆ: ಯಾರಿಗೂ ಸಂಶಯ ಬೇಡ'

ಬೆಂಗಳೂರು: 'ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಬಗ್ಗೆ ಯಾರಿಗೂ ಸಂಶಯ ಬೇಡ. ಇದು ಕೇವಲ ಜಾತಿಗಳ ಗಣತಿಯಲ್ಲ, ಸಾಮಾಜಿಕ ನ್ಯಾಯ ಒದಗಿಸುವ ಸಮೀಕ್ಷೆ. ಜನರಿಗೆ ನೆರವಾಗುವ ಸಮೀಕ್ಷೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ದೆಹಲಿಯಲ್ಲಿ ಸುದ್ದಿಗಾರರ ಜೊತೆ ಭಾನುವಾರ ಮಾತನಾಡಿದ ಅವರು, 'ಎಲ್ಲ ಸಮುದಾಯದವರು ಎಚ್ಚೆತ್ತುಕೊಂಡು, ಸಮೀಕ್ಷೆಯ ಪ್ರಯೋಜನ ಪಡೆಯಬೇಕು' ಎಂದು ಮನವಿ ಮಾಡಿದರು.

'ಕರ್ನಾಟಕದ 7 ಕೋಟಿ ಕನ್ನಡಿಗರು, ಪ್ರಪಂಚದ ಯಾವುದೇ ಭಾಗದಲ್ಲಿರುವ ಕನ್ನಡಿಗರು ಆನ್‌ಲೈನ್ ಮೂಲಕ ಮಾಹಿತಿ ಸಲ್ಲಿಸಬಹುದು. ಸಮೀಕ್ಷೆಯಿಂದ ವೀರಶೈವ ಸಮಾಜಕ್ಕೆ ತೊಂದರೆಯಾಗಲಿದೆ ಎಂದು ರಂಭಾಪುರಿ ಶ್ರೀಗಳು ಆತಂಕಪಡುವ ಅಗತ್ಯವಿಲ್ಲ. ಅವರು ತಮ್ಮ ಸಮುದಾಯದ ಜನರಲ್ಲಿ ಈ ಬಗ್ಗೆ ಜಾಗೃತಿ ಮೂಡಿಸಬೇಕು. ಅದೇ ರೀತಿ ಇತರ ಸಮುದಾಯದವರೂ ತಮ್ಮ ಸಮುದಾಯಗಳಲ್ಲಿ ಜಾಗೃತಿ ಮೂಡಿಸಬೇಕು' ಎಂದರು.

ಸುದ್ದಿ 2 ನಿಮಿಷ

ಜಾತಿ ಹೆಸರು ಬಾಯಿಮಾತಿನಿಂದ ಬಂದದ್ದು: ದಿನೇಶ್ ಗುಂಡೂರಾವ್

ಮಂಗಳೂರು: 'ಮತಾಂತರಗೊಂಡು ಕ್ರೈಸ್ತರಾದವರ ಜೊತೆ ಜಾತಿಗಳ ಹೆಸರನ್ನು ಸರ್ಕಾರವಾಗಲಿ, ಆಯೋಗವಾಗಲಿ ಸೇರಿಸಿದ್ದಲ್ಲ. ಜನರೇ ಹೇಳಿಕೊಂಡಿರುವ ಹೆಸರುಗಳು ದಾಖಲಾಗಿವೆಯಷ್ಟೇ' ಎಂದು ಸಚಿವ ದಿನೇಶ್ ಗುಂಡೂರಾವ್ ಅಭಿಪ್ರಾಯಪಟ್ಟರು.

ನಗರದಲ್ಲಿ ಭಾನುವಾರ ಪತ್ರಕರ್ತರ ಜೊತೆ ಮಾತನಾಡಿದ ಅವರು, ಬ್ರಾಹ್ಮಣ ಕ್ರೈಸ್ತ ಮತ್ತಿತರ ಹೆಸರುಗಳಿಗೆ ಸಂಬಂಧಿಸಿದಂತೆ ಕೇಳಿಬರುತ್ತಿರುವ ಆಕ್ಷೇಪಗಳ ಕುರಿತ ಪ್ರಶ್ನೆಗೆ ಉತ್ತರಿಸಿ, 'ಇದರಲ್ಲಿ ಗೊಂದಲ ಇಲ್ಲ. ಆದ್ದರಿಂದ ಸಮೀಕ್ಷೆ ಸುಗಮವಾಗಿ ನಡೆಯಲಿದೆ' ಎಂದರು.



'ಅಷ್ಟಕ್ಕೂ ಇದು ಜಾತಿ ಸಮೀಕ್ಷೆ ಅಲ್ಲ, ಸಾಮಾಜಿಕ ಶೈಕ್ಷಣಿಕ ಮತ್ತು ಆರ್ಥಿಕವಾಗಿ ಹಿಂದುಳಿದವರನ್ನು ಪತ್ತೆ ಮಾಡಿ ಅಭಿವೃದ್ಧಿ ಕಡೆಗೆ ನಡೆಸುವ ಪ್ರಯತ್ನ. ಇದರ ವಿರುದ್ಧ ಮಾತನಾಡುವವರು ಪ್ರಧಾನಿ ನರೇಂದ್ರ ಮೋದಿ ಅವರು ಘೋಷಿಸಿರುವ ಜಾತಿವಾರು ಸಮೀಕ್ಷೆ ಬಗ್ಗೆ ಮೌನವಾಗಿರುವುದು ಯಾಕೆ' ಎಂದು ಪ್ರಶ್ನಿಸಿದರು.

'ಟಿಪ್ಪು ಆಡಳಿತ ನಾಚಿಸುವಂತಿದೆ'

ಶಿವಮೊಗ್ಗ: 'ಮುಖ್ಯಮಂತ್ರಿ ಸಿದ್ದರಾಮಯ್ಯ ಆಡಳಿತ ವೈಖರಿ ಬ್ರಿಟಿಷರು ಹಾಗೂ ಟಿಪ್ಪು ಸುಲ್ತಾನನ ಆಡಳಿತವನ್ನೂ ನಾಚಿಸುವಂತಿದೆ. ಜಾತಿ ಸಮೀಕ್ಷೆ ನೆಪವೊಡ್ಡಿ ಸಮಾಜದಲ್ಲಿ ವಿಷ ಬೀಜ ಬಿತ್ತಲು ಹೊರಟಿದ್ದಾರೆ. ಭಗವಂತ ಅವರಿಗೆ ಒಳ್ಳೆಯದು ಮಾಡಲ್ಲ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ದೂರಿದರು.

'ಮುಖ್ಯಮಂತ್ರಿಯಾಗಿ ಅಭಿವೃದ್ಧಿ ಹಾಗೂ ಮಾನವ ಕಲ್ಯಾಣಕ್ಕೆ ಶ್ರಮಿಸಬೇಕಿದ್ದ ಅವರು, ಧರ್ಮಸ್ಥಳದ ವಿಚಾರದಲ್ಲಿ ಭಕ್ತರ ಭಾವನೆಗೆ ಧಕ್ಕೆ ತಂದಿದ್ದಾರೆ. ಗಣಪತಿ ಹಬ್ಬದ ಸಂದರ್ಭದಲ್ಲಿ ಹೊಸ ಕಾನೂನು ಜಾರಿಗೊಳಿಸಿ ಅದ್ದೂರಿ ಮೆರವಣಿಗೆಗೆ ಅಡ್ಡಗಾಲು ಹಾಕಿದ್ದಾರೆ. ಹಿಂದೂ ಕಾರ್ಯಕರ್ತರನ್ನು ಬಂಧಿಸಿ ಸಮಾಜ ಒಡೆಯಲು ಹೊರಟಿದ್ದಾರೆ' ಎಂದು ಭಾನುವಾರ ಸುದ್ದಿಗಾರರ ಎದುರು ಕಿಡಿಕಾರಿದರು.

'ರಾಜ್ಯದಲ್ಲಿನ ಬಹುತೇಕ ರಸ್ತೆಗಳು ಗುಂಡಿಮಯವಾಗಿವೆ. ಅವುಗಳ ದುರಸ್ತಿಗೆ ಆಗ್ರಹಿಸಿ ಸೆ. 24ರಂದು ರಾಜ್ಯದಾದ್ಯಂತ ರಸ್ತೆ ತಡೆ ನಡೆಸಿ ಪ್ರತಿಭಟಿಸುತ್ತೇವೆ' ಎಂದರು.

ಗಣತಿ ಆ್ಯಪ್‌ನಲ್ಲಿ 33 ಜಾತಿ ನಿಷ್ಕ್ರಿಯ

ಒಂದನೇ ಪುಟದಿಂದ...

ಆಯೋಗದ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಭಾನುವಾರ ಮಾತನಾಡಿದ ಅವರು, 'ಕಾಂತರಾಜ ಅಧ್ಯಕ್ಷತೆಯ ಆಯೋಗ 2015ರಲ್ಲಿ ನಡೆಸಿದ ಸಮೀಕ್ಷೆಯಲ್ಲೇ ಈ ಜಾತಿಗಳ ಹೆಸರು ದಾಖಲಾಗಿದ್ದವು. ಸಾವಿರಾರು ಜನರು ಈ ಜಾತಿಗಳನ್ನು ಉಲ್ಲೇಖಿಸಿದ್ದರು. ನಾವು ಯಾವುದೇ ಜಾತಿಯನ್ನು ಸೃಷ್ಟಿ ಮಾಡಿಲ್ಲ. ಅದಕ್ಕೂ ನಮಗೂ ಸಂಬಂಧವಿಲ್ಲ. ಸಮೀಕ್ಷೆಗೆ ಅನುಕೂಲವಾಗಲಿ ಎಂಬ ಕಾರಣಕ್ಕೆ ಮೊಬೈಲ್ ಆ್ಯಪ್‌ನ ಡ್ರಾಪ್‌ಡೌನ್‌ನಲ್ಲಿ ಈ ಹಿಂದೆ ಉಲ್ಲೇಖಗೊಂಡಿದ್ದ ಜಾತಿಗಳ ಪಟ್ಟಿಯನ್ನು ದಾಖಲಿಸಲಾಗಿತ್ತು. ಈ ಜಾತಿಗಳ ಪಟ್ಟಿಗೆ ಯಾವುದೇ ಕಾನೂನು ಮಾನ್ಯತೆ ಇಲ್ಲ. ಅದು ಸಾರ್ವಜನಿಕ ದಾಖಲೆಯೂ ಅಲ್ಲ. ಹೀಗಿದ್ದರೂ ಅನಗತ್ಯವಾಗಿ ವಿವಾದ ಸೃಷ್ಟಿಸಲಾಗಿದೆ' ಎಂದರು.

'ಸಮೀಕ್ಷೆ ಪೂರ್ಣಗೊಂಡ ಬಳಿಕ ಲಭ್ಯವಾದ ದತ್ತಾಂಶವನ್ನು ಆಯೋಗ ವಿಶ್ಲೇಷಿಸಿ, ನಂತರ ವಿವಿಧ ಜಾತಿ, ಸಮುದಾಯಗಳಿಗೆ ನೀಡಬೇಕಾದ ಅನುಕೂಲತೆಗಳ ಬಗ್ಗೆ ಶಿಫಾರಸುಗಳ ಸಹಿತ ಸರ್ಕಾರಕ್ಕೆ ವರದಿ ಸಲ್ಲಿಸಲಿದೆ' ಎಂದರು.

ಜಿಬಿಎ– ಸಮೀಕ್ಷೆ ವಿಳಂಬ: ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ವ್ಯಾಪ್ತಿಯಲ್ಲಿ ಶಿಕ್ಷಕರು ಹಾಗೂ ಇತರರಿಗೆ ತರಬೇತಿ ಪ್ರಗತಿಯಲ್ಲಿ ಇರುವುದರಿಂದ ಎರಡು ದಿನ ತಡವಾಗಿ ಸಮೀಕ್ಷೆ ಶುರುವಾಗಲಿದೆ. ಹೀಗಾಗಿ ಸಮೀಕ್ಷೆ ಮುಕ್ತಾಯದ ಅವಧಿ ಸಹ ಅ.7ರ ಬದಲಿಗೆ ಒಂದೆರಡು ದಿನ ವಿಸ್ತರಣೆಯಾಗಲಿದೆ ಎಂದು ಅವರು ತಿಳಿಸಿದರು.

148 ಜಾತಿಗಳ ಹೆಸರು ಸೇರ್ಪಡೆ

'ಜಾತಿಗಳ ಪಟ್ಟಿಯನ್ನು ಪ್ರಕಟಿಸಿ, ಈಗಾಗಲೇ ಯಾವುದಾದರು ಜಾತಿಯ ಹೆಸರು ಬಿಟ್ಟು ಹೋಗಿದ್ದರೆ ಸೇರ್ಪಡೆಗೂ ಕಾಲಾವಕಾಶ ನೀಡಲಾಗಿತ್ತು. ಅದರಂತೆ 148 ಜಾತಿಗಳ ಹೆಸರು ಸೇರ್ಪಡೆ ಮಾಡಲಾಗಿತ್ತು. ಆ ಮೂಲಕ 1,413 ಜಾತಿಗಳ ಜತೆಗೆ 148 ಜಾತಿಗಳನ್ನು ಸೇರಿಸಿ 1,561 ಜಾತಿಗಳ ಪಟ್ಟಿಯನ್ನು ಆ್ಯಪ್‌ನ ಡ್ರಾಪ್‌ಡೌನ್‌ನಲ್ಲಿ ಹಾಕಲಾಗಿತ್ತು. ಆದರೆ, ಈ ಪಟ್ಟಿಯ ಬಗ್ಗೆ ಜನರಲ್ಲಿ ಗೊಂದಲ ಸೃಷ್ಟಿಯಾಗಿರುವ ಬಗ್ಗೆ ಸಚಿವರ ತಂಡ ಕಳಕಳಿ ವ್ಯಕ್ತಪಡಿಸಿತ್ತು. ಹೀಗಾಗಿ ಆಯೋಗದ ಸದಸ್ಯರೊಂದಿಗೆ ಚರ್ಚಿಸಿ 33 ಜಾತಿಗಳನ್ನು ನಿಷ್ಕ್ರಿಯಗೊಳಿಸಲು ತೀರ್ಮಾನಿಸಲಾಯಿತು' ಎಂದು ಅವರು ವಿವರಿಸಿದರು.

'ಪುನರಾವರ್ತಿತ ಇಲ್ಲವೇ ಜಾತಿ ಹೆಸರಿನ ಉಲ್ಲೇಖ ಹಿಂದೆ-ಮುಂದೆ ದಾಖಲಾಗಿದ್ದರೂ ಒಟ್ಟಿಗೆ ಪರಿಗಣಿಸಲಾಗುತ್ತದೆ. ಉದಾಹರಣೆಗೆ ಅಕ್ಕಸಾಲಿಗ ಲಿಂಗಾಯತ, ಲಿಂಗಾಯತ ಅಕ್ಕಸಾಲಿಗ ಎಂಬುದಾಗಿ ನಮೂದಿಸಿದರೂ ಎರಡನ್ನೂ ಒಂದೇ ಎಂದು ಪರಿಗಣಿಸಲಾಗುವುದು' ಎಂದು ಅವರು ಸ್ಪಷ್ಟಪಡಿಸಿದರು. ವೀರಶೈವ ಮಹಾಸಭಾ ಧರ್ಮದ ಕಾಲಂನಲ್ಲಿ 'ಇತರೆ' ಅಥವಾ 'ವೀರಶೈವ ಲಿಂಗಾಯತ ಧರ್ಮ' ಎಂಬುದಾಗಿ ದಾಖಲಿಸುವಂತೆ ಕರೆ ನೀಡಿರುವ ಬಗ್ಗೆ ಕೇಳಿದ ಪ್ರಶ್ನೆಗೆ ಅವರು, 'ಧರ್ಮದ ಕಾಲಂನಲ್ಲಿ ಸ್ವಇಚ್ಛೆಯಿಂದ ಏನು ಬೇಕಾದರೂ ನಮೂದಿಸಿಕೊಳ್ಳಬಹುದು. ಆದರೆ, ಜಾತಿ ಕಾಲಂನಲ್ಲಿ ಲಿಂಗಾಯತ, ವೀರಶೈವ ಲಿಂಗಾಯತ ಎಂಬುದಾಗಿ ದಾಖಲಿಸಿದರೆ ಅವುಗಳನ್ನು ಒಟ್ಟುಗೂಡಿಸಿಯೇ ವಿಶ್ಲೇಷಿಸಲಾಗುವುದು' ಎಂದರು.

ಆಯೋಗದಲ್ಲಿ ಅಪಸ್ವರ

ಒಂದನೇ ಪುಟದಿಂದ...

ಸಮೀಕ್ಷೆಗೆ ಮಾಡಿಕೊಂಡಿರುವ ಸಿದ್ಧತೆಯ ವಿಚಾರಗಳನ್ನು ಉಲ್ಲೇಖಿಸಿ, ತಮ್ಮ ಅಸಮ್ಮತಿ ವ್ಯಕ್ತಪಡಿಸಿ ಸದಸ್ಯರೊಬ್ಬರು ಲಿಖಿತವಾಗಿ ಆಯೋಗದ ಅಧ್ಯಕ್ಷ ಮಧುಸೂದನ್ ಆರ್. ನಾಯ್ಕ್ ಅವರಿಗೆ ಆಕ್ಷೇಪ ಸಲ್ಲಿಸಿದ್ದಾರೆ ಎಂದು ಗೊತ್ತಾಗಿದೆ.

ಸಮೀಕ್ಷೆಗೆ ಸಂಬಂಧಿಸಿದಂತೆ ಆಯೋಗದ ಸಭೆಯಲ್ಲಿ ವಿಸ್ತೃತವಾಗಿ ಚರ್ಚೆಯಾಗಿಲ್ಲ. ಕೆಲವು ತೀರ್ಮಾನಗಳನ್ನು ಯಾವುದೇ ಪರಿಶೀಲನೆ ನಡೆಸದೆ, ಆತುರಾತುರವಾಗಿ ತೆಗೆದುಕೊಳ್ಳಲಾಗಿದೆ. ಸಮೀಕ್ಷೆಯ ಕೈಪಿಡಿಯ ಕರಡು ಪ್ರತಿಯನ್ನೂ ಸರಿಯಾಗಿ ಪರಿಶೀಲಿಸದೆ, ಸುಮಾರು 75 ಸಾವಿರದಷ್ಟು ಮುದ್ರಿಸ ಲಾಗಿತ್ತು. ತಪ್ಪುಗಳಿರುವುದು ಗೊತ್ತಾಗುತ್ತಿದ್ದಂತೆ ಹೊಸತಾಗಿ ಕೈಪಿಡಿ ಮುದ್ರಿಸಲಾಗಿದೆ. ಸಮೀಕ್ಷೆಯ ಕೈಪಿಡಿ ಸಹಿತ ತರಬೇತಿ ಕೊಡಬೇಕು. ಆದರೆ, ಇನ್ನೂ ತರಬೇತಿ ಕೆಲಸ ಶೇ 60ರಷ್ಟೂ ಆಗಿಲ್ಲ. ಸಮೀಕ್ಷೆಗೆ ಅಗತ್ಯವಾದ ಪರಿಕರಗಳಿರುವ ಕಿಟ್ ಕೂಡಾ ಗಣತಿದಾರರ ಕೈಸೇರಿಲ್ಲ. ಸಮೀಕ್ಷೆಗೆ ಸಂಬಂಧಿಸಿದಂತೆ ಪ್ರಶ್ನಾವಳಿಗಳನ್ನು ಅಂತಿಮಗೊಳಿಸಲು ಆಗಸ್ಟ್ 29ರಂದು ಆಯೋಗದ ಸಭೆ ನಡೆದಿತ್ತು. ಪ್ರಶ್ನಾವಳಿಯಲ್ಲಿ ಹಲವು ಗಂಭೀರ ನ್ಯೂನತೆಗಳಿದ್ದು, ಅದನ್ನು ಆಧರಿಸಿ ಮಾಡುವ ಸಮೀಕ್ಷೆಯು ಗಂಭೀರ ಲೋಪಗಳಿಂದ ಕೂಡಿರಲಿದೆ ಎಂದು ಸದಸ್ಯರು ಆಕ್ಷೇಪ ವ್ಯಕ್ತಪಡಿಸಿದ್ದರು. ಸಿದ್ಧಪಡಿಸಿರುವ ಪ್ರಶ್ನಾವಳಿಯಲ್ಲಿ ಶೇ 70ಕ್ಕೂ ಹೆಚ್ಚಿನ ಪ್ರಶ್ನೆಗಳನ್ನು ಯಾವುದೇ ಚರ್ಚೆಯಿಲ್ಲದೇ ಈ ಹಿಂದಿನ ಕಾಂತರಾಜ ಆಯೋಗದ ಕೈಪಿಡಿಯಿಂದ ಯಥಾವತ್ ಅಳವಡಿಸಿಕೊಳ್ಳಲಾಗಿದೆ. ಉಳಿದ ಶೇ 30 ಪ್ರಶ್ನೆಗಳಿಗೆ ಆಯೋಗದ ಸದಸ್ಯರಿಂದ ಯಾವುದೇ ಸಲಹೆ–ಸೂಚನೆಗಳನ್ನು ಪಡೆದಿಲ್ಲ ಎನ್ನುವ ಆಕ್ಷೇಪವಿದೆ.

ಪ್ರಶ್ನಾವಳಿಗೆ ಕೆಲವು ಪ್ರಶ್ನೆಗಳನ್ನು ಬಾಹ್ಯ ಮೂಲದಿಂದ ಸ್ವೀಕರಿಸಿ ಅಳವಡಿಸಲಾಗಿದೆ. ಈ ರೀತಿ ಸೇರ್ಪಡೆ ಮಾಡುವ ಉದ್ದೇಶವನ್ನು ಆಯೋಗದ ಸಭೆಯಲ್ಲಿ ಚರ್ಚಿಸಿಲ್ಲ. ಹೀಗಾಗಿ ಪ್ರಶ್ನೆಗಳು ಪಾರದರ್ಶಕವಾಗಿಲ್ಲ. ವಿಶ್ವಾಸಾರ್ಹ ದತ್ತಾಂಶದಿಂದ ಕೂಡಿದ ಸಮೀಕ್ಷೆಯು ಜನರಿಗೆ ನಂಬಲರ್ಹವಾಗಿರುತ್ತದೆ. ಸುಮಾರು 60 ಮುಖ್ಯ ಪ್ರಶ್ನಾವಳಿಗಳು ಹಾಗೂ ಇತರ ಉಪ ಪ್ರಶ್ನಾವಳಿಗಳಿಗೆ ಸಂಬಂಧಿಸಿದಂತೆ ತಜ್ಞರ ಜೊತೆ ಆನ್‌ಲೈನ್ ಮೂಲಕ ಕೇವಲ ಔಪಚಾರಿಕವಾಗಿ ಸಭೆ ನಡೆಸಲಾಗಿದೆ ಎಂಬ ವಿರೋಧವೂ ವ್ಯಕ್ತವಾಗಿದೆ.

ಪ್ರಶ್ನಾವಳಿಯನ್ನು ಸಾಮಾಜಿಕ ಹಾಗೂ ಶೈಕ್ಷಣಿಕ ಹಿಂದುಳಿದಿರುವಿಕೆ ಅರಿಯಲು ವಿಶ್ವಾಸಾರ್ಹ ದತ್ತಾಂಶ ಹಾಗೂ ವರದಿ ಪಡೆಯುವ ಹಿತದೃಷ್ಟಿಯಿಂದ ಅಗತ್ಯವಿರುವ ಎಲ್ಲ ಅಂಶಗಳನ್ನು ವೈಜ್ಞಾನಿಕವಾಗಿ ಅಳವಡಿಸಿ ಸಿದ್ಧಪಡಿಸಿಲ್ಲ. ಎಲ್ಲ ಪ್ರಶ್ನೆಗಳನ್ನು ಹಲವು ದೃಷ್ಟಿಕೋನಗಳಿಂದ ಪರಿಶೀಲಿಸಿ, ಸಭೆಯಲ್ಲಿ ಚರ್ಚಿಸಿ ಅಳವಡಿಸಿಕೊಂಡಿರುವುದಿಲ್ಲ. ಅಲ್ಲದೆ, ತಜ್ಞರ ಸಲಹೆಯನ್ನೂ ಗಣನೆಗೆ ತೆಗೆದುಕೊಂಡಿಲ್ಲ. ಈ ಎಲ್ಲ ಕಾರಣಗಳಿಗೆ ಸಿದ್ಧಪಡಿಸಿರುವ ಪ್ರಶ್ನಾವಳಿಯ ಕುರಿತಂತೆ ಕ್ಷೇತ್ರಮಟ್ಟದಲ್ಲಿ ಪ್ರಾಯೋಗಿಕವಾಗಿ ಅಧ್ಯಯನ ಮಾಡಿ, ಸಾಧಕ– ಬಾಧಕಗಳ ಬಗ್ಗೆ ವಿಮರ್ಶಿಸಿ ಅಗತ್ಯ ವೈಜ್ಞಾನಿಕ ವಿಧಾನಗಳನ್ನು ಅಳವಡಿಸಿಕೊಂಡು ಪುನರ್ ಪರಿಷ್ಕರಿಸಿ ಆಯೋಗದ ಸಭೆಯಲ್ಲಿ ವಿವರವಾಗಿ ಚರ್ಚಿಸಬೇಕು. ಅಂತಿಮವಾಗಿ ಕ್ರಮಬದ್ಧವಾಗಿ ತೀರ್ಮಾನಿಸಿ, ನಂತರ ಗಣತಿದಾರರಿಗೆ ಸಮೀಕ್ಷೆಗೆ ನೀಡಲು ಕ್ರಮ ವಹಿಸಬೇಕು ಎಂದು ಸದಸ್ಯರು ಆಗ್ರಹಿಸಿದ್ದರು ಎಂದು ಗೊತ್ತಾಗಿದೆ.

ಮೀಟರ್ ರೀಡರ್‌ಗಳಿಂದ ಮನೆಪಟ್ಟಿ ಮಾಡುವ ವಿಧಾನವೂ ಹೊಸ ಪ್ರಯೋಗ. ಯಾವುದೇ ಪ್ರಯೋಗ ಮಾಡುವ ಮೊದಲು ಪ್ರಾಯೋಗಿಕವಾಗಿ ಮಾಡಿ, ವರದಿ ಸಿದ್ಧಪಡಿಸಿ, ಸಾಧಕ– ಬಾಧಕಗಳ ಬಗ್ಗೆ ಆಯೋಗದ ಸಭೆಯಲ್ಲಿ ಚರ್ಚಿಸಿ, ನಂತರ ತೀರ್ಮಾನ ಮಾಡಬೇಕಿತ್ತು. ಆದರೆ, ಇಂತಹ ವೈಜ್ಞಾನಿಕ ಕ್ರಮ ಆಗಿಲ್ಲ. ಮಲೆನಾಡು, ಹಾಗೂ ಗುಡ್ಡಗಾಡು ಪ್ರದೇಶಗಳಲ್ಲಿ ಮನೆಗಳು ದೂರ ದೂರವಿದ್ದು, ಆ ಪ್ರದೇಶಗಳಿಗೆ ಮೀಟರ್ ರೀಡರ್ ಭೇಟಿ ನೀಡದಿರುವುದು ಆಯೋಗದ ಸಭೆಯಲ್ಲಿ ಚರ್ಚೆಯಾಗಿದೆ. ಅಂತಹ ಪ್ರದೇಶಗಳಲ್ಲಿ ಆಯಾ ಪಂಚಾಯಿತಿಗಳಿಗೆ ಮನೆಪಟ್ಟಿ ಸಿದ್ಧಪಡಿಸುವ ಹೊಣೆಗಾರಿಕೆ ವಹಿಸಲು ತೀರ್ಮಾನಿಸಿದ್ದರೂ ಈ ದಿನದವರೆಗೆ ಯಾವುದೇ ಕ್ರಮ ಆಗಿಲ್ಲ. ವಾಸದ ಮನೆಗಳ ಪಟ್ಟಿ ಮಾತ್ರ ಮಾಡಲಾಗುತ್ತಿದ್ದು, ವಾಣಿಜ್ಯ ಕಟ್ಟಡಗಳಲ್ಲಿ ಅವುಗಳ ನಿರ್ವಹಣೆಗೆ ನೆಲಸಿರುವ ಕುಟುಂಬಗಳು ಸಮೀಕ್ಷೆಯಿಂದ ಕೈಬಿಟ್ಟು ಹೋಗಲಿವೆ. ತೃಪ್ತಿಕರವಾದ ಮನೆಪಟ್ಟಿ ಹಾಗೂ ಗಣತಿ ಬ್ಲಾಕ್‌ಗಳ ಪ್ರಕ್ರಿಯೆ ನಡೆದಿರುವ ಬಗ್ಗೆ ಮಾಹಿತಿ ಪಡೆಯದೆ ಸಮೀಕ್ಷೆ ನಡೆಸುವುದು ಮುಂದೆ ಸಂಶಯಕ್ಕೆ ಎಡೆ ಮಾಡಿಕೊಡಬಹುದು. ಹೀಗಾಗಿ ವಿದ್ಯುತ್ ಮೀಟರ್ ಸಂಪರ್ಕ ಬಳಸಿಕೊಂಡು ಮನೆಪಟ್ಟಿ ಮಾಡುವ ಕ್ರಮಕ್ಕೂ ಸದಸ್ಯರ ನಡುವೆ ಒಮ್ಮತ ಮೂಡಿಲ್ಲ ಎಂದೂ ಗೊತ್ತಾಗಿದೆ.

2 ಕೋಟಿ ನಮೂನೆಗೆ ₹2 ಕೋಟಿ ವೆಚ್ಚ

ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ಕುರಿತಂತೆ ಆಶಾ ಕಾರ್ಯಕರ್ತೆಯರ ಮೂಲಕ ಜಾಗೃತಿ ಮೂಡಿಸಲು ಸರ್ಕಾರ ಯೋಜನೆ ರೂಪಿಸಿತ್ತು. ಆ ಉದ್ದೇಶದಿಂದ ಪ್ರತಿ ನಮೂನೆಗೆ ತಲಾ ₹1 ರಂತೆ 2 ಕೋಟಿ ನಮೂನೆಗಳನ್ನು ಮುದ್ರಿಸಲಾಗಿತ್ತು. ಆದರೆ, ಹಲವು ಬೇಡಿಕೆಗಳನ್ನು ಮುಂದಿಟ್ಟು ಆಶಾ ಕಾರ್ಯಕರ್ತೆಯರು ಜಾಗೃತಿ ಅಭಿಯಾನಕ್ಕೆ ಕೈಜೋಡಿಸಲು ಹಿಂದೇಟು ಹಾಕಿದ್ದಾರೆ. ಪರಿಣಾಮ, ನಮೂನೆಗಳನ್ನು ಮನೆ–ಮನೆಗೆ ವಿತರಿಸಿ ಮೊದಲೇ ಜಾಗೃತಿ ಮೂಡಿಸುವ ಮೂಲಕ ಸಮೀಕ್ಷೆಯನ್ನು ಅತ್ಯಂತ ಸಮರ್ಪಕವಾಗಿ ಮಾಡಬೇಕೆಂಬ ಉದ್ದೇಶ ಈಡೇರಿಲ್ಲ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೂಲಗಳು ತಿಳಿಸಿವೆ.

ಎರಡು ಬಾರಿ ಕೈಪಿಡಿ ಮುದ್ರಣ

ಸಮೀಕ್ಷೆಯ ಮಾಹಿತಿಯನ್ನು ಒಳಗೊಂಡ ಕೈಪಿಡಿಯ ಕರಡು ಪ್ರತಿಯನ್ನು ಸರಿಯಾಗಿ ಪರಿಶೀಲಿಸದೆ ಆತುರಾತುರವಾಗಿ ಸುಮಾರು 75 ಸಾವಿರ ಪ್ರತಿಗಳನ್ನು ಮುದ್ರಿಸಲಾಗಿತ್ತು. ಹೀಗೆ ಮುದ್ರಿಸಿದ ಪ್ರತಿಯಲ್ಲಿ ಹಲವು ತಪ್ಪುಗಳು ನುಸುಳಿಕೊಂಡ ಕಾರಣ ಎರಡನೇ ಬಾರಿಗೆ ಕೈಪಿಡಿ ಮುದ್ರಿಸಲಾಗಿದೆ. ಮೊದಲ ಬಾರಿ ಮುದ್ರಿಸಲು ಸುಮಾರು ₹30 ಲಕ್ಷ ವೆಚ್ಚವಾಗಿದೆ ಎಂದೂ ಹೇಳಿವೆ.

'ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದೆ'

ಸಮೀಕ್ಷೆಗೆ ಎಲ್ಲ ರೀತಿಯ ಸಿದ್ಧತೆ ಮಾಡಿಕೊಳ್ಳಲಾಗಿದೆ. ಗೃಹಬಳಕೆ ವಿದ್ಯುತ್ ಮೀಟರ್ ಸಂಪರ್ಕ ಆಧರಿಸಿ 2 ಕೋಟಿಗೂ ಹೆಚ್ಚು ಮನೆಗಳನ್ನು ಗುರುತಿಸಿ ಜಿಯೋಟ್ಯಾಗಿಂಗ್ ಮಾಡಿ ಗಣತಿಯ ಬ್ಲಾಕ್‌ನ ನಕ್ಷೆ ರೂಪಿಸುವ ಕಾರ್ಯ ಪೂರ್ಣಗೊಂಡಿದೆ. ಇದರಿಂದ ಗಣತಿದಾರರು ಸುಲಭವಾಗಿ ಮನೆಗಳನ್ನು ತಲುಪಿ ಸಮೀಕ್ಷೆ ನಡೆಸಲು ನೆರವಾಗಲಿದೆ. ಒಬ್ಬ ಗಣತಿದಾರನಿಗೆ 140ರಿಂದ 150 ಮನೆಗಳನ್ನು ಹೊಂದಿರುವ ಬ್ಲಾಕ್ ಹಂಚಿಕೆ ಮಾಡಲಾಗಿದೆ. 1.75 ಲಕ್ಷ ಶಿಕ್ಷಕರು ಹಾಗೂ ಇತರೆ ಸಿಬ್ಬಂದಿ ಸಮೀಕ್ಷೆ ಕಾರ್ಯದಲ್ಲಿ ತೊಡಗಿಸಿಕೊಳ್ಳಲಿದ್ದಾರೆ.

ಮಧುಸೂದನ್ ಆರ್.ನಾಯ್ಕ್,
ಅಧ್ಯಕ್ಷರು, ಹಿಂದುಳಿದ ವರ್ಗಗಳ ಆಯೋಗ

ನೀರೋ ನೀರು...

ಪ್ರಜಾವಾಣಿ ಚಿತ್ರ

ಕಲಬುರಗಿಯ ಗಂಜ್ ಬಳಿ ಸುರಿದ ಮಳೆಯಿಂದ ಭಾನುವಾರ ಪೆಟ್ರೋಲ್ ಬಂಕ್ ಜಲಾವೃತಗೊಂಡಿತ್ತು

ಕೆಐಒಸಿಎಲ್ ವಿರುದ್ಧ ಗ್ರಾಮಸಭೆ ನಿರ್ಣಯ

ಎರಡನೇ ಮುಖಪುಟದಿಂದ...

ಸಭೆಯಲ್ಲಿ ಕೆಐಒಸಿಎಲ್‌ಗೆ ವಿರೋಧ ವ್ಯಕ್ತವಾಗಿದೆ. 'ಅರಣ್ಯ ಪ್ರದೇಶ, ಮಳೆ, ಪರಿಸರ ಹಿತದೃಷ್ಟಿಯಿಂದ ಕುದುರೆಮುಖ ಗಣಿಗಾರಿಕೆಯನ್ನು ಸ್ಥಗಿತಗೊಳಿಸಲು ಗ್ರಾಮಸ್ಥರು ತೀರ್ಮಾನಿಸಿದರು. ಕಂಪನಿಯು ಕೆಲ ಬೇಡಿಕೆಗಳನ್ನು ಈಡೇರಿಸಿದರೆ ಮಾತ್ರ ಇದಕ್ಕೆ ಅನುಮತಿ ನೀಡಬೇಕು ಎಂದು ಗ್ರಾಮಸ್ಥರೊಬ್ಬರು ಸಭೆಯಲ್ಲಿ ತಿಳಿಸಿದರು. ಮುಂದಿನ ಕ್ರಮಕ್ಕಾಗಿ ಸಂಡೂರು ತಹಶೀಲ್ದಾರರಿಗೆ ಪತ್ರ ಕಳುಹಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು' ಎಂದು ಗ್ರಾಮ ಪಂಚಾಯಿತಿ ನಿರ್ಣಯ ಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ.

ನಿರ್ಣಯಕ್ಕೆ ಮಾನ್ಯತೆಯುಂಟೇ?: ಗ್ರಾಮ ಸಭೆಯ ನಿರ್ಣಯಗಳಿಗೆ ಮಾನ್ಯತೆ ಇರುತ್ತದೆ. ಆದರೆ, ಇದು ಮುಖ್ಯ ಖನಿಜಕ್ಕೆ (ಮೇಜರ್ ಮಿನರಲ್) ಸಂಬಂಧಿಸಿದ ವಿಷಯ. ರಾಷ್ಟ್ರೀಯ ಅಭಿವೃದ್ಧಿಯಲ್ಲಿ ಮುಖ್ಯ ಖನಿಜಗಳು ನಿರ್ಣಾಯಕ ಪಾತ್ರ ವಹಿಸುತ್ತವೆ. ಆದ್ದರಿಂದ ಈ ವಿಷಯದಲ್ಲಿ ಗ್ರಾಮಸಭೆ ನಿರ್ಣಯಕ್ಕೆ ಮಾನ್ಯತೆ ಇಲ್ಲ ಎಂಬ ಅಭಿಪ್ರಾಯ ಅಧಿಕಾರಿಗಳಿಂದ ವ್ಯಕ್ತವಾಗಿದೆ.

'ಗ್ರಾಮ ಪಂಚಾಯಿತಿ ಎಂಬುದು ಸ್ಥಳೀಯ ಸರ್ಕಾರ. ನಮ್ಮ ನಿರ್ಧಾರಕ್ಕೆ ಮಾನ್ಯತೆ ಇದೆ. ಗಣಿ ಲಾರಿಗಳ ಓಡಾಟದಿಂದ ನಮ್ಮ ಗ್ರಾಮಗಳು ದೂಳಿನಲ್ಲಿ ಮುಳುಗಿವೆ. ನಾವೆಲ್ಲರೂ ಶಾಪಗ್ರಸ್ತರಾಗಿದ್ದೇವೆ. ಹೊಸ ಗಣಿ ಬರುವುದಕ್ಕೆ ನಮ್ಮ ವಿರೋಧವಿದೆ' ಎಂದು ಗ್ರಾಮಸ್ಥರು ಹೇಳಿದ್ದಾರೆ.

ಸಂಡೂರು ತಾಲ್ಲೂಕಿನ ಸ್ವಾಮಿಮಲೈ ಅರಣ್ಯದ 401.57 ಹೆಕ್ಟೇರ್ ಪ್ರದೇಶದಲ್ಲಿ ಕೆಐಒಸಿಎಲ್ 'ದೇವದಾರಿ' ಗಣಿಗಾರಿಕೆ ನಡೆಸಲು ಯೋಜನೆ ರೂಪಿಸಿದೆ. ಆದರೆ, ಅರಣ್ಯ ತೀರುವಳಿ ಪತ್ರ ಇನ್ನೂ ಸಿಕ್ಕಿಲ್ಲ. ಗಣಿಗೆ ಒಂದು ಲಕ್ಷ ಮರಗಳನ್ನು ಕಡಿಯುವ ಅಗತ್ಯವಿದೆ ಎಂದು ಈಗಾಗಲೇ ಅರಣ್ಯ ಇಲಾಖೆ ಹೇಳಿದ್ದು, ಜತೆಗೆ ಆಕ್ಷೇಪವನ್ನೂ ವ್ಯಕ್ತಪಡಿಸಿದೆ.

'ಆಯೋಗದ ಕಚೇರಿಗೆ ಮುತ್ತಿಗೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹಿಂದು ಉಪಜಾತಿಗಳು ಹಾಗೂ ಕಾಯಕ ಸಮುದಾಯಗಳಿಗೆ ಕ್ರಿಶ್ಚಿಯನ್ ಪದ ಜೋಡಿಸಿ ಸೃಷ್ಟಿಸಿದ್ದ ಹೊಸ ಜಾತಿಗಳನ್ನು ಕೊನೆಗೂ ಹಿಂದುಳಿದ ವರ್ಗಗಳ ಆಯೋಗ ಸಮೀಕ್ಷಾ ಪಟ್ಟಿಯಿಂದ ಕೈ ಬಿಡಲು ನಿರ್ಧರಿಸಿದೆ. ಈ ಬಗ್ಗೆ ಬಿಜೆಪಿ ನಡೆಸಿದ ಹೋರಾಟಕ್ಕೆ ಆಯೋಗ ಮಣಿದಿದೆ. ಆಯೋಗ ಸೃಷ್ಟಿಸಿದ ಇಂಥ 46 ಹೊಸ ಜಾತಿಗಳನ್ನು ಸಮೀಕ್ಷಾ ವ್ಯಾಪ್ತಿಯಿಂದ ಹೊರಗಿಡಲೇಬೇಕು' ಎಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ವಿ.ಸುನಿಲ್ ಕುಮಾರ್ ಒತ್ತಾಯಿಸಿದ್ದಾರೆ.

ಈ ಬಗ್ಗೆ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿರುವ ಅವರು, 'ಕೇವಲ 33 ಜಾತಿಗಳನ್ನು ಮಾತ್ರ ಕೈ ಬಿಟ್ಟರೆ ಸಾಲದು. ಆಯೋಗ ಈ ಬಗ್ಗೆ ಮರುಚಿಂತನೆ ನಡೆಸಿ ಸಮೀಕ್ಷೆ ಮುಂದೂಡಲಿ. ಆಯೋಗ ನಡೆಸಿದ್ದ ಈ ಪ್ರಯತ್ನ ಮೀಸಲು ವ್ಯವಸ್ಥೆಯನ್ನು ಕೆಡಿಸುವುದಷ್ಟೇ ಅಲ್ಲ, ಮತಾಂತರಕ್ಕೆ ನೀಡುವ ಬಹಿರಂಗ ಪ್ರೇರಣೆ ಎಂಬ ನಮ್ಮ ನಿಲುವು ಅಚಲವಾಗಿದೆ' ಎಂದಿದ್ದಾರೆ.

ಪೀಠದಿಂದ ಸ್ವಾಮೀಜಿ ಉಚ್ಚಾಟನೆ

ಒಂದನೇ ಪುಟದಿಂದ...

ಬಸವ ಜಯಮೃತ್ಯುಂಜಯ ಸ್ವಾಮೀಜಿ ಅವರು ಟ್ರಸ್ಟ್ ನಿಯಮಾವಳಿಗೆ ಅನುಗುಣವಾಗಿ ನಡೆಯದೆ, ವಿರುದ್ಧವಾಗಿ ನಡೆದುಕೊಂಡಿದ್ದಾರೆ. ಟ್ರಸ್ಟ್ ಗಮನಕ್ಕೆ ತರದೇ ಜನಪ್ರತಿನಿಧಿಗಳ ಸಭೆ ಕರೆದು ಗಣತಿಯ ಧರ್ಮ ಕಾಲಂನಲ್ಲಿ ಹಿಂದೂ ಎಂದು, ಜಾತಿ ಕಾಲಂನಲ್ಲಿ ಲಿಂಗಾಯತ ಎಂದು ಬರೆಸಲು ಹೇಳಿದ್ದಾರೆ. ಹಿಂದೂ ಎಂದು ಬರೆಸಬೇಕು ಎನ್ನುವುದು ಬಸವ ತತ್ವ ಆಧರಿಸಿರುವ ಟ್ರಸ್ಟ್ ನಿಲುವಿಗೆ ವಿರುದ್ಧವಾಗಿದೆ ಎಂದರು.

ಒಂದು ಪಕ್ಷಕ್ಕೆ ಸೀಮಿತವಾಗಿ ಕಾರ್ಯನಿರ್ವಹಿಸುತ್ತಿರುವ ಮತ್ತು ಪೀಠದ ಅಭಿವೃದ್ಧಿಗೆ ಗಮನ ಹರಿಸದಿರುವ ಕಾರಣಕ್ಕೆ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಕೂಡಲಸಂಗಮದಲ್ಲಿ ಬಡ ಮಕ್ಕಳಿಗೆ ಉಚಿತ ಪ್ರಸಾದ ನಿಲಯ, ಕಲ್ಯಾಣ ಮಂಟಪ ನಿರ್ಮಾಣ ಕುರಿತು ಚರ್ಚಿಸಿದ್ದು, ಕೂಡಲೇ ಆರಂಭಿಸಲಾಗುವುದು ಎಂದರು.

ಇಂದಿನಿಂದ ಪೀಠದ ಪೀಠಾಧ್ಯಕ್ಷರಲ್ಲ: 'ಬಸವ ಜಯಮೃತ್ಯುಂಜಯ ಸ್ವಾಮೀಜಿ ಇಂದಿನಿಂದ ಲಿಂಗಾಯತ ಪಂಚಮಸಾಲಿ ಪೀಠದ ಪೀಠಾಧ್ಯಕ್ಷರಲ್ಲ. ಸ್ವಾಭಿಮಾನ ಇದ್ದರೆ ಅವರು ಪೀಠದ ಕಡೆ ಬರಬಾರದು. ಪಕ್ಷಾತೀತವಾದ ಮಠವನ್ನು ಶ್ರೀಗಳು ಪಕ್ಷಕ್ಕೆ ಸೀಮಿತ ಮಾಡಿದ್ದಾರೆ' ಎಂದು ಟ್ರಸ್ಟ್ ಅಧ್ಯಕ್ಷ ವಿಜಯಾನಂದ ಕಾಶಪ್ಪನವರ ಆರೋಪಿಸಿದರು.

'ಶ್ರೀಗಳು ಸಮಾಜವನ್ನು ದಾರಿ ತಪ್ಪಿಸುತ್ತಿದ್ದಾರೆ. 2ಎ ಮೀಸಲಾತಿ ಹತ್ತಿಕ್ಕಲು ಕೆಲವರ ಕುತಂತ್ರಕ್ಕೆ ಮಣಿದು ಬಸವಜಯಮೃತ್ಯುಂಜಯ ಸ್ವಾಮೀಜಿ ಧರ್ಮ ಕಾಲಂನಲ್ಲಿ 'ಹಿಂದೂ' ಎಂದು ಬರೆಯಿಸಲು ತಿಳಿಸಿದ್ದಾರೆ. ಗಣತಿಯಲ್ಲಿ 'ಹಿಂದೂ' ಎಂದು ಬರೆಸಿದರೆ ನಮ್ಮ ಸಮಾಜಕ್ಕೆ 2ಎ ಮೀಸಲಾತಿ ಸಿಗುವುದಿಲ್ಲ. 'ಲಿಂಗಾಯತ' ಎಂದು ಬರೆಸಿದರೆ ಮಾತ್ರ 2ಎ ಮೀಸಲಾತಿ ದೊರೆಯುತ್ತದೆ' ಎಂದರು. 'ಪೀಠಕ್ಕೆ ನೂತನ ಸ್ವಾಮೀಜಿ ನೇಮಕ ಮಾಡುವ ಕುರಿತು ಸಮಾಜದ ಜನರನ್ನು ಕರೆದು, ಆ ಸಭೆಯಲ್ಲಿ ನಿರ್ಧಾರ ಮಾಡಲಾಗುವುದು. ಸಮಾಜ ದೊಡ್ಡದೇ ಹೊರತು ವ್ಯಕ್ತಿ ದೊಡ್ಡವನಲ್ಲ. ಸ್ವಾಮೀಜಿ ತಮ್ಮ ಹೆಸರಿನಲ್ಲಿ ಆಸ್ತಿ ಮಾಡಿಕೊಂಡಿದ್ದಾರೆ. ಪ್ರತ್ಯೇಕ ಟ್ರಸ್ಟ್ ಮಾಡಿಕೊಂಡಿದ್ದಾರೆ. ಅಗತ್ಯ ಬಿದ್ದಾಗ ದಾಖಲೆ ಬಿಡುಗಡೆ ಮಾಡಲಾಗುವುದು. ಶಾಸಕರಾದ ಸಿ.ಸಿ.ಪಾಟೀಲ, ಬಸನಗೌಡ ಪಾಟೀಲ ಯತ್ನಾಳ ಅವರು ಸ್ವಾಮೀಜಿಯನ್ನು ಕರೆದುಕೊಂಡು ಹೋಗಿ ಮಠ ಕಟ್ಟಲಿ' ಎಂದು ವ್ಯಂಗ್ಯವಾಡಿದರು.

ವಿಧಾನ ಪರಿಷತ್ ಮಾಜಿ ಸದಸ್ಯ ಎಂ.ಪಿ.ನಾಡಗೌಡ, ಟ್ರಸ್ಟ್ ಧರ್ಮದರ್ಶಿಗಳಾದ ಶಿವಾನಂದ ಕಂಠಿ, ಗಂಗಣ್ಣ ಬಾಗೇವಾಡಿ, ಶೇಖಪ್ಪ ಬಾದವಾಡಗಿ, ಚಂದ್ರಣ್ಣ ಹುಣಸಿಕಟ್ಟಿ, ಅಶೋಕ ಪವಾಡಶೆಟ್ಟಿ, ಕಲ್ಲಪ್ಪನ ಎಲಿವಾಳ, ನೂತನ ಕಾರ್ಯದರ್ಶಿ ಅಮರೇಶ ನಾಗೂರ, ಮುಖಂಡರಾದ ನಂದಕುಮಾರ ಪಾಟೀಲ, ಮಂಜುನಾಥ ಎಚ್.ಎಂ, ಮಹಾಂತಗೌಡ ಪಾಟೀಲ, ಮಹಾಂತೇಶ ಅವಾರಿ ಇದ್ದರು.

ಭಕ್ತರ ಸಭೆ ಇಂದು

ಬಾಗಲಕೋಟೆ: 'ಪೀಠಕ್ಕೂ, ಟ್ರಸ್ಟಿಗೂ ಸಂಬಂಧವಿಲ್ಲ. ನಾನು ಭಕ್ತರ ಋಣದಲ್ಲಿದ್ದೇನೆ. ಟ್ರಸ್ಟ್‌ನ ಋಣದಲ್ಲಿಲ್ಲ. ಭಕ್ತರ ಸಭೆ ಕರೆದು ಮುಂದಿನ ತೀರ್ಮಾನ ಕೈಗೊಳ್ಳುತ್ತೇನೆ' ಎಂದು ಪಂಚಮಸಾಲಿ ಪೀಠದ ಬಸವ ಜಯಮೃತ್ಯುಂಜಯ ಸ್ವಾಮೀಜಿ ಹೇಳಿದರು. ಅಖಿಲ ಭಾರತ ಪಂಚಮಸಾಲಿ ಲಿಂಗಾಯತ ಟ್ರಸ್ಟ್ ಪೀಠದಿಂದ ಉಚ್ಚಾಟನೆ ಮಾಡಿದ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ಉಚ್ಚಾಟನೆ ಮಾಡಿರುವ ಬಗ್ಗೆ ಮಾಧ್ಯಮಗಳಿಂದ ತಿಳಿದುಬಂದಿದೆ. ಈ ಕುರಿತು ಚರ್ಚಿಸಲು ಸೋಮವಾರ ಬೆಳಿಗ್ಗೆ 10.30ಕ್ಕೆ ಕೂಡಲಸಂಗಮದ ಸಂಗಮೇಶ್ವರ ಉಚಿತ ಪ್ರಸಾದ ನಿಲಯದಲ್ಲಿ ಸಭೆ ಕರೆದಿದ್ದೇನೆ' ಎಂದರು.

ಕೋರ್ಟ್ ಮಧ್ಯ ಪ್ರವೇಶಿಸಲಿ: ಸೋಮಣ್ಣ

ಪ್ರಜಾವಾಣಿ ವಾರ್ತೆ

ಉಡುಪಿ: 'ಜಾತಿ ಗಣತಿ ಹೆಸರಿನಲ್ಲಿ ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರವು ಜನರ ಹಾದಿ ತಪ್ಪಿಸುವ ಕೆಲಸ ಮಾಡುತ್ತಿದೆ, ಈ ವಿಚಾರದಲ್ಲಿ ಹೈಕೋರ್ಟ್ ಮಧ್ಯಪ್ರವೇಶ ಮಾಡಬೇಕು' ಎಂದು ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ಹೇಳಿದರು.

ಸುದ್ದಿಗಾರರ ಜೊತೆ ಇಲ್ಲಿ ಭಾನುವಾರ ಮಾತನಾಡಿದ ಅವರು, 'ಸರ್ಕಾರವು ಸಾಮಾಜಿಕ ಶೈಕ್ಷಣಿಕ ಸಮೀಕ್ಷೆ ಅಂತ ಮಾಡಬಾರದನ್ನು ಮಾಡುತ್ತಿದೆ, ಹಿಟ್ ಆ್ಯಂಡ್ ರನ್ ಕೆಲಸ ಮಾಡುತ್ತಿದೆ' ಎಂದು ಆರೋಪಿಸಿದರು.

ಕೇಂದ್ರ ಸರ್ಕಾರವೇ ದೇಶದಾದ್ಯಂತ ಜನ ಗಣತಿ ಮಾಡುತ್ತಿದೆ. ಅಷ್ಟರಲ್ಲಿ ರಾಜ್ಯದಲ್ಲಿ ಸಮೀಕ್ಷೆ ಮಾಡುತ್ತಿದ್ದಾರೆ, ಈ ಸಮೀಕ್ಷೆಗೆ ದೂರದೃಷ್ಟಿ ಇಲ್ಲ. ದೇಶದಲ್ಲಿರೋದು ಆರೇ ಧರ್ಮಗಳು, ಏಳನೇ ಧರ್ಮ ಇಲ್ಲ. ವೀರಶೈವ ಮತ್ತು ಲಿಂಗಾಯತರು ಜಾತಿ ಕಾಲಂನಲ್ಲಿ ವೀರಶೈವ ಲಿಂಗಾಯತ ಎಂದು ಬರೆಯಿಸಿ, ಧರ್ಮ ಕಾಲಂನಲ್ಲಿ ಹಿಂದೂ ಎಂದು ಬರೆಯಿಸಿ ಎಂದು ಹೇಳಿದರು.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಮಚ್ಚಿನಿಂದ ಹಲ್ಲೆ ಐವರ ಬಂಧನ

ಬೆಂಗಳೂರು: ಹಳೇ ದ್ವೇಷದಿಂದ ವ್ಯಕ್ತಿಯೊಬ್ಬನಿಗೆ ಮಚ್ಚಿನಿಂದ ಹಲ್ಲೆ ಮಾಡಿ ಕೊಲೆಗೆ ಯತ್ನಿಸಿದ ಐವರು ಆರೋಪಿಗಳನ್ನು ಮಲ್ಲೇಶ್ವರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಮಲ್ಲೇಶ್ವರದ ಅಫ್ಜಲ್ ಖಾನ್, ಸೈಯದ್ ವಸೀಂ, ಜಯಿದ್ ಭಾಷಾ, ಸೈಯದ್ ಹಫೀಜ್ ಮತ್ತು ಸಲೀಂ ಪಾಷಾ ಬಂಧಿತರು. ಮಹಮ್ಮದ್ ಜಾವೀದ್ ಹಲ್ಲೆಗೊಳಗಾದವರು. ಮಹಮ್ಮದ್ ನಜೀರ್ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮಹಮ್ಮದ್ ಜಾವೀದ್ ಹಾಗೂ ಆರೋಪಿಗಳು ಅಕ್ಕಪಕ್ಕದ ಮನೆಯವರು. ಮಹಮ್ಮದ್ ಜಾವೀದ್ ಹಾಗೂ ಅಫ್ಜಲ್ ಖಾನ್ ನಡುವೆ ಈ ಹಿಂದೆ ಸಣ್ಣ ಪುಟ್ಟ ವಿಚಾರಕ್ಕೆ ಗಲಾಟೆಯಾಗಿತ್ತು. ಶನಿವಾರ ರಾತ್ರಿ ಇಬ್ಬರ ನಡುವೆ ಮತ್ತೆ ಗಲಾಟೆಯಾಗಿದೆ. ಉಳಿದ ಆರೋಪಿಗಳು ಜಾವೀದ್ ಮೇಲೆ ಹಲ್ಲೆ ಮಾಡಿದ್ದಾರೆ. 'ಅಫ್ಜಲ್ ಪಕ್ಕದ ಮಟನ್ ಅಂಗಡಿಯಿಂದ ಮಚ್ಚು ತಂದು ಹಲ್ಲೆ ನಡೆಸಿದ್ದಾನೆ. ಆರೋಪಿಗಳನ್ನು ಕೋರ್ಟ್‌ಗೆ ಹಾಜರುಪಡಿಸಿ, ಕಸ್ಟಡಿಗೆ ಪಡೆಯಲಾಗುವುದು' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ನಕಲಿ ದಾಖಲೆ: ₹350 ಕೋಟಿ ಭೂಮಿ ಪರಭಾರೆ

ಮೂಲ ದಾಖಲೆಯೇ ಇಲ್ಲ ಎಂದು ತಹಶೀಲ್ದಾರ್ ಹೇಳಿದ್ದರೂ ಅರ್ಜಿದಾರರಿಗೆ ಜಮೀನು ನೀಡಿದ್ದ ವಿಶೇಷ ಜಿಲ್ಲಾಧಿಕಾರಿ

• ಜಯಸಿಂಹ ಆರ್.

ಬೆಂಗಳೂರು: ನಕಲಿ ದಾಖಲೆಗಳನ್ನು ಸೃಷ್ಟಿಸಿ ಅರ್ಜಿ ಸಲ್ಲಿಸಿದ್ದ ನಾಲ್ವರು ಖಾಸಗಿ ವ್ಯಕ್ತಿಗಳಿಗೆ, ಬೆಂಗಳೂರಿನ ಹಿಂದಿನ ವಿಶೇಷ ಜಿಲ್ಲಾಧಿಕಾರಿಯಾಗಿದ್ದ ಬಿ.ವಿ. ವಾಸಂತಿ ಅಮರ್ ಅವರು 14 ಎಕರೆ ಸರ್ಕಾರಿ ಜಮೀನನ್ನು ಪರಭಾರೆ ಮಾಡಿದ ಪ್ರಕರಣವೊಂದು ಪತ್ತೆಯಾಗಿದೆ.

ಬೆಂಗಳೂರು ಉತ್ತರ ತಾಲ್ಲೂಕಿನ ಯಶವಂತಪುರ ಹೋಬಳಿಯ ಕೊಡಿಗೆಹಳ್ಳಿಯ ಸರ್ವೆ ನಂಬರ್ 86ರ ಈ ಜಮೀನಿನ ಮಾರುಕಟ್ಟೆ ಮೌಲ್ಯ ₹350 ಕೋಟಿ ಎಂದು ಅಂದಾಜಿಸಲಾಗಿದೆ. ಅರ್ಜಿದಾರರ ಮನವಿಯನ್ನು ತಹಶೀಲ್ದಾರ್ ಮತ್ತು ಜಿಲ್ಲಾಧಿಕಾರಿಯು ಈ ಹಿಂದೆಯೇ ಎರಡು ಬಾರಿ ತಿರಸ್ಕರಿಸಿದ್ದರೂ, ಅದನ್ನು ಗಣನೆಗೆ ತೆಗೆದುಕೊಳ್ಳದೆ ಪರಭಾರೆ ಮಾಡಲಾಗಿದೆ.

ನೈಸ್ ರಸ್ತೆಗೆ ಹೊಂದಿಕೊಂಡಂತೆಯೇ ಇರುವ ಈ ಜಮೀನಿಗೆ ಸಂಬಂಧಿಸಿದಂತೆ, 2007ರಲ್ಲಿ ಪುಟ್ಟಮ್ಮ, ಎಚ್.ಬಿ.ಶ್ರೀಧರ್, ಕೆ.ವಿ.ಚಂದ್ರನ್ ಮತ್ತು ಪುಟ್ಟಗೌರಮ್ಮ ಅವರು ರಾಜ್ಯ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದರು.

'ಸರ್ವೆ ಸಂಖ್ಯೆ: 86ರ (ಹೊಸ ಸರ್ವೆ ಸಂಖ್ಯೆ 143, 144, 145 ಮತ್ತು 147) ಸುಮಾರು 14 ಎಕರೆ ಜಮೀನು ತಮಗೆ 1954ರಲ್ಲೇ ಸರ್ಕಾರದಿಂದ ಮಂಜೂರಾಗಿದೆ. ಅಂದಿನಿಂದ 1995 ರವರೆಗೂ ಪಹಣಿಯಲ್ಲಿ ತಮ್ಮ ಹೆಸರು ಇದ್ದು, 1995ರ ನಂತರ ಪಹಣಿಯಿಂದ ತಮ್ಮ ಹೆಸರು ಕೈಬಿಡಲಾಗಿದೆ. ಕಂದಾಯ ದಾಖಲೆಗಳಿಗೆ ತಮ್ಮ ಹೆಸರು ಸೇರ್ಪಡೆ ಮಾಡಲು ತಹಶೀಲ್ದಾರರಿಗೆ ನಿರ್ದೇಶನ ನೀಡಿ' ಎಂದು ಹೈಕೋರ್ಟ್ ಅನ್ನು ಕೋರಿದ್ದರು.

ಅರ್ಜಿಯ ವಿಚಾರಣೆ ನಡೆಸಿದ್ದ ಹೈಕೋರ್ಟ್, ದಾಖಲೆ ಪರಿಶೀಲಿಸಿ ಮೂರು ತಿಂಗಳಲ್ಲಿ ಕ್ರಮ ತೆಗೆದುಕೊಳ್ಳಿ ಎಂದು ಸೂಚಿಸಿತ್ತು. ಆದರೆ, ತಹಶೀಲ್ದಾರ್ ಮತ್ತು ಜಿಲ್ಲಾಧಿಕಾರಿಯು ಕ್ರಮ ತೆಗೆದುಕೊಂಡಿಲ್ಲ, ತಮ್ಮ ಹೆಸರನ್ನು ಕಂದಾಯ ದಾಖಲೆಗೆ ಸೇರಿಸಿಲ್ಲ ಎಂದು ನಾಲ್ವರು ಅರ್ಜಿದಾರರು ನ್ಯಾಯಾಂಗ ನಿಂದನೆ ದಾವೆ ಹೂಡಿದ್ದರು. ಆ ಅರ್ಜಿಯ ವಿಚಾರಣೆ ವೇಳೆ ಬೆಂಗಳೂರು ಜಿಲ್ಲಾಧಿಕಾರಿ ಅವರಿಂದ ಹೈಕೋರ್ಟ್ ವಿವರಣೆ ಕೇಳಿತ್ತು.

ಜಿಲ್ಲಾಧಿಕಾರಿಯು, 'ಈ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಣೆ ನಡೆಸಿ, ಕ್ರಮ ತೆಗೆದುಕೊಳ್ಳಲಾಗಿದೆ. ಅರ್ಜಿದಾರರು ನಕಲಿ ದಾಖಲೆಗಳನ್ನು ಸೃಷ್ಟಿಸಿ ಜಮೀನು ಕಬಳಿಸಲು ಯತ್ನಿಸಿದ್ದಾರೆ ಎಂದು ಜಿಲ್ಲಾಧಿಕಾರಿ ನ್ಯಾಯಾಲಯದಿಂದ ಆದೇಶ ನೀಡಲಾಗಿದೆ' ಎಂದು ಹೈಕೋರ್ಟ್‌ಗೆ ತಿಳಿಸಿದ್ದರು.

'ಅರ್ಜಿದಾರರು ನ್ಯಾಯಾಲಯಕ್ಕೆ ಸಲ್ಲಿಸಿರುವ ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿದೆ. ನಾಲ್ವರು ಅರ್ಜಿದಾರರಿಗೂ 1954ರಲ್ಲಿ ಜಮೀನು ಮಂಜೂರಾದ ಮೂಲ ದಾಖಲೆಗಳು ಲಭ್ಯವಿಲ್ಲ. ಬದಲಿಗೆ ದರಾಖಾಸ್ತು ಭೂಮಿ ಪಡೆದವರ ಪಟ್ಟಿಯಲ್ಲಿ ಈ ನಾಲ್ವರ ಹೆಸರನ್ನು ನಂತರದ ದಿನಗಳಲ್ಲಿ ಸೇರಿಸಲಾಗಿದೆ. ಸರ್ಕಾರಿ ದಾಖಲೆಗಳನ್ನು ತಿದ್ದಲಾಗಿದೆ' ಎಂದು ವಿವರಿಸಿದ್ದರು.

'ಮೂಲ ಪಟ್ಟಿಯಲ್ಲಿ ಈ ನಾಲ್ವರಿಗಿಂತಲೂ ಮೊದಲು ಇರುವವರ ಹೆಸರು ಮತ್ತು ಈ ನಾಲ್ವರ ನಂತರ ಇರುವ ಹೆಸರುಗಳ ಕೈಬರಹ ಹಾಗೂ ಪೆನ್ನಿನ ಇಂಕ್ ಒಂದೇ ರೀತಿ ಇದೆ. ಆದರೆ ಈ ನಾಲ್ವರ ಹೆಸರಿನ ಕೈಬರಹ ಹಾಗೂ ಪೆನ್ನಿನ ಇಂಕ್ ಬೇರೆಯಾಗಿದೆ. ಕಂದಾಯ ಇಲಾಖೆ ಅಧಿಕಾರಿಗಳೂ ಭಾಗಿಯಾಗಿ ಈ ನಾಲ್ವರ ಹೆಸರನ್ನು ಸೇರಿಸಿರುವುದು ಪತ್ತೆಯಾಗಿದೆ.

ನಾಲ್ವರೂ ನಕಲಿ ಸಾಗುವಳಿ ಚೀಟಿಗಳನ್ನು ಸೃಷ್ಟಿಸಿದ್ದಾರೆ, ಜತೆಗೆ ಪಹಣಿಗಳನ್ನು ತಿದ್ದಿಸಿದ್ದಾರೆ ಎಂದು ತಹಶೀಲ್ದಾರರು ವರದಿ ನೀಡಿದ್ದಾರೆ' ಎಂದು ಹೈಕೋರ್ಟ್‌ಗೆ ವರದಿ ಸಲ್ಲಿಸಿದ್ದರು. ಜಿಲ್ಲಾಧಿಕಾರಿ ವರದಿ ನೀಡಿದ ನಂತರ ಹೈಕೋರ್ಟ್ ನ್ಯಾಯಾಂಗ ನಿಂದನೆ ದಾವೆಯನ್ನು ಕೈಬಿಟ್ಟಿತ್ತು. ಅರ್ಜಿದಾರರು ಮತ್ತು ದಾಖಲೆ ತಿದ್ದುವಲ್ಲಿ ಭಾಗಿಯಾದ ಸರ್ಕಾರಿ ಅಧಿಕಾರಿಗಳ ವಿರುದ್ಧ ತನಿಖೆ ಆರಂಭಿಸಿ ಎಂದು ಆದೇಶಿಸಿತ್ತು.

ಈ ಮಧ್ಯೆ 2015ರಲ್ಲಿ ಬೆಂಗಳೂರು ಉತ್ತರ ವಿಭಾಗದ ವಿಶೇಷ ಜಿಲ್ಲಾಧಿಕಾರಿ–3 ಅವರ ನ್ಯಾಯಾಲಯಕ್ಕೆ ಪುಟ್ಟಮ್ಮ, ಎಚ್.ಬಿ.ಶ್ರೀಧರ್, ಕೆ.ವಿ.ಚಂದ್ರನ್ ಮತ್ತು ಪುಟ್ಟಗೌರಮ್ಮ ಅವರು ಅರ್ಜಿ ಸಲ್ಲಿಸಿ, ಸದರಿ ಜಮೀನನ್ನು ಪರಭಾರೆ ಮಾಡಿಕೊಡಿ ಎಂದು ಕೋರಿದ್ದರು. ಆದರೆ ಆಗಿನ ವಿಶೇಷ ಜಿಲ್ಲಾಧಿಕಾರಿಯು ಅರ್ಜಿಯನ್ನು ಪರಿಗಣಿಸಿರಲಿಲ್ಲ. 2021ರಲ್ಲಿ ವಿಶೇಷ ಜಿಲ್ಲಾಧಿಕಾರಿಯಾಗಿ ಬಂದ ವಾಸಂತಿ ಅಮರ್ ಅವರು, ಅರ್ಜಿಯ ವಿಚಾರಣೆ ಕೈಗೆತ್ತಿಕೊಂಡಿದ್ದರು. ಉತ್ತರ ತಾಲ್ಲೂಕಿನ ತಹಶೀಲ್ದಾರ್ ಅವರಿಂದ ವಿವರಣೆ ಕೋರಿದ್ದರು.

'ನಾಲ್ವರಿಗೂ 1954ರಲ್ಲಿ ಜಮೀನು ಮಂಜೂರಾದ ಮೂಲ ದಾಖಲೆಗಳು, ನಕಲು ಪ್ರತಿಗಳೂ ಲಭ್ಯವಿಲ್ಲ. ಅರ್ಜಿದಾರರ ಪಹಣಿ, ಸಾಗುವಳಿ ಚೀಟಿ ಮಾತ್ರವೇ ಲಭ್ಯವಿದೆ' ಎಂದು ಉತ್ತರ ತಾಲ್ಲೂಕಿನ ತಹಶೀಲ್ದಾರ್ ವರದಿ ನೀಡಿದ್ದರು.

ಸದರಿ ಜಮೀನುಗಳಿಗೆ ಸಂಬಂಧಿಸಿದಂತೆ ಈ ಹಿಂದಿನ ತಹಶೀಲ್ದಾರ್ ವರದಿ, ಈ ಹಿಂದೆ ನಡೆದಿದ್ದ ವಿಚಾರಣೆಗಳು, ನ್ಯಾಯಾಲಯ ಪ್ರಕ್ರಿಯೆಗಳನ್ನು ಈ ವರದಿಯಲ್ಲಿ ಉಲ್ಲೇಖಿಸಿರಲಿಲ್ಲ. ಅದನ್ನೇ ಪರಿಗಣಿಸಿದ್ದ ವಾಸಂತಿ ಅಮರ್ ಅವರು ಅರ್ಜಿದಾರರಾದ ಕೆ.ವಿ.ಚಂದ್ರನ್ ಅವರಿಗೆ 4 ಎಕರೆ, ಬಿ.ಎಚ್.ಶ್ರೀಧರ್ ಅವರಿಗೆ 4 ಎಕರೆ, ಪುಟ್ಟಗೌರಮ್ಮ ಅವರಿಗೆ 3 ಎಕರೆ ಮತ್ತು ಪುಟ್ಟಮ್ಮ ಅವರಿಗೆ 3 ಎಕರೆ ಪರಭಾರೆ ಮಾಡಿ 2023ರ ಜುಲೈ ಮತ್ತು 2025ರ ಮಾರ್ಚ್‌ನಲ್ಲಿ ಆದೇಶಿಸಿದ್ದರು.

ಆದರೆ ಜಮೀನನ್ನು ರಾಜ್ಯ ಸರ್ಕಾರ ಗೋಮಾಳ ಎಂದು ಅಧಿಸೂಚನೆ ಹೊರಡಿಸಿತ್ತು. 1998ರಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಪ್ರಾಧಿಕಾರವು ಸ್ವಾಧೀನಕ್ಕೆ ಪಡೆದಿತ್ತು. ಬೆಂಗಳೂರು ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಯೋಜನೆಯ ಭಾಗವಾಗಿ ಸದರಿ ಜಮೀನನ್ನು ನೈಸ್ ಸಂಸ್ಥೆಗೆ ನೀಡಿತ್ತು.

ವಾಸಂತಿ ಅಮರ್ ಅವರು ವಿಶೇಷ ಜಿಲ್ಲಾಧಿಕಾರಿ–3 ಆಗಿದ್ದಾಗ ನೀಡಿದ ಆದೇಶದ ಆಧಾರದಲ್ಲಿ ಅರ್ಜಿದಾರರು ಜಮೀನನ್ನು ಸ್ವಾಧೀನಕ್ಕೆ ಪಡೆದುಕೊಳ್ಳಲು ಮುಂದಾದಾಗ, ನೈಸ್ ಕಂಪನಿಯು ಹೈಕೋರ್ಟ್ ಮೆಟ್ಟಿಲೇರಿದೆ.

ವಾಸಂತಿ ವಿರುದ್ಧ ಮತ್ತೊಂದು ಎಫ್‌ಐಆರ್

ಸರ್ಕಾರಿ ಜಮೀನಿಗೆ ನಿಯಮ ಬಾಹಿರವಾಗಿ ಆದೇಶ ಹೊರಡಿಸಿದ ಆರೋಪದ ಅಡಿ ಐಎಎಸ್ ಅಧಿಕಾರಿ ವಾಸಂತಿ ಅಮರ್ ವಿರುದ್ಧ ಹಲಸೂರು ಗೇಟ್ ಠಾಣೆಯಲ್ಲಿ ಇದೇ ಜುಲೈ 15 ರಂದು ಎಫ್‌ಐಆರ್ ದಾಖಲಾಗಿತ್ತು.

'ಬೆಂಗಳೂರಿನ ಹಿಂದಿನ ವಿಶೇಷ ಜಿಲ್ಲಾಧಿಕಾರಿ–3 ವಾಸಂತಿ ಅಮರ್ ಅವರು ಬೆಂಗಳೂರು ಉತ್ತರ ತಾಲ್ಲೂಕಿನ ದಾಸನಪುರ ಹೋಬಳಿಯ ಹುಚ್ಚನಪಾಳ್ಯ ಗ್ರಾಮದ ಸರ್ವೆ ನಂಬರ್ 8ರಲ್ಲಿ 10 ಎಕರೆ 20 ಗುಂಟೆ ಸರ್ಕಾರಿ ಜಮೀನಿಗೆ ಸಂಬಂಧಿಸಿದಂತೆ ನಿಯಮಬಾಹಿರ ಆದೇಶ ಹೊರಡಿಸಿದ್ದಾರೆ' ಎಂದು ಬೆಂಗಳೂರು ಜಿಲ್ಲಾಧಿಕಾರಿ ಕಚೇರಿ ಸಹಾಯಕ ಪ್ರಶಾಂತ್ ಖಾನಗೌಡ ಪಾಟೀಲ್ ಅವರು ಹಲಸೂರು ಠಾಣೆಗೆ ಹಾಜರಾಗಿ ದೂರು ನೀಡಿದ್ದರು.

ಆ ದೂರು ಆಧರಿಸಿ ಪೊಲೀಸರು ಎನ್‌ಸಿಆರ್ (ಗಂಭೀರವಲ್ಲದ ಪ್ರಕರಣ) ದಾಖಲಿಸಿದ್ದರು.

48ನೇ ಎಸಿಎಂಎಂ ನ್ಯಾಯಾಲಯದ ಎದುರು ದೂರುದಾರರು ಹಾಜರಾಗಿ ಎನ್‌ಸಿಆರ್ ಪ್ರಕರಣದ ತನಿಖೆಗೆ ಮನವಿ ಮಾಡಿದ್ದರು. ನ್ಯಾಯಾಲಯದ ಸೂಚನೆ ಮೇರೆಗೆ ಭಾರತೀಯ ನ್ಯಾಯ ಸಂಹಿತೆ ಸೆಕ್ಷನ್ 257ರ ಅಡಿ ಮಂಗಳವಾರ ಎಫ್‌ಐಆರ್ ದಾಖಲು ಮಾಡಿಕೊಳ್ಳಲಾಗಿತ್ತು.

ಪತ್ನಿಗೆ ಇರಿದಿದ್ದ ಪತಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಾಕುವಿನಿಂದ ಪತ್ನಿಗೆ ಇರಿದು ಕೊಲೆ ಮಾಡಲು ಯತ್ನಿಸಿ ಪರಾರಿಯಾಗಿದ್ದ ಆರೋಪಿ ಪತಿಯನ್ನು ಬ್ಯಾಡರಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಕಾಮಾಕ್ಷಿಪಾಳ್ಯದ ಪ್ರಸನ್ನ ಅಲಿಯಾಸ್ ಚಂದ್ರು ಬಂಧಿತ ಆರೋಪಿ. ಮೂರು ದಿನದ ಹಿಂದೆ ಪತ್ನಿ ದೇವಿಕಾ ಮೇಲೆ ಹಲ್ಲೆ ನಡೆಸಿ, ಕೊಲೆಗೆ ಯತ್ನಿಸಿ ಪರಾರಿಯಾಗಿದ್ದ. ಸಂತ್ರಸ್ತೆ ನೀಡಿದ ದೂರಿನ ಮೇಲೆ ಆರೋಪಿಯನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಲಾಗಿದೆ ಎಂದು ಪೊಲೀಸರು ತಿಳಿಸಿದರು.

ನಾಗಮಂಗಲ ತಾಲ್ಲೂಕಿನ ಚಂದ್ರು ಹಾಗೂ ತುಮಕೂರು ಜಿಲ್ಲೆ ಕುಣಿಗಲ್ ತಾಲ್ಲೂಕಿನ ದೇವಿಕಾ ವಿವಾಹವಾಗಿದ್ದು, ದಂಪತಿಗೆ ಇಬ್ಬರು ಮಕ್ಕಳಿದ್ದಾರೆ. ಕೌಟುಂಬಿಕ ಕಲಹ ಕಾರಣ ಎರಡು ವರ್ಷದಿಂದ ಪತಿಯಿಂದ ಪ್ರತ್ಯೇಕವಾಗಿ ದೇವಿಕಾ ವಾಸವಾಗಿದ್ದರು. ವಿಪರೀತ ಮದ್ಯ ಸೇವಿಸುತ್ತಿದ್ದ ಆರೋಪಿ, ಪತ್ನಿ ಮೇಲೆ ಅನುಮಾನ ಪಟ್ಟು ಜಗಳವಾಡುತ್ತಿದ್ದ ಎನ್ನಲಾಗಿದೆ.

ಖಾಸಗಿ ಆಸ್ಪತ್ರೆಯಲ್ಲಿ ದೇವಿಕಾ ನರ್ಸ್ ಆಗಿದ್ದರೆ, ಸಂಪ್ ಕ್ಲಿನರ್ ಆಗಿ ಚಂದ್ರು ಕೆಲಸ ಮಾಡುತ್ತಿದ್ದ. ಪತ್ನಿ ಕೆಲಸಕ್ಕೆ ಹೋಗುವ ವೇಳೆ ಚಾಕುವಿನಿಂದ ಹಲ್ಲೆ ನಡೆಸಿದ್ದಾನೆ. ಕಿರುಚಾಟ ಕೇಳಿ ಪಕ್ಕದ ಮನೆಯವರು ಆಕೆಯನ್ನು ಆಸ್ಪತ್ರೆಗೆ ದಾಖಲಿಸಿದ್ದರು. ಸಂತ್ರಸ್ತೆ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಭಕ್ತರ ಮಹಾಪೂರ

ಪ್ರಜಾವಾಣಿ ಚಿತ್ರ
ಎಂ.ಎಸ್. ಮಂಜುನಾಥ್

ಮಹಾಲಯ ಅಮಾವಾಸ್ಯೆಯ ದಿನವಾದ ಭಾನುವಾರ ನಗರದ ಬಳೇಪೇಟೆ ಶ್ರೀ ಕಾಶಿ ವಿಶ್ವನಾಥ ದೇವಸ್ಥಾನದ ಮುಂಭಾಗದಲ್ಲಿ ಸಾರ್ವಜನಿಕರು ಪಿತೃತರ್ಪಣ ಕಾರ್ಯ ನೆರವೇರಿಸಿದರು

ಹೆಡ್ ಕಾನ್‌ಸ್ಟೆಬಲ್ ಬಂಧನ

ಬೆಂಗಳೂರು: ಮಹಿಳೆಯೊಬ್ಬರ ಸರ ದೋಚಿದ ಆರೋಪದ ಮೇಲೆ ಹೆಡ್‌ಕಾನ್‌ಸ್ಟೆಬಲ್ ಮತ್ತು ಆತನ ಸ್ನೇಹಿತನನ್ನು ಆವಲಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ. ಡಿ.ಜೆ. ಹಳ್ಳಿ ಪೊಲೀಸ್ ಠಾಣೆಯ ಸತ್ಯನ್ ಮತ್ತು ಸ್ನೇಹಿತ, ಆಟೊ ರಿಕ್ಷಾ ಚಾಲಕ ಜಗದೀಶ್ ಬಂಧಿತರು.

'ಜಗದೀಶ್ ತನ್ನ ಸ್ನೇಹಿತೆ ಮೇಲೆ ಹಲ್ಲೆ ಮಾಡಿ, ಚಿನ್ನದ ಸರವನ್ನು ಕಿತ್ತುಕೊಂಡು ಸತ್ಯನ್‌ಗೆ ನೀಡಿದ್ದಾನೆ. ಸರ ಅಡವಿಟ್ಟು ಬಂದ ಹಣವನ್ನು ಇಬ್ಬರು ಹಂಚಿಕೊಂಡಿದ್ದಾರೆ. ಸಂತ್ರಸ್ತೆ ದೂರು ಆಧರಿಸಿ, ಪೊಲೀಸರು ಆರೋಪಿಗಳನ್ನು ಬಂಧಿಸಿ, ಸರವನ್ನು ವಶಪಡಿಸಿಕೊಂಡಿದ್ದಾರೆ.

ಸತ್ಯನ್ ವಿರುದ್ಧ ಕ್ರಮಕ್ಕಾಗಿ ಡಿಸಿಪಿಗೆ ವರದಿ ಕಳುಹಿಸಿದ್ದಾಗಿ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಉಡುಪಿಯ ಕೃಷ್ಣಮಠ, ಹೊನ್ನಾಳಿಯ ಹಿರೇಕಲ್ಮಠ ನಡುವೆ ನಡೆಯುತ್ತಿರುವ ವ್ಯಾಜ್ಯ

'ಸುಭದ್ರೆ'ಗಾಗಿ ಜಗ್ಗಾಟ: ಇಕ್ಕಟ್ಟಿನಲ್ಲಿ ಅರಣ್ಯ ಇಲಾಖೆ

• ಎಸ್.ರವಿಪ್ರಕಾಶ್

ಬೆಂಗಳೂರು: ಒಂದು ಹೆಣ್ಣಾನೆಗಾಗಿ ಎರಡು ಮಠಗಳ ಮಧ್ಯೆ ಜಗ್ಗಾಟ ಆರಂಭವಾಗಿದ್ದು, ಅರಣ್ಯ ಇಲಾಖೆ ಈಗ ಇಕ್ಕಟ್ಟಿಗೆ ಸಿಲುಕಿದೆ.

'ಸುಭದ್ರೆ' ಎಂಬ ಹೆಣ್ಣು ಆನೆಗಾಗಿ ಜಗ್ಗಾಟ ಆರಂಭಿಸಿರುವ ಎರಡು ಮಠಗಳೆಂದರೆ ಉಡುಪಿಯ ಕೃಷ್ಣಮಠ ಮತ್ತು ದಾವಣಗೆರೆ ಜಿಲ್ಲೆ ಹೊನ್ನಾಳಿಯ ಹಿರೇಕಲ್ಮಠ. ಈ ವ್ಯಾಜ್ಯಕ್ಕೆ ಭಕ್ತರು ಮತ್ತು ರಾಜಕಾರಣಿಗಳೂ ಮಧ್ಯ ಪ್ರವೇಶಿಸಿದ್ದರಿಂದ ಪರಿಸ್ಥಿತಿ ಬಿಗಡಾಯಿಸಿದೆ.

ಹಿರೇಕಲ್ಮಠದ ಸುಪರ್ದಿಯಲ್ಲಿರುವ 'ಸುಭದ್ರೆ' ಆನೆಯನ್ನು ಉಡುಪಿಯ ಅಷ್ಟ ಮಠಗಳಿಗೆ ಹಿಂದಿರುಗಿಸಬೇಕು ಎಂದು ಅರಣ್ಯ ಇಲಾಖೆ ಆದೇಶ ಹೊರಡಿಸಿದ್ದು, ಇದು ತಕರಾರಿಗೆ ಕಾರಣವಾಗಿದೆ.

ಹಿನ್ನೆಲೆ ಏನು?: 1993ರಲ್ಲಿ ಉಡುಪಿಯ ಕೃಷ್ಣಮಠದ ಕೋರಿಕೆಯ ಮೇರೆಗೆ ಅರಣ್ಯ ಇಲಾಖೆ ಹೆಣ್ಣಾನೆಯೊಂದನ್ನು ನೀಡಿತ್ತು. ಅದಕ್ಕೆ 'ಸುಭದ್ರೆ' ಎಂದು ಹೆಸರಿಟ್ಟು ಮಠವೇ ಸಾಕುತ್ತಿತ್ತು. 2015ರಲ್ಲಿ ಆನೆಯ ಆರೋಗ್ಯ ಕ್ಷೀಣಿಸಿದಾಗ ಚಿಕಿತ್ಸೆಗಾಗಿ ಶಿವಮೊಗ್ಗ ಜಿಲ್ಲೆಯ ಸಕ್ರೆಬೈಲಿಗೆ ಕಳಿಸಲಾಗಿತ್ತು. ಆನೆ ಗುಣಮುಖವಾಗಿದ್ದರಿಂದ ಮತ್ತೆ ಉಡುಪಿ ಮಠಕ್ಕೆ ಹಸ್ತಾಂತರಿಸಲು ಅರಣ್ಯ ಇಲಾಖೆ ಪತ್ರ ಬರೆಯಿತು. ಆದರೆ, ಉಡುಪಿ ಅಷ್ಟ ಮಠಗಳು 2018ರಲ್ಲಿ ಅರಣ್ಯ ಇಲಾಖೆಗೆ ಪತ್ರ ಬರೆದು ಆನೆಯ ವೆಚ್ಚ ಭರಿಸಲು ಕಷ್ಟವಾಗಿದ್ದು ಇಲಾಖೆಗೆ ಒಪ್ಪಿಸಲು ಸಿದ್ಧರಿದ್ದೇವೆ ಎಂದು ಪ್ರತಿಕ್ರಿಯೆ ನೀಡಿತ್ತು. ಆನೆಯ ಪಾಲನೆ ಮತ್ತು ಪೋಷಣೆ ವೆಚ್ಚ ಭರಿಸಬೇಕು ಎಂದು ಇಲಾಖೆ ತಿಳಿಸಿತ್ತು.

2019ರ ಏಪ್ರಿಲ್‌ನಲ್ಲಿ ಅಷ್ಟಮಠ ಮತ್ತೆ ಪತ್ರಬರೆದು ವೆಚ್ಚ ಭರಿಸಲು ಕಷ್ಟವಾಗಿದ್ದು ಹೊನ್ನಾಳಿ ಹಿರೇಕಲ್ಮಠಕ್ಕೆ ಸಾಗಿಸಲು ಸಮ್ಮತಿ ನೀಡಿತ್ತು. ಹೀಗಾಗಿ ಮುಂದಿನ ಆದೇಶದವರೆಗೆ ಹಿರೇಕಲ್ಮಠಕ್ಕೆ ಸಾಗಿಸಲು ಒಪ್ಪಿಗೆ ನೀಡಿ ಅರಣ್ಯ ಇಲಾಖೆಯು ಆದೇಶ ಹೊರಡಿಸಿತ್ತು.

ಅರಣ್ಯ ಇಲಾಖೆ ಆದೇಶವೇನು?

'ಉಡುಪಿಯ ಕೃಷ್ಣ ಮಠವು ಸುಮಾರು 26 ವರ್ಷಗಳ ಕಾಲ 'ಸುಭದ್ರೆ' ಆನೆಯನ್ನು ಪೋಷಿಸಿದೆ. ಆನೆಯ ಆರೋಗ್ಯದ ಹಿತದೃಷ್ಟಿಯಿಂದ ಹೊನ್ನಾಳಿ ಹಿರೇಕಲ್ಮಠಕ್ಕೆ ಹಸ್ತಾಂತರಿಸಲಾಗಿತ್ತು. ಈಗ ಕೃಷ್ಣಮಠದಲ್ಲಿ ಆನೆ ಇಲ್ಲದಿರುವುದರಿಂದ ಮಠದ ಪರಂಪರೆ ನಿಂತು ಹೋಗಿದೆ. ಆನೆಯನ್ನು ಒದಗಿಸುವಂತೆ ಮಠ ಮತ್ತೆ ಕೋರಿದೆ. ಆದ್ದರಿಂದ ಹಿರೇಕಲ್ಮಠಕ್ಕೆ ನೀಡಿದ ಆದೇಶ ರದ್ದುಪಡಿಸಲಾಗಿದೆ. ಆನೆಯನ್ನು ಉಡುಪಿ ಕೃಷ್ಣಮಠಕ್ಕೆ ಹಿಂತಿರುಗಿಸಬೇಕು.

ಹಿರೇಕಲ್ಮಠದಲ್ಲಿ ಆನೆಗೆ ಸೂಕ್ತ ವ್ಯವಸ್ಥೆ ಕಲ್ಪಿಸಿರುವ ಕಾರಣ, ಆ ಮಠದಲ್ಲೇ ಮುಂದುವರಿಸಲು ಮತ್ತು ಅವರ ಹೆಸರಿನಲ್ಲೇ ಆನೆಯ ಒಡೆತನ ಪ್ರಮಾಣ ಪತ್ರ ನೀಡಿ ಆದೇಶ ಹೊರಡಿಸಲಾಗಿತ್ತು.

ಉಡುಪಿ ಮಠದ ಕೋರಿಕೆ: ಉಡುಪಿ ಕೃಷ್ಣಮಠದ ಉತ್ಸವಗಳಿಗೆ ಹೆಣ್ಣಾನೆ ಮರಿಯೊಂದನ್ನು ಇಲಾಖಾವತಿಯಿಂದ ನೀಡಬೇಕು ಎಂದು ಮಠ ಅರಣ್ಯ ಇಲಾಖೆಗೆ ಪತ್ರ ಬರೆಯಿತು. ಆದರೆ, ನಿಯಮಗಳ ಅನ್ವಯ ಹೆಣ್ಣಾನೆ ಮರಿಯನ್ನು ನೀಡಲು ಅವಕಾಶ ಇಲ್ಲ ಎಂದು ಉತ್ತರ ನೀಡಿತ್ತು.

ಆ ಬಳಿಕ, ಉಡುಪಿ ಶೀರೂರು ಮಠದ ದಿವಾನರು ಅರಣ್ಯ ಇಲಾಖೆಗೆ ಪತ್ರ ಬರೆದು, 2026–28ರ ಪರ್ಯಾಯವು ಶೀರೂರು ಮಠದಿಂದ ನಡೆಯಲಿದ್ದು, ಪರ್ಯಾಯ ಮೆರವಣಿಗೆ ಮತ್ತು ಇತರೆ ಧಾರ್ಮಿಕ ಉದ್ದೇಶಗಳಿಗೆ ಸಂಪ್ರದಾಯದಂತೆ ಮಠದ ಆನೆಯಾದ 'ಸುಭದ್ರೆ' ಅವಶ್ಯಕತೆ ಇದೆ. ಅದನ್ನು ಹಿಂತಿರುಗಿಸಲು ಮನವಿ ಮಾಡಿತ್ತು.

ಮನವಿ ಆಧರಿಸಿ 'ಸುಭದ್ರೆ'ಯನ್ನು ಉಡುಪಿ ಮಠಕ್ಕೆ ಹಿಂದಿರುಗಿಸುವಂತೆ ಅರಣ್ಯ ಇಲಾಖೆ ಇದೇ 10ರಂದು ಆದೇಶ ಹೊರಡಿಸಿತ್ತು. ಆ ಆದೇಶದ ಬಗ್ಗೆ ಹಿರೇಕಲ್ಮಠ ಆಕ್ಷೇಪ ವ್ಯಕ್ತಪಡಿಸಿತು. 'ಆನೆಯನ್ನು ಬಿಟ್ಟುಕೊಡಲು ಸಾಧ್ಯವಿಲ್ಲ' ಎಂದು ಮಠದ ಭಕ್ತರೂ ಹೇಳಿದ್ದಾರೆ.

ಭಾನುವಾರ ಉಡುಪಿ ಮಠದ ಸಿಬ್ಬಂದಿ 'ಸುಭದ್ರೆ' ಆನೆ ಒಯ್ಯಲು ಬಂದಾಗ ಉದ್ವಿಗ್ನ ಸ್ಥಿತಿ ಉಂಟಾಯಿತು. ಉಡುಪಿ ಮಠದವರ ಜತೆ ಮಾತುಕತೆ ನಡೆಸಿ, ಸೌಹಾರ್ದವಾಗಿ ವಿವಾದ ಇತ್ಯರ್ಥ ಮಾಡಿಕೊಳ್ಳುವುದಾಗಿ ಮಠವು ಸಂದೇಶ ನೀಡಿದೆ. ಮಾಜಿ ಶಾಸಕ ಎಂ.ಪಿ.ರೇಣುಕಾಚಾರ್ಯ ಮಧ್ಯ ಪ್ರವೇಶಿಸಿ ದೂರವಾಣಿ ಮೂಲಕ ಅರಣ್ಯ ಸಚಿವ ಈಶ್ವರ ಖಂಡ್ರೆ ಜತೆ ಮಾತನಾಡಿ ಆನೆಯನ್ನು ಹಿರೇಕಲ್ಮಠದಲ್ಲೇ ಉಳಿಸಲು ಆದೇಶಿಸುವಂತೆ ಒತ್ತಾಯಿಸಿದರು. 'ಅದಕ್ಕೆ ಸಚಿವರು ಒಪ್ಪಿಗೆ ನೀಡಿದ್ದಾರೆ' ಎಂದು ಅವರು ಹೇಳಿದ್ದಾರೆ.

ಪರಿಷ್ಕೃತ ಜಿಎಸ್‌ಟಿ ಇಂದಿನಿಂದ ಜಾರಿ

ಎರಡನೇ ಮುಖಪುಟದಿಂದ... ಈ ಕಂಪನಿಗಳು ಪರಿಷ್ಕೃತ ಎಂಆರ್‌ಪಿ ಇರುವ ಉತ್ಪನ್ನಗಳನ್ನು ವಿತರಕರಿಗೆ, ಇ–ವಾಣಿಜ್ಯ ಕಂಪನಿಗಳ ಗೋದಾಮುಗಳಿಗೆ, ಸಾಂಪ್ರದಾಯಿಕ ಕಿರಾಣಿ ಅಂಗಡಿಗಳಿಗೆ ರವಾನಿಸಿರುವುದಾಗಿ ಹೇಳಿವೆ. ಈಗಾಗಲೇ ಮಾರುಕಟ್ಟೆಯಲ್ಲಿ ಇರುವ ಉತ್ಪನ್ನಗಳ ಬೆಲೆಯನ್ನು ವಿಶೇಷವಾದ ರಿಯಾಯಿತಿಗಳ ಮೂಲಕ ಸರಿಹೊಂದಿಸಲಾಗಿದೆ ಎಂದು ಹೇಳಿವೆ.

ಡಾಬರ್, ಐಟಿಸಿ, ಪ್ರಾಕ್ಟರ್ ಆ್ಯಂಡ್ ಗ್ಯಾಂಬಲ್, ಇಮಾಮಿ, ನೆಸ್ಲೆ, ಆರ್‌ಪಿಎಸ್‌ಜಿ, ಅಮೂಲ್, ಎಚ್‌ಯುಎಲ್‌ನಂತಹ ಪ್ರಮುಖ ಕಂಪನಿಗಳು ಪರಿಷ್ಕೃತ ದರದ ಪಟ್ಟಿಯನ್ನು ತಮ್ಮ ವಿತರಕರಿಗೆ ರವಾನಿಸಿವೆ. ಅಲ್ಲದೆ, ತಮ್ಮ ವೆಬ್‌ಸೈಟ್‌ಗಳ ಮೂಲಕ ಹೊಸ ದರವನ್ನು ಗ್ರಾಹಕರಿಗೂ ತಿಳಿಸಿವೆ.

ಭಾರತೀಯ ವಾಣಿಜ್ಯೋದ್ಯಮ ಮಹಾಸಂಘ (ಫಿಕ್ಕಿ) ಈಚೆಗೆ ಸಿದ್ಧಪಡಿಸಿರುವ ವರದಿಯೊಂದು, ಜಿಎಸ್‌ಟಿ ದರ ಪರಿಷ್ಕರಣೆಯ ಪರಿಣಾಮವಾಗಿ ಅಲ್ಪಾವಧಿಯಲ್ಲಿ ವರಮಾನ ನಷ್ಟ ಉಂಟಾದರೂ ಮಾರುಕಟ್ಟೆಯಲ್ಲಿ ಬೇಡಿಕೆಯಲ್ಲಿ ಆಗುವ ಏರಿಕೆಯು ವರಮಾನ ನಷ್ಟವನ್ನು ಸರಿಹೊಂದಿಸಿಕೊಡುತ್ತದೆ ಎಂದು ಹೇಳಿದೆ.

ಆರ್ಥಿಕ ಬೆಳವಣಿಗೆಗೆ ವೇಗ: ಪ್ರಧಾನಿ

ಎರಡನೇ ಮುಖಪುಟದಿಂದ... 'ಪ್ರತಿ ಮನೆಯನ್ನೂ ನಾವು ಸ್ವದೇಶಿಯ ಸಂಕೇತವನ್ನಾಗಿಸಬೇಕು, ಪ್ರತಿ ಅಂಗಡಿಯನ್ನೂ ಸ್ವದೇಶಿ ಉತ್ಪನ್ನಗಳಿಂದ ಅಲಂಕರಿಸಬೇಕು' ಎಂದು ಅವರು ಕರೆ ನೀಡಿದ್ದಾರೆ.

ಆದಾಯ ತೆರಿಗೆ ವಿನಾಯಿತಿಯನ್ನು ವಾರ್ಷಿಕ ₹12 ಲಕ್ಷಕ್ಕೆ ಹೆಚ್ಚಿಸಿದ ಕೆಲವು ತಿಂಗಳ ನಂತರದಲ್ಲಿ ಜಿಎಸ್‌ಟಿ ವ್ಯವಸ್ಥೆಯಲ್ಲಿ ತರುತ್ತಿರುವ ಸುಧಾರಣೆಯು ನಾಗರಿಕರಿಗೆ ಅನುಕೂಲ ಕಲ್ಪಿಸಲಿದೆ. ವೆಚ್ಚ ತಗ್ಗಿಸಿ, ಉಳಿತಾಯ ಹೆಚ್ಚಿಸಿ ತಮ್ಮ ಕನಸುಗಳನ್ನು ಸಾಕಾರಗೊಳಿಸಿಕೊಳ್ಳಲು ಅವರಿಗೆ ನೆರವಾಗಲಿದೆ. ಅಲ್ಲದೆ, ಈ ಎರಡು ಕ್ರಮಗಳಿಂದಾಗಿ ಜನರ ಕೈಯಲ್ಲಿ ₹2.5 ಲಕ್ಷ ಕೋಟಿ ಉಳಿಯಲಿದೆ ಎಂದು ಹೇಳಿದ್ದಾರೆ.

ಸ್ವದೇಶಿಗೆ ಆದ್ಯತೆ: ಸ್ವದೇಶಿ ವಸ್ತುಗಳ ಖರೀದಿ ಮತ್ತು ಮಾರಾಟವು ದೇಶದ ಅಭಿವೃದ್ಧಿಗೆ ವೇಗ ನೀಡುತ್ತದೆ ಎಂದು ಮೋದಿ ಹೇಳಿದ್ದಾರೆ. ದೇಶದಲ್ಲೇ ತಯಾರಾದ ಉತ್ಪನ್ನಗಳ ಖರೀದಿಗೆ ಜನರು ಮುಂದಾಗಬೇಕು ಎಂದು ಕರೆ ನೀಡಿದ್ದಾರೆ.

'ನಾನು ಸ್ವದೇಶಿ ಉತ್ಪನ್ನ ಖರೀದಿಸುತ್ತೇನೆ, ನಾನು ಸ್ವದೇಶಿ ಉತ್ಪನ್ನ ಮಾರಾಟ ಮಾಡುತ್ತೇನೆ ಎನ್ನುವುದು ಹೆಮ್ಮೆಯ ಸಂಗತಿಯಾಗಬೇಕು' ಎಂದು ಕೂಡ ಪ್ರಧಾನಿ ಹೇಳಿದ್ದಾರೆ. 'ಸೋಮವಾರದಿಂದ ಜಿಎಸ್‌ಟಿ ಉಳಿತಾಯ ಹಬ್ಬ ಶುರುವಾಗುತ್ತದೆ. ಇದರಿಂದಾಗಿ ಪ್ರತಿ ಕುಟುಂಬದಲ್ಲಿ ಸಂತಸ ಮೂಡುತ್ತದೆ' ಎಂದಿದ್ದಾರೆ.

ಮೋದಿ ಮಾತು

- ತಯಾರಿಕಾ ಚಟುವಟಿಕೆಗೆ ಉತ್ತೇಜನ ನೀಡಿ, ಹೂಡಿಕೆಗೆ ಪೂರಕವಾದ ವಾತಾವರಣವನ್ನು ರಾಜ್ಯಗಳು ನಿರ್ಮಾಣ ಮಾಡಬೇಕು
- 'ನಾಗರಿಕ ದೇವೋ ಭವ' ಎಂಬುದು ಸರ್ಕಾರದ ಮಂತ್ರ ಎನ್ನುವುದನ್ನು ಜಿಎಸ್‌ಟಿ ಪರಿಷ್ಕರಣೆಯು ಪ್ರತಿಬಿಂಬಿಸುತ್ತಿದೆ
- ಅತಿಸಣ್ಣ, ಸಣ್ಣ ಮತ್ತು ಗುಡಿಕೈಗಾರಿಕೆಗಳು ಸ್ವಾವಲಂಬಿ ಭಾರತದ ನಿರ್ಮಾಣದಲ್ಲಿ ಪ್ರಮುಖ ಪಾತ್ರ ಹೊಂದಿವೆ. ಸಾಧ್ಯವಾದಷ್ಟು ಮಟ್ಟಿಗೆ ದೇಶದಲ್ಲಿ ತಯಾರಿಕೆಯನ್ನು ಹೆಚ್ಚಿಸಬೇಕು

ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯವಸ್ಥೆಯಲ್ಲಿನ ಮಹತ್ವದ ಬದಲಾವಣೆಗಳು ಸೋಮವಾರದಿಂದ ಜಾರಿಗೆ ಬರುತ್ತಿವೆ. ಇದರ ಪರಿಣಾಮವಾಗಿ ನಿತ್ಯ ಬಳಕೆಯ ಉತ್ಪನ್ನಗಳು ಸೇರಿದಂತೆ ಹಲವು ಉತ್ಪನ್ನಗಳು ಅಗ್ಗವಾಗುತ್ತಿವೆ. ಯಾವ ಉತ್ಪನ್ನದ ಮೇಲಿನ ತೆರಿಗೆಯು ಯಾವ ಪ್ರಮಾಣಕ್ಕೆ ಇಳಿಕೆ ಆಗುತ್ತಿದೆ ಎಂಬುದರ ಕುರಿತ ಚುಟುಕು ನೋಟವೊಂದು ಇಲ್ಲಿದೆ.

ಜಿಎಸ್‌ಟಿ ದರ ಇಳಿಕೆ: ಅವಲೋಕನ



- **ಶೇ 5ರಿಂದ ಶೂನ್ಯಕ್ಕೆ** ಯುಎಚ್‌ಟಿ ಹಾಲು, ಪ್ಯಾಕ್ ಮಾಡಿದ ಲೇಬಲ್ ಇರುವ ಪನೀರ್, ಪಿಜ್ಜಾ ಬ್ರೆಡ್, ಚಪಾತಿ ಅಥವಾ ರೊಟ್ಟಿ, ಪರೋಟಗಳು
- **ಶೇ 18ರಿಂದ ಶೂನ್ಯ** ಪರೋಟ, ಪರಾಟ, ಇತರ ಯಾವುದೇ ಹೆಸರಿನಿಂದ ಕರೆಯಲಾಗುವ ಭಾರತೀಯ ಬ್ರೆಡ್
- **ಶೇ 12ರಿಂದ ಶೂನ್ಯ** ಅಟ್ಲಾಸ್, ಭೂಪಟ, ಗ್ಲೋಬ್, ಪೆನ್ಸಿಲ್ ಶಾರ್ಪನರ್, ಪೆನ್ಸಿಲ್, ಕ್ರಯಾನ್, ಪ್ಯಾಸ್ಟಲ್, ಗ್ರಾಫ್ ಬುಕ್, ಪ್ರಯೋಗಾಲಯದ ನೋಟ್ ಬುಕ್, ನೋಟ್‌ಬುಕ್, ಪೇಪರ್‌ಬೋರ್ಡ್
- **ಶೇ 12ರಿಂದ ಶೇ 5** ಘನೀಕೃತ ಹಾಲು, ಬೆಣ್ಣೆ, ತುಪ್ಪ, ಗಿಣ್ಣು, ಖರ್ಜೂರ, ಸಕ್ಕರೆ ಪಾಕದಲ್ಲಿ ತಯಾರಿಸಿದ ಮಿಠಾಯಿ, ಸಂರಕ್ಷಿಸಿದ ಮಾಂಸ, ಹುರಿದ ಮತ್ತು ಉಪ್ಪು ಸವರಿದ ನೆಲಗಡಲೆ, ಗೋಡಂಬಿ, ಇತರ ಹುರಿದ ಬೀಜಗಳು, ಪ್ಯಾಕ್ ಮಾಡಿ ಲೇಬಲ್ ಮಾಡಲಾದ ಎಳನೀರು, ನಾಸ್‌ಗಳು, ಕರಿಬೇವಿನ ಪೇಸ್ಟ್, ಮಯೋನಿಸ್, ಮಿಶ್ರ ಸಂಬಾರ ಪದಾರ್ಥಗಳು, ಮಿಶ್ರ ಮಸಾಲೆಗಳು, 20 ಲೀಟರ್ ಬಾಟಲಿಗಳಲ್ಲಿ ತುಂಬಿದ ಕುಡಿಯುವ ನೀರು, ಹಣ್ಣಿನ ತಿರುಳು ಅಥವಾ ಹಣ್ಣಿನ ರಸ ಆಧಾರಿತ ಪಾನೀಯ, ಸೋಲಾರ್ ವಾಟರ್ ಹೀಟರ್, ಸೌರ ವಿದ್ಯುತ್ ಆಧಾರಿತ ಸಾಧನಗಳು, ಸೌರದೀಪ, ನೆಲಹಾಸುಗಳು, ಇತರ ಜವಳಿ ನೆಲದ ಹೊದಿಕೆಗಳು, ದೀಪಗಳು, ಒಲೆಗಳು, ಲೈಟರ್, ಜ್ಯಾಮಿತಿ ಪೆಟ್ಟಿಗೆ

ಹಲ್ಲಿನ ಪುಡಿ, ಮೇಣದಬತ್ತಿ, ಫೀಡಿಂಗ್ ಬಾಟಲಿ, ಹಾಲುಣಿಸುವ ಬಾಟಲಿಗಳ ನಿಪ್ಪಲ್, ಹತ್ತಿಯಿಂದ ಮಾಡಿದ ಕೈಚೀಲ, ಶಾಪಿಂಗ್ ಚೀಲ, ಸೆಣಬಿನ ಕೈಚೀಲ, ಮರದಿಂದ ಮಾಡಿದ ಟೇಬಲ್‌ವೇರ್, ಅಡುಗೆ ಪಾತ್ರೆ, ಕೊಡೆ, ಸಿಮೆಂಟಿನ ಬರ್ನರ್, ಸಿಮೆಂಟಿನ ಸ್ಟವ್, ಕಬ್ಬಿಣ ಅಥವಾ ಉಕ್ಕಿನಿಂದ ಮಾಡಿದ ಟೇಬಲ್ ಒಲೆ, ಕಬ್ಬಿಣ ಮತ್ತು ಉಕ್ಕಿನಿಂದ ತಯಾರಿಸಿದ ಟೇಬಲ್, ಅಲ್ಯೂಮಿನಿಯಂ ಟೇಬಲ್, ಹೊಲಿಗೆ ಯಂತ್ರಗಳ ಸೂಜಿಗಳು, ಹೊಲಿಗೆ ಯಂತ್ರಗಳ ಭಾಗಗಳು, ಸ್ಟೈಲ್, ಬಿದಿರು ಹಾಗೂ ಬೆತ್ತ ಅಥವಾ ರಾಟನ್‌ನಿಂದ ಮಾಡಿದ ಪೀಠೋಪಕರಣ, ಬಾಚಣಿಗೆ, ಹೇರ್‌ಪಿನ್, ಕರ್ಲಿಂಗ್ ಪಿನ್, ಕರ್ಲಿಂಗ್ ಗ್ರಿಪ್, ಹೇರ್-ಕರ್ಲರ್, ಮಕ್ಕಳ ನ್ಯಾಪ್ಕಿನ್, ಪೌಚ್, ಪರ್ಸ್, ಆಭರಣ ಪೆಟ್ಟಿಗೆ

ಕ್ರೀಡೆಗಳಲ್ಲಿ ಬಳಸಲು ವಿಶೇಷವಾಗಿ ವಿನ್ಯಾಸಗೊಳಿಸಲಾದ ಕೈಗವಸು, ಟ್ರೈಸಿಕಲ್, ಸ್ಕೂಟರ್, ಪೆಡಲ್ ಕಾರು ಮುಂತಾದ ಆಟಿಕೆಗಳು, ಚೆಸ್ ಬೋರ್ಡ್, ಕ್ಯಾರಮ್ ಬೋರ್ಡ್, ಲುಡೋ, [illegible], ₹2,500 ಮೀರದ ಪಾದರಕ್ಷೆಗಳು, ಮಾರ್ಬಲ್, ಗ್ರಾನೈಟ್ ಬ್ಲಾಕ್, ರಬ್ಬರ್ ಬ್ಯಾಂಡ್

- **ಶೇ 18ರಿಂದ ಶೇ 5** ಟಾಲ್ಕಮ್ ಪೌಡರ್, ಫೇಸ್ ಪೌಡರ್, ತಲೆಗೆ ಹಾಕುವ ಎಣ್ಣೆ, ಶಾಂಪೂ, ಟೂತ್ ಬ್ರಷ್, ಟೂತ್‌ಪೇಸ್ಟ್, ಶೇವಿಂಗ್ ಕ್ರೀಮ್, ಶೇವಿಂಗ್ ಲೋಷನ್, ಆಫ್ಟರ್ ಶೇವ್ ಲೋಷನ್, ಶೌಚಾಲಯದ ಸೋಪ್, ತರಕಾರಿಯಿಂದ ಮಾಡಿದ ಜ್ಯೂಸ್, ಕೋಕೋ ಇರುವ ಚಾಕೊಲೇಟ್, ಐಸ್‌ಕ್ರೀಮ್, ಸಕ್ಕರೆ ಮಿಠಾಯಿ, ಬೇಕರಿ ಸರಕುಗಳು, ಟ್ರ್ಯಾಕ್ಟರ್ ಹಿಂಬದಿಯ ಟೈರ್‌ಗಳು, ಟ್ಯೂಬ್‌ಗಳು, ಟ್ರ್ಯಾಕ್ಟರ್‌ಗಳಿಗೆ ಬಳಸುವ ಹೈಡ್ರಾಲಿಕ್ ಪಂಪುಗಳು, ಬಾಲ್‌ಗಳು, ಗೇರ್ ಬಾಕ್ಸ್‌ಗಳು ಇತ್ಯಾದಿ
- **ಶೇ 12ರಿಂದ ಶೇ 18** ಬರವಣಿಗೆ, ಮುದ್ರಣ ಅಥವಾ ಇತರ ಗ್ರಾಫಿಕ್ ಉದ್ದೇಶಗಳಿಗಾಗಿ ಬಳಸಲಾಗುವ ಲೇಪನವಿಲ್ಲದ ಕಾಗದ ಮತ್ತು ಪೇಪರ್‌ಬೋರ್ಡ್, ಗ್ರಾಫಿಕ್ ಕಾಗದ, ಗ್ರೀಸ್‌ಪ್ರೂಫ್ ಪೇಪರ್‌ಗಳು
- **ಶೇ 28ರಿಂದ ಶೇ 18** 1,200 ಸಿ.ಸಿ ಸಾಮರ್ಥ್ಯದವರೆಗಿನ ಎಂಜಿನ್ ಇರುವ ಕಾರುಗಳು, 350 ಸಿ.ಸಿ ಅಥವಾ ಅದಕ್ಕಿಂತ ಕಡಿಮೆ ಸಾಮರ್ಥ್ಯದ ಮೋಟರ್‌ಸೈಕಲ್, ತ್ರಿಚಕ್ರ ವಾಹನಗಳು, ಬಸ್ಸುಗಳು, ಟ್ರಕ್, ಆಂಬುಲೆನ್ಸ್, ವಾಹನದ ಬಿಡಿಭಾಗಗಳು, ಫ್ಯಾನ್, ಪಾತ್ರೆ ತೊಳೆಯುವ ಯಂತ್ರ, ಟಿ.ವಿ
- **ಶೇ 18ರಿಂದ ಶೇ 40** ಕೆಫೀನ್ ಇರುವ ಪಾನೀಯಗಳು, ಆಲ್ಕೋಹಾಲ್ ಇಲ್ಲದ ಪಾನೀಯ, ಹಣ್ಣಿನ ರಸದೊಂದಿಗಿನ ಕಾರ್ಬೊನೇಟೆಡ್ ಪಾನೀಯ ಅಥವಾ ಹಣ್ಣಿನ ಸಾರದೊಂದಿಗಿನ ಕಾರ್ಬೊನೇಟೆಡ್ ಪಾನೀಯ
- **ಶೇ 28ರಿಂದ ಶೇ 40** ಪಾನ್ ಮಸಾಲ, ತಂಬಾಕು ಉತ್ಪನ್ನಗಳು, ಸಿಗರೇಟು, ಧೂಮಪಾನದ ಪೈಪ್, ಸಿಗಾರ್ ಅಥವಾ ಸಿಗರೇಟ್ ಹೋಲ್ಡರ್ ಮತ್ತು ಅವುಗಳ ಭಾಗಗಳು, ರೇಸಿಂಗ್ ಕಾರು, 1,200 ಸಿ.ಸಿಗಿಂತ ಹೆಚ್ಚಿನ ಸಾಮರ್ಥ್ಯದ ಎಂಜಿನ್ ಇರುವ ಪೆಟ್ರೋಲ್ ವಾಹನ 4,000 ಮಿ.ಮೀ ಗಿಂತ ಹೆಚ್ಚಿನ ಉದ್ದದ ವಾಹನ, 350 ಸಿ.ಸಿಗಿಂತ ಹೆಚ್ಚಿನ ಎಂಜಿನ್ ಸಾಮರ್ಥ್ಯದ ದ್ವಿಚಕ್ರ ವಾಹನಗಳು, ವೈಯಕ್ತಿಕ ಬಳಕೆಗಾಗಿ ವಿಮಾನ, ಮೋಜು ಅಥವಾ ಕ್ರೀಡೆಗಾಗಿ ಬಳಸುವ ದೋಣಿ

● ಸದ್ಯಕ್ಕೆ ತಂಬಾಕು, ತಂಬಾಕು ಉತ್ಪನ್ನಗಳ ಮೇಲಿನ ತೆರಿಗೆಯು ಶೇ 28ರ ಹಂತದಲ್ಲಿಯೇ ಇರಲಿದೆ. ಪರಿಹಾರ ಸೆಸ್‌ಗೆ ಸಂಬಂಧಿಸಿದ ಸಾಲ, ಬಡ್ಡಿಯು ತೀರಿದ ನಂತರದಲ್ಲಿ ಈ ಉತ್ಪನ್ನಗಳನ್ನು ಶೇ 40ರ ತೆರಿಗೆ ಹಂತಕ್ಕೆ ವರ್ಗಾಯಿಸಲಾಗುತ್ತದೆ.

ಬೀರೇಶ್ವರ ಸೊಸೈಟಿ: ಲಾಭಾಂಶ ಹಂಚಿಕೆ

ಪ್ರಜಾವಾಣಿ ವಾರ್ತೆ

ಅಣ್ಣಾಸಾಹೇಬ ಜೊಲ್ಲೆ

ಚಿಕ್ಕೋಡಿ (ಬೆಳಗಾವಿ ಜಿಲ್ಲೆ): 'ಕರ್ನಾಟಕ, ಮಹಾರಾಷ್ಟ್ರ, ಗೋವಾ ಸೇರಿದಂತೆ ವಿವಿಧ ರಾಜ್ಯಗಳಲ್ಲಿ 228 ಶಾಖೆಗಳನ್ನು ಹೊಂದಿರುವ ಯಕ್ಸಂಬಾ ಪಟ್ಟಣದ ಬೀರೇಶ್ವರ ಕೋ-ಆಪ್ ಕ್ರೆಡಿಟ್ ಸೊಸೈಟಿಯು ಸದಸ್ಯರಿಗೆ ಶೇ 12 ಹಾಗೂ ಸಿಬ್ಬಂದಿಗೆ ಶೇ 10 ರಷ್ಟು ಲಾಭಾಂಶವನ್ನು ಹಂಚಿದೆ' ಎಂದು ಸಂಸ್ಥಾಪಕ ಅಧ್ಯಕ್ಷ ಅಣ್ಣಾಸಾಹೇಬ ಜೊಲ್ಲೆ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಸೊಸೈಟಿಯು 2023-24ನೇ ಸಾಲಿನ ₹33.01 ಕೋಟಿ ಷೇರು ಮೊತ್ತದ ಶೇ 12ರಷ್ಟು ಲಾಭಾಂಶವನ್ನು 3,78,504 ಸದಸ್ಯರಿಗೆ ಹಾಗೂ ವಾರ್ಷಿಕ ಒಟ್ಟು ಸಂಬಳದ ಮೇಲೆ ಶೇ 10ರಷ್ಟು ಮೊತ್ತವನ್ನು 1,400ಕ್ಕೂ ಹೆಚ್ಚು ಸಿಬ್ಬಂದಿಗೆ ಹಂಚಿಕೆ ಮಾಡಿದೆ' ಎಂದರು.

'ಸೊಸೈಟಿಯು 2024-25ನೇ ಸಾಲಿನಲ್ಲಿ ₹35.78 ಕೋಟಿ ಷೇರು ಬಂಡವಾಳ, ₹237.59 ಕೋಟಿ ಕಾಯ್ದಿಟ್ಟ ಹಾಗೂ ಇತರೆ ನಿಧಿಗಳು, ₹4,573.38 ಕೋಟಿ ಠೇವಣಿ, ₹3,507.54 ಕೋಟಿ ಸಾಲ ಮತ್ತು ಮುಂಗಡಗಳು, ₹1,133.67 ಕೋಟಿ ಬ್ಯಾಂಕ್ ಠೇವಣಿ-ಗುಂತಾವಣೆಗಳು, ₹5,232.83 ಕೋಟಿ ದುಡಿಯುವ ಬಂಡವಾಳ, ₹45.35 ಕೋಟಿ ನಿವ್ವಳ ಲಾಭ ಹೊಂದಿದೆ' ಎಂದು ಮಾಹಿತಿ ನೀಡಿದರು.

ಬೀರೇಶ್ವರ ಕೋ ಆಪ್ ಕ್ರೆಡಿಟ್ ಸೊಸೈಟಿ ಅಧ್ಯಕ್ಷ ಅಪ್ಪಾಸಾಹೇಬ ಜೊಲ್ಲೆ, ಉಪಾಧ್ಯಕ್ಷ ಆನಂದ ಪಾಟೀಲ, ಸಹ ಸಂಸ್ಥಾಪಕಿ, ಶಾಸಕಿ ಶಶಿಕಲಾ ಜೊಲ್ಲೆ, ಶ್ರೀನಿವಾಸ ಕರಾಳೆ, ಯಾಸಿನ್ ತಾಂಬೋಳೆ, ಸದಾನಂದ ಹಳಿಂಗಳೆ, ಬಾಬಾಸಾಹೇಬ ಕದಂ, ಪ್ರಧಾನ ವ್ಯವಸ್ಥಾಪಕ ಬಹದ್ದೂರ ಗುರವ, ಎಂ.ಕೆ.ಮಂಗಾವತಿ, ಎಸ್.ಕೆ.ಮಾನೆ, ಆರ್.ಜಿ.ಕುಂಬಾರ, ಎಸ್.ಎಂ.ಡಬ್ಬ ಸುದ್ದಿಗೋಷ್ಠಿಯಲ್ಲಿ ಹಾಜರಿದ್ದರು.

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹335-649
ದ್ವಿತಳಿ (ಬಿ.ವಿ)	₹445-778

ಮೊಟ್ಟೆ ಧಾರಣೆ (ಎನ್‌ಇಸಿಸಿ)

	ಬೆಂಗಳೂರು	ಮೈಸೂರು:
100 ಕ್ಕೆ	₹580	₹585
12 ಕ್ಕೆ	₹80	

ಸುಧಾ, ಮಯೂರ ಓದಿ

ನಿವೃತ್ತಿ ಜೀವನ: ಯಾವುದು ಉತ್ತಮ?

ಬಂಡವಾಳ ಮಾರುಕಟ್ಟೆ

ಕಾವ್ಯ ಡಿ.
ಚಾರ್ಟರ್ಡ್ ಅಕೌಂಟೆಂಟ್

ನಿವೃತ್ತಿ ನಂತರದ ಜೀವನಕ್ಕಾಗಿ ಯೋಜನೆ ರೂಪಿಸುವುದು ಹಣಕಾಸಿಗೆ ಸಂಬಂಧಿಸಿದ ತೀರ್ಮಾನಗಳಲ್ಲಿ ಪ್ರಮುಖವಾದದ್ದು. ನೆಮ್ಮದಿಯ ಇಳಿಗಾಲಕ್ಕಾಗಿ ಹೂಡಿಕೆ ಮಾಡಲು ಹತ್ತಾರು ಆಯ್ಕೆಗಳಿದ್ದರೂ ನೌಕರರ ಭವಿಷ್ಯ ನಿಧಿ (ಇಪಿಎಫ್) ಮತ್ತು ರಾಷ್ಟ್ರೀಯ ಪಿಂಚಣಿ ಯೋಜನೆ (ಎನ್‌ಪಿಎಸ್) ಅತ್ಯಂತ ಜನಪ್ರಿಯ ಆಯ್ಕೆಗಳಾಗಿವೆ. ಆದರೆ ಇಪಿಎಫ್ ಮತ್ತು ಎನ್‌ಪಿಎಸ್ ಪೈಕಿ ಯಾವ ಹೂಡಿಕೆಯು ದೀರ್ಘಾವಧಿಯಲ್ಲಿ ಹೆಚ್ಚು ಸ್ಥಿರತೆಯ ಜೊತೆಗೆ ಲಾಭ ತಂದು ಕೊಡುತ್ತದೆ? ಯಾವುದರಲ್ಲಿ ತಾತ್ಕಾಲಿಕ ಏರಿಳಿತವಿದ್ದರೂ ಗಳಿಕೆಯ ಸಾಧ್ಯತೆ ಹೆಚ್ಚಿದೆ? ಇಪಿಎಫ್ ಮತ್ತು ಎನ್‌ಪಿಎಸ್ ನಡುವೆ ನಿವೃತ್ತಿ ಜೀವನಕ್ಕೆ ಸರಿಹೊಂದುವ ಹೂಡಿಕೆ ಆಯ್ಕೆ ಯಾವುದು?

ಇಪಿಎಫ್–ಎನ್‌ಪಿಎಸ್ ನಡುವಿನ ವ್ಯತ್ಯಾಸವೇನು?

ಇಪಿಎಫ್ ಅಂದರೆ ಏನು?: ಇದು ಭಾರತದಲ್ಲಿ ಸಂಬಳ ಪಡೆಯುವ ಉದ್ಯೋಗಿಗಳಿಗಾಗಿ ಸರ್ಕಾರದ ಅಡಿಯಲ್ಲಿ ಕಾರ್ಯನಿರ್ವಹಿಸುವ ನಿವೃತ್ತಿ ಉಳಿತಾಯ ಯೋಜನೆ. ಉದ್ಯೋಗಿ ಮತ್ತು ಉದ್ಯೋಗದಾತರಿಬ್ಬರೂ ಇದಕ್ಕೆ ಪ್ರತಿ ತಿಂಗಳು ನಿಗದಿತ ಪ್ರಮಾಣದಲ್ಲಿ ಕೊಡುಗೆ ನೀಡುತ್ತಾರೆ. ಉದ್ಯೋಗಿಗಳು ನಿವೃತ್ತಿಯಾದಾಗ ಈ ನಿಧಿಯ ಮೂಲಕ ದೊಡ್ಡ ಮೊತ್ತವನ್ನು ಪಡೆದು ಆರ್ಥಿಕ ಭದ್ರತೆ ಪಡೆಯುತ್ತಾರೆ. ಇಪಿಎಫ್‌ನ ಬಡ್ಡಿ ದರವನ್ನು ಪ್ರತಿ ವರ್ಷ ಕೇಂದ್ರ ಅನುಮೋದಿಸುತ್ತದೆ. ಇಪಿಎಫ್‌ನ ಬಡ್ಡಿ ಶೇ 8ರಿಂದ ಶೇ 8.5ರ ಆಸುಪಾಸಿನಲ್ಲಿರುತ್ತದೆ. ಈ ಯೋಜನೆಯು ಉದ್ಯೋಗಿಗಳಿಗಾಗಿ ಉಳಿತಾಯ, ಪಿಂಚಣಿ ಹಾಗೂ ವಿಮೆ ಸೌಲಭ್ಯ ಒದಗಿಸುತ್ತದೆ.

ಎನ್‌ಪಿಎಸ್ ಅಂದರೆ ಏನು?: ಇದು 2004ರಲ್ಲಿ ಪ್ರಾರಂಭವಾದ ಕೇಂದ್ರ ಸರ್ಕಾರದ ದೀರ್ಘಾವಧಿ ನಿವೃತ್ತಿ ಉಳಿತಾಯ ಯೋಜನೆ. ಈ ಯೋಜನೆಯು ವ್ಯಕ್ತಿಗಳಿಗೆ ನಿವೃತ್ತಿ ನಂತರದ ಆರ್ಥಿಕ ಭದ್ರತೆ ಒದಗಿಸಲು ರೂಪುಗೊಂಡಿದೆ. ಎನ್‌ಪಿಎಸ್‌ನಲ್ಲಿ ಹೂಡಿಕೆದಾರರು ತಮ್ಮ ಹಣವನ್ನು ವಿವಿಧ ಬಡ್ಡಿ ಸ್ತರಗಳಲ್ಲಿ ತೊಡಗಿಸಬಹುದು. ಇವುಗಳಲ್ಲಿ ಈಕ್ವಿಟಿ, ಕಾರ್ಪೊರೇಟ್ ಬಾಂಡ್ ಮತ್ತು ಸರ್ಕಾರಿ ಸಾಲಪತ್ರದಂತಹ ಹೂಡಿಕೆಗಳಿವೆ. ಎನ್‌ಪಿಎಸ್‌ನಲ್ಲಿ ಶೇ 75ರಷ್ಟು ಹೂಡಿಕೆ ಮೊತ್ತವನ್ನು ಷೇರು ಮಾರುಕಟ್ಟೆಗೆ ಮೀಸಲಿಡಲು ಅವಕಾಶವಿದೆ. ಹೂಡಿಕೆಯ ಒಂದಷ್ಟು ಭಾಗ ಷೇರು ಮಾರುಕಟ್ಟೆ ಆಧಾರಿತವಾಗುವ ಕಾರಣ ಎನ್‌ಪಿಎಸ್‌ನಲ್ಲಿ ಒಟ್ಟು ಗಳಿಕೆಯಲ್ಲಿ ವ್ಯತ್ಯಾಸವಾಗುತ್ತದೆ. ಹೆಚ್ಚು ರಿಸ್ಕ್ ತೆಗೆದುಕೊಂಡರೆ ಹೆಚ್ಚು ಗಳಿಕೆ ಸಾಧ್ಯ ಎನ್ನುವುದು ಇಲ್ಲಿನ ಲೆಕ್ಕಾಚಾರ.

ಹೂಡಿಕೆ ರಿಸ್ಕ್ ಮತ್ತು ಗಳಿಕೆ: ಇಪಿಎಫ್‌ನಲ್ಲಿ ಹೂಡಿಕೆ ರಿಸ್ಕ್ ಇಲ್ಲವೇ ಇಲ್ಲ ಎನ್ನಬಹುದು. ಇಪಿಎಫ್‌ನಲ್ಲಿ ಶೇ 8.1ರಿಂದ ಶೇ 8.5ರವರೆಗೆ ಗಳಿಕೆ ನಿರೀಕ್ಷಿಸಬಹುದು. ಎನ್‌ಪಿಎಸ್‌ನಲ್ಲಿ ಹೂಡಿಕೆಯ ಒಂದಷ್ಟು ಭಾಗ ಷೇರು ಮಾರುಕಟ್ಟೆ ಆಧಾರಿತವಾಗಿರುವ ಕಾರಣ ಒಂದಷ್ಟು ಸ್ಕೀಂಗಳ 5 ವರ್ಷಗಳ ಸರಾಸರಿ ನೋಡಿದಾಗ ಶೇ 19.5ರ ವರೆಗೂ ಗಳಿಕೆ ಬಂದಿರುವ ಉದಾಹರಣೆಗಳಿವೆ. ಆದರೆ ಎನ್‌ಪಿಎಸ್ ಗಳಿಕೆ ತಾತ್ಕಾಲಿಕ ಮಾರುಕಟ್ಟೆ ಏರಿಳಿತಗಳಿಗೆ ಒಳಪಟ್ಟಿದೆ ಎನ್ನುವುದನ್ನು ಗಮನಿಸಬೇಕು. ಒಟ್ಟಿನಲ್ಲಿ ಇಪಿಎಫ್‌ನಲ್ಲಿ ರಿಸ್ಕ್ ಕಡಿಮೆ, ಗಳಿಕೆಯ ಸಾಧ್ಯತೆಯೂ ಕಡಿಮೆ. ಆದರೆ ಎನ್‌ಪಿಎಸ್‌ನಲ್ಲಿ ರಿಸ್ಕ್ ಜಾಸ್ತಿ ಮತ್ತು ಗಳಿಕೆಯ ಸಾಧ್ಯತೆ ಹೆಚ್ಚು.

ಇಪಿಎಫ್ ಮತ್ತು ಎನ್‌ಪಿಎಸ್ ಹೂಡಿಕೆ ವಿಂಗಡಣೆ: ಇಪಿಎಫ್‌ನಲ್ಲಿ ಹೂಡಿಕೆ ಮೊತ್ತವು ಉಳಿತಾಯ, ಪಿಂಚಣಿ ಮತ್ತು ಜೀವ ವಿಮೆಯ ನಡುವೆ ವಿಂಗಡಣೆಯಾಗುತ್ತದೆ. ಆದರೆ ಎನ್‌ಪಿಎಸ್‌ನಲ್ಲಿ ಟಿಯರ್–1 ಖಾತೆಯಲ್ಲಿ ಸುರಕ್ಷಿತ ಹೂಡಿಕೆಗಳಿಗೆ ಎಷ್ಟು ಮೊತ್ತ ಹೋಗಬೇಕು, ಷೇರು ಮಾರುಕಟ್ಟೆ ಆಧಾರಿತ ಹೂಡಿಕೆಗಳಿಗೆ ಎಷ್ಟು ಮೊತ್ತ ನಿಗದಿಮಾಡಬೇಕು ಎನ್ನುವ ತೀರ್ಮಾನವನ್ನು ನೀವು ತೆಗೆದುಕೊಳ್ಳಲು ಅವಕಾಶವಿರುತ್ತದೆ. ಎನ್‌ಪಿಎಸ್ ಟಿಯರ್–2 ಖಾತೆಯಲ್ಲಿ ಹೂಡಿಕೆ ಮಾಡುವುದು ಕಡ್ಡಾಯವಲ್ಲ.

ಪಿಂಚಣಿ ಅನುಕೂಲ: ಇಪಿಎಫ್‌ನಲ್ಲಿ ಕನಿಷ್ಠ ₹1 ಸಾವಿರ ಮತ್ತು ಗರಿಷ್ಠ ₹7,500ವರೆಗೆ ಪಿಂಚಣಿ ಸಿಗುತ್ತದೆ. ಇದಕ್ಕೆ ಕನಿಷ್ಠ 10 ವರ್ಷಗಳ ಸೇವಾವಧಿಯಲ್ಲಿ ಇಪಿಎಫ್ ಹೂಡಿಕೆಯಾಗಿರಬೇಕು. ಎನ್‌ಪಿಎಸ್‌ನಲ್ಲಿ ಪಿಂಚಣಿ ಪಡೆಯಲು ಮಿತಿಗಳಿಲ್ಲ. ಆದರೆ ನಿವೃತ್ತಿ ಸಮಯದಲ್ಲಿ, ನಿಮ್ಮ ಮೊತ್ತದ ಶೇ 40ರಷ್ಟನ್ನು ಆ್ಯನ್ಯೂಟಿ ಖರೀದಿಗೆ ಬಳಸಬೇಕಾಗುತ್ತದೆ. ಆ್ಯನ್ಯೂಟಿ ಮೊತ್ತಕ್ಕೆ ಬರುವ ಬಡ್ಡಿಯಿಂದ ನಿಮಗೆ ನಿವೃತ್ತಿ ನಂತರ ನಿಯಮಿತವಾಗಿ ಪಿಂಚಣಿ ಸಿಗುತ್ತದೆ. ನೀವು ಎಷ್ಟು ಹೂಡಿಕೆ ಮಾಡಿದ್ದೀರಿ ಎನ್ನುವುದರ ಆಧಾರದ ಮೇಲೆ ನಿಮ್ಮ ಆ್ಯನ್ಯೂಟಿ ಮೊತ್ತ ಮತ್ತು ಪಿಂಚಣಿ ನಿರ್ಧಾರವಾಗುತ್ತದೆ.

ತೆರಿಗೆ ಅನುಕೂಲ: ಇಪಿಎಫ್‌ನಲ್ಲಿ ಹೂಡಿಕೆ ಮಾಡಿದಾಗ ಹಳೆಯ ತೆರಿಗೆ ಪದ್ಧತಿ ಅಡಿಯಲ್ಲಿ ಸೆಕ್ಷನ್ 80 ಸಿ ವಿನಾಯಿತಿ ಸಿಗುತ್ತದೆ. ಅಲ್ಲದೆ, ಹೂಡಿಕೆ ಮೇಲೆ ಸಿಗುವ ಬಡ್ಡಿ ಮೊತ್ತಕ್ಕೆ ತೆರಿಗೆ ವಿನಾಯಿತಿ ಕೂಡ ಲಭ್ಯ. ಎನ್‌ಪಿಎಸ್‌ನಲ್ಲಿ ಹೂಡಿಕೆ ಮಾಡಿದಾಗ ಹಳೆಯ ತೆರಿಗೆ ಪದ್ಧತಿಯಲ್ಲಿ ಸೆಕ್ಷನ್ 80 ಸಿ ವಿನಾಯಿತಿ ಸಿಗುವ ಜೊತೆಗೆ ಹೆಚ್ಚುವರಿಯಾಗಿ ₹50 ಸಾವಿರ ಮೊತ್ತಕ್ಕೆ ಸೆಕ್ಷನ್ 80ಸಿಸಿಡಿ (1 ಬಿ) ಅಡಿಯಲ್ಲಿ ವಿನಾಯಿತಿ ಲಭ್ಯ.

ನಗದೀಕರಣ: ಇಪಿಎಫ್‌ನಲ್ಲಿ ಅನಾರೋಗ್ಯ, ಮನೆ ನಿರ್ಮಾಣ ಸೇರಿದಂತೆ ನಿರ್ದಿಷ್ಟ ಕಾರಣ ನೀಡಿ ಹೂಡಿಕೆಯ ಭಾಗಶಃ ಹಣ ವಾಪಸ್ ಪಡೆಯಲು ಅವಕಾಶವಿದೆ. ವೃತ್ತಿ ನಂತರ ಅಥವಾ ಉದ್ಯೋಗ ನಷ್ಟದಂತಹ ಸಂದರ್ಭಗಳಲ್ಲಿ ಪೂರ್ತಿ ಹಣ ಹಿಂಪಡೆಯಬಹುದು. ಆದರೆ ಎನ್‌ಪಿಎಸ್‌ನಲ್ಲಿ ನಗದೀಕರಣಕ್ಕೆ ಹಲವು ನಿರ್ಬಂಧಗಳಿವೆ. ಎನ್‌ಪಿಎಸ್ ಮೆಚ್ಯೂರಿಟಿ ವೇಳೆ ಕಡ್ಡಾಯವಾಗಿ ಆ್ಯನ್ಯೂಟಿ ಖರೀದಿಸಬೇಕು. ಭಾಗಶಃ ನಗದೀಕರಣಕ್ಕೂ ಎನ್‌ಪಿಎಸ್‌ನಲ್ಲಿ ಹಲವು ಮಿತಿಗಳನ್ನು ಹೇರಲಾಗಿದೆ. ಎನ್‌ಪಿಎಸ್‌ಗೆ ಹೋಲಿಸಿದರೆ ಇಪಿಎಫ್‌ನಲ್ಲಿ ನಗದೀಕರಣ ಸುಲಭ.

ಯಾರಿಗೆ ಯಾವುದು ಸೂಕ್ತ?

ಹೆಚ್ಚು ರಿಸ್ಕ್ ಬೇಡ, ಹೆಚ್ಚು ಲಾಭ ಬರದಿದ್ದರೂ ಪರವಾಗಿಲ್ಲ ಗಳಿಕೆಯಲ್ಲಿ ಸ್ಥಿರತೆ ಇರಬೇಕು ಎನ್ನುವವರಿಗೆ ಇಪಿಎಫ್ ಸೂಕ್ತ. ಹೆಚ್ಚು ರಿಸ್ಕ್ ತೆಗೆದುಕೊಳ್ಳಲು ಸಿದ್ಧ ಆದರೆ ಹೂಡಿಕೆ ವೈವಿಧ್ಯತೆ ಜೊತೆ ಷೇರು ಮಾರುಕಟ್ಟೆ ಆಧಾರಿತ ಲಾಭ ಬೇಕು ಎನ್ನುವವರಿಗೆ ಎನ್‌ಪಿಎಸ್ ಉತ್ತಮ ಆಯ್ಕೆ. ವಿಶೇಷ ಅಂದರೆ ಹಲವು ಹೂಡಿಕೆದಾರರು ಈ ಎರಡೂ ಹೂಡಿಕೆಗಳನ್ನು ತಮ್ಮ ನಿವೃತ್ತಿ ಜೀವನಕ್ಕಾಗಿ ದೊಡ್ಡ ಮೊತ್ತ ಪೇರಿಸಲು ಬಳಸಿಕೊಳ್ಳುತ್ತಾರೆ.

ಭಾರತ್‌ಜೆನ್ ಎ.ಐ ಮಾದರಿಗೆ ಹಣಕಾಸಿನ ನೆರವು: ವೈಷ್ಣವ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಸರ್ಕಾರದ ಬೆಂಬಲವಿರುವ ಕೃತಕ ಬುದ್ಧಿಮತ್ತೆಯ (ಎ.ಐ) ಪ್ರಮುಖ ಯೋಜನೆ 'ಭಾರತ್‌ಜೆನ್'ಗೆ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯವು ₹988.6 ಕೋಟಿ ಧನಸಹಾಯವನ್ನು ನೀಡಿದೆ ಎಂದು ಕೇಂದ್ರ ಮಾಹಿತಿ ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್ ಅವರು ಹೇಳಿದ್ದಾರೆ.



ಅಶ್ವಿನಿ ವೈಷ್ಣವ್

₹1,500 ಕೋಟಿ ಮೊತ್ತದ 'ಇಂಡಿಯಾ ಎ.ಐ ಮಿಷನ್ 2025' ಅಡಿಯಲ್ಲಿ ಭಾರತದ ಸರ್ಕಾರಿ ಎ.ಐ ಪರಿಸರ ವ್ಯವಸ್ಥೆಯನ್ನು ನಿರ್ಮಿಸುವಲ್ಲಿ ಭಾರತ್‌ಜೆನ್‌ನ ವಹಿಸಬಹುದಾದ ಪಾತ್ರವನ್ನು ಈ ಧನಸಹಾಯವು ತೋರಿಸುತ್ತದೆ.

ಶಕ್ತಿಯುತ ಎ.ಐ ಮಾದರಿಗಳನ್ನು ರಚಿಸಲು ಭಾರತ್‌ಜೆನ್‌ಗೆ ಈ ಧನಸಹಾಯವು ನೆರವು ನೀಡುತ್ತದೆ. ಇದು ಧ್ವನಿಯನ್ನು ಅಕ್ಷರಗಳಿಗೆ ಪರಿವರ್ತಿಸುವ, ಅಕ್ಷರಗಳನ್ನು ಓದಿಹೇಳುವ ತಂತ್ರಜ್ಞಾನಗಳ ಅಭಿವೃದ್ಧಿಯನ್ನು ಉತ್ತೇಜಿಸುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ಆನಂದ ಸಂಕೇಶ್ವರಗೆ 'ಸೌತ್ ಇಂಡಿಯಾ ಬ್ಯುಸಿನೆಸ್' ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಆರ್‌ಎಲ್ ಸಮೂಹ ಸಂಸ್ಥೆಗಳ ವ್ಯವಸ್ಥಾಪಕ ನಿರ್ದೇಶಕ ಆನಂದ ಸಂಕೇಶ್ವರ ಅವರಿಗೆ 'ಸೌತ್ ಇಂಡಿಯಾ ಬ್ಯುಸಿನೆಸ್ ಪ್ರಶಸ್ತಿ' (ಎಸ್‌ಐಬಿಎ) ಸಂದಿದೆ.

ದುಬೈನಲ್ಲಿ ಈಚೆಗೆ ನಡೆದ ಕಾರ್ಯಕ್ರಮದಲ್ಲಿ ಭಾರತದಲ್ಲಿ ಯುಎಇ ರಾಯಭಾರಿ ಆಗಿದ್ದ ಅಹ್ಮದ್ ಅಬ್ದುಲ್ ರೆಹಮಾನ್ ಅಲ್ಬನ್ನಾ ಅವರು ಆನಂದ ಸಂಕೇಶ್ವರ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿದರು. ಉದ್ಯಮ, ಸಂಸ್ಕೃತಿ ಮತ್ತು ವಾಣಿಜ್ಯ ವಲಯದಲ್ಲಿ ಜಾಗತಿಕವಾಗಿ ಪ್ರಭಾವ ಬೀರಿರುವವರನ್ನು ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗುತ್ತದೆ.

ವಿಆರ್‌ಎಲ್ ಸಂಸ್ಥೆಯನ್ನು ದೇಶದ ದೊಡ್ಡ ಸಾರಿಗೆ ಕಂಪನಿಯಾಗಿ, ಕಾರ್ಯಾಚರಣೆ ದಕ್ಷತೆಯಲ್ಲಿ ವಿಶ್ವಾಸಾರ್ಹತೆಯನ್ನು ಉಳಿಸಿಕೊಂಡು ಬೆಳೆಸುವಲ್ಲಿ ಆನಂದ ಸಂಕೇಶ್ವರ ಕೊಡುಗೆ ನೀಡಿದ್ದಾರೆ ಎಂದು ಕಾರ್ಯಕ್ರಮದ ಸಂಘಟಕರು ಹೇಳಿರುವುದಾಗಿ ಪ್ರಕಟಣೆ ತಿಳಿಸಿದೆ.

ದುಬೈನಲ್ಲಿ ನಡೆದ ಕಾರ್ಯಕ್ರಮದಲ್ಲಿ ಭಾರತದಲ್ಲಿ ಯುಎಇ ರಾಯಭಾರಿ ಆಗಿದ್ದ ಅಹ್ಮದ್ ಅಬ್ದುಲ್ ರೆಹಮಾನ್ ಅಲ್ಬನ್ನಾ ಅವರು 'ಸೌತ್ ಇಂಡಿಯಾ ಬ್ಯುಸಿನೆಸ್ ಪ್ರಶಸ್ತಿ'ಯನ್ನು ಆನಂದ ಸಂಕೇಶ್ವರ ಅವರಿಗೆ ಪ್ರದಾನ ಮಾಡಿದರು

ಪ್ಯಾಲೆಸ್ಟೀನ್‌ಗೆ ದೇಶದ ಮಾನ್ಯತೆ ನೀಡಲು ಸಿದ್ಧತೆ

ಲಂಡನ್ (ಎಪಿ): ಅಮೆರಿಕದ ತೀವ್ರ ವಿರೋಧದ ಮಧ್ಯೆಯೂ ಬ್ರಿಟನ್ ಸರ್ಕಾರವು ಪ್ಯಾಲೆಸ್ಟೀನ್‌ಗೆ ದೇಶದ ಮಾನ್ಯತೆ ನೀಡಲು ಮುಂದಾಗಿದೆ. ಗಾಜಾದಲ್ಲಿ ನಡೆಸುತ್ತಿರುವ ಯುದ್ಧ ಸಂಬಂಧ ಇಸ್ರೇಲ್‌ಗೆ ಬ್ರಿಟನ್ ಸರ್ಕಾರವು ಕೆಲವು ನಿಬಂಧನೆಗಳನ್ನು ಹಾಕಿತ್ತು. ಇದನ್ನು ಪಾಲಿಸಿಲ್ಲ ಎನ್ನುವ ಕಾರಣಕ್ಕೆ ಈ ನಿರ್ಧಾರಕ್ಕೆ ಬ್ರಿಟನ್ ಮುಂದಾಗಿದೆ.

ಸೋಮವಾರದಿಂದ (ಸೆ. 22) ವಿಶ್ವಸಂಸ್ಥೆಯ 80ನೇ ಸಾಮಾನ್ಯ ಸಭೆ ಆರಂಭವಾಗಲಿದೆ. ಗಾಜಾದಲ್ಲಿ ನಡೆಯುತ್ತಿರುವ ಯುದ್ಧ, ಪ್ಯಾಲೆಸ್ಟೀನ್‌ಗೆ ದೇಶದ ಮಾನ್ಯತೆ ನೀಡುವ ಕುರಿತು ಸಭೆಯಲ್ಲಿ ಪ್ರಮುಖವಾಗಿ ಚರ್ಚೆ ನಡೆಯಲಿದೆ.

ಸೋಮವಾರಕ್ಕೂ ಮುನ್ನ ಬ್ರಿಟನ್, ಫ್ರಾನ್ಸ್, ಕೆನಡಾ, ಆಸ್ಟ್ರೇಲಿಯಾ, ಪೋರ್ಚುಗಲ್ ಸೇರಿದಂತೆ ಸುಮಾರು 140 ದೇಶಗಳು ಪ್ಯಾಲೆಸ್ಟೀನ್ ಅನ್ನು ಪ್ರತ್ಯೇಕ ದೇಶವನ್ನಾಗಿ ಪರಿಗಣಿಸಲು ಮುಂದಾಗಿವೆ.

'ಇದೊಂದು ಸಾಂಕೇತಿಕವಾದ ನಡೆಯಾಗಲಿದೆಯಾದರೂ ಯುದ್ಧ ನಿಲ್ಲಿಸಲು ಇಸ್ರೇಲ್ ಮೇಲೆ ಈ ನಿರ್ಧಾರವು ರಾಜತಾಂತ್ರಿಕ ಒತ್ತಡವನ್ನು ಮತ್ತಷ್ಟು ಹೆಚ್ಚಿಸಬಹುದು, ಇದರಿಂದ ಗಾಜಾದಲ್ಲಿ ಶಾಂತಿ ನೆಲಸಬಹುದು' ಎಂದು ಬ್ರಿಟನ್ ಆಶಿಸಿದೆ. ಫ್ರಾನ್ಸ್ ಕೂಡ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದೆ. ಈ ನಿರ್ಧಾರವನ್ನು ಇಸ್ರೇಲ್‌ನಲ್ಲಿರುವ ಶಾಂತಿಪರ ಹೋರಾಟಗಾರರು ಸ್ವಾಗತಿಸಿದ್ದಾರೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–560 002
ದೂರವಾಣಿ: 080–22213530/22241325 ಫ್ಯಾಕ್ಸ್: 080–22214379
ಇ–ಮೇಲ್: kanbhavblr@gmail.com ವೆಬ್‌ಸೈಟ್: www.kannadasiri.in

ಟೆಂಡರ್ ಸಂ: DKC-2024-25/SE0033/CALL-5 ದಿನಾಂಕ: 19.09.2025

ಟೆಂಡರ್ ಆಹ್ವಾನಿಸುವ ಸೂಚನೆ

ಕರ್ನಾಟಕ ಸರ್ಕಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಅನುಷ್ಠಾನಗೊಳಿಸುತ್ತಿರುವ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮ/ಯೋಜನೆಗಳನ್ನು ಸಾಹಿತಿ/ಕಲಾವಿದರಿಗೆ ತಲುಪಿಸುವ ಮಹತ್ವಪೂರ್ಣ ಕಲಾವಿದರ ದತ್ತಾಂಶ ಯೋಜನೆಯಡಿ 2025–26ನೇ ಸಾಲಿನಲ್ಲಿ ಅಂದಾಜು 30000 ಕಲಾವಿದರಿಗೆ ಗುರುತಿನ ಚೀಟಿ ವಿತರಿಸಲಾಗುತ್ತದೆ. ಈ ಸಂಬಂಧ ಉತ್ತಮ ಗುಣಮಟ್ಟದ ಗ್ರಾಫಿಕ್ PVC ಗುರುತಿನ ಚೀಟಿಗಳನ್ನು ಮುದ್ರಣ ಮತ್ತು ಸರಬರಾಜು ಮಾಡಲು ಇ–ಟೆಂಡರ್–5 ಪ್ರಕಟಣೆ ಹೊರಡಿಸಲಾಗಿದೆ.

1) ಟೆಂಡರ್ ಮೊತ್ತ : ರೂ. 30.00 ಲಕ್ಷ. 2) ಬಿಡ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ವೆಬ್‌ಸೈಟ್ / ದಿನಾಂಕ : http://kppp.karnataka.gov.in ದಿನಾಂಕ: 22.09.2025. 3) ಇ.ಎಂ.ಡಿ ಮೊತ್ತ : ರೂ. 60,000/–. 4) ಟೆಂಡರ್ ಡಾಕ್ಯುಮೆಂಟ್ ಅಂತರ್ಜಾಲದಲ್ಲಿ ಅಪ್‌ಲೋಡ್ ಮಾಡುವ ಅಂತಿಮ ದಿನಾಂಕ ಮತ್ತು ಸಮಯ: ದಿನಾಂಕ: 08.10.2025ರ ಸಂಜೆ : 4.00ಕ್ಕೆ. 5) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: ದಿನಾಂಕ: 10.10.2025ರ ಸಂಜೆ: 4.00ಕ್ಕೆ. 6) ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ : ದಿನಾಂಕ: 16.10.2025ರ ಬೆಳಗ್ಗೆ: 11.30ಕ್ಕೆ. 7) ಯಾವುದೇ ವಿಚಾರಣೆ ಸ್ಪಷ್ಟೀಕರಣಕ್ಕಾಗಿ ಸಂಪರ್ಕಿಸಬಹುದಾದ ಅಧಿಕಾರಿ ವಿಳಾಸ ಹಾಗೂ ದೂರವಾಣಿ ಸಂಖ್ಯೆ: ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು–560002. ದೂ: 080–22213530.

ಸಹಿ/– ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು
ವಾ.ಸಾ.ಸಂ.ಇ/ವಾಪ್ರ/2901/ಆಕಾರ್/2025–26

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ
ಅಲ್ಪಸಂಖ್ಯಾತರ ನಿರ್ದೇಶನಾಲಯ,
ನಂ.16ಸಿ, ಮೌಲಾನಾ ಅಬುಲ್ ಕಲಾಂ ಅಜಾದ್ ಭವನ,
ಮಿಲ್ಲರ್ ಟ್ಯಾಂಕ್ ಬಂಡ್ ರಸ್ತೆ, ವಸಂತನಗರ, ಬೆಂಗಳೂರು–560052.
Website: https://dom.karnataka.gov.in
ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಸಿಖ್, ಪಾರ್ಸಿ

2025–26ನೇ ಸಾಲಿಗೆ Police Constable ನೇಮಕಾತಿ ಪರೀಕ್ಷಾ ಪೂರ್ವ ತರಬೇತಿ ಪಡೆಯಲು ಅಲ್ಪಸಂಖ್ಯಾತರ ಸಮುದಾಯದ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನ ಪ್ರಕಟಣೆ

ಅರ್ಜಿ ಸಲ್ಲಿಕೆ
2025–26ನೇ ಸಾಲಿಗೆ ವಸತಿಯುತ 60 ದಿನಗಳ Police Constable ನೇಮಕಾತಿ ಪರೀಕ್ಷಾ ಪೂರ್ವ ತರಬೇತಿಯನ್ನು ನೀಡಲು ಅರ್ಹ ಅಲ್ಪಸಂಖ್ಯಾತರ ಸಮುದಾಯದ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಸಮಯಾವಕಾಶ
ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 22.09.2025.
ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 03.10.2025.

ಅರ್ಹತೆ
- ವಿದ್ಯಾರ್ಥಿಯು ಕರ್ನಾಟಕ ರಾಜ್ಯದ ನಿವಾಸಿಯಾಗಿರಬೇಕು.
- ಅಲ್ಪಸಂಖ್ಯಾತರ ಸಮುದಾಯಕ್ಕೆ ಸೇರಿದವರಾಗಿರಬೇಕು (ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಸಿಖ್ ಮತ್ತು ಪಾರ್ಸಿ).
- ವಿದ್ಯಾರ್ಥಿಯ ಕುಟುಂಬದ ವಾರ್ಷಿಕ ಆದಾಯ ರೂ.08 ಲಕ್ಷಕ್ಕಿಂತ ಮೀರಿರಬಾರದು.
- ವಿದ್ಯಾರ್ಥಿಯು ದ್ವಿತೀಯ ಪಿ.ಯು.ಸಿ/ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.
- **ವಿದ್ಯಾರ್ಥಿಯ ವಯೋಮಿತಿ:** ಕನಿಷ್ಠ 18 ಹಾಗೂ ಗರಿಷ್ಠ 27 ವರ್ಷಗಳ ವಯೋಮಿತಿಯನ್ನು ನಿಗಧಿಪಡಿಸಲಾಗಿದೆ (ಅರ್ಜಿ ಸಲ್ಲಿಸುವ ಅಂತಿಮ ದಿನಾಂಕದೊಳಗೆ).
- ಕೇಂದ್ರ ಮತ್ತು ರಾಜ್ಯ ಸರ್ಕಾರದ ನೌಕರಿಯಲ್ಲಿರುವ ಅಭ್ಯರ್ಥಿಗಳು ಅರ್ಹರಿರುವುದಿಲ್ಲ.

ಅರ್ಜಿದಾರರಿಗೆ ಸೂಚನೆಗಳು
- ಅರ್ಜಿದಾರರು ಅಲ್ಪಸಂಖ್ಯಾತರ ನಿರ್ದೇಶನಾಲಯದ ಜಾಲತಾಣ https://dom.karnataka.gov.in ಇಲ್ಲಿ ಲಭ್ಯವಿರುವ ಅರ್ಜಿ ನಮೂನೆಯನ್ನು ಪಡೆದು ಮಾರ್ಗಸೂಚಿಗಳನ್ವಯ ಅರ್ಜಿ ಸಲ್ಲಿಸಲು ಸೂಚಿಸಲಾಗಿದೆ.
- ಹೆಚ್ಚಿನ ಮಾಹಿತಿಗಾಗಿ ಸಂಬಂಧಪಟ್ಟ ಜಿಲ್ಲಾ ಕಛೇರಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಹಾಗೂ ಅಲ್ಪಸಂಖ್ಯಾತರ ಸಹಾಯವಾಣಿ ಸಂಖ್ಯೆ: 8277799990 ಇವರನ್ನು ಸಂಪರ್ಕಿಸಬಹುದು.

ದಿನಾಂಕ : 22.09.2025
ಸ್ಥಳ : ಬೆಂಗಳೂರು
ಸಹಿ/–
ನಿರ್ದೇಶಕರು
ಅಲ್ಪಸಂಖ್ಯಾತರ ನಿರ್ದೇಶನಾಲಯ,
ಬೆಂಗಳೂರು
ವಾಸಾಸಂಇ/ವಾಪ್ರ/2923/25–26

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ
ಅಲ್ಪಸಂಖ್ಯಾತರ ನಿರ್ದೇಶನಾಲಯ,
ನಂ.16ಸಿ, ಮೌಲಾನಾ ಅಬುಲ್ ಕಲಾಂ ಅಜಾದ್ ಭವನ,
ಮಿಲ್ಲರ್ ಟ್ಯಾಂಕ್ ಬಂಡ್ ರಸ್ತೆ, ವಸಂತನಗರ, ಬೆಂಗಳೂರು–560052.
Website: https://dom.karnataka.gov.in
ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಸಿಖ್, ಪಾರ್ಸಿ

2025–26ನೇ ಸಾಲಿಗೆ ವೃತ್ತಿಪರ ಕೌಶಲ್ಯಾಭಿವೃದ್ಧಿ ತರಬೇತಿಯನ್ನು ಪಡೆಯಲು ಅರ್ಜಿ ಆಹ್ವಾನ ಪ್ರಕಟಣೆ

ಅರ್ಜಿ ಸಲ್ಲಿಕೆ
2025–26ನೇ ಸಾಲಿಗೆ ವೃತ್ತಿಪರ ಕೌಶಲ್ಯಾಭಿವೃದ್ಧಿ ತರಬೇತಿಯನ್ನು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ(VTU) ಸಹಯೋಗದೊಂದಿಗೆ ನೀಡಲಾಗುತ್ತಿದ್ದು, ಸದರಿ ತರಬೇತಿಗೆ ಅರ್ಹ ಅಲ್ಪಸಂಖ್ಯಾತರ ಸಮುದಾಯದ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಸಮಯಾವಕಾಶ
ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 22.09.2025.
ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 03.10.2025.

ಅರ್ಹತೆ
- ವಿದ್ಯಾರ್ಥಿಯು ಕರ್ನಾಟಕ ರಾಜ್ಯದ ನಿವಾಸಿಯಾಗಿರಬೇಕು.
- ಅಲ್ಪಸಂಖ್ಯಾತರ ಸಮುದಾಯಕ್ಕೆ ಸೇರಿದವರಾಗಿರಬೇಕು (ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಸಿಖ್ ಮತ್ತು ಪಾರ್ಸಿ).
- **ವಿದ್ಯಾರ್ಥಿಯ ವಯೋಮಿತಿ:** ಕನಿಷ್ಠ 18 ಹಾಗೂ ಗರಿಷ್ಠ 35 ವರ್ಷಗಳ ವಯೋಮಿತಿಯನ್ನು ನಿಗಧಿಪಡಿಸಲಾಗಿದೆ (ಅರ್ಜಿ ಸಲ್ಲಿಸುವ ಅಂತಿಮ ದಿನಾಂಕದೊಳಗೆ).
- ಕೇಂದ್ರ ಮತ್ತು ರಾಜ್ಯ ಸರ್ಕಾರದ ನೌಕರಿಯಲ್ಲಿರುವ ಅಭ್ಯರ್ಥಿಗಳು ಅರ್ಹರಿರುವುದಿಲ್ಲ.

ಅರ್ಜಿದಾರರಿಗೆ ಸೂಚನೆಗಳು
- ಅರ್ಜಿದಾರರು ಅಲ್ಪಸಂಖ್ಯಾತರ ನಿರ್ದೇಶನಾಲಯದ ಜಾಲತಾಣ https://dom.karnataka.gov.in ಇಲ್ಲಿ ಲಭ್ಯವಿರುವ ಅರ್ಜಿ ನಮೂನೆಯನ್ನು ಪಡೆದು ಮಾರ್ಗಸೂಚಿಗಳನ್ವಯ ಅರ್ಜಿ ಸಲ್ಲಿಸಲು ಸೂಚಿಸಲಾಗಿದೆ.
- ಹೆಚ್ಚಿನ ಮಾಹಿತಿಗಾಗಿ ಸಂಬಂಧಪಟ್ಟ ಜಿಲ್ಲಾ ಕಛೇರಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಹಾಗೂ ಅಲ್ಪಸಂಖ್ಯಾತರ ಸಹಾಯವಾಣಿ ಸಂಖ್ಯೆ: 8277799990 ಇವರನ್ನು ಸಂಪರ್ಕಿಸಬಹುದು.

ದಿನಾಂಕ : 22.09.2025
ಸ್ಥಳ : ಬೆಂಗಳೂರು
ಸಹಿ/–
ನಿರ್ದೇಶಕರು
ಅಲ್ಪಸಂಖ್ಯಾತರ ನಿರ್ದೇಶನಾಲಯ,
ಬೆಂಗಳೂರು
ವಾಸಾಸಂಇ/ವಾಪ್ರ/2922/25–26

ಕರ್ನಾಟಕ ಸರಕಾರ
ಯಾದಗಿರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಯಾದಗಿರಿ
(Government of Karnataka, An Autonomous Institution)
Email Id: directoryimsyadgir@gmail.com ದೂ.: 9481623299

ಸಂಖ್ಯೆ: ಯಿಮ್ಸ್/ಟೆಂಡರ್/ಆಹಾರ/46/2025–26 ದಿ:20–09–2025

:: ಟೆಂಡರ್ ಪ್ರಕಟಣೆ ::

ಯಾದಗಿರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 2025–26ನೇ ಸಾಲೀನ ಯಾದಗಿರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಯಾದಗಿರಿ ಪಥ್ಯಹಾರ ಸರಬರಾಜು ಮಾಡುವ ಸಲುವಾಗಿ ದಿನಾಂಕ:17–09–2025 ರಿಂದ 16–10–2025 ವರೆಗೆ ಟೆಂಡರ್ ಕರೆಯಲಾಗಿದ್ದು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ https://kppp.karnataka.gov.inನಲ್ಲಿ ದ್ವಿ–ಲಕೋಟೆಯಲ್ಲಿ ಆಹ್ವಾನಿಸಿರುವ ಬಗ್ಗೆ.

1) ಸಂಸ್ಥೆ: ಡೀನ್&ನಿರ್ದೇಶಕರು, ಯಾದಗಿರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಯಾದಗಿರಿ 2) ವಿವರ: **DME/2025-26/SE0544,** ANNUAL TENDER FOR READY MADE FOOD SUPPLY TOYIMS, YADGIRI (Teaching Hospital & MCH), 3) ಟೆಂಡರ್‌ನ ಅಂದಾಜು ಮೊತ್ತ ರೂ. 1,50,00,000.00 4) ಇ.ಎಂ.ಡಿ.ಮೊತ್ತ : ರೂ. 2,00,000.00

ಟೆಂಡರ್ ಪ್ರಕ್ರಿಯೆ ವಿವರ : ಹೆಚ್ಚಿನ ವಿವರಗಳಿಗಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ https://kppp.karnataka.gov.in ನಲ್ಲಿ ಪಡೆಯಬಹುದು.

ಸಹಿ/– ಡೀನ್ ಮತ್ತು ನಿರ್ದೇಶಕರು
ಯಾದಗಿರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಯಾದಗಿರಿ
ವಾ.ಸಾ.ಸಂ.ಇ/ಯಾದಗಿರ/297/ಕೆ.ಎಸ್.ಎಂ.ಸಿ.&ಎ/2025–26

‘ವಿಕಾಸ ಮಿತ್ರ’ರಿಗೆ ₹25 ಸಾವಿರ

ಬಿಹಾರ: ಚುನಾವಣೆ ಸಮೀಪಿಸುತ್ತಿರುವಂತೆ ಮುಖ್ಯಮಂತ್ರಿ ನಿತೀಶ್ ಘೋಷಣೆ

ಪಟ್ನಾ (ಪಿಟಿಐ): ವಿಧಾನಸಭೆ ಚುನಾವಣೆ ಸಮೀಪಿಸುತ್ತಿರುವಂತೆಯೇ ಬಿಹಾರದ ಎನ್‌ಡಿಎ ಸರ್ಕಾರ ಹಲವು ಯೋಜನೆಗಳನ್ನು ಘೋಷಿಸಿದೆ. ಸುದೀರ್ಘ 20 ವರ್ಷ ಅಧಿಕಾರದಲ್ಲಿದ್ದರೂ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ‘ಇಂಡಿಯಾ’ ಮೈತ್ರಿಕೂಟದ ಭರವಸೆಗಳನ್ನೇ ನಕಲು ಮಾಡುತ್ತಿದ್ದಾರೆ ಎಂದು ವಿಪಕ್ಷಗಳು ಟೀಕಿಸಿವೆ.

> ನಿತೀಶ್ ಕುಮಾರ್ ದೂರದೃಷ್ಟಿ ಉಳ್ಳ ನಾಯಕರಾಗಿದ್ದು ಮಹಿಳೆಯರು, ಯುವಜನರು, ದುರ್ಬಲರು ಸೇರಿದಂತೆ ರಾಜ್ಯದ ಎಲ್ಲರ ಶ್ರೇಯೋಭಿವೃದ್ಧಿಗೆ ಅವಿರತವಾಗಿ ಶ್ರಮಿಸುತ್ತಿದ್ದಾರೆ
> **ರಾಜೀವ್ ರಂಜನ್ ಪ್ರಸಾದ್,** ಜೆಡಿಯು ವಕ್ತಾರ

ಗ್ರಾಮಗಳಲ್ಲಿ ಕೆಲಸ ಮಾಡುವ 10,000ಕ್ಕೂ ಹೆಚ್ಚು ‘ವಿಕಾಸ ಮಿತ್ರ’ರಿಗೆ ಟ್ಯಾಬ್‌ಗಳನ್ನು ಖರೀದಿಸಲು ತಲಾ ₹25 ಸಾವಿರ ನೆರವು ನೀಡಲಾಗುವುದು ಎಂದು ನಿತೀಶ್ ಕುಮಾರ್ ಅವರು ಭಾನುವಾರ ಘೋಷಿಸಿದರು.

ನಿತೀಶ್ ಕುಮಾರ್

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರಿಗೆ ಸರ್ಕಾರದ ಯೋಜನೆಗಳ ಬಗ್ಗೆ ಅರಿವು ಮೂಡಿಸಲು ಹಾಗೂ ಅವರನ್ನು ಫಲಾನುಭವಿಗಳನ್ನಾಗಿಸುವ ಕೆಲಸವನ್ನು ‘ವಿಕಾಸ ಮಿತ್ರ’ರು ಮಾಡುತ್ತಿದ್ದಾರೆ. ಟ್ಯಾಬ್ಲೆಟ್‌ಗಳನ್ನು ಖರೀದಿಸಿದರೆ ‘ವಿಕಾಸ ಮಿತ್ರ’ರಿಗೆ ತಮ್ಮ ಕೆಲಸವನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಮಾಡಲು ಸಾಧ್ಯ ಎಂದು ಅವರು ಹೇಳಿದರು.

‘ವಿಕಾಸ ಮಿತ್ರ’ರು ಪಡೆಯುತ್ತಿರುವ ಪ್ರಯಾಣ ಭತ್ಯೆಯನ್ನು ತಿಂಗಳಿಗೆ ₹1,900ರಿಂದ ₹2,500ಕ್ಕೆ ಮತ್ತು ಅವರ ಸ್ಟೇಷನರಿ ಭತ್ಯೆಯನ್ನು ₹900ರಿಂದ ₹1,500ಕ್ಕೆ ಹೆಚ್ಚಿಸಲಾಗುವುದು ಎಂದು ಪ್ರಕಟಿಸಿದರು.

‘ಶಿಕ್ಷಾ ಸೇವಕ್’ ಮತ್ತು ‘ತಾಲಿಮೀ ಮರ್ಕಜ್’ಗಳಾಗಿ ಕೆಲಸ ಮಾಡುತ್ತಿರುವ 30 ಸಾವಿರಕ್ಕೂ ಅಧಿಕ ಮಂದಿಗೆ ಸ್ಮಾರ್ಟ್‌ಫೋನ್ ಖರೀದಿಸಲು ₹10 ಸಾವಿರ ಹಣಕಾಸಿನ ನೆರವು ನೀಡಲು ಸರ್ಕಾರ ನಿರ್ಧರಿಸಿದೆ.

ಮಹಾದಲಿತ, ಅಲ್ಪಸಂಖ್ಯಾತ ಮತ್ತು ತೀರಾ ಹಿಂದುಳಿದ ಸಮುದಾಯಗಳ ಮಕ್ಕಳು ಶಾಲಾ ಶಿಕ್ಷಣ ಪಡೆಯುವುದನ್ನು ಖಾತರಿಪಡಿಸುವ ಕೆಲಸವನ್ನು ‘ಶಿಕ್ಷಾ ಸೇವಕ್’ ಮತ್ತು ‘ತಾಲಿಮೀ ಮರ್ಕಜ್’ಗಳು ಮಾಡುತ್ತಿದ್ದಾರೆ.

ಹಿರಿಯ ನಾಗರಿಕರು, ವಿಧವೆಯರು ಮತ್ತು ಅಂಗವಿಕಲರ ಪಿಂಚಣಿಯನ್ನು ₹700ರಷ್ಟು ಹೆಚ್ಚಿಸುವ ನಿರ್ಧಾರವನ್ನು ಬಿಹಾರ ಸರ್ಕಾರ ಜೂನ್‌ನಲ್ಲಿ ತೆಗೆದುಕೊಂಡಿತ್ತು.

ಸರ್ಕಾರದ ನಿರ್ಧಾರಗಳಿಗೆ ಪ್ರತಿಕ್ರಿಯಿಸಿದ ಆರ್‌ಜೆಡಿ ವಕ್ತಾರ ಮೃತ್ಯುಂಜಯ್ ತಿವಾರಿ, ‘ಅವರು (ಎನ್‌ಡಿಎ ನಾಯಕರು) ನಮ್ಮ ಅಭಿವೃದ್ಧಿ ಯೋಜನೆಗಳನ್ನು ನಕಲು ಮಾಡುತ್ತಿದ್ದಾರೆ. ಬಿಹಾರದ ಯುವಜನರು ಈ ನಕಲು ಮತ್ತು ನಿಷ್ಪ್ರಯೋಜಕ ಸರ್ಕಾರವನ್ನು ತೊಡೆದುಹಾಕಲು ಬಯಸುತ್ತಾರೆ’ ಎಂದಿದ್ದಾರೆ.

ಬಿಜೆಪಿ ಆರೋಪ; ವಿಡಿಯೊ ಹಂಚಿಕೊಂಡ ಸಾಮ್ರಾಟ್

ಪ್ರಧಾನಿ ತಾಯಿಗೆ ನಿಂದನೆ: ಆರೋಪ

ಪಟ್ನಾ (ಪಿಟಿಐ): ವಿಧಾನಸಭೆ ವಿರೋಧ ಪಕ್ಷದ ನಾಯಕ, ಆರ್‌ಜೆಡಿ ನಾಯಕ ತೇಜಸ್ವಿ ಯಾದವ್ ಅವರು ನಡೆಸುತ್ತಿರುವ ‘ಬಿಹಾರ ಅಧಿಕಾರ ಯಾತ್ರೆ’ಯಲ್ಲಿಯೂ ಪ್ರಧಾನಿ ನರೇಂದ್ರ ಮೋದಿ ಅವರ ತಾಯಿ ಕುರಿತು ಕೆಟ್ಟ ಪದಗಳಲ್ಲಿ ನಿಂದಿಸಲಾಗಿದೆ ಎಂದು ಬಿಜೆಪಿ ಆರೋಪ ಮಾಡಿದೆ.

ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಕುರಿತು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಇತ್ತೀಚೆಗೆ ‘ಮತದಾರರ ಅಧಿಕಾರ ಯಾತ್ರೆ’ಯನ್ನು ಕೈಗೊಂಡಿದ್ದರು. ‘ಬಿಹಾರದ ದರ್ಭಂಗಾದಲ್ಲಿ ನಡೆದ ಯಾತ್ರೆಯ ವೇದಿಕೆ ಕಾರ್ಯಕ್ರಮದಲ್ಲಿ ಪ್ರಧಾನಿ ಮೋದಿ ಅವರ ತಾಯಿಯನ್ನು ನಿಂದಿಸಲಾಗಿದೆ’ ಎಂದು ಈ ಹಿಂದೆ ಬಿಜೆಪಿ ಆರೋಪಿಸಿತ್ತು. ಈ ಸಂಬಂಧ ವ್ಯಕ್ತಿಯೊಬ್ಬನನ್ನು ಪೊಲೀಸರು ಬಂಧಿಸಿದ್ದರು.

ಬಿಹಾರದಲ್ಲಿ ದಿನೇ ದಿನೇ ಚುನಾವಣಾ ಕಣ ರಂಗೇರುತ್ತಿದ್ದು, ಪ್ರಧಾನಿ ಮೋದಿ ಅವರ ತಾಯಿಯನ್ನು ನಿಂದಿಸಲಾಗುತ್ತಿದೆ ಎಂದು ಬಿಜೆಪಿಯ ಆರೋಪವು ಪದೇ ಪದೇ ಕೇಳಿ ಬರುತ್ತಿದೆ.

‘ತೇಜಸ್ವಿ ಅವರ ಯಾತ್ರೆಯ ವೇಳೆಯ ವೇದಿಕೆ ಕಾರ್ಯಕ್ರಮವೊಂದರಲ್ಲಿ ಆರ್‌ಜೆಡಿ ಕಾರ್ಯಕರ್ತರು ಪ್ರಧಾನಿ ಮೋದಿ ಅವರ ತಾಯಿಯ ಕುರಿತು ಕೆಟ್ಟ ಮಾತುಗಳನ್ನು ಆಡಿದ್ದಾರೆ. ಆದರೆ, ಪ್ರಧಾನಿ ತಾಯಿ ಅವರ ಕುರಿತು ನಿಂದಿಸದಂತೆ ಆರ್‌ಜೆಡಿ ನಾಯಕರು ತಮ್ಮ ಕಾರ್ಯಕರ್ತರಿಗೆ ಸೂಚಿಸಲೂ ಇಲ್ಲ’ ಎಂದೂ ಬಿಜೆಪಿ ಹೇಳಿದೆ. ಈ ಸಂಬಂಧ ಬಿಹಾರದ ಉಪ ಮುಖ್ಯಮಂತ್ರಿ ಸಾಮ್ರಾಟ್ ಚೌಧರಿ ಅವರು ‘ಎಕ್ಸ್’ನಲ್ಲಿ ವಿಡಿಯೊವೊಂದನ್ನು ಹಂಚಿಕೊಂಡಿದ್ದಾರೆ.

> ತೇಜಸ್ವಿ ಅವರು ಮತ್ತೊಮ್ಮೆ ಮೋದಿಜಿ ಅವರ ತಾಯಿಯನ್ನು ಅಗೌರವಿಸಿದ್ದಾರೆ. ಆರ್‌ಜೆಡಿ ಕಾರ್ಯಕರ್ತರು ನಿಂದಿಸುತ್ತಿದ್ದರೆ, ಇವರು ಅವರಿಗೆ ಪ್ರೋತ್ಸಾಹ ನೀಡುತ್ತಿದ್ದರು
> **ಸಾಮ್ರಾಟ್ ಚೌಧರಿ,** ಉಪ ಮುಖ್ಯಮಂತ್ರಿ

ಸಾಮಾಜಿಕ ಜಾಲತಾಣಗಳಲ್ಲಿ ಈ ವಿಡಿಯೊವು ಹೆಚ್ಚಿನ ಸಂಖ್ಯೆಯಲ್ಲಿ ಹರಿದಾಡುತ್ತಿದೆ. ಪಿಟಿಐ ಸುದ್ದಿ ಸಂಸ್ಥೆಯು ಈ ವಿಡಿಯೊದ ಸತ್ಯಾಸತ್ಯತೆಯನ್ನು ಪರಿಶೀಲಿಸಿಲ್ಲ. ಬಿಜೆಪಿ ಆರೋಪಗಳಿಗೆ ಪ್ರತಿಕ್ರಿಯೆ ಪಡೆಯಲು ಆರ್‌ಜೆಡಿ ನಾಯಕರನ್ನು ಪದೇ ಪದೇ ಸಂಪರ್ಕಿಸಲು ಯತ್ನಿಸಿದರೂ ಅವರು ಸಂಪರ್ಕಕ್ಕೆ ಸಿಗಲಿಲ್ಲ ಎಂದು ಪಿಟಿಐ ಹೇಳಿದೆ.

‘ಸೀಟು ಹಂಚಿಕೆ: ಹೆಚ್ಚು ಸ್ಥಾನಗಳಿಗೆ ಎಡಪಕ್ಷಗಳು ಅರ್ಹ’

‘ಬಿಹಾರ ವಿಧಾನಸಭೆ ಚುನಾವಣೆಯಲ್ಲಿ ಎಡಪಕ್ಷಗಳಿಗೆ ಸೀಟು ಹಂಚಿಕೆ ವೇಳೆ ಹೆಚ್ಚಿನ ಸ್ಥಾನಗಳನ್ನು ನೀಡಬೇಕು. ಇದಕ್ಕೆ ಎಡಪಕ್ಷಗಳು ಅರ್ಹರು. ಆದರೆ, ನಮ್ಮ ಬೇಡಿಕೆಯನ್ನು ನಾವು ವಾಸ್ತವ ನೆಲೆಯಲ್ಲಿ ಮತ್ತು ನ್ಯಾಯಯುತವಾಗಿ ಮುಂದಿಡುತ್ತೇವೆ’ ಎಂದು ಸಿಪಿಎಂ ಪ್ರಧಾನ ಕಾರ್ಯದರ್ಶಿ ಎಂ.ಎ. ಬೇಬಿ ಹೇಳಿದರು.

ಪಿಟಿಐ ಸುದ್ದಿ ಸಂಸ್ಥೆ ನಡೆಸಿದ ಸಂದರ್ಶನದಲ್ಲಿ ಅವರು ಮಾತನಾಡಿದರು. ‘ಈ ಬಾರಿ ಚುನಾವಣೆಯಲ್ಲಿ ಮಹಾ ಮೈತ್ರಿಕೂಟವೇ ಭಾರಿ ಬಹುಮತದೊಂದಿಗೆ ಗೆಲುವು ಸಾಧಿಸಲಿದೆ. ‘ಮತದಾರರ ಅಧಿಕಾರ ಯಾತ್ರೆ’ ಬಳಿಕ ರಾಜ್ಯದಲ್ಲಿ ನಮ್ಮ ಪರವಾಗಿ ಅಲೆ ಎದ್ದಿದೆ. ವಿಶೇಷವಾಗಿ ಯುವಕರು, ಮಹಿಳೆಯರು ನಮ್ಮ ಪರ ಇದ್ದಾರೆ’ ಎಂದರು.

‘ಸೀಟು ಹಂಚಿಕೆ ಕುರಿತು ನಾವು ತೇಜಸ್ವಿ ಅವರೊಂದಿಗೆ ಮಾತನಾಡಿದ್ದೇವೆ. ಕಳೆದ ಬಾರಿ ವಿಧಾನಸಭಾ ಚುನಾವಣೆಯಲ್ಲಿ ನಮ್ಮ ಪ್ರದರ್ಶನವು ಅತ್ಯುತ್ತಮವಾಗಿತ್ತು. ಇದನ್ನು ನಾವು ಮನವರಿಕೆ ಮಾಡಿಕೊಟ್ಟಿದ್ದೇವೆ. ನಮ್ಮ ಪಕ್ಷದ ಕುರಿತೂ ಜನರಲ್ಲಿ ಒಲವಿದೆ. ಕಳೆದ ಬಾರಿ ನಾವು 4 ಸ್ಥಾನಗಳಲ್ಲಿ ಸ್ಪರ್ಧಿಸಿದ್ದೆವು. ಇದರಲ್ಲಿ ಎರಡರಲ್ಲಿ ಗೆಲುವು ಸಾಧಿಸಿದ್ದೆವು’ ಎಂದರು.

ಅಂಗವಿಕಲರು ಸಮಾಜದ ಜವಾಬ್ದಾರಿ: ಸಚಿವ ಅಮಿತ್ ಶಾ

ಜೋಧ್‌ಪುರ (ಪಿಟಿಐ): ಅಂಗವಿಕಲರು ಎದುರಿಸುತ್ತಿರುವ ಸವಾಲುಗಳನ್ನು ನಿವಾರಿಸಲು ಮತ್ತಷ್ಟು ಅಗತ್ಯ ಕ್ರಮ ಕೈಗೊಳ್ಳುವ ಅಗತ್ಯ ಇದೆ. ರಾಷ್ಟ್ರ ನಿರ್ಮಾಣದಲ್ಲೂ ಕೊಡುಗೆ ನೀಡುತ್ತಿರುವ ಈ ಸಮುದಾಯದ ಹೊಣೆ ಸಮಾಜದ ಜವಾಬ್ದಾರಿ ಆಗಬೇಕು ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಭಾನುವಾರ ಇಲ್ಲಿ ಅಭಿಪ್ರಾಯಪಟ್ಟಿದ್ದಾರೆ.


ಅಮಿತ್ ಶಾ

ಪಾರಸ್‌ಮಲ್ ಬೊಹ್ರಾ ಅಂಧರ ಮಹಾ ವಿದ್ಯಾಲಯದ ಮೂರು ಯೋಜನೆಗಳಿಗೆ ಶಿಲಾನ್ಯಾಸ ನೆರವೇರಿಸಿ ಅವರು ಮಾತನಾಡಿದರು. ಅಂಗವಿಕಲರು ತಮ್ಮ ಜೀವನದಲ್ಲಿ ಬೆಳೆದು ನಿಲ್ಲುವಂತೆ ಮಾಡುವುದು ಸಮಾಜದ ಜವಾಬ್ದಾರಿ ಎನ್ನುವುದನ್ನು ನಾವು ಖಚಿತಪಡಿಸಬೇಕಿದೆ ಎಂದರು.

‘ವಿವಿಧ ಕ್ಷೇತ್ರಗಳ ಸಣ್ಣ–ಸಣ್ಣ ಪ್ರಯತ್ನಗಳೂ ದೊಡ್ಡ ಮಟ್ಟದ ಬದಲಾವಣೆ ತರಬಲ್ಲವು. ನಾವು ಅಂಗವಿಕಲರಿಗೆ ಉತ್ತಮ ಬದುಕು ಮತ್ತು ಭವಿಷ್ಯ ಕಲ್ಪಿಸಲು ಸಾಧ್ಯವಿದೆ. 2015ರಲ್ಲಿ ‘ವಿಕಲಾಂಗ’ ಎಂಬುದನ್ನು ‘ವಿಕಲಚೇತನ’ ಎಂದು ಬದಲಿಸಿ, ಈ ಸಮುದಾಯವನ್ನು ನೋಡುವ ದೃಷ್ಟಿಕೋನ ಬದಲಿಸುವ ಪ್ರಯತ್ನ ನಡೆಸಿದ್ದೇವೆ ಎಂದು ಅಮಿತ್ ಶಾ ಹೇಳಿದರು.

ಎರಡು ಬಾರಿ ಪ್ಯಾರಾಲಿಂಪಿಕ್ ಜಾವಲಿನ್‌ನಲ್ಲಿ ಚಿನ್ನದ ಪದಕ ಗೆದ್ದಿರುವ ರಾಜಸ್ಥಾನದ ದೇವೇಂದ್ರ ಝಝಾರಿಯಾ ಜೊತೆ ನಡೆಸಿದ ಭೇಟಿ ಸ್ಮರಿಸಿದ ಅಮಿತ್ ಶಾ, ‘ಸಮಾಜ, ಸರ್ಕಾರ ಮತ್ತು ಸ್ವಯಂ ಸೇವಾ ಸಂಸ್ಥೆಗಳು ಒಟ್ಟಾಗಿ ಕೆಲಸ ಮಾಡಿದರೆ ಯಾವುದೂ ಅಸಾಧ್ಯವಲ್ಲ’ ಎಂದರು.

1960ರಿಂದ 2013ರವರೆಗೆ ಭಾರತ ಪ್ಯಾರಾಲಿಂಪಿಕ್‌ನಲ್ಲಿ ಕಡಿಮೆ ಪದಕಗಳನ್ನು ಗೆದ್ದಿತ್ತು. ಕಳೆದ ಮೂರು ಕ್ರೀಡಾಕೂಟಗಳಲ್ಲಿ 52 ಪದಕಗಳನ್ನು ಬಾಚಿಕೊಂಡಿದೆ. 2014ರಲ್ಲಿ ಅಂಗವಿಕಲರ ಸಬಲೀಕರಣ ಇಲಾಖೆಯ ಬಜೆಟ್ ಮೊತ್ತ ₹ 338 ಕೋಟಿ ಇತ್ತು. ಅದನ್ನು ₹ 1,313 ಕೋಟಿಗೆ ಹೆಚ್ಚಿಸಿದ್ದೇವೆ ಎಂದು ತಿಳಿಸಿದರು.

‘ಮಧ್ಯಸ್ಥಿಕೆ ಮಂಡಳಿ ಸ್ಥಾಪನೆ ಶೀಘ್ರ’

ನವದೆಹಲಿ (ಪಿಟಿಐ): ಮಧ್ಯಸ್ಥಿಕೆ ಮಂಡಳಿ ಸ್ಥಾಪನೆ ಪ್ರಕ್ರಿಯೆಯಲ್ಲಿ ಸಾಕಷ್ಟು ಪ್ರಗತಿ ಸಾಧಿಸಲಾಗಿದ್ದು, ಶೀಘ್ರದಲ್ಲೇ ‘ಒಳ್ಳೆಯ ಸುದ್ದಿ’ ಹಂಚಿಕೊಳ್ಳುವುದಾಗಿ ಕೇಂದ್ರ ಕಾನೂನು ಸಚಿವ ಅರ್ಜುನ್ ರಾಮ್ ಮೇಘವಾಲ್ ಭಾನುವಾರ ಹೇಳಿದ್ದಾರೆ.

ಅರ್ಜುನ್ ರಾಮ್

ಮಧ್ಯಸ್ಥಿಕೆ ಕುರಿತ ಸಮಾವೇಶವನ್ನುದ್ದೇಶಿಸಿ ಮಾತನಾಡಿದ ಅವರು, ‘ಮಧ್ಯಸ್ಥಿಕೆ ಕಾಯ್ದೆ ಜಾರಿಗೆ ಬಂದು ವರ್ಷ ಕಳೆದರೂ ಅಖಿಲ ಭಾರತ ಮಟ್ಟದಲ್ಲಿ ಮಧ್ಯಸ್ಥಿಕೆ ಮಂಡಳಿಯನ್ನು ಸ್ಥಾಪಿಸಲಾಗಿಲ್ಲ ಎಂಬ ಬಗ್ಗೆ ಕೆಲವರು ಗಮನಸೆಳೆದಿದ್ದಾರೆ’ ಎಂದರು.

‘ನಾವು ಆ ದಿಕ್ಕಿನಲ್ಲಿ (ಮಧ್ಯಸ್ಥಿಕೆ ಮಂಡಳಿ ಸ್ಥಾಪನೆ) ವೇಗವಾಗಿ ಸಾಗುತ್ತಿದ್ದೇವೆ. ಶೀಘ್ರದಲ್ಲೇ ಶುಭ ಸುದ್ದಿ ನೀಡಲಿದ್ದೇವೆ’ ಎಂದು ಹೇಳಿದರು. ಮಧ್ಯಸ್ಥಿಕೆ ಕಾಯ್ದೆ ಸಂಸತ್ತಿನಲ್ಲಿ ಅಂಗೀಕಾರಗೊಂಡು ಎರಡು ವರ್ಷ ಕಳೆದರೂ ಮಧ್ಯಸ್ಥಿಕೆ ಮಂಡಳಿ ಸ್ಥಾಪನೆ ವಿಳಂಬವಾಗಿರುವುದಕ್ಕೆ ಮಾನವ ಸಂಪನ್ಮೂಲ ಕೊರತೆಯೇ ಕಾರಣ ಎಂದು ಅಟಾರ್ನಿ ಜನರಲ್ ಆರ್. ವೆಂಕಟರಮಣಿ ಅವರು ಈಚೆಗೆ ಹೇಳಿದ್ದರು.

ನೋಂದಣಿ, ಮಧ್ಯಸ್ಥಿಕೆ ಸೇವೆ ಒದಗಿಸುವವರಿಗೆ ಮಾನ್ಯತೆ ನೀಡುವ ಕೆಲಸವನ್ನು ಈ ಮಂಡಳಿ ಮಾಡಲಿದೆ.

ಚಿಟಿಕೆ ಸುದ್ದಿ

ಜಾರ್ಖಂಡ್: ರೈಲ್ವೆ ದಿಗ್ಬಂಧನ ವಾಪಸ್

ಸಿನಿ ರೈಲ್ವೆ ನಿಲ್ದಾಣಕ್ಕೆ ಶನಿವಾರ ದಿಗ್ಬಂಧನ ಹಾಕಲಾಯಿತು

ರಾಂಚಿ (ಪಿಟಿಐ): ಜಾರ್ಖಂಡ್‌ನಲ್ಲಿ ವಿವಿಧ ಬೇಡಿಕೆ ಈಡೇರಿಕೆಗಾಗಿ ನಡೆಸುತ್ತಿದ್ದ ರೈಲ್ವೆ ದಿಗ್ಬಂಧನ ಹೋರಾಟವನ್ನು ಕುರ್ಮಿ ಸಮುದಾಯವು ಭಾನುವಾರ ಹಿಂಪಡೆದಿದೆ.

ಪರಿಶಿಷ್ಟ ಪಂಗಡದ (ಎಸ್‌ಟಿ) ಸ್ಥಾನಮಾನ ಮತ್ತು ಕುರ್ಮಾಲಿ ಭಾಷೆಯನ್ನು ಸಂವಿಧಾನದ ಎಂಟನೇ ಪರಿಚ್ಛೇದಕ್ಕೆ ಸೇರಿಸುವಂತೆ ಒತ್ತಾಯಿಸಿ ಕುರ್ಮಿ ಸಮುದಾಯದ ಹೋರಾಟಗಾರರು ರೈಲ್ವೆ ದಿಗ್ಬಂಧನ ನಡೆಸುತ್ತಿದ್ದರು.

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಈ ಕುರಿತಂತೆ ಚಳವಳಿಗಾರರೊಂದಿಗೆ ಸಭೆ ನಡೆಸುವರು ಎಂದು ಕೇಂದ್ರ ಸರ್ಕಾರ ಭರವಸೆ ನೀಡುತ್ತಿದ್ದಂತೆ, ಹೋರಾಟಗಾರರು ದಿಗ್ಬಂಧನ ವಾಪಸ್ ಪಡೆದರು. ಸಭೆಯ ದಿನಾಂಕ ನಿಗದಿ ಆಗಿಲ್ಲ.

ಮೋದಿ ಇಂದು ಅರುಣಾಚಲಕ್ಕೆ

ಇಟಾನಗರ (ಪಿಟಿಐ): ಅರುಣಾಚಲ ಪ್ರದೇಶಕ್ಕೆ ಪ್ರಧಾನಿ ನರೇಂದ್ರ ಮೋದಿ ಸೋಮವಾರ ಭೇಟಿ ನೀಡಲಿದ್ದು, ₹ 5 ಸಾವಿರ ಕೋಟಿ ಮೊತ್ತದ ವಿವಿಧ ಮೂಲಸೌಕರ್ಯ ಯೋಜನೆಗಳಿಗೆ ಹಸಿರುನಿಶಾನೆ ತೋರಲಿದ್ದಾರೆ.

ರಾಜಧಾನಿಯಲ್ಲಿರುವ ಇಂದಿರಾ ಗಾಂಧಿ ಉದ್ಯಾನದಲ್ಲಿ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಚಾಲನೆ ನೀಡಲಿದ್ದು, ನಂತರ ರ‍್ಯಾಲಿಯಲ್ಲಿ ಮಾತನಾಡಲಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸೇನಾ ವಿಶೇಷ ರೈಲಿಗೆ ಬೆಂಕಿ

ಉಜ್ಜಯಿನಿ (ಮಧ್ಯಪ್ರದೇಶ), (ಪಿಟಿಐ): ಇಲ್ಲಿನ ರೈಲ್ವೆ ನಿಲ್ದಾಣದಲ್ಲಿದ್ದ ‘ಸೇನಾ ವಿಶೇಷ’ ಗೂಡ್ಸ್ ರೈಲಿನಲ್ಲಿ ಭಾನುವಾರ ಅಗ್ನಿ ಅವಘಡ ಸಂಭವಿಸಿದ್ದು, ಹೆಚ್ಚಿನ ಹಾನಿ ಆಗಿಲ್ಲ.

ರೈಲಿನಲ್ಲಿ ಟ್ರಕ್‌ಗಳನ್ನು ಕೊಂಡೊಯ್ಯಲಾಗುತ್ತಿತ್ತು. ಇವುಗಳಿಗೆ ಮುಚ್ಚಿದ್ದ ಟಾರ್ಪಾಲಿನ್‌ಗೆ ಬೆಳಿಗ್ಗೆ 9.30ರ ವೇಳೆಗೆ ಬೆಂಕಿ ಹೊತ್ತಿಕೊಂಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಟ್ರಕ್‌ಗಳನ್ನು ತುಂಬಿದ್ದ ಭೋಪಾಲ್–ಜೋಧ್‌ಪುರ ಸೇನಾ ವಿಶೇಷ ಗೂಡ್ಸ್ ರೈಲಿನಲ್ಲಿ ಸಂಭವಿಸಿದ ಅಗ್ನಿ ಅವಘಡದಿಂದಾಗಿ, ರೈಲ್ವೆ ನಿಲ್ದಾಣದ ಮೇಲ್ಛಾವಣಿಗೆ ಹಾನಿಯಾಗಿದೆ ಎಂದು ಆರ್‌ಪಿಎಫ್ ಇನ್‌ಸ್ಪೆಕ್ಟರ್ ನರೇಂದ್ರ ಯಾದವ್ ತಿಳಿಸಿದ್ದಾರೆ.

ಕಛ್‌ನಲ್ಲಿ ಎರಡು ಬಾರಿ ಭೂಕಂಪ

ಅಹಮದಾಬಾದ್ (ಪಿಟಿಐ): ಗುಜರಾತ್‌ನ ಕಛ್ ಜಿಲ್ಲೆಯಲ್ಲಿ ಭಾನುವಾರ ಎರಡು ಬಾರಿ ಭೂಕಂಪ ಸಂಭವಿಸಿದೆ ಎಂದು ಭೂಕಂಪವಿಜ್ಞಾನ ಸಂಶೋಧನಾ ಸಂಸ್ಥೆ (ಐಎಸ್‌ಆರ್) ತಿಳಿಸಿದೆ.

ಜಿಲ್ಲೆಯ ಧೋಲಾವಿರದಿಂದ 24 ಕಿ.ಮೀ ದೂರದಲ್ಲಿ ಮುಂಜಾನೆ 6.42ಕ್ಕೆ ಭೂಕಂಪ ಸಂಭವಿಸಿದೆ. ಇದು ರಿಕ್ಟರ್ ಮಾಪಕದಲ್ಲಿ 2.6 ತೀವ್ರತೆ ಹೊಂದಿತ್ತು.

ನಂತರ ಮಧ್ಯಾಹ್ನ 12.41ಕ್ಕೆ ಮತ್ತೊಮ್ಮೆ ಭೂಕಂಪ ಸಂಭವಿಸಿದ್ದು, ರಿಕ್ಟರ್ ಮಾಪಕದಲ್ಲಿ 3.1 ತೀವ್ರತೆ ದಾಖಲಾಗಿದೆ. ಬಛೌ ಪ್ರದೇಶದಿಂದ 12 ಕಿ.ಮೀ ದೂರದಲ್ಲಿ ಅದರ ಕೇಂದ್ರ ಬಿಂದುವಿದೆ ಎಂದು ಐಎಸ್‌ಆರ್ ವರದಿ ತಿಳಿಸಿದೆ.

ಪವನ್‌ಕುಮಾರ್ ಭಜಂತ್ರಿ ಪಟ್ನಾ ಹೈಕೋರ್ಟ್ ಸಿಜೆ

ಪಟ್ನಾ (ಪಿಟಿಐ): ಕರ್ನಾಟಕದ ಪವನ್‌ಕುಮಾರ್ ಭೀಮಪ್ಪ ಭಜಂತ್ರಿ ಅವರು ಬಿಹಾರದ ಪಟ್ನಾ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿ ಭಾನುವಾರ ಪ್ರಮಾಣ ವಚನ ಸ್ವೀಕರಿಸಿದರು.

ಬಿಹಾರ ರಾಜ್ಯಪಾಲರಾದ ಆರೀಫ್ ಮೊಹಮ್ಮದ್ ಖಾನ್ ಅವರು ರಾಜಭವನದಲ್ಲಿ ಪವನ್‌ಕುಮಾರ್ ಅವರಿಗೆ ಪ್ರಮಾಣ ವಚನ ಬೋಧಿಸಿದರು. ಮುಖ್ಯಮಂತ್ರಿ ನಿತೀಶ್ ಕುಮಾರ್ ಹಾಗೂ ಉಪ ಮುಖ್ಯಮಂತ್ರಿ ಸಾಮ್ರಾಟ್ ಚೌಧರಿ ಕಾರ್ಯಕ್ರಮದಲ್ಲಿ ಹಾಜರಿದ್ದರು.

1990ರಲ್ಲಿ ವಕೀಲರಾಗಿ ವೃತ್ತಿ ಆರಂಭಿಸಿದ ಪವನ್‌ಕುಮಾರ್ ಅವರು, 2015ರಲ್ಲಿ ಕರ್ನಾಟಕ ಹೈಕೋರ್ಟ್‌ನಲ್ಲಿ ಹೆಚ್ಚುವರಿ ನ್ಯಾಯಮೂರ್ತಿಗಳಾಗಿ ನೇಮಕಗೊಂಡರು. ನಂತರ ಪಂಜಾಬ್, ಹರಿಯಾಣ ಹೈಕೋರ್ಟ್‌ನಲ್ಲಿ ನ್ಯಾಯಮೂರ್ತಿಯಾಗಿ ಸೇವೆ ಸಲ್ಲಿಸಿ, 2018ರಲ್ಲಿ ಮತ್ತೆ ಕರ್ನಾಟಕ ಹೈಕೋರ್ಟ್ ನ್ಯಾಯಮೂರ್ತಿಯಾಗಿ ನೇಮಕಗೊಂಡರು. 2021ರಿಂದ ಪಟ್ನಾ ಹೈಕೋರ್ಟ್‌ನಲ್ಲಿ ನ್ಯಾಯಮೂರ್ತಿಗಳಾಗಿ ಸೇವೆ ಸಲ್ಲಿಸಿದ್ದಾರೆ.

ಎಚ್–1ಬಿ ವೀಸಾ: ಕ್ರಮಕ್ಕೆ ಒತ್ತಾಯ

ಹೈದರಾಬಾದ್ (ಪಿಟಿಐ): ‘ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಎಚ್–1ಬಿ ವೀಸಾ ಅರ್ಜಿಯ ವಾರ್ಷಿಕ ಶುಲ್ಕವನ್ನು ಹೆಚ್ಚಿಸಿರುವುದರ ವಿರುದ್ಧ ಪ್ರಧಾನಿ ನರೇಂದ್ರ ಮೋದಿ, ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಯುದ್ಧೋಪಾದಿಯಲ್ಲಿ ಕ್ರಮ ತೆಗೆದುಕೊಳ್ಳಬೇಕು’ ಎಂದು ತೆಲಂಗಾಣ ಮುಖ್ಯಮಂತ್ರಿ ಎ.ರೇವಂತ್ ರೆಡ್ಡಿ ಆಗ್ರಹಿಸಿದ್ದಾರೆ.

‘ಎಚ್–1ಬಿ ವೀಸಾ ಅರ್ಜಿಯ ವಾರ್ಷಿಕ ಶುಲ್ಕ ಹೆಚ್ಚಳದಿಂದ ತೆಲುಗು ಐಟಿ ವೃತ್ತಿಪರರಿಗೆ ಆಗಿರುವ ನೋವನ್ನು ಊಹಿಸಲೂ ಸಾಧ್ಯವಿಲ್ಲ. ಈ ಸಮಸ್ಯೆಯನ್ನು ಸೌಹಾರ್ದದಿಂದ ಪರಿಹರಿಸಬೇಕು’ ಎಂದು ಅವರು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

‘ಶುಲ್ಕ ಹೆಚ್ಚಿಸುವ ಟ್ರಂಪ್ ಅವರ ಆದೇಶವು ಆಘಾತಕಾರಿಯಾಗಿದೆ. ಭಾರತ–ಅಮೆರಿಕ ನಡುವಿನ ಐತಿಹಾಸಿಕ ಸಂಬಂಧದ ಹಿನ್ನೆಲೆಯಲ್ಲಿ ಈ ಕ್ರಮವು ಸ್ವೀಕಾರಾರ್ಹವಲ್ಲ’ ಎಂದೂ ಅವರು ಹೇಳಿದ್ದಾರೆ.

‘ಅಮೆರಿಕಕ್ಕಾಗಿ ವರ್ಷಗಳಿಂದ ಕೆಲಸ ಮಾಡುತ್ತಿರುವ ನಮ್ಮ ದೇಶದ ಅಪಾರ ಸಂಖ್ಯೆಯ ಐಟಿ ವೃತ್ತಿಪರರು, ಕೌಶಲ ಆಧಾರಿತ ನೌಕರರ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಕ್ರಮ ಕೈಗೊಳ್ಳಬೇಕು’ ಎಂದು ಮನವಿ ಮಾಡಿದ್ದಾರೆ.

ಎಚ್–1ಬಿ ವೀಸಾದ ದುರ್ಬಳಕೆಯು ರಾಷ್ಟ್ರೀಯ ಭದ್ರತೆಗೆ ಆತಂಕಕಾರಿ ಎಂದಿರುವ ಟ್ರಂಪ್, ಅರ್ಜಿಗೆ ಸಂಬಂಧಿಸಿದ ವಾರ್ಷಿಕ ಶುಲ್ಕವನ್ನು 1 ಲಕ್ಷ ಡಾಲರ್‌ಗೆ (ಅಂದಾಜು ₹88 ಲಕ್ಷ) ಹೆಚ್ಚಿಸುವ ಆದೇಶಕ್ಕೆ ಶುಕ್ರವಾರ ಸಹಿ ಹಾಕಿದ್ದರು. ಅಮೆರಿಕಕ್ಕೆ ವಲಸೆಯೇತರ ಕಾರ್ಮಿಕರ ಪ್ರವೇಶದ ಮೇಲೆ ನಿರ್ಬಂಧ ಹೇರಲು ಶುಲ್ಕ ಹೆಚ್ಚಳ ಮಾಡುತ್ತಿರುವುದಾಗಿ ಹೇಳಿದ್ದರು.

‘ಅಮೆರಿಕದಿಂದ ಬಲವಂತದ ತಂತ್ರ’

ನವದೆಹಲಿ (ಪಿಟಿಐ): ‘ಅಮೆರಿಕವು ತನ್ನ ವ್ಯಾಪಾರ ಹಿತಾಸಕ್ತಿ ರಕ್ಷಿಸಿಕೊಳ್ಳಲು ಭಾರತದ ಮೇಲೆ ಬಲವಂತದ ತಂತ್ರಗಳನ್ನು ಅನುಸರಿಸುತ್ತಿದೆ. ಕೇಂದ್ರ ಸರ್ಕಾರವು ಈ ಅನ್ಯಾಯದ ವಿರುದ್ಧ ದೃಢ ನಿಲುವು ತೆಗೆದುಕೊಳ್ಳಬೇಕು’ ಎಂದು ಸಿಪಿಎಂ ಪಾಲಿಟ್‌ಬ್ಯೂರೊ ಆಗ್ರಹಿಸಿದೆ.

ಅಮೆರಿಕದ ಶೇ 50 ಸುಂಕ ನೀತಿಗೆ ಭಾರತ ಮಣಿಯುವಂತೆ ಮಾಡಲು ಎಚ್–1ಬಿ ವೀಸಾ ಅರ್ಜಿಯ ಶುಲ್ಕ ಹೆಚ್ಚಳದಂತಹ ಬಲವಂತದ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಈ ವಿಚಾರದಲ್ಲಿ ಕೇಂದ್ರ ಸರ್ಕಾರದ ಪ್ರತಿಕ್ರಿಯೆನ್ನು ಎಡಪಕ್ಷಗಳು ಬಯಸುತ್ತವೆ ಎಂದಿದೆ.

ಸೆ.30ರೊಳಗೆ ಎಸ್‌ಐಆರ್‌ಗೆ ಸಜ್ಜಾಗಿ

ಎರಡನೇ ಮುಖಪುಟದಿಂದ...

ತಮ್ಮ ತಮ್ಮ ರಾಜ್ಯಗಳಲ್ಲಿ ಕೊನೆಯದಾಗಿ ಎಸ್‌ಐಆರ್ ಪ್ರಕ್ರಿಯೆ ನಡೆದ ಬಳಿಕ ಪ್ರಕಟಿಸಲಾಗಿರುವ ಮತದಾರರ ಪಟ್ಟಿಯನ್ನು ಸಿದ್ಧವಾಗಿಡುವಂತೆ ಇ.ಸಿ, ರಾಜ್ಯಗಳ ಮುಖ್ಯ ಚುನಾವಣಾಧಿಕಾರಿಗಳಿಗೆ ನಿರ್ದೇಶನ ನೀಡಿದೆ.

ಹಲವು ರಾಜ್ಯಗಳ ಚುನಾವಣಾಧಿಕಾರಿಗಳು ತಮ್ಮ ಕೊನೆಯ ಎಸ್‌ಐಆರ್ ನಂತರ ಪ್ರಕಟವಾದ ಮತದಾರರ ಪಟ್ಟಿಗಳನ್ನು ಈಗಾಗಲೇ ವೆಬ್‌ಸೈಟ್‌ಗಳಲ್ಲಿ ಲಭ್ಯವಾಗುವಂತೆ ಮಾಡಿದ್ದಾರೆ. ದೆಹಲಿ ಚುನಾವಣಾ ಆಯೋಗದ ವೆಬ್‌ಸೈಟ್‌ನಲ್ಲಿ 2008ರ ಬಳಿಕದ ಮತದಾರರ ಪಟ್ಟಿಯ ವಿವರಗಳನ್ನು ಪ್ರಕಟಿಸಲಾಗಿದೆ. ದೆಹಲಿಯಲ್ಲಿ 2008ರಲ್ಲಿ ಕೊನೆಯದಾಗಿ ಎಸ್‌ಐಆರ್ ನಡೆದಿತ್ತು.

ಉತ್ತರಾಖಂಡದಲ್ಲಿ ಕೊನೆಯ ಎಸ್‌ಐಆರ್ 2006ರಲ್ಲಿ ನಡೆದಿದ್ದು, ಅನಂತರದ ವರ್ಷಗಳಲ್ಲಿನ ಮತದಾರರ ಪಟ್ಟಿಯನ್ನು ಈಗ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ಬಹುತೇಕ ರಾಜ್ಯಗಳಲ್ಲಿ 2002ರಿಂದ 2004ರ ಅವಧಿಯಲ್ಲಿ ಕೊನೆಯದಾಗಿ ಎಸ್‌ಐಆರ್ ನಡೆದಿತ್ತು.

ಪ್ರೇಮಿಗಳ ಅರ್ಧ ತಲೆ ಬೋಳಿಸಿದ ಐವರ ಬಂಧನ

ಒಂದನೇ ಪುಟದಿಂದ...

ಮಹೇಶ್ ಕೂಡ ವಿವಾಹಿತರಾಗಿದ್ದು ಪತ್ನಿ ತೀರಿಕೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಸೆ.18ರಂದು ತಾಮಸಂದ್ರದಲ್ಲಿರುವ ಮಹೇಶ್ ಸ್ನೇಹಿತನ ಮನೆಗೆ ಇಬ್ಬರೂ ಹೋಗಿ ಉಳಿದಿದ್ದರು. ಈ ವಿಷಯ ತಿಳಿದ ಆರೋಪಿಗಳು, ಮಾರನೇ ದಿನ ಸಂಜೆ 4.30ರ ಸುಮಾರಿಗೆ ತಾಮಸಂದ್ರಕ್ಕೆ ಕಾರಿನಲ್ಲಿ ಹೋಗಿ ಇಬ್ಬರನ್ನೂ ಕನಕಪುರಕ್ಕೆ ಕರೆ ತಂದು ಮನಬಂದಂತೆ ಹಲ್ಲೆ ನಡೆಸಿದ್ದಾರೆ.

ರಸ್ತೆಯಲ್ಲಿ ಹಲ್ಲೆ: ನಂತರ ಇಂದಿರಾನಗರದ ಕರಿಯಪ್ಪ ರಸ್ತೆಯಲ್ಲಿರುವ ವಿದ್ಯುತ್ ಕಂಬದ ಬಳಿ ಇಬ್ಬರನ್ನೂ ಕೂರಿಸಿ, ಚಪ್ಪಲಿಯಿಂದ ಹೊಡೆದಿದ್ದಾರೆ. ಬಿಡಿಸಿಕೊಳ್ಳಲು ಬಂದ ಮಹೇಶ್ ಕುಟುಂಬದವರ ಮೇಲೂ ಹಲ್ಲೆ ನಡೆಸಲಾಗಿದೆ. ಆರೋಪಿಗಳ ಪೈಕಿ ಕಬೀರ್, ಟ್ರಿಮ್ಮರ್‌ನಿಂದ ಇಬ್ಬರ ತಲೆಯನ್ನು ಅರ್ಧ ಬೋಳಿಸಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ. ಠಾಣೆಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಶ್ರೀನಿವಾಸ ಗೌಡ, ಹೆಚ್ಚುವರಿ ವರಿಷ್ಠಾಧಿಕಾರಿ ರಾಜೇಂದ್ರ, ಡಿವೈಎಸ್‌ಪಿ ಗಿರಿ ಭೇಟಿ ನೀಡಿ ಮಾಹಿತಿ ಪಡೆದರು.

‘ಮತೀಯ ಗೂಂಡಾಗಿರಿ ವಿರುದ್ಧ ಕ್ರಮ’

‘ಮತೀಯ ಗೂಂಡಾಗಿರಿಯನ್ನು ಯಾರೂ ಮಾಡುವಂತಿಲ್ಲ. ಅಂತಹ ಘಟನೆ ಕಂಡು ಬಂದರೆ ಪ್ರಕರಣ ದಾಖಲಿಸಿಕೊಂಡು ಕಾನೂನು ಕ್ರಮ ಕೈಗೊಳ್ಳಲಾಗುವುದು. ಪ್ರೇಮಿಗಳ ಮೇಲಿನ ಹಲ್ಲೆ ಘಟನೆಗೆ ಸಂಬಂಧಿಸಿದಂತೆ ಎರಡೂ ಕಡೆಯವರನ್ನು ಕರೆಯಿಸಿ ಶಾಂತಿ ಸಭೆ ನಡೆಸಲಾಗಿದೆ. ಮತ್ತೆ ಇಂತಹ ಘಟನೆಗಳು ಮರುಕಳಿಸಲು ಅವಕಾಶ ನೀಡದಂತೆ ಎಚ್ಚರಿಕೆ ನೀಡಲಾಗಿದೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಶ್ರೀನಿವಾಸ ಗೌಡ ಮಾಧ್ಯಮದವರಿಗೆ ತಿಳಿಸಿದ್ದಾರೆ. ಇತರರ ನೆಮ್ಮದಿ ಹಾಗೂ ಕಾನೂನು ಸುವ್ಯವಸ್ಥೆಗೆ ಧಕ್ಕೆ ಬರುವ ರೀತಿಯಲ್ಲಿ ವರ್ತಿಸಿದರೆ ನಿರ್ದಾಕ್ಷಿಣ್ಯ ಕ್ರಮ ಜರುಗಿಸಲಾಗುವುದು ಎಂದರು.

ಮಹಿಳಾ ಶಕ್ತಿ...

ಪಿಟಿಐ ಚಿತ್ರ

ಮಹಿಳೆಯರ ಸುರಕ್ಷತೆ, ಘನತೆ ಮತ್ತು ಸ್ವಾವಲಂಬನೆಗೆ ಸಮರ್ಪಿತ ‘ಮಿಷನ್ ಶಕ್ತಿ –5.0’ ಅಭಿಯಾನದ ಅಂಗವಾಗಿ ಭಾನುವಾರ ವಾರಾಣಸಿಯಲ್ಲಿ ಮಹಿಳಾ ಪೊಲೀಸ್ ಸಿಬ್ಬಂದಿ ದ್ವಿಚಕ್ರ ವಾಹನದಲ್ಲಿ ರ‍್ಯಾಲಿ ನಡೆಸಿದರು

ಕಟ್ಟಾ ಅಭಿಮಾನಿಗೆ ಮಾತ್ರ ಭೇಟಿಗೆ ಅವಕಾಶ

ಸ್ವಾತಿ ಗುಪ್ತಾ

ಲಖನೌ: ಉತ್ತರ ಪ್ರದೇಶದ ಪಂಚಾಯತ್‌ರಾಜ್ ಇಲಾಖೆಯ ಹಿರಿಯ ಅಧಿಕಾರಿ ಸ್ವಾತಿ ಗುಪ್ತಾ ಅವರನ್ನು ಯಾರಾದರೂ ಭೇಟಿಯಾಗಬೇಕಾದರೆ ಅವರ ಫೇಸ್‌ಬುಕ್ ಪೇಜ್‌ನ ಕಟ್ಟಾ ಅಭಿಮಾನಿ ಆಗಿರಬೇಕು. ಅವರ ಪೋಸ್ಟ್‌ಗಳನ್ನು 30 ದಿನಗಳವರೆಗೆ ಪ್ರತಿದಿನ ಹಂಚಿಕೊಳ್ಳಬೇಕು.

ಹೌದು, ಈ ವಿಷಯವನ್ನು ಅವರೇ ಬಹಿರಂಗಪಡಿಸಿದ್ದಾರೆ. ಇನ್‌ಸ್ಟಾಗ್ರಾಂನಲ್ಲಿ 2.5 ಲಕ್ಷಕ್ಕೂ ಅಧಿಕ ಹಿಂಬಾಲಕರನ್ನು ಹೊಂದಿರುವ ಸ್ವಾತಿ ಅವರು ಭಾನುವಾರ ಬೆಳಿಗ್ಗೆ ಫೇಸ್‌ಬುಕ್ ಲೈವ್‌ನಲ್ಲಿ ತನ್ನ ಫಾಲೋವರ್‌ಗಳೊಂದಿಗೆ ಸಂವಾದ ನಡೆಸಿದ್ದರು. ಆಗ, ‘ನಿಮ್ಮನ್ನು ಹೇಗೆ ಭೇಟಿಯಾಗುವುದು’ ಎಂದು ಅಭಿಮಾನಿಯೊಬ್ಬರು ಕೇಳಿದ್ದಕ್ಕೆ ಈ ಷರತ್ತು ವಿಧಿಸಿದ್ದಾರೆ. ಇದು ವೃತ್ತಿಯ ನೈತಿಕತೆಗೆ ವಿರುದ್ಧವಾದದ್ದು’ ಎಂದು ಕೆಲ ನೆಟ್ಟಿಗರು ಟೀಕಿಸಿದ್ದಾರೆ.

ನೇಪಾಳದಿಂದ ಪರಾರಿಯಾಗಿದ್ದ ಐವರು ವಿದೇಶಿಯರ ಬಂಧನ

ಮೋತಿಹಾರಿ (ಬಿಹಾರ) (ಪಿಟಿಐ): ನೇಪಾಳದಲ್ಲಿ ಇತ್ತೀಚೆಗೆ ನಡೆದಿದ್ದ ಪ್ರತಿಭಟನೆಗಳ ಸಂದರ್ಭದಲ್ಲಿ ಅಲ್ಲಿನ ಜೈಲುಗಳಿಂದ ಪರಾರಿಯಾಗಿದ್ದ ಐದು ಮಂದಿ ವಿದೇಶಿ ಪ್ರಜೆಗಳನ್ನು ಬಿಹಾರದ ಮೋತಿಹಾರಿ ಬಳಿ ಬಂಧಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬಂಧಿತರ ಪೈಕಿ ನಾಲ್ವರು ಸುಡಾನ್ ಹಾಗೂ ಒಬ್ಬರು ಬೊಲಿವಿಯಾ ಪ್ರಜೆಗಳಾಗಿದ್ದಾರೆ. ‘ಸಶಸ್ತ್ರ ಸೀಮಾ ಬಲ ಸಿಬ್ಬಂದಿ ನೀಡಿದ ಮಾಹಿತಿ ಆಧರಿಸಿ, ಮೋತಿಹಾರಿ ಬಳಿಯ ಘೋಡಾಸಹನ್ ಬಸ್ ನಿಲ್ದಾಣದ ಮೇಲೆ ದಾಳಿ ನಡೆಸಿ ಈ ಐದು ಜನರನ್ನು ಬಂಧಿಸಲಾಯಿತು. ಬಂಧಿತರು 30 ವರ್ಷ ವಯೋಮಾನದವರಾಗಿದ್ದಾರೆ’ ಎಂದು ಪೂರ್ವ ಚಂಪಾರಣ್ ಎಸ್‌ಪಿ ಸ್ವರ್ಣ ಪ್ರಭಾತ್ ತಿಳಿಸಿದ್ದಾರೆ.

‘ನೇಪಾಳದ ಸೆಂಟ್ರಲ್ ಜೈಲಿನಿಂದ ಪರಾರಿಯಾಗಿದ್ದಾಗಿ ಬಂಧಿತರ ಪೈಕಿ ಇಬ್ಬರು ವಿಚಾರಣೆ ವೇಳೆ ತಪ್ಪೊಪ್ಪಿಕೊಂಡಿದ್ದಾರೆ’ ಎಂದೂ ಅವರು ತಿಳಿಸಿದ್ದಾರೆ.

ತ್ರಿಭಾಷಾ ನೀತಿ ಹೇರಿಕೆ ಆರೋಪ ರಾಜಕೀಯ ಪ್ರೇರಿತ: ಧರ್ಮೇಂದ್ರ ಪ್ರಧಾನ್

‘ರಾಜ್ಯಗಳ ಮೇಲೆ ಭಾಷಾ ಹೇರಿಕೆ ಇಲ್ಲ’

ಚೆನ್ನೈ (ಪಿಟಿಐ): ‘ಕೇಂದ್ರವು ಯಾವುದೇ ರಾಜ್ಯದ ಮೇಲೆ ಯಾವುದೇ ಭಾಷೆಯನ್ನು ಹೇರುತ್ತಿಲ್ಲ’ ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಹೇಳಿದ್ದಾರೆ.

ಐಐಟಿ ಮದ್ರಾಸ್‌ನಲ್ಲಿ ನಡೆದ ‘ಥಿಂಕ್ ಇಂಡಿಯಾ ದಕ್ಷಿಣಪಥ ಶೃಂಗಸಭೆ– 2025’ರಲ್ಲಿ ಭಾಗವಹಿಸಿದ ಅವರು, ಕಾರ್ಯಕ್ರಮದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದರು.

‘ಕೇಂದ್ರವು ರಾಜ್ಯಗಳ ಮೇಲೆ ‘ತ್ರಿಭಾಷಾ ನೀತಿ’ಯನ್ನು ಹೇರುತ್ತಿದೆ ಎನ್ನುವುದು ರಾಜಕೀಯ ಪ್ರೇರಿತ ಆರೋಪ’ ಎಂದು ಅವರು ಹೇಳಿದರು.

‘ನಾವು ಯಾರ ಮೇಲೂ ಯಾವುದೇ ಭಾಷೆಯನ್ನು ಹೇರುತ್ತಿಲ್ಲ. 1 ಮತ್ತು 2ನೇ ತರಗತಿಗಳಿಗೆ ದ್ವಿಭಾಷಾ ಸೂತ್ರ ಇರುತ್ತದೆ. ಇದರಲ್ಲಿ ಒಂದು ಮಾತೃಭಾಷೆ. ತಮಿಳುನಾಡಿನಲ್ಲಾದರೆ ಇದು ತಮಿಳು ಭಾಷೆಯಾಗಿರುತ್ತದೆ. ಇದರ ಜತೆಗೆ ನಿಮ್ಮ ಆಯ್ಕೆಯ ಇನ್ನೊಂದು ಭಾಷೆಯನ್ನು ಕಲಿಸಬಹುದು’ ಎಂದರು.

> ಭಾಷಾ ವಿಭಜನೆ ಸೃಷ್ಟಿಸಲು ಪ್ರಯತ್ನಿಸುವವರು ವಿಫಲರಾಗುತ್ತಿದ್ದಾರೆ. ಸಮಾಜವು ಅವರಿಗಿಂತ ಬಹಳ ಮುಂದೆ ಸಾಗುತ್ತಿದೆ.
> **ಧರ್ಮೇಂದ್ರ ಪ್ರಧಾನ್** ಕೇಂದ್ರ ಶಿಕ್ಷಣ ಸಚಿವ

6ರಿಂದ 10ನೇ ತರಗತಿವರೆಗೆ ‘ತ್ರಿಭಾಷಾ ಸೂತ್ರ’ ಇರುತ್ತದೆ. ಒಂದು ಮಾತೃಭಾಷೆಯಾದರೆ, ಇನ್ನೆರಡು ಆಯ್ಕೆಯ ಭಾಷೆಯಾಗಿರುತ್ತವೆ ಎಂದು ಪ್ರಧಾನ್ ಸ್ಪಷ್ಟಪಡಿಸಿದರು.

‘ಉತ್ತರ ಪ್ರದೇಶದಂತ ರಾಜ್ಯಗಳಲ್ಲಿ ತ್ರಿಭಾಷಾ ಸೂತ್ರವನ್ನು ಹೇಗೆ ಜಾರಿಗೊಳಿಸುತ್ತೀರಿ ಎಂಬ ಪ್ರಶ್ನೆಗೆ, ‘ನಾವು ಆ ರಾಜ್ಯದಲ್ಲೂ ಈ ಸೂತ್ರ ಜಾರಿಗೊಳಿಸುತ್ತೇವೆ. ವಿದ್ಯಾರ್ಥಿಯೊಬ್ಬ ಹಿಂದಿಯನ್ನು ಮಾತೃಭಾಷೆಯಾಗಿ, ನಂತರ ಮರಾಠಿಯನ್ನು ಬಳಿಕ ತಮಿಳನ್ನೂ ಕಲಿಯುತ್ತಾನೆ. ಉತ್ತರ ಪ್ರದೇಶದಲ್ಲಿ ಮೂರನೆಯ ಭಾಷೆಯಾಗಿ ‘ತಮಿಳು’ ಕಲಿಯಲೂ ಅವಕಾಶವಿದೆ’ ಎಂದು ಅವರು ಹೇಳಿದರು.

ಭಾಷೆಗಳು ಯಾವಾಗಲೂ ಸಹಾಯಕವಾಗಿರುತ್ತವೆ. ರಾಜಕೀಯವಾಗಿ ಸಂಕುಚಿತ ಆಲೋಚನೆಗಳನ್ನು ಹೊಂದಿರುವವರು ಸಮಸ್ಯೆಗಳನ್ನು ಸೃಷ್ಟಿಸುತ್ತಾರೆ ಎಂದ ಪ್ರಧಾನ್, ಹಲವು ರಾಜ್ಯಗಳು ರಾಷ್ಟ್ರೀಯ ಶಿಕ್ಷಣ ನೀತಿಗೂ ಮುನ್ನವೇ ತ್ರಿಭಾಷಾ ಸೂತ್ರವನ್ನು ಜಾರಿಗೊಳಿಸಲು ಹೊರಟಿವೆ ಎಂದರು.

‘ತೆಲುಗು ಮಾತನಾಡುವ ವಿದ್ಯಾರ್ಥಿಗಳಿಗೆ 10 ಭಾಷೆಗಳನ್ನು ಕಲಿಸಲು ಪ್ರೋತ್ಸಾಹಿಸಲಾಗುವುದು ಎಂಬ ಆಂಧ್ರಪ್ರದೇಶ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ಖಂಡಿತವಾಗಿಯೂ, ಹಲವು ಭಾಷೆಗಳಲ್ಲಿ ಪ್ರಾವೀಣ್ಯತೆ ಗಳಿಸಿದವರು ‘ಜಾಗತಿಕವಾಗಿ ಸ್ಪರ್ಧಾತ್ಮಕತೆ ಬೆಳೆಸಿಕೊಳ್ಳುತ್ತಾರೆ’ ಎಂದರು.

ಕೌಶಲ ಆಧಾರಿತ ಕಲಿಕೆ

11ನೇ ಮತ್ತು 12ನೇ ತರಗತಿಯ ಪಠ್ಯಕ್ರಮದಲ್ಲಿ ಕೌಶಲ ಆಧಾರಿತ ಕಲಿಕೆಯನ್ನು ಸೇರ್ಪಡೆ ಮಾಡುವ ಪ್ರಸ್ತಾವವನ್ನು ಕೇಂದ್ರ ಸರ್ಕಾರ ಪರಿಗಣಿಸಲಿದೆ ಎಂದು ಪ್ರಧಾನ್ ಹೇಳಿದರು. ‘ಸೂಕ್ತ ಹಂತದಲ್ಲಿ ಕಲಿಕಾ ಮಾದರಿಯಲ್ಲಿ ಬದಲಾವಣೆ ಆಗಬೇಕು. 2020ರ ರಾಷ್ಟ್ರೀಯ ಶಿಕ್ಷಣ ನೀತಿಯು ಇದನ್ನು ಶಿಫಾರಸು ಮಾಡುತ್ತದೆ’ ಎಂದರು.

ಅನಂತ ನಮನ 66

‘ದೇಶ ಮೊದಲು’ ಧ್ಯೇಯದೊಂದಿಗೆ ರಾಷ್ಟ್ರ ಹಿತಕ್ಕಾಗಿ ಜೀವ ತೇಯ್ದ, ಪ್ರಧಾನ ಮಂತ್ರಿಗಳಾಗಿದ್ದ ದಿ. ಅಟಲ್ ಬಿಹಾರಿ ವಾಜಪೇಯಿಜೀ ಮತ್ತು ಸನ್ಮಾನ್ಯ ಶ್ರೀ ನರೇಂದ್ರ ಮೋದಿಜೀಯವರೊಂದಿಗೆ ದೇಶದ ಉನ್ನತಿಗಾಗಿ ಅವಿರತ ಸೇವೆಗೈದ ಕೇಂದ್ರ ಸಚಿವರಾಗಿ ಅನೇಕ ಜನಪರ ಯೋಜನೆಗಳನ್ನು ಅನುಷ್ಠಾನಗೊಳಿಸಿದ ಅಪ್ರತಿಮ ದೇಶಪ್ರೇಮಿ - ಜನನಾಯಕ

ಶ್ರೀ ಎಚ್ ಎನ್ ಅನಂತಕುಮಾರ್
(22 Sept.1959 - 12 Nov. 2018)



ನಮ್ಮ ಗೌರವಪೂರ್ವಕ ನಮನಗಳು

ಶ್ರೀಮತಿ ತೇಜಸ್ವಿನಿ ಅನಂತಕುಮಾರ
ಅಧ್ಯಕ್ಷರು : ಅದಮ್ಯ ಚೇತನ ಫೌಂಡೇಶನ್

ಐಶ್ವರ್ಯಾ ಅನಂತಕುಮಾರ | ನಂದಕುಮಾರ
ವಿಜೇತಾ ಅನಂತಕುಮಾರ | ವಿಭವ ಸಮೂಹ ಸಂಸ್ಥೆಗಳು

ಅನಂತಕುಮಾರ ಪ್ರತಿಷ್ಠಾನ, ಬೆಂಗಳೂರು
www.akp.org.in www.adamyachetana.org

ತೆರೆಗೆ ಬರುತ್ತಿದೆ ಹೋಂಬೌಂಡ್

2026ನೇ ಸಾಲಿನ ಆಸ್ಕರ್ ಪ್ರಶಸ್ತಿಯ 'ಅತ್ಯುತ್ತಮ ಅಂತರರಾಷ್ಟ್ರೀಯ ಫೀಚರ್ ಸಿನಿಮಾ' ವಿಭಾಗಕ್ಕೆ ಪ್ರವೇಶ ಪಡೆದಿರುವ 'ಹೋಂಬೌಂಡ್' ಸಿನಿಮಾ ಸೆ.26ರಂದು ತೆರೆಗೆ ಬರುತ್ತಿದೆ. 'ಪುಷ್ಪ-2', 'ದಿ ಬೆಂಗಾಲ್ ಫೈಲ್ಸ್' ಮುಂತಾದ ಸಿನಿಮಾಗಳನ್ನು ಹಿಂದಿಕ್ಕಿ ಆಸ್ಕರ್ ಸ್ಪರ್ಧೆಯಂಗಳಕ್ಕೆ ಹೊರಟಿರುವುದರಿಂದ ಸಿನಿಮಾ ಕುರಿತು ಕುತೂಹಲ ಹೆಚ್ಚಾಗಿದೆ.

ನೀರಜ್ ಘೆವಾನ್ ನಿರ್ದೇಶನದ ಚಿತ್ರವಿದು. ನೀರಜ್ ಈ ಹಿಂದೆ 'ಮಸಾನ್' ಎಂಬ ಚಿತ್ರವನ್ನು ನಿರ್ದೇಶಿಸಿದ್ದರು. ವಿಕ್ಕಿ ಕೌಶಲ್, ರಿಚಾ ಚಡ್ಡಾ ಅಭಿನಯದ ಚಿತ್ರ ಉತ್ತಮ ಪ್ರತಿಕ್ರಿಯೆ ಪಡೆದಿತ್ತು.

ಇಶಾನ್ ಖಟ್ಟರ್, ವಿಶಾಲ್ ಜೇತ್ವಾ ಮತ್ತು ಜಾನ್ವಿ ಕಪೂರ್ ಅವರು 'ಹೋಂಬೌಂಡ್' ಮುಖ್ಯ ಭೂಮಿಕೆಯಲ್ಲಿದ್ದಾರೆ. ಉತ್ತರ ಭಾರತದ ಸಣ್ಣ ಗ್ರಾಮದ ಇಬ್ಬರು ಬಾಲ್ಯ ಸ್ನೇಹಿತರು ಪೊಲೀಸ್ ಹುದ್ದೆಗೇರಲು ಶ್ರಮಿಸುವ ಕಥಾಹಂದರವನ್ನು ಹೊಂದಿದೆ. ತಮ್ಮ ಗುರಿ ಸಾಧನೆಯ ಹಾದಿಯಲ್ಲಿ ಇಬ್ಬರು ದೂರವಾಗುವ ಸಂದರ್ಭ ಬಂದಾಗಲೂ ಅವರ ಸ್ನೇಹ ಹೇಗೆ ಇಬ್ಬರನ್ನು ಒಂದುಮಾಡುತ್ತದೆ ಎಂಬುದೇ ಚಿತ್ರಕಥೆ.

ಈಗಾಗಲೇ ಒಂದಷ್ಟು ಚಿತ್ರೋತ್ಸವಗಳಲ್ಲಿ ಪ್ರದರ್ಶನ ಕಂಡಿರುವ ಚಿತ್ರದ ಕುರಿತು ಧನಾತ್ಮಕ ಪ್ರತಿಕ್ರಿಯೆ ವ್ಯಕ್ತವಾಗಿದೆ. ಸ್ನೇಹದ ಕುರಿತು ಒಂದು ಭಾವನಾತ್ಮಕ ಪಯಣವನ್ನು ಹೊಂದಿರುವ ಚಿತ್ರ ಎಂಬುದು ಟ್ರೇಲರ್‌ನಿಂದ ಮೇಲ್ನೋಟಕ್ಕೆ ಗೊತ್ತಾಗುತ್ತಿದೆ.

ಕರಣ್ ಜೋಹರ್ ಮತ್ತು ಅದಾರ್ ಪೂನಾವಾಲಾ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ.

ಮಹಾನ್‌ನಲ್ಲಿ ವರ್ಷ ಬೊಳ್ಳಮ್ಮ

ವಿಜಯ ರಾಘವೇಂದ್ರ ನಾಯಕನಾಗಿ ನಟಿಸುತ್ತಿರುವ 'ಮಹಾನ್' ಚಿತ್ರದ ಪ್ರಮುಖಪಾತ್ರದಲ್ಲಿ ದಕ್ಷಿಣ ಭಾರತದ ಖ್ಯಾತ ನಟಿ ವರ್ಷ ಬೊಳ್ಳಮ್ಮ ಕಾಣಿಸಿಕೊಳ್ಳುತ್ತಿದ್ದಾರೆ. ಪಿ.ಸಿ.ಶೇಖರ್ ನಿರ್ದೇಶನದ ಚಿತ್ರವಿದು. ಪ್ರಕಾಶ್ ಬುದ್ದೂರು ಬಂಡವಾಳ ಹೂಡಿದ್ದಾರೆ.

ವರ್ಷ ಬೊಳ್ಳಮ್ಮ ತಮಿಳಿನ 'ಬಿಗಿಲ್', '96' ಸೇರಿದಂತೆ ತೆಲುಗು, ಮಲೆಯಾಳದ ಸಾಕಷ್ಟು ಚಿತ್ರಗಳಲ್ಲಿ ನಟಿಸಿದ್ದಾರೆ. 'ಮೂಲತಃ ಕನ್ನಡದವಳಾದ ನಾನು ತಮಿಳು, ತೆಲುಗು ಹಾಗೂ ಮಲಯಾಳ ಭಾಷೆಗಳ ಚಿತ್ರಗಳಲ್ಲಿ ಅಭಿನಯಿಸಿದ್ದೇನೆ. ಇದೇ ಮೊದಲ ಬಾರಿಗೆ ಕನ್ನಡದಲ್ಲಿ ಅವಕಾಶ ಸಿಕ್ಕಿದೆ. ಮಾತೃಭಾಷೆಯ ಚಿತ್ರದಲ್ಲಿ ನಟಿಸುತ್ತಿರುವುದಕ್ಕೆ ಬಹಳ ಖುಷಿಯಾಗುತ್ತಿದೆ. ರೈತರ ಕುರಿತಾದ ಚಿತ್ರವಿದು. ರೈತರ ಬದುಕಿನ ಬವಣೆಗಳನ್ನು ನಿರ್ದೇಶಕರು ಈ ಚಿತ್ರದಲ್ಲಿ ತೋರಿಸಲು ಹೊರಟಿದ್ದಾರೆ' ಎಂದಿದ್ದಾರೆ ವರ್ಷ.

ರಾಧಿಕಾ ನಾರಾಯಣ್, ಮಿತ್ರ, ನಮ್ರತ ಗೌಡ ಮುಂತಾದವರು ಚಿತ್ರದಲ್ಲಿದ್ದಾರೆ. 'ಐದಾರು ದಿನಗಳ ಕಾಲ ಚಿತ್ರೀಕರಣ ಮಾಡಿದ್ದೇವೆ. ಆದರೆ ಈಗ ಮಾಡಿರುವುದು ಪ್ರಯೋಗಾರ್ಥ ರೀತಿಯ ಚಿತ್ರೀಕರಣ. ಅಕ್ಟೋಬರ್ ಮೊದಲ ವಾರದಿಂದ ಚಿತ್ರೀಕರಣ ಪ್ರಾರಂಭವಾಗಲಿದ್ದು, ಮಂಡ್ಯ ಸುತ್ತಮುತ್ತ ಬಹುಪಾಲು ಚಿತ್ರೀಕರಣ ನಡೆಯಲಿದೆ. ರೈತರ ಹೋರಾಟಕ್ಕೆ ಸಂಬಂಧಿಸಿದ ಕಥೆ. ವಿಜಯ್ ರಾಘವೇಂದ್ರ ತಂಗಿಯಾಗಿ ವರ್ಷ ಕಾಣಿಸಿಕೊಳ್ಳುತ್ತಾರೆ. ವಿಜಯ್ ರಾಘವೇಂದ್ರ ರೈತ ಹಾಗೂ ಹೋರಾಟಗಾರನಾಗಿ ಕಾಣಿಸಿಕೊಂಡಿದ್ದಾರೆ. ಚಿತ್ರದಲ್ಲಿ ಕಮರ್ಷಿಯಲ್ ಅಂಶಗಳೂ ಇವೆ. ರಾಜಕೀಯ, ರೈತರ ಬದುಕು ಬವಣೆಯ ಜತೆಗೆ ಮನರಂಜನೀಯ ಅಂಶಗಳಿಂದ ಕೂಡಿದ ಕಥೆ' ಎನ್ನುತ್ತಾರೆ ಪಿ.ಸಿ.ಶೇಖರ್.

'ಚಿತ್ರದ ತಾಂತ್ರಿಕ ವರ್ಗ ಕೂಡ ಪೂರ್ತಿಯಾಗಿ ಅಂತಿಮವಾಗಿಲ್ಲ. ಎಲ್ಲವನ್ನೂ ಹಂತಹಂತವಾಗಿ ತಿಳಿಸುತ್ತ ಹೋಗುತ್ತೇವೆ' ಎಂದು ನಿರ್ದೇಶಕರು ಹೇಳಿದ್ದಾರೆ.

ರಾಜನಾಗಿ ಬಂದ ಮೋಹನ್ ಲಾಲ್

ಮಲಯಾಳ ನಟ ಮೋಹನ್ ಲಾಲ್ 'ದಾದಾಸಾಹೇಬ್ ಫಾಲ್ಕೆ' ಪ್ರಶಸ್ತಿ ಪಡೆದ ಖುಷಿಯಲ್ಲಿದ್ದಾರೆ. ಜತೆಗೆ ಅವರ ನಟನೆಯ 'ವೃಷಭ' ಚಿತ್ರದ ಟೀಸರ್ ಕೂಡ ಬಿಡುಗಡೆಗೊಂಡಿದೆ. ಕನ್ನಡಿಗ ನಂದ ಕಿಶೋರ್ ಕಥೆ ಬರೆದು ಆ್ಯಕ್ಷನ್ ಕಟ್ ಹೇಳಿರುವ ಚಿತ್ರವಿದು. ಮಲಯಾಳ ಮತ್ತು ತೆಲುಗಿನಲ್ಲಿ ಏಕಕಾಲಕ್ಕೆ ನಿರ್ಮಾಣಗೊಂಡಿದ್ದು, ಕನ್ನಡ ಮತ್ತು ಹಿಂದಿಗೆ ಡಬ್ ಆಗಿದೆ. 'ಇದು ಕೇವಲ ಸಿನಿಮಾವಲ್ಲ, ಭಾವನಾತ್ಮಕ ಪಯಣ. ಲೆಜೆಂಡ್ ಎನಿಸಿಕೊಂಡಿರುವ ಮೋಹನ್ ಲಾಲ್ ಅವರೊಂದಿಗೆ ಕೆಲಸ ಮಾಡಿರುವುದು ಖುಷಿ ಇದೆ. ಅವರ ಮಗನ ಪಾತ್ರದಲ್ಲಿ ಸಮರ್ಜಿತ್ ಲಂಕೇಶ್ ನಟಿಸಿದ್ದಾರೆ. ವೃಷಭವು ತಂದೆ ಮತ್ತು ಮಗನ ಬಾಂಧವ್ಯದ ಕಥೆ. ಈ ವರ್ಷ ದೀಪಾವಳಿಗೆ ಚಿತ್ರ ತೆರೆಗೆ ಬರಲಿದೆ' ಎಂದಿದ್ದಾರೆ ನಂದ ಕಿಶೋರ್.

ನಂದ ಕಿಶೋರ್

ನಟಿ ರಾಗಿಣಿ ದ್ವಿವೇದಿ ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ. ಕನೆಕ್ಟ್ ಮೀಡಿಯಾ ಮತ್ತು ಬಾಲಾಜಿ ಟೆಲಿಫಿಲ್ಮ್ಸ್, ಅಭಿಷೇಕ್ ಎಸ್. ವ್ಯಾಸ ಸ್ಟುಡಿಯೋಸ್ ಜಂಟಿಯಾಗಿ ನಿರ್ಮಾಣ ಮಾಡಿವೆ. ಸ್ಯಾಮ್ ಸಿ.ಎಸ್ ಸಂಗೀತ, ಆಂಥೋನಿ ಸ್ಯಾಮ್ಸನ್ ಛಾಯಾಚಿತ್ರಗ್ರಹಣ, ಕೆ.ಎಂ. ಪ್ರಕಾಶ್ ಸಂಕಲನವಿದೆ.

ಮೋಹನ್ ಲಾಲ್

'ಸಹ್ಯಾದ್ರಿ' ತಪ್ಪಲಿನ ಸಿನಿಮಾ

ಈ ಹಿಂದೆ 'ಆರ' ಎಂಬ ಸಿನಿಮಾ ಮಾಡಿದ್ದ ರೋಹಿತ್ ಈಗ 'ಸಹ್ಯಾದ್ರಿ' ತಪ್ಪಲಿನತ್ತ ಹೊರಟಿದ್ದಾರೆ. ಮಲೆನಾಡು ಭಾಗದ ಹೋರಾಟಗಾರನ ಕಥೆಯನ್ನು ಹೊಂದಿರುವ ಈ ಚಿತ್ರವನ್ನು ಅವರೇ ನಿರ್ದೇಶಿಸುವುದರ ಜೊತೆಗೆ ನಾಯಕನಾಗಿಯೂ ಕಾಣಿಸಿಕೊಳ್ಳುತ್ತಿದ್ದಾರೆ.

'ಹದಿಮೂರು ಭಾಷೆಗಳಲ್ಲಿ ಈ ಸಿನಿಮಾ ಸಿದ್ಧಗೊಳ್ಳುತ್ತಿದೆ. ಕನ್ನಡದಲ್ಲಿ ಚಿತ್ರೀಕರಣಗೊಂಡು ಉಳಿದ ಭಾಷೆಗಳಿಗೆ ಡಬ್ ಆಗಲಿದೆ. ಚೆನ್ನೈನಿಂದ ನಾಯಕಿ ಬರುತ್ತಾರೆ. ಸಹ್ಯಾದ್ರಿ ತಪ್ಪಲಿನ ಹೋರಾಟಗಾರನೊಬ್ಬನ ಕಥೆ. ಆತನನ್ನು ಹೊಡೆಯಲು ಯಾರಿಂದಲೂ ಸಾಧ್ಯವಾಗುತ್ತಿರುವುದಿಲ್ಲ. ಅವನು ಸಮಾಜಕ್ಕೆ ಏನು ಮಾಡುತ್ತಾನೆ ಎಂಬುದೇ ಕಥೆ' ಎಂದರು ರೋಹಿತ್.

'ಒಂದು ಹಂತದ ಚಿತ್ರೀಕರಣ ಮುಗಿದಿದೆ. ಇನ್ನೊಂದೆರಡು ತಿಂಗಳಲ್ಲಿ ಮುಂದಿನ ಭಾಗದ ಚಿತ್ರೀಕರಣ ಪ್ರಾರಂಭವಾಗಲಿದೆ. ಮುಂದಿನ ವರ್ಷ ಬಿಡುಗಡೆ ಆಲೋಚನೆಯಿದೆ. ಬೈಂದೂರು, ಶಿವಮೊಗ್ಗ, ಮೂಡಿಗೆರೆ, ಮಂಗಳೂರು ಸುತ್ತಮುತ್ತ ಚಿತ್ರೀಕರಣ ನಡೆಸುವ ಯೋಜನೆಯಿದೆ' ಎಂದರು ಅವರು.

ಗ್ಯಾಂಗ್‌ಸ್ಟರ್ ಕಥೆ ಹೊಂದಿರುವ ಚಿತ್ರಕ್ಕೆ ನವರತ್ ವಾಸುದೇವ ಸಂಗೀತ, ವಿನೋದ್ ಲೋಕಣ್ಣನವರ್ ಛಾಯಾಚಿತ್ರಗ್ರಹಣವಿದೆ.



ರೋಹಿತ್

ಪುರುಷರ ವಿಭಾಗದ ಪ್ರಶಸ್ತಿ ಗೆದ್ದ ಆಳ್ವಾಸ್ ಮಂಗಳೂರು ತಂಡದ ಆಟಗಾರರಾದ (ಎಡದಿಂದ, ನಿಂತಿರುವವರು) ದೀಕ್ಷಿತ್ ಶೆಟ್ಟಿ, ರಾಕೇಶ್ ಸರ್ಫರಾಜ್, ಪ್ರಫುಲ್ಲಾ, ಸಾವನ್, ನಿಖಿಲ್. (ಮಂಡಿಯೂರಿದವರು) ಕಾರ್ತಿಕ್ ಗಗನ್, ಭರತ್ ಹಾಗೂ ಗಿರಿ

ಸಾತ್ವಿಕ್–ಚಿರಾಗ್ ಮತ್ತೆ ರನ್ನರ್ಸ್ ಅಪ್

ಚೀನಾ ಮಾಸ್ಟರ್ಸ್: ದಕ್ಷಿಣ ಕೊರಿಯಾದ ಕಿಮ್– ಸಿಯೋ ಜೋಡಿಗೆ ಪ್ರಶಸ್ತಿ

ಶೆಂಜೆನ್ (ಚೀನಾ), (ಪಿಟಿಐ): ಭಾರತದ ಅಗ್ರಮಾನ್ಯ ಡಬಲ್ಸ್ ಜೋಡಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರು ಭಾನುವಾರ ಚೀನಾ ಮಾಸ್ಟರ್ಸ್ ಸೂಪರ್ 750 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ರನ್ನರ್ಸ್ ಅಪ್‌ನೊಂದಿಗೆ ಅಭಿಯಾನ ಮುಗಿಸಿದರು.

ಎಂಟನೇ ಕ್ರಮಾಂಕದ ಭಾರತದ ಆಟಗಾರರು ಪುರುಷರ ಡಬಲ್ಸ್ ಫೈನಲ್‌ನಲ್ಲಿ 19-21, 15-21ರಿಂದ ವಿಶ್ವದ ಅಗ್ರಮಾನ್ಯ ಜೋಡಿ ಕಿಮ್ ವಾನ್ ಹೋ ಮತ್ತು ಸಿಯೋ ಸೆಯುಂಗ್ ಜೇ ಅವರಿಗೆ ಮಣಿದರು. ದಕ್ಷಿಣ ಕೊರಿಯಾದ ಈ ಆಟಗಾರರು 45 ನಿಮಿಷದಲ್ಲಿ ನೇರ ಗೇಮ್‌ಗಳಿಂದ ಮೇಲುಗೈ ಸಾಧಿಸಿದರು.

ಏಷ್ಯನ್ ಗೇಮ್ಸ್ ಚಾಂಪಿಯನ್ ಜೋಡಿ ಈ ಟೂರ್ನಿಯ ಮೂಲಕ ತಮ್ಮ ಪ್ರಶಸ್ತಿ ಬರವನ್ನು ನೀಗಿಸಿಕೊಳ್ಳುವ ಛಲದಲ್ಲಿದ್ದರು. ಹೋದ ತಿಂಗಳು ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಎರಡನೇ ಕಂಚಿನ ಪದಕ ಮತ್ತು ಹೋದ ವಾರ ಹಾಂಗ್‌ಕಾಂಗ್ ಓಪನ್‌ನಲ್ಲಿ ರನ್ನರ್ಸ್ ಅಪ್ ಆಗಿದ್ದ ಸಾತ್ವಿಕ್-ಚಿರಾಗ್ ಇಲ್ಲಿ ಒಂದೂ ಗೇಮ್ ಬಿಟ್ಟುಕೊಡದೆ ಪ್ರಶಸ್ತಿ ಸುತ್ತು ತಲುಪಿ, ಭರವಸೆ ಮೂಡಿಸಿದ್ದರು.

ಇತರ ಜೊತೆಗಾರರೊಂದಿಗೆ ಪ್ರಯೋಗ ಮಾಡಿ ಮತ್ತೆ ಈ ಋತುವಿನಲ್ಲಿ ಒಂದಾದ ಕಿಮ್ ಮತ್ತು ಸಿಯೋ ಅವರು 2025ರಲ್ಲಿ ಒಂಬತ್ತನೇ ಟೂರ್ನಿಯಲ್ಲಿ ಫೈನಲ್ ಸ್ಪರ್ಧಿಸಿದ್ದಾರೆ. ಆ ಪೈಕಿ ಪ್ಯಾರಿಸ್‌ನಲ್ಲಿ ನಡೆದ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ, ಆಲ್ ಇಂಗ್ಲೆಂಡ್ ಮತ್ತು ಇಂಡೋನೇಷ್ಯಾ ಓಪನ್ ಸೇರಿದಂತೆ ಆರು ಪ್ರಶಸ್ತಿಗಳನ್ನು ಮುಡಿಗೇರಿಸಿಕೊಂಡಿದ್ದಾರೆ.

ಮೊದಲ ಗೇಮ್‌ನ ಆರಂಭದಲ್ಲಿ ಕೊರಿಯಾ ಆಟಗಾರರು 3-0 ಮುನ್ನಡೆ ಗಳಿಸಿದರು. ಚಿರಾಗ್ ಮತ್ತು ಸಾತ್ವಿಕ್ ಆಕರ್ಷಕ ಸ್ಮ್ಯಾಷ್ ಮೂಲಕ ಸತತ ಆರು ಅಂಕಗಳನ್ನು ಗಳಿಸಿ ಎದುರಾಳಿಗಳಿಗೆ ಒತ್ತಡ ಹೇರಿದರು. ಒಂದು ಹಂತದಲ್ಲಿ 14-7 ಮುನ್ನಡೆಯೊಂದಿಗೆ ಹಿಡಿತ ಸಾಧಿಸಿದರು. ಆದರೆ. ಭಾರತದ ಆಟಗಾರರು ಎಸಗಿದ ತಪ್ಪಿನ ಲಾಭ ಪಡೆದ ಕೊರಿಯಾ ಜೋಡಿ ಮರಳಿ ಮುನ್ನಡೆ ಸಾಧಿಸಿತು. ಕೊನೆಯ ಹಂತದಲ್ಲಿ ತುರುಸಿನ ಪೈಪೋಟಿ ನಡೆದರೂ ಎರಡು ಅಂಕಗಳಿಂದ ಕಿಮ್ ಮತ್ತು ಸಿಯೋ ಮೇಲುಗೈ ಸಾಧಿಸಿದರು.

ಚಿರಾಗ್ ಶೆಟ್ಟಿ ಮತ್ತು ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿ ಎಕ್ಸ್ ಚಿತ್ರ

ಎರಡನೇ ಗೇಮ್‌ನ ಆರಂಭದಲ್ಲಿ ಸಮಬಲ ಹೋರಾಟ ಕಂಡುಬಂತು. ಒಂದು ಹಂತದಲ್ಲಿ 8-6 ಮುನ್ನಡೆಯೊಂದಿಗೆ ಭಾರತ ಆಟಗಾರರು ಪುಟಿದೇಳುವ ಪ್ರಯತ್ನ ಮಾಡಿದರು. ಆದರೆ, ಸಿಯೋ ಅವರು ರಕ್ಷಣಾತ್ಮಕ ಆಟ ಪ್ರದರ್ಶಿಸಿದರು. ಸಾತ್ವಿಕ್-ಚಿರಾಗ್ ಅವರಿಗೆ ಚೇತರಿಸಿಕೊಳ್ಳಲು ಅವಕಾಶ ನೀಡದ ಎದುರಾಳಿ ಜೋಡಿ ಆಕರ್ಷಕ ಡ್ರಾಪ್ ಶಾಟ್‌ಗಳ ಮೂಲಕ ಮುನ್ನಡೆಯನ್ನು ವಿಸ್ತರಿಸಿ ಜಯ ಸಾಧಿಸಿತು.

ಭಾರತ 'ಯುವಪಡೆ'ಗೆ ಜಯ

ಬ್ರಿಸ್ಬೇನ್ (ಪಿಟಿಐ): ವಿಕೆಟ್‌ಕೀಪರ್–ಬ್ಯಾಟರ್ ಅಭಿಗ್ಯಾನ್ ಕುಂದು ಮತ್ತು ವೇದಾಂತ ತ್ರಿವೇದಿ ಅವರ ಅಜೇಯ ಅರ್ಧಶತಕಗಳ ಬಲದಿಂದ ಭಾರತ 19 ವರ್ಷದೊಳಗಿನವರ ತಂಡವು ಆಸ್ಟ್ರೇಲಿಯಾ 19 ವರ್ಷದೊಳಗಿನವರ ತಂಡದ ಎದುರಿನ 'ಯೂತ್ ಏಕದಿನ' ಪಂದ್ಯದಲ್ಲಿ 7 ವಿಕೆಟ್‌ಗಳ ಜಯಸಾಧಿಸಿತು. 15 ವರ್ಷದ ವೈಭವ್ ಸೂರ್ಯವಂಶಿ ಅವರೂ ತಮ್ಮ ಬ್ಯಾಟಿಂಗ್ ಪ್ರತಿಭೆಯನ್ನು ತೋರಿದರು.

ಟಾಸ್ ಗೆದ್ದು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡ ಆಸ್ಟ್ರೇಲಿಯಾ ಎ ತಂಡವು ಭಾರತ ತಂಡದ ಬೌಲರ್‌ಗಳ ಎದುರು ದೊಡ್ಡ ಮೊತ್ತ ಪೇರಿಸಲಿಲ್ಲ. 9 ವಿಕೆಟ್‌ಗಳಿಗೆ 225 ರನ್ ಗಳಿಸಿತು. ಕಿಶನ್ ಕುಮಾರ್ ಮತ್ತು ಕನಿಷ್ಕ್ ಚೌಹಾಣ್ ತಲಾ 2 ಮತ್ತು ಹೆನಿಲ್ ಪಟೇಲ್ 3 ವಿಕೆಟ್ ಗಳಿಸಿದರು.

ಇದಕ್ಕುತ್ತರವಾಗಿ ಭಾರತ ತಂಡವು ಪಂದ್ಯದಲ್ಲಿ ಇನ್ನೂ 117 ಎಸೆತಗಳು ಬಾಕಿ ಇರುವಾಗಲೇ ಜಯಭೇರಿ ಬಾರಿಸಿತು. ಇಯಾನ್ ಹೀಲಿ ಓವಲ್‌ನಲ್ಲಿ ನಡೆದ ಪಂದ್ಯದಲ್ಲಿ ಕುಂದು (ಔಟಾಗದೇ 87; 74ಎ, 4X8, 6X5) ಮತ್ತು ವೇದಾಂತ್ (ಔಟಾಗದೇ 61; 69ಎ, 4X8) ಅವರು ಮುರಿಯದ ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 152 ರನ್ ಸೇರಿಸಿದರು. ಇದರಿಂದಾಗಿ ತಂಡವು 30.3 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 227 ರನ್ ಗಳಿಸಿತು.

ವೈಭವ್

ಆರಂಭಿಕ ಬ್ಯಾಟರ್ ವೈಭವ್ 22 ಎಸೆತಗಳಲ್ಲಿ 38 ರನ್ ಗಳಿಸಿದರು. ಅದರಲ್ಲಿ 7 ಬೌಂಡರಿ ಮತ್ತು 1 ಸಿಕ್ಸರ್ ಇದ್ದವು. ನಾಯಕ ಆಯುಷ್ ಮ್ಹಾತ್ರೆ (6 ರನ್) ಮತ್ತು ವಿಹಾನ್ ಮಲ್ಹೋತ್ರಾ (9 ರನ್) ಬೇಗನೆ ಔಟಾದರು.

ಸಂಕ್ಷಿಪ್ತ ಸ್ಕೋರು: ಆಸ್ಟ್ರೇಲಿಯಾ 19 ವರ್ಷದೊಳಗಿನವರು: 50 ಓವರ್‌ಗಳಲ್ಲಿ 9ಕ್ಕೆ225 (ಸ್ಟೀವನ್ ಹಾಗನ್ 39, ಟಾಮ್ ಹಾಗನ್ 41, ಜಾನ್ ಜೇಮ್ಸ್ ಔಟಾಗದೇ 77, ಕಿಶನ್ ಕುಮಾರ್ 59ಕ್ಕೆ2, ಹೆನಿಲ್ ಪಟೇಲ್ 38ಕ್ಕೆ3, ಕನಿಷ್ಕ ಚೌಹಾಣ್ 39ಕ್ಕೆ2) ಭಾರತ 19 ವರ್ಷದೊಳಗಿನರು: 30.3 ಓವರ್‌ಗಳಲ್ಲಿ 3ಕ್ಕೆ227 (ವೈಭವ್ ಸೂರ್ಯವಂಶಿ 38, ವೇದಾಂತ್ ತ್ರಿವೇದಿ ಔಟಾಗದೇ 61, ಅಭಿಗ್ಯಾನ್ ಕುಂದು ಔಟಾಗದೇ 87, ಚಾರ್ಲ್ಸ್ ಲಾಚಾಮುಂದ್ 46ಕ್ಕೆ2) ಫಲಿತಾಂಶ: ಭಾರತ 19 ವರ್ಷದೊಳಗಿನವರ ತಂಡಕ್ಕೆ 7 ವಿಕೆಟ್ ಜಯ. ಪಂದ್ಯಶ್ರೇಷ್ಠ: ಅಭಿಗ್ಯಾನ್ ಕುಂದು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

General

ಕರ್ನಾಟಕದಾದ್ಯಂತ ಕಂಪನಿಗಳಿಗೆ Work from Home ಕೆಲಸಕ್ಕೆ ಯುವಕರು, ಯುವತಿಯರು ಬೇಕಾಗಿದ್ದಾರೆ. 18000/- 25000/- 7th, 10th, AnyDegree. 9019427194

✓ ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಪ್ರವಾಸ

Travel

03.10.2025 ಗುರುವಾಯುರು, ಕೊಚ್ಚಿನ್,ಅಲಪೇ, ತಿರುವನಂತಪುರ, ಕನ್ಯಾಕುಮಾರಿ, ರಾಮೇಶ್ವರಂ. 03.10.2025 ಬೈದ್ಯನಾಥ್, ಗಯಾ,ಕಾಶಿ, ಅಯೋಧ್ಯಾ, ಪ್ರಯಾಗ್‌ರಾಜ್. ಕರ್ನಾಟಕ ಹೆರಿಟೇಜ್ ಟೂರ್ಸ್ (ಹನುಮಂತನಗರ). 9845035349, 9482435755.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ವಾಲಿಬಾಲ್: ಆಳ್ವಾಸ್ ತಂಡ ಚಾಂಪಿಯನ್

ಬೆಂಗಳೂರು: ಆಳ್ವಾಸ್ ಮಂಗಳೂರು ಹಾಗೂ ಆದಾಯ ತೆರಿಗೆ ತಂಡಗಳು ರಾಜ್ಯ ವಾಲಿಬಾಲ್ ಸಂಸ್ಥೆಯ ಆಶ್ರಯದಲ್ಲಿ ಎ. ಲೋಕೇಶ್ ಗೌಡ ಸ್ಮರಣಾರ್ಥ ಟ್ರೋಫಿಗಾಗಿ ನಡೆದ ರಾಜ್ಯ ಸೀನಿಯರ್ ವಾಲಿಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಕ್ರಮವಾಗಿ ಪುರುಷರ ಹಾಗೂ ಮಹಿಳೆಯರ ವಿಭಾಗದಲ್ಲಿ ಪ್ರಶಸ್ತಿ ಗೆದ್ದುಕೊಂಡವು.

ಕಂಠೀರವ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಪುರುಷರ ಫೈನಲ್‌ನಲ್ಲಿ ಆಳ್ವಾಸ್ ತಂಡವು 3-1ರಿಂದ (25-22, 21-25, 25-23, 25-22) ರಾಜ್ಯ ಪೊಲೀಸ್ ತಂಡವನ್ನು ಸೋಲಿಸಿತು. ತೀವ್ರ ಪೈಪೋಟಿಯಿಂದ ಕೂಡಿದ್ದ ಪಂದ್ಯದಲ್ಲಿ ಮೇಲುಗೈ ಸಾಧಿಸಿದ ಆಳ್ವಾಸ್ ಆಟಗಾರರು ಪ್ರಶಸ್ತಿಗೆ ಮುತ್ತಿಕ್ಕಿದರು.

ಮಹಿಳೆಯರ ಪ್ರಶಸ್ತಿ ಸುತ್ತಿನಲ್ಲಿ ಆದಾಯ ತೆರಿಗೆ ತಂಡವು 3-1ರಿಂದ (23-25, 25-11, 25-17, 25-16) ಪೋಸ್ಟಲ್ ತಂಡವನ್ನು ಮಣಿಸಿತು. ಆರಂಭದ ಹಿನ್ನಡೆಯಿಂದ ಪುಟಿದೆದ್ದ ಆದಾಯ ತೆರಿಗೆ ತಂಡವು ನಂತರದಲ್ಲಿ ಪಾರಮ್ಯ ಮೆರೆಯಿತು.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಉತ್ತರ ಕ್ರಿಯಾದಿ ಭೂಶಾಂತಿ

ಡಾ।। ಚಿಕ್ಕಕೊಮಾರಿಗೌಡರು
(ಡಾ।। ಸಿ.ಕೆ. ಗೌಡ)
ಬೆಂಗಳೂರು ದಕ್ಷಿಣ ಜಿಲ್ಲೆ, ಚನ್ನಪಟ್ಟಣ ತಾ।।, ವಿರೂಪಾಕ್ಷಿಪುರ ಹೋ।।, ಹಾರೋಕೊಪ್ಪ ಗ್ರಾಮದಲ್ಲಿ ವಾಸವಾಗಿರುವ ಲೇ।। ಶ್ರೀ ಸಿದ್ದೇಗೌಡರ ಮಗ ಡಾ।। ಚಿಕ್ಕಕೊಮಾರಿಗೌಡ (ಡಾ।। ಸಿ.ಕೆ.ಗೌಡ)ರ ಧರ್ಮಪತ್ನಿ ಶ್ರೀಮತಿ ಲಿಂಗಮ್ಮ ಸಿ.ಕೆ. ಗೌಡ ಮಾಡುವ ವಿಜ್ಞಾಪನೆಗಳು. ದಿನಾಂಕ: 12-09-2025ನೇ ಶುಕ್ರವಾರ ನನ್ನ ಪೂಜ್ಯ ಪತಿಯವರಾದ ಡಾ।। ಚಿಕ್ಕಕೊಮಾರಿಗೌಡರು (ಡಾ।। ಸಿ.ಕೆ. ಗೌಡ) ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇನೆ. ಮೃತರ ತತ್ಸಂಬಂಧವಾದ ಉತ್ತರ ಕ್ರಿಯಾದಿ ಭೂಶಾಂತಿ ಕಾರ್ಯವನ್ನು ದಿನಾಂಕ: 22-09-2025ನೇ ಸೋಮವಾರ ಬೆಳಿಗ್ಗೆ 11:00 ಗಂಟೆಗೆ ಮೇಲ್ಕಂಡ ಗ್ರಾಮದ ನಮ್ಮ ಸ್ವಗೃಹದಲ್ಲಿ ಏರ್ಪಡಿಸಲಾಗಿದೆ. ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಶಾಂತಿ ಕೋರಬೇಕಾಗಿ ವಿನಂತಿ.
ಇಂತಿ ದುಃಖತಪ್ತರು :
ಮೃತರ ಪತ್ನಿ ಶ್ರೀಮತಿ ಲಿಂಗಮ್ಮ ಸಿ.ಕೆ. ಗೌಡ ಮತ್ತು ಕುಟುಂಬವರ್ಗದವರು ಹಾಗೂ ಬಂಧು-ಮಿತ್ರರು

ಮ್ಯಾರಥಾನ್: ಪ್ರದೀಪ್, ಅಶ್ವಿನಿ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರದೀಪ್ ಸಿಂಗ್ ಚೌಧರಿ ಮತ್ತು ಅಶ್ವಿನಿ ಜಾಧವ್ ಅವರು ನಗರದಲ್ಲಿ ಭಾನುವಾರ ಎನ್‌ಇಬಿ ಸ್ಪೋರ್ಟ್ಸ್ ಆಯೋಜಿಸಿದ್ದ 'ವಿಪ್ರೊ ಬೆಂಗಳೂರು ಮ್ಯಾರಥಾನ್'ನ 12ನೇ ಆವೃತ್ತಿಯಲ್ಲಿ ಕ್ರಮವಾಗಿ ಪುರುಷರ ಮತ್ತು ಮಹಿಳೆಯರ ವಿಭಾಗದ ಪ್ರಶಸ್ತಿ ಗೆದ್ದರು.

ಭಾರತ ಅಥ್ಲೆಟಿಕ್ಸ್ ಫೆಡರೇಷನ್‌ನಿಂದ 'ಓಪನ್ ನ್ಯಾಷನಲ್ ಮ್ಯಾರಥಾನ್' ಎಂದು ಗುರುತಿಸಲ್ಪಟ್ಟ ಸ್ಪರ್ಧೆಯಲ್ಲಿ ಪೂರ್ಣ ಮ್ಯಾರಥಾನ್, ಹಾಫ್ ಮ್ಯಾರಥಾನ್, 10ಕೆ ಓಟ ಮತ್ತು 5ಕೆ ಫನ್ ಓಟ ನಡೆಯಿತು. ಒಟ್ಟು 35,000ಕ್ಕೂ ಹೆಚ್ಚು ಮಂದಿ ಉತ್ಸಾಹದಿಂದ ಪಾಲ್ಗೊಂಡರು. ಬ್ಯಾಡ್ಮಿಂಟನ್ ದಂತಕಥೆ ಪುಲ್ಲೇಲ ಗೋಪಿಚಂದ್ ಅವರು ಸ್ಪರ್ಧೆಗೆ ಚಾಲನೆ ನೀಡಿದರು.

ಆರ್ಮಿಯ ಪ್ರದೀಪ್ ಅವರು 2 ಗಂಟೆ 25 ನಿಮಿಷ 19 ಸೆಕೆಂಡ್‌ಗಳಲ್ಲಿ ಗುರಿ ತಲುಪಿ ಅಗ್ರಸ್ಥಾನ ಗಳಿಸಿದರು. ಅರುಣ್ ಧನ್ಸಿಂಗ್ ರಾಥೋಡ್ (02.25:31) ಮತ್ತು ರೈಲ್ವೇಸ್‌ನ ಹರ್ಷದ್ ಎಂ. (02:26:02) ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ಜಯಿಸಿದರು.

ಪ್ರದೀಪ್ ಸಿಂಗ್ ಚೌಧರಿ

ಅಶ್ವಿನಿ ಜಾಧವ್

ಮಹಿಳೆಯರ ವಿಭಾಗದಲ್ಲಿ ಅಶ್ವಿನಿ (03:07:07) ಚಿನ್ನ ತಮ್ಮದಾಗಿಸಿಕೊಂಡರೆ, ಭಾಗೀರಥಿ (03: 07:07), ಚಿಂತಾ ಯಾದವ್ (03.16:03) ಕ್ರಮವಾಗಿ ನಂತರದ ಸ್ಥಾನ ಪಡೆದರು. ಪೂರ್ಣ ಮ್ಯಾರಥಾನ್‌ನಲ್ಲಿ ಒಟ್ಟು 3,500ಕ್ಕೂ ಹೆಚ್ಚು ಮಂದಿ ಸ್ಪರ್ಧಿಸಿದರು.

11,000ಕ್ಕೂ ಹೆಚ್ಚು ಓಟಗಾರರು ಭಾಗವಹಿಸಿದ ಹಾಫ್ ಮ್ಯಾರಥಾನ್‌ನಲ್ಲಿ ಅಂಕಿತ್ ಗುಪ್ತಾ ಪುರುಷರ ವಿಭಾಗದಲ್ಲಿ (1:06:10) ಮೊದಲ ಸ್ಥಾನ ಪಡೆದರೆ, ದೇವಾಂಗಿ ಪುರ್ಕಾಯಸ್ಥ (1:29:17) ಮಹಿಳೆಯರ ವಿಭಾಗದಲ್ಲಿ ಅಗ್ರಸ್ಥಾನಿಯಾದರು.

10ಕೆ ಓಟದಲ್ಲಿ ಪ್ರಮುಖ್ ಬಿ.ಆರ್. (39 ನಿಮಿಷ) ಅವರು ಪುರುಷರ ವಿಭಾಗದಲ್ಲಿ ಮತ್ತು ರಮ್ಯಾ ಆರ್. (52:47ನಿ) ಮಹಿಳೆಯರ ವಿಭಾಗದಲ್ಲಿ ಪ್ರಶಸ್ತಿ ಗೆದ್ದರು. 5ಕೆ ಓಟದಲ್ಲಿ 15,000ಕ್ಕೂ ಹೆಚ್ಚು ಮಂದಿ ಪಾಲ್ಗೊಂಡಿದ್ದರು.

ಲಲಿತ್ ಶತಕ; ಗೋವಾ ಉತ್ತಮ ಮೊತ್ತ

ಬೆಂಗಳೂರು: ಲಲಿತ್ ಯಾದವ್ ಶತಕದ ಬಲದಿಂದ ಗೋವಾ ತಂಡವು ಕ್ಯಾಪ್ಟನ್ ತಿಮ್ಮಪ್ಪಯ್ಯ ಸ್ಮಾರಕ ಕ್ರಿಕೆಟ್ ಟೂರ್ನಿಯ ಸೆಮಿಫೈನಲ್‌ನಲ್ಲಿ ಕರ್ನಾಟಕ ಕಾರ್ಯದರ್ಶಿ ಇಲೆವನ್ ತಂಡದ ಎದುರು ಉತ್ತಮ ಮೊತ್ತ ಪೇರಿಸಿತು.

ಸಮಿತ್ ದ್ರಾವಿಡ್

ನಗರದ ಹೊರವಲಯದಲ್ಲಿರುವ ಆಲೂರಿನ ಪ್ಲಾಟಿನಂ ಓವಲ್‌ನಲ್ಲಿ ನಡೆಯುತ್ತಿರುವ ಪಂದ್ಯದ ಮೊದಲ ದಿನದಾಟದಲ್ಲಿ ಗೋವಾ ತಂಡವು 90 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 323 ರನ್ ಗಳಿಸಿತು. ಕರ್ನಾಟಕ ಕಾರ್ಯದರ್ಶಿ ತಂಡದ ಸಮಿತ್ ದ್ರಾವಿಡ್ (18ಕ್ಕೆ2), ಮಾಧವ್ ಪಿ ಬಜಾಜ್ (77ಕ್ಕೆ2) ಮತ್ತು ಅಭಿಷೇಕ್ ಅಹ್ಲಾವತ್ (78ಕ್ಕೆ2) ಉತ್ತಮ ಬೌಲಿಂಗ್ ಮಾಡಿದರು.

ಗೋವಾ ತಂಡದ ಲಲಿತ್ ಯಾದವ್ (ಔಟಾಗದೇ 100; 189ಎ, 4X9, 6X2) ಮತ್ತು ಅಭಿನವ್ ತೆಜರಾನಾ (88; 130ಎ, 4X10, 6X1) ಮಿಂಚಿದರು. ಇದರಿಂದಾಗಿ ತಂಡವು ಉತ್ತಮ ಮೊತ್ತ ಗಳಿಸಲು ಸಾಧ್ಯವಾಯಿತು. ಲಲಿತ್ ಜೊತೆಗೆ ಕ್ರೀಸ್‌ನಲ್ಲಿ ವಿ. ಕೌಶಿಕ್ (ಔಟಾಗದೇ 8) ಇದ್ದಾರೆ.

ಸಂಕ್ಷಿಪ್ತ ಸ್ಕೋರು: ಗೋವಾ: 90 ಓವರ್‌ಗಳಲ್ಲಿ 9ಕ್ಕೆ323 (ಮಂಥನ್ ಖುಟ್ಕರ್ 27, ಅಭಿನವ್ ತೆಜರಾನಾ 88, ಲಲಿತ್ ಯಾದವ್ ಔಟಾಗದೇ 100, ಕಶಬ್ ಬಾಕಳೆ 31, ಮೋಹಿತ್ ರೇಡ್ಕರ್ 35, ಸಮಿತ್ ದ್ರಾವಿಡ್ 18ಕ್ಕೆ2, ಮಾಧವ್ ಪಿ ಜಬಾಜ್ 77ಕ್ಕೆ2, ಅಭಿಷೇಕ್ ಅಹ್ಲಾವತ್ 78ಕ್ಕೆ2) ವಿರುದ್ಧ ಕರ್ನಾಟಕ ಕಾರ್ಯದರ್ಶಿ ಇಲೆವನ್

ಪ್ಯಾರಾ ಬ್ಯಾಡ್ಮಿಂಟನ್: ಪ್ರಮೋದ್‌ಗೆ ಚಿನ್ನ

ನವದೆಹಲಿ (ಪಿಟಿಐ): ಭಾರತದ ಪ್ರಮೋದ್ ಭಗತ್ ಅವರು ಬೀಜಿಂಗ್‌ನಲ್ಲಿ ಭಾನುವಾರ ನಡೆದ ಚೀನಾ ಪ್ಯಾರಾ ಬ್ಯಾಡ್ಮಿಂಟನ್ ಇಂಟರ್‌ನ್ಯಾಷನಲ್ ಟೂರ್ನಿಯಲ್ಲಿ ಚಿನ್ನ ಗೆದರೆ, ಸುಕಾಂತ ಕದಂ ಮತ್ತು ಕೃಷ್ಣನಗರ್ ಬೆಳ್ಳಿ ಪದಕಗಳನ್ನು ಗೆದ್ದುಕೊಂಡಿದ್ದಾರೆ.

ಅನುಭವಿ ಪ್ರಮೋದ್ ಭಾಗವತ್ ಅವರು 18 ತಿಂಗಳ ಅಮಾನತಿನ ನಂತರ ಆಟಕ್ಕೆ ಸ್ಮರಣೀಯ ಪುನರಾಗಮನ ಮಾಡಿದ್ದು, ಪುರುಷರ ಎಸ್‌ಎಲ್3 ವಿಭಾಗದ ಸಿಂಗಲ್ಸ್‌ನಲ್ಲಿ ಭಾನುವಾರ ಚಿನ್ನದ ಗೆದ್ದುಕೊಂಡರು. ಪ್ರಮೋದ್, ಉತ್ತಮ ಹೋರಾಟ ಕಂಡ ಫೈನಲ್‌ನಲ್ಲಿ ಇಂಡೊನೇಷ್ಯಾದ ಮುಹ ಅಲ್ ಇಮ್ರಾನ್ ಎದುರು ಮೊದಲ ಸೆಟ್ ಸೋತರೂ ನಂತರ 21-19, 21-16 ರಲ್ಲಿ ಜಯಗಳಿಸಿದರು.

ಹೈದರಾಬಾದ್ ರೇಸ್

ಗೇಟ್ ಲಕ್ಕಿ ಗೆಲ್ಲುವ ನಿರೀಕ್ಷೆ

ನೋಬಲ್ ಕ್ವೆಸ್ಟ್ ಪ್ಲೇಟ್ ಸೋಮವಾರದ ಹೈದರಾಬಾದ್ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಗೇಟ್ ಲಕ್ಕಿ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:55ಕ್ಕೆ ಪ್ರಾರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಹರ್ ಲೇಡಿಶಿಪ್ 2, ಡೋಂಟ್‌ಬ್ಲ್ಯಾಕ್‌ಮೈವೇ 1, ಶೂಲಿನ್ 3
2ನೇ ರೇಸ್: ಎಮಿರಾಲ್ಡ್ ಟಚ್ 5, ಡಿವೈನ್ ಫೈತ್ 4, ಸ್ಟೇಟ್ ಮ್ಯಾನ್ 2
3ನೇ ರೇಸ್: ಲೆಗೊ 1, ಸನ್ನಿ ಡೇ 4, ಪೀನಟ್ 7
4ನೇ ರೇಸ್: ಕ್ವಿಕ್ ಬೇ ಫಾಕ್ಸ್ 4, ಒನ್ಲಿ ದಿ ಬ್ರೇವ್ 2, ಎನ್‌ಆರ್‌ಐ ಹೈ ಪವರ್ 1
5ನೇ ರೇಸ್: ಗೇಟ್ ಲಕ್ಕಿ 5, ಲಿವರ್‌ಮೋರ್ 3, ಎನ್‌ಆರ್‌ಐ ಸೂಪರ್‌ಪವರ್ 2
6ನೇ ರೇಸ್: ಸ್ಮಾರ್ಟ್ ಆಪರೇಟರ್ 6, ಬ್ರೈಟ್ ನೈಟ್ 9, ಸಿಪ್ರೆಸ್ 2

ಉತ್ತಮ ಬೆಟ್: ಕ್ವಿಕ್ ಬೇ ಫಾಕ್ಸ್

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
2,3,4,5,6	1,2,3	4,5,6

ವಿಶ್ವ ಅಥ್ಲೆಟಿಕ್ ಚಾಂಪಿಯನ್‌ಷಿಪ್: ಅಂತಿಮ ದಿನ ಮಳೆಯ 'ಆಟ'

ಪುರುಷರ ರಿಲೆ: ಚಿನ್ನ ಕಸಿದ ಬೋಟ್ಸ್‌ವಾನಾ

ಟೋಕಿಯೊ (ರಾಯಿಟರ್ಸ್): ರೋಮಾಂಚಕ ಹಣಾಹಣಿಯಲ್ಲಿ ಅಮೆರಿಕ ತಂಡವನ್ನು ಕೊನೆಯ ಲೆಗ್‌ನಲ್ಲಿ ಹಿಂದೆಹಾಕಿದ ಬೋಟ್ಸ್‌ವಾನಾ ತಂಡವು ವಿಶ್ವ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನ 4x400 ಮೀಟರ್ಸ್ ರಿಲೆ ಚಿನ್ನವನ್ನು ಬಾಚಿಕೊಂಡಿತು. ಈ ಓಟದಲ್ಲಿ ಚಿನ್ನ ಗೆದ್ದ ಆಫ್ರಿಕಾದ ಮೊದಲ ತಂಡವೆಂಬ ಹೆಗ್ಗಳಿಕೆಗೂ ಪಾತ್ರವಾಯಿತು.

ಭಾನುವಾರ ಮಳೆ ಜೋರಾಗಿದ್ದು ಸ್ಪರ್ಧೆಗಳ ವೇಳಾಪಟ್ಟಿ ಏರುಪೇರಾಯಿತು. ಬೆಳಿಗ್ಗೆ ರನ್‌ಆಫ್‌ನಲ್ಲಿ ಕೆನ್ಯಾ ತಂಡವನ್ನು ಹಿಂದೆಹಾಕಿ ಫೈನಲ್ ತಲುಪಿದ್ದ ಪ್ರಬಲ ಅಮೆರಿಕವು ಚಿನ್ನ ಗೆಲ್ಲುವ ನೆಚ್ಚಿನ ತಂಡವಾಗಿತ್ತು. ಅಂತಿಮ ಲೆಗ್ ಇರುವಾಗ ಅಮೆರಿಕ ಮುಂದಿತ್ತು. ಆದರೆ 400 ಮೀ. ಓಟದಲ್ಲಿ ವೈಯಕ್ತಿಕ ಚಿನ್ನ ಗೆದ್ದಿದ್ದ, ಕಾಲಿನ್ ಕೆಬಿನಾಟ್ಸಿಪಿ ಅವರು ಮಳೆಯ ನಡುವೆ ಅತ್ಯಮೋಘವಾಗಿ ಅಂತಿಮ ಲೆಗ್ ಓಡಿ ಬೋಟ್ಸ್‌ವಾನಾಕ್ಕೆ ಐತಿಹಾಸಿಕ ಚಿನ್ನ ತಂದುಕೊಟ್ಟರು. ಈ ತಂಡ 2ನಿಮಿಷ 57.56 ಸೆಕೆಂಡುಗಳಲ್ಲಿ ಗುರಿತಲುಪಿತು.



ಹೈಜಂಪ್ ಚಿನ್ನ ಗೆದ್ದ ನಿಕೋಲಾ ಒಲಿಸ್ಲೇಗರ್ಸ್ ಎಎಫ್‌ಪಿ ಚಿತ್ರ

'ನಾನು ಕೊನೆಯ 100 ಮೀ. ಇರುವಾಗ ನನ್ನೆಲ್ಲಾ ಸಾಮರ್ಥ್ಯ ಹಾಕಲು ಯೋಚಿಸಿದ್ದು, ಅದು ಈಡೇರಿತು' ಎಂದು 21 ವರ್ಷ ವಯಸ್ಸಿನ ಕೆಬಿನಾಟ್ಸಿಪಿ ಪ್ರತಿಕ್ರಿಯಿಸಿದರು.

ಅಮೆರಿಕ ತಂಡ ಕೂದಲೆಳೆ ಅಂತರದಲ್ಲಿ ದಕ್ಷಿಣ ಆಫ್ರಿಕಾ ತಂಡವನ್ನು ಹಿಂದೆಹಾಕಿ ಬೆಳ್ಳಿ ಗೆದ್ದಿತು. ಗಡಿಯಾರದಲ್ಲಿ ಎರಡೂ ತಂಡಗಳ ಕಾಲ 2ನಿ:57.82 ಸೆ. ತೋರಿಸಿತು. 'ಅಮೆರಿಕ ತಂಡಕ್ಕೆ ಚಿನ್ನ ತಂದುಕೊಡಲು ಆಗದ್ದಕ್ಕೆ ಸ್ವಲ್ಪ ನಿರಾಸೆಯಾಯಿತು' ಎಂದು ಮೊದಲ ಲೆಗ್‌ನಲ್ಲಿ ಓಡಿದ ರಾಯ್ ಬೆಂಜಮಿನ್ ಹೇಳಿದರು. ಅವರು ಈ ಕೂಟದ 400 ಮೀ. ಹರ್ಡಲ್ಸ್ ಚಿನ್ನ ಗೆದ್ದಿದ್ದರು.

ಆದರೆ ಅಮೆರಿಕದ 4x400 ಮೀ. ಮಹಿಳೆಯರ ರಿಲೆ ತಂಡ ತೇವವಾಗಿದ್ದ ಟ್ರ್ಯಾಕ್‌ನಲ್ಲಿ 3ನಿ.16.61 ಸೆ.ಗಳಲ್ಲಿ ಓಟ ಪೂರೈಸಿ ಚಿನ್ನ ಗೆದ್ದಿತು. 400 ಮೀ. ಚಾಂಪಿಯನ್ ಸಿಡ್ನಿ ಮೆಕ್‌ಲಾಗ್ಲಿನ್ ಲೆವ್ರೋನ್ ಆ್ಯಂಕರ್ ಲೆಗ್ ಓಡಿದರು.

ಪದಕ ಪಟ್ಟಿ

ದೇಶ	ಚಿನ್ನ	ಬೆಳ್ಳಿ	ಕಂಚು	ಒಟ್ಟು
ಅಮೆರಿಕ	16	5	5	26
ಕೆನ್ಯಾ	7	2	2	11
ಕೆನಡಾ	3	1	1	5
ನೆದರ್ಲೆಂಡ್ಸ್	2	2	2	6

ಜಮೈಕಾ (3ನಿ:19.25 ಸೆ.) ಎರಡನೇ ಸ್ಥಾನ ಕಾಪಾಡಿಕೊಂಡು ಬೆಳ್ಳಿ ಗೆದ್ದಿತು. ನೆದರ್ಲೆಂಡ್ಸ್ (3ನಿ:20.18 ಸೆ) ಕಂಚಿನ ಪದಕ ಗಳಿಸಿತು.

ನಿಕೋಲಾಗೆ ಚಿನ್ನ: ಆಸ್ಟ್ರೇಲಿಯಾದ ನಿಕೋಲಾ ಒಲಿಸ್ಲೇಗರ್ಸ್ ಅವರು ಮಹಿಳೆಯರ ಹೈಜಂಪ್ ಚಿನ್ನ ಗೆದ್ದರು. ಮಳೆಯಿಂದ ಈ ಸ್ಪರ್ಧೆಯ ಕೊನೆಯ ಸುತ್ತಿನ ಯತ್ನಕ್ಕೆ ಸ್ಪರ್ಧಿಗಳು ಸಾಕಷ್ಟು ಕಾಯಬೇಕಾಯಿತು.

ಎರಡು ಬಾರಿಯ ಒಲಿಂಪಿಕ್ ಬೆಳ್ಳಿ ವಿಜೇತೆ ನಿಕೋಲಾ 2.00 ಮೀ. ಜಿಗಿದು ಮೊದಲಿಗರಾದರು. ವಿಶ್ವದಾಖಲೆ ಹೊಂದಿರುವ ಉಕ್ರೇನ್‌ನ ಯರೊಸ್ಲಾವಾ ಮಹುಚಿಕಿ 2.02 ಮೀ. ಎತ್ತರಕ್ಕೆ ಜಿಗಿಯಲು ಉದ್ದೇಶಿಸಿದರೂ ವಿಫಲರಾದರು. ಪೋಲೆಂಡ್‌ನ ಮರಿಯಾ ಜೋಡ್ಜಿಕ್ (2.00) ಬೆಳ್ಳಿ ಗೆದ್ದರು. ಮಹುಚಿಕಿ ಅಂತಿಮವಾಗಿ ಸರ್ಬಿಯಾದ ಆ್ಯಂಜೆಲಿನಾ ಟೋಪಿಕ್ ಅವರೊಂದಿಗೆ 1.97 ಮೀ. ಜಿಗಿದು ಕಂಚಿನ ಪದಕ ಹಂಚಿಕೊಂಡರು.

ಅಭಿಷೇಕ್ ಅಬ್ಬರಕ್ಕೆ ಬೆಚ್ಚಿದ ಪಾಕ್

ಶಿವಂ ದುಬೆ ಉತ್ತಮ ಬೌಲಿಂಗ್ • ಶುಭಮನ್ ಗಿಲ್ ಉಪಯುಕ್ತ ಕಾಣಿಕೆ

ದುಬೈ (ಪಿಟಿಐ): ಭಾರತದ ಆರಂಭಿಕ ಜೋಡಿ ಅಭಿಷೇಕ್ ಶರ್ಮಾ ಮತ್ತು ಶುಭಮನ್ ಗಿಲ್ ಅವರ ಅಬ್ಬರದ ಜೊತೆಯಾಟಕ್ಕೆ ಪಾಕಿಸ್ತಾನ ತಂಡವು ಬೆಚ್ಚಿಬಿದ್ದಿತು.

ದುಬೈ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ಭಾನುವಾರ ರಾತ್ರಿ ನಡೆದ ಏಷ್ಯಾ ಕಪ್ ಟಿ20 ಕ್ರಿಕೆಟ್ ಟೂರ್ನಿಯ ಸೂಪರ್ ಫೋರ್ ಪಂದ್ಯದಲ್ಲಿ ಭಾರತ ತಂಡವು 6 ವಿಕೆಟ್‌ಗಳಿಂದ ಜಯಿಸಿತು.

172 ರನ್‌ಗಳ ಗೆಲುವಿನ ಗುರಿ ಬೆನ್ನಟ್ಟಿದ ಭಾರತ ತಂಡಕ್ಕೆ ಅಭಿಷೇಕ್ (74; 39ಎ, 4X6, 6X5) ಮತ್ತು ಗಿಲ್ (47; 28ಎ, 4X8) ಅಬ್ಬರದ ಜೊತೆಯಾಟದ ಮೂಲಕ ಭದ್ರಬುನಾದಿ ಹಾಕಿದರು. ಅದರಿಂದಾಗಿ ಇನಿಂಗ್ಸ್‌ನಲ್ಲಿ 7 ಎಸೆತಗಳು ಬಾಕಿಯಿದ್ದಾಗಲೇ ಭಾರತ ತಂಡವು ಜಯಿಸಿತು.

ಈ ಇನಿಂಗ್ಸ್‌ನ ಮೊದಲ ಎಸೆತವನ್ನೇ ಸಿಕ್ಸರ್ ಹೊಡೆಯುವ ಮೂಲಕ ಅಭಿಷೇಕ್ ಭರ್ಜರಿ ಆರಂಭ ಕೊಟ್ಟರು. ಇನ್ನೊಂದು ಬದಿಯಿಂದ ಗಿಲ್ ಕೂಡ ಬೌಲರ್‌ಗಳನ್ನು ದಂಡಿಸಿದರು. ಇಬ್ಬರ ಅಬ್ಬರದ ಆಟಕ್ಕೆ ಹತ್ತು ಓವರ್‌ಗಳು ದಾಟುವ ಮುನ್ನವೇ ತಂಡದ ಮೊತ್ತವು ಮೂರಂಕಿ ಮುಟ್ಟಿತು. ಇನಿಂಗ್ಸ್‌ನ ಮೂರನೇ ಓವರ್‌ನಲ್ಲಿ ಶಾಹೀನ್ ಆಫ್ರಿದಿ ಬೌಲಿಂಗ್‌ನಲ್ಲಿ ಮಿಡ್‌ವಿಕೆಟ್‌ನಲ್ಲಿ ಕ್ಯಾಚ್ ಪಡೆಯುವ ಅವಕಾಶವನ್ನು ನವಾಜ್ ಕೈಚೆಲ್ಲಿದರು.

ಈ ಸಂದರ್ಭದಲ್ಲಿ ಭಾರತದ ಬ್ಯಾಟಿಂಗ್ ಜೋಡಿ ಮತ್ತು ಬೌಲರ್ ಹ್ಯಾರಿಸ್ ರವೂಫ್ ನಡುವೆ ಮಾತಿನ ಚಕಮಕಿಯೂ ನಡೆಯಿತು. 7ನೇ ಓವರ್‌ನಲ್ಲಿ ಲಾಂಗ್ ಆಫ್ ಬೌಂಡರಿ ಗೆರೆ ಸಮೀಪವೂ ಶರ್ಮಾಗೆ ಒಂದು ಜೀವದಾನ ಲಭಿಸಿತು. ಕ್ಯಾಚ್ ಮಾಡಲು ಪ್ರಯತ್ನಿಸಿದ ಫೀಲ್ಡರ್ ಸಾಹಿಬ್‌ಝಾದಾ ಅವರ ಬೊಗಸೆಯಲ್ಲಿ ಪುಟಿದ ಚೆಂಡು ಗೆರೆಯಾಚೆ ಬಿದ್ದು ಸಿಕ್ಸರ್ ಆಯಿತು.

ಶರ್ಮಾ ಮತ್ತು ಗಿಲ್ ಅಬ್ಬರ ಮತ್ತಷ್ಟು ರಂಗೇರಿತು. ಮೊದಲ ವಿಕೆಟ್ ಜೊತೆಯಾಟದಲ್ಲಿ 105 ರನ್ ಸೇರಿಸಿದರು. ಅರ್ಧಶತಕಕ್ಕೆ 3 ರನ್‌ಗಳ ಅಗತ್ಯವಿದ್ದ ಸಂದರ್ಭದಲ್ಲಿ ಗಿಲ್ ಅವರು ಫಾಹೀಮ್ ಅಶ್ರಫ್ ಬೌಲಿಂಗ್‌ನಲ್ಲಿ ಕ್ಲೀನ್‌ಬೌಲ್ಡ್ ಆದರು. ಜೊತೆಯಾಟ ಮುರಿಯಿತು.

ಕ್ರೀಸ್‌ಗೆ ಬಂದ ನಾಯಕ ಸೂರ್ಯ ಕುಮಾರ್ ಯಾದವ್ ಮೂರು ಎಸೆತ ಎದುರಿಸಿದರೂ ಖಾತೆ ತೆರೆಯಲಿಲ್ಲ. ಹ್ಯಾರಿಸ್ ರವೂಫ್ ಬೌಲಿಂಗ್‌ನಲ್ಲಿ ಅಬ್ರಾರ್‌ಗೆ ಕ್ಯಾಚಿತ್ತರು. ಈ ನಡುವೆ ಅಭಿಷೇಕ್ ಅಬ್ಬರ ಮುಂದುವರಿದಿತ್ತು. ಕಡೆಗೂ ಅವರ ವಿಕೆಟ್ ಪಡೆಯುವಲ್ಲಿ ಅಬ್ರಾರ್ ಅಹಮದ್ ಯಶಸ್ವಿಯಾದರು.

ಇನ್ನೊಂದು ಬದಿಯಲ್ಲಿದ್ದ ತಿಲಕ್ ವರ್ಮಾ (ಔಟಾಗದೇ 30; 19ಎ, 4X2, 6X2) ತಂಡವನ್ನು ಗೆಲುವಿನ ದಡ ಸೇರಿಸುವ ಛಲದಿಂದ ಆಡಿದರು. ಸಂಜು ಸ್ಯಾಮ್ಸನ್ (13 ರನ್) ಅವರು ರವೂಫ್‌ಗೆ ಬೌಲಿಂಗ್‌ನಲ್ಲಿ ಔಟಾದರು. ಹಾರ್ದಿಕ್ ಪಾಂಡ್ಯ (ಅಜೇಯ 7) ವರ್ಮಾ ಜೊತೆ ಸೇರಿ ತಂಡವನ್ನು ಜಯದತ್ತ ಮುನ್ನಡೆಸಿದರು.

ಫರ್ಹಾನ್ ಅರ್ಧಶತಕ–ದುಬೆ ಮಿಂಚು: ಟಾಸ್ ಗೆದ್ದ ಭಾರತ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು.

ಸಾಹೀಬ್ ಝಾದಾ ಫರ್ಹಾನ್ (58; 45ಎ, 4X5, 6X3) ಅರ್ಧಶತಕದ ಬಲದಿಂದ ಪಾಕಿಸ್ತಾನ ತಂಡವು 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 171 ರನ್ ಗಳಿಸಿತು. ಅವರು ಮತ್ತು ಸೈಮ್ ಅಯೂಬ್ (21; 17ಎ, 4X1, 6X1) ಎರಡನೇ ವಿಕೆಟ್ ಜೊತೆಯಾಟದಲ್ಲಿ 72 ರನ್ ಸೇರಿಸಿದರು.

11ನೇ ಓವರ್‌ನಲ್ಲಿ ಈ ಜೊತೆಯಾಟವನ್ನು ಶಿವಂ ಮುರಿದರು. ಅವರ ಎಸೆತವನ್ನು ಬೌಂಡರಿ ದಾಟಿಸುವ ಭರದಲ್ಲಿ ಅಯೂಬ್ ಅವರು ಅಭಿಷೇಕ್ ಶರ್ಮಾಗೆ ಕ್ಯಾಚಿತ್ತರು.

15ನೇ ಓವರ್‌ನಲ್ಲಿ ಫರ್ಹಾನ್ ವಿಕೆಟ್ ಕೂಡ ಶಿವಂ ಪಾಲಾಯಿತು. ಇನಿಂಗ್ಸ್‌ನ ಮೂರನೇ ಓವರ್‌ನಲ್ಲಿಯೇ ಹಾರ್ದಿಕ್ ಪಾಂಡ್ಯ ಎಸೆತದಲ್ಲಿ ಫಕಾರ್ ಜಮಾನ್ (15 ರನ್) ಕ್ಯಾಚ್ ಪಡೆದ ವಿಕೆಟ್‌ಕೀಪರ್ ಸಂಜು ಸ್ಯಾಮ್ಸನ್ ಸಂಭ್ರಮಿಸಿದರು.

ಆಗಿನ್ನೂ ತಂಡದ ಮೊತ್ತವು 13 ಓವರ್‌ಗಳಲ್ಲಿ 3ಕ್ಕೆ 110 ಆಗಿತ್ತು. ಮೊಹಮ್ಮದ್ ನವಾಜ್ (21; 19ಎ) ಅವರು ಕ್ರೀಸ್ ಮುಟ್ಟುವಲ್ಲಿ ತುಸು 'ಆಲಸ್ಯ' ತೋರಿದ್ದನ್ನು ಗಮನಿಸಿದ ಫೀಲ್ಡರ್ ಸೂರ್ಯಕುಮಾರ್ ಯಾದವ್ ರನೌಟ್ ಮಾಡುವಲ್ಲಿ ಚುರುಕುತನ ಮೆರೆದರು. ನಾಯಕ ಸಲ್ಮಾನ್ ಆಘಾ 13 ಎಸೆತಗಳಲ್ಲಿ 17 ಮತ್ತು ಫಾಹೀಮ್ ಅಶ್ರಫ್ (ಔಟಾಗದೇ 20; 8ಎ) ಅಬ್ಬರಿಸುವ ಮೂಲಕ ತಂಡದ ಮೊತ್ತವನ್ನು ಹೆಚ್ಚಿಸಿದರು.

ಜಸ್‌ಪ್ರೀತ್ ಬೂಮ್ರಾ ಅವರು ವಿಕೆಟ್ ಗಳಿಸಲಿಲ್ಲ. ತುಸು ದುಬಾರಿಯೂ ಆದರು. ಅವರು 4 ಓವರ್‌ಗಳಲ್ಲಿ 45 ರನ್ ಕೊಟ್ಟರು. ಕುಲದೀಪ್ ಯಾದವ್ (31ಕ್ಕೆ1) ಉತ್ತಮ ಬೌಲಿಂಗ್ ಮಾಡಿದರು. ಅಕ್ಷರ್ ಪಟೇಲ್ ಕೇವಲ ಒಂದು ಓವರ್ ಮಾತ್ರ ಬೌಲಿಂಗ್ ಮಾಡಿದರು. ಭಾರತದ ಫೀಲ್ಡರ್‌ಗಳು ಒಟ್ಟು ನಾಲ್ಕು ಕ್ಯಾಚ್ ಕೈಚೆಲ್ಲಿದರು.

ಹಸ್ತಲಾಘವ ಇಲ್ಲ!

ದುಬೈ (ಪಿಟಿಐ): ಭಾರತ ತಂಡದ ಆಟಗಾರರು ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯ ಸೂಪರ್ ಫೋರ್ ಪಂದ್ಯದಲ್ಲಿಯೂ ಪಾಕಿಸ್ತಾನದ ಆಟಗಾರರಿಗೆ ಹಸ್ತಲಾಘವ ನೀಡಲಿಲ್ಲ.

ಹೋದ ವಾರ ಗುಂಪು ಹಂತದ ಪಂದ್ಯದಲ್ಲಿಯೂ ಭಾರತದ ಆಟಗಾರರು ಪಾಕ್ ತಂಡದ ಆಟಗಾರರಿಗೆ ಕೈ ಕುಲುಕಿರಲಿಲ್ಲ. ಅದು ಬಹಳಷ್ಟು ಚರ್ಚೆಗೆ ಗ್ರಾಸವಾಗಿತ್ತು. ಭಾನುವಾರ ನಡೆದ ಸೂಪರ್ ಫೋರ್ ಪಂದ್ಯದ ಟಾಸ್ ಸಂದರ್ಭದಲ್ಲಿ ಭಾರತ ತಂಡದ ನಾಯಕ ಸೂರ್ಯಕುಮಾರ್ ಯಾದವ್ ಅವರು ಮ್ಯಾಚ್ ರೆಫರಿ ಆ್ಯಂಡಿ ಪೈಕ್ರಾಫ್ಟ್ ಅವರ ಕೈಕುಲುಕಿದರು. ಆದರೆ ಪಾಕ್ ತಂಡದ ನಾಯಕ ಸಲ್ಮಾನ್ ಆಘಾ ಅವರಿಗೆ ಹಸ್ತಲಾಘವ ನೀಡಲಿಲ್ಲ.

ಪಂದ್ಯ ಮುಗಿದ ನಂತರ ಪೆವಿಲಿಯನ್‌ನತ್ತ ಮರಳುವ ಹೊತ್ತಿನಲ್ಲಿ ಬ್ಯಾಟರ್‌ಗಳಾದ ತಿಲಕ್ ವರ್ಮಾ ಮತ್ತು ಹಾರ್ದಿಕ್ ಪಾಂಡ್ಯ ಅವರು ಪಾಕ್ ಆಟಗಾರರಿಗೆ ಹಸ್ತಲಾಘವ ನೀಡಲಿಲ್ಲ.

ಏಷ್ಯಾ ಕಪ್ 2025

ಅರ್ಧಶತಕ ದಾಖಲಿಸಿದ ಸಂಭ್ರಮದಲ್ಲಿ ಅಭಿಷೇಕ್ ಶರ್ಮಾ (ಬಲ). ಶುಭಮನ್ ಗಿಲ್ ಚಿತ್ರದಲ್ಲಿದ್ದಾರೆ ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ಪಾಕಿಸ್ತಾನ: 20 ಓವರ್‌ಗಳಲ್ಲಿ 5 ವಿಕೆಟ್‌ಗೆ 171

ಫರ್ಹಾನ್ ಸಿ ಯಾದವ್ ಬಿ ದುಬೆ 58 (45ಎ, 4x5, 6x3)
ಫಕಾರ್ ಸಿ ಸ್ಯಾಮ್ಸನ್ ಬಿ ಪಾಂಡ್ಯ 15 (9ಎ, 4x3)
ಸೈಮ್ ಸಿ ಅಭಿಷೇಕ್ ಬಿ ದುಬೆ 21 (17ಎ, 4x1, 6x1)
ಹುಸೇನ್ ಸಿ ವರುಣ್ ಬಿ ಕುಲದೀಪ್ 10 (11ಎ)
ನವಾಜ್ ರನೌಟ್ (ಯಾದವ್) 21 (19ಎ, 4x1, 6x1)
ಸಲ್ಮಾನ್ ಆಘಾ ಔಟಾಗದೇ 17 (13ಎ, 6x1)
ಫಾಹೀಮ್ ಅಶ್ರಫ್ ಔಟಾಗದೇ 20 (8ಎ, 4x1, 6x2)
ಇತರೆ: 9 (ನೋಬಾಲ್ 2, ವೈಡ್ 7)
ವಿಕೆಟ್ ಪತನ: 1-21 (ಫಕಾರ್ ಜಮಾನ್, 2.3), 2-93 (ಸೈಮ್ ಅಯೂಬ್, 10.3), 3-110 (ಹುಸೇನ್ ತಲಾತ್, 13.1), 4-115 (ಸಾಹೀಬ್ ಝಾದಾ ಫರ್ಹಾನ್, 14.1), 5-149 (ಮೊಹಮ್ಮದ್ ನವಾಜ್ 18.3)
ಬೌಲಿಂಗ್: ಹಾರ್ದಿಕ್ ಪಾಂಡ್ಯ 3–0–29–1, ಜಸ್‌ಪ್ರೀತ್ ಬೂಮ್ರಾ 4–0–45–0, ವರುಣ್ ಚಕ್ರವರ್ತಿ 4–0–25–0, ಕುಲದೀಪ್ ಯಾದವ್ 4–0–31–1, ಅಕ್ಷರ್ ಪಟೇಲ್ 1–0–8–0, ಶಿವಂ ದುಬೆ 4–0–33–2

ಭಾರತ: 18.5 ಓವರ್‌ಗಳಲ್ಲಿ 4 ವಿಕೆಟ್‌ಗೆ 174

ಅಭಿಷೇಕ್ ಸಿ ರವೂಫ್ ಬಿ ಅಬ್ರಾರ್ 74 (39ಎ, 4x6, 6x5)
ಶುಭಮನ್ ಬಿ ಫಾಹೀಮ್ 47 (28ಎ, 4x8)
ಸೂರ್ಯಕುಮಾರ್ ಸಿ ಅಬ್ರಾರ್ ಬಿ ರವೂಫ್ 0 (3ಎ)
ತಿಲಕ್ ವರ್ಮಾ ಔಟಾಗದೇ 30 (19ಎ, 4x2, 6x2)
ಸಂಜು ಬಿ ರವೂಫ್ 13 (17ಎ, 4x1)
ಹಾರ್ದಿಕ್ ಪಾಂಡ್ಯ ಔಟಾಗದೇ 7 (7ಎ, 4x1)
ಇತರೆ: 3 (ವೈಡ್ 3)
ವಿಕೆಟ್ ಪತನ: 1-105 (ಶುಭಮನ್ ಗಿಲ್, 9.5), 2-106 (ಸೂರ್ಯಕುಮಾರ್ ಯಾದವ್, 10.3), 3-123 (ಅಭಿಷೇಕ್ ಶರ್ಮಾ, 12.2), 4–148 (ಸಂಜು ಸ್ಯಾಮ್ಸನ್, 16.4)
ಬೌಲಿಂಗ್: ಶಾಹೀನ್ ಶಾ ಆಫ್ರಿದಿ 3.5–0–40–0, ಸೈಮ್ ಆಯೂಬ್ 3–0–35–0, ಅಬ್ರಾರ್ ಅಹಮದ್ 4–0–42–1, ಹ್ಯಾರಿಸ್ ರವೂಫ್ 4–0–26–2, ಫಾಹೀಮ್ ಅಶ್ರಫ್ 4–0–31–1
ಪಂದ್ಯದ ಆಟಗಾರ: ಅಭಿಷೇಕ್ ಶರ್ಮಾ

ಫಲಿತಾಂಶ: ಭಾರತ ತಂಡಕ್ಕೆ ಆರು ವಿಕೆಟ್‌ಗಳ ಜಯ

28ರಂದು ಬಿಸಿಸಿಐ ಎಜಿಎಂ: ಆಯ್ಕೆ ಬಹುತೇಕ ಖಚಿತ

ಅಧ್ಯಕ್ಷ ಮಿಥುನ್, ಭಟ್ ಖಜಾಂಚಿ

ಪಿಟಿಐ/ಪ್ರಜಾವಾಣಿ ವಾರ್ತೆ

ಮುಂಬೈ/ಬೆಂಗಳೂರು: ದೆಹಲಿ ಕ್ರಿಕೆಟ್ ತಂಡದ ಮಾಜಿ ನಾಯಕ ಮಿಥುನ್ ಮನ್ಹಾಸ್ ಮತ್ತು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ಅಧ್ಯಕ್ಷ ರಘುರಾಮ್ ಭಟ್ ಅವರು ಕ್ರಮವಾಗಿ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ನೂತನ ಅಧ್ಯಕ್ಷ ಮತ್ತು ಖಜಾಂಚಿ ಸ್ಥಾನಕ್ಕೇರುವುದು ಬಹುತೇಕ ಖಚಿತವಾಗಿದೆ.

ಮಿಥುನ್

ಮಿಥುನ್ ಅವರು ಭಾನುವಾರ ಬಿಸಿಸಿಐ ಪ್ರಧಾನ ಕಚೇರಿಯಲ್ಲಿ ತಮ್ಮ ನಾಮಪತ್ರ ಸಲ್ಲಿಸಿದರು. ಕ್ರಿಕೆಟ್ ವಲಯದಲ್ಲಿ ಇದು ಅಚ್ಚರಿಗೆ ಕಾರಣವಾಗಿದೆ. ಮಿಥುನ್ ಅವರು 157 ಪ್ರಥಮ ದರ್ಜೆ, 130 ಲಿಸ್ಟ್ ಎ ಮತ್ತು 55 ಐಪಿಎಲ್ ಪಂದ್ಯಗಳಲ್ಲಿ ಆಡಿದ್ದರು. 1997–98ರಿಂದ 2016–17ರವರೆಗೆ ಆಡಿರುವ ಅನುಭವಿ ಅವರಾಗಿದ್ದಾರೆ.

ಈ ಮುಂಚೆ ಅಧ್ಯಕ್ಷರಾಗಿದ್ದ ರೋಜರ್ ಬಿನ್ನಿ ಅವರ ಅಧಿಕಾರಾವಧಿ ಹೋದ ತಿಂಗಳು ಮುಕ್ತಾಯವಾಗಿತ್ತು. ಇದೀಗ ಅವರ ಸ್ಥಾನ ತುಂಬಲು 45 ವರ್ಷ ವಯಸ್ಸಿನ ಮಿಥುನ್ ಸಿದ್ಧರಾಗಿದ್ದಾರೆ. ಶನಿವಾರ ರಾತ್ರಿ ನಡೆದಿದ್ದ ಅನೌಪಚಾರಿಕ ಸಭೆಯ ನಂತರ ಈ ಬೆಳವಣಿಗೆ ಆಗಿದೆ. ಇನ್ನು ಕೆಲವು ಪ್ರಮುಖ ಹುದ್ದೆಗಳ ನೇಮಕಕ್ಕೂ ಚರ್ಚೆ ನಡೆಯಿತು ಎನ್ನಲಾಗಿದೆ. ಮುಂದಿನ ಭಾನುವಾರ (ಸೆ 28) ನಡೆಯಲಿರುವ ವಾರ್ಷಿಕ ಸರ್ವ ಸದಸ್ಯರ ಸಭೆಯಲ್ಲಿ ಪದಾಧಿಕಾರಿಗಳನ್ನು ಘೋಷಿಸಲಾಗುವುದು. ನಾಮಪತ್ರ ಸಲ್ಲಿಸಲು ಭಾನುವಾರ ಕೊನೆಯ ದಿನವಾಗಿತ್ತು.

ಹಾಲಿ ಕಾರ್ಯದರ್ಶಿ ದೇವಜೀತ್ ಸೈಕಿಯಾ ಅದೇ ಹುದ್ದೆಯಲ್ಲಿ ಮುಂದುವರಿಯುವ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದರು. ಹೋದ ಜನವರಿಯಲ್ಲಿ ಅವರು ಕಾರ್ಯದರ್ಶಿಯಾಗಿ ಅಧಿಕಾರ ವಹಿಸಿಕೊಂಡಿದ್ದರು. ಕೆಎಸ್‌ಸಿಎ ಅಧ್ಯಕ್ಷ ರಘುರಾಮ್ ಭಟ್ ಹಾಗೂ ಐಪಿಎಲ್ ಆಡಳಿತ ಸಮಿತಿ ಮುಖ್ಯಸ್ಥ ಅರುಣ್ ಧುಮಾಲ್ ಅವರು ಖಜಾಂಚಿ ಹುದ್ದೆಗೆ ನಾಮಪತ್ರ ಸಲ್ಲಿಸಿದರು.

'ಮುಂದಿನ ಅವಧಿಗಾಗಿ ಹೊಸ ಆಡಳಿತ ಮಂಡಳಿಯನ್ನು ಆಯ್ಕೆ ಮಾಡಲಾಗುವುದು. ಮಿಥುನ್ ಮನ್ಹಾಸ್ ಅವರನ್ನು ಅಧ್ಯಕ್ಷ ಸ್ಥಾನಕ್ಕೆ ಅಯ್ಕೆ ಮಾಡಲು ನಿರ್ಧರಿಸಲಾಗಿದೆ. ಅರುಣ್ ಧುಮಾಲ್ ಅವರು ಐಪಿಎಲ್ ಆಡಳಿತ ಸಮಿತಿ ಮುಖ್ಯಸ್ಥರಾಗಿ ಮುಂದುವರಿಯುವರು' ಎಂದೂ ಬಿಸಿಸಿಐ ಉಪಾಧ್ಯಕ್ಷ ರಾಜೀವ್ ಶುಕ್ಲಾ ಮಾಧ್ಯಮಗಳಿಗೆ ತಿಳಿಸಿದರು.

ಈ ಮೊದಲು ಖಜಾಂಚಿ ಆಗಿದ್ದ ಪ್ರಭತೇಜ್ ಭಾಟಿಯಾ ಅವರು ಜಂಟಿ ಕಾರ್ಯದರ್ಶಿ ಸ್ಥಾನದ ಆಕಾಂಕ್ಷಿಯಾಗಿದ್ದಾರೆ. ರೋಹನ್ ಗೌನ್ಸ್ ದೇಸಾಯಿ ಅವರಿಂದ ತೆರವಾದ ಸ್ಥಾನವನ್ನು ಭಾಟಿಯಾ ಪಡೆಯುವರು. ಸೌರಾಷ್ಟ್ರ ಕ್ರಿಕೆಟ್ ಸಂಸ್ಥೆ ಅಧ್ಯಕ್ಷ ಜಯದೇವ್ ಶಾ ಅವರು ಅಪೆಕ್ಸ್ ಕೌನ್ಸಿಲ್‌ನಲ್ಲಿ ದಿಲೀಪ್ ವೆಂಗಸರ್ಕಾರ್ ಅವರಿಂದ ತೆರವಾದ ಸ್ಥಾನ ಪಡೆಯುವರು.

'ಕಳೆದ ಕೆಲವೇ ತಿಂಗಳುಗಳ ಹಿಂದೆ ಕಾರ್ಯದರ್ಶಿಯಾಗಿ ನೇಮಕವಾಗಿದ್ದೆ. ನಾನು ಈ ಹುದ್ದೆಯಲ್ಲಿ ಮುಂದುವರಿಯಬೇಕು ಎಂದು ಸಹೋದ್ಯೋಗಿಗಳು ಇಚ್ಛೆ ವ್ಯಕ್ತಪಡಿಸಿದ್ದರಿಂದ ನಾಮಪತ್ರ ಸಲ್ಲಿಸಿದೆ' ಎಂದು ಸೈಕಿಯಾ ತಿಳಿಸಿದರು.

ಭಾರತದ ಆತಿಥ್ಯದಲ್ಲಿ ನಡೆಯಲಿರುವ ವೆಸ್ಟ್ ಇಂಡೀಸ್ ಎದುರಿನ ಎರಡು ಟೆಸ್ಟ್ ಪಂದ್ಯಗಳ ಸರಣಿಯ ಕುರಿತೂ ಅವರು ಮಾಹಿತಿ ನೀಡಿದರು.

'ಈ ಸರಣಿಗಾಗಿ ಸೆ.23 ಅಥವಾ 25ರಂದು ಭಾರತ ತಂಡವನ್ನು ಆಯ್ಕೆ ಮಾಡಲಾಗುವುದು' ಎಂದರು.

ಅ. 2ರಿಂದ 6ರವರೆಗೆ ಮೊದಲ ಟೆಸ್ಟ್ ಪಂದ್ಯವು ಅಹಮದಾಬಾದ್ ಮತ್ತು ಎರಡನೇಯದ್ದು ನವದೆಹಲಿಯಲ್ಲಿ ಅ.10ರಿಂದ 14ರವರೆಗೆ ನಡೆಯಲಿವೆ.

2025–27ರ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ (ಡಬ್ಲ್ಯುಟಿಸಿ) ಆವೃತಿಯಲ್ಲಿ ಶುಭಮನ್ ಗಿಲ್ ಪಡೆಯು ತವರಿನಲ್ಲಿ ಆಡಲಿರುವ ಮೊದಲ ಸರಣಿ ಇದಾಗಿದೆ.

ಹೋದ ಜೂನ್‌ನಲ್ಲಿ ಇಂಗ್ಲೆಂಡ್‌ನಲ್ಲಿ ನಡೆದಿದ್ದ ಸರಣಿಯಲ್ಲಿ ಗಿಲ್ ಪೂರ್ಣಾವಧಿ ನಾಯಕರಾಗಿ ಆಡಿದ್ದರು.

ನಾಮಪತ್ರ ಸಲ್ಲಿಸಿದೆ: ಭಟ್



ರಘುರಾಮ್ ಭಟ್

'ಬಿಸಿಸಿಐ ಖಜಾಂಚಿ ಹುದ್ದೆಗೆ ನಾಮಪತ್ರ ಸಲ್ಲಿಸಿರುವೆ. ಮುಂದಿನ ಭಾನುವಾರ ಎಜಿಎಂ ನಡೆಯಲಿದೆ' ಎಂದು ಕೆಎಸ್‌ಸಿಎ ಅಧ್ಯಕ್ಷ ರಘುರಾಮ್ ಭಟ್ 'ಪ್ರಜಾವಾಣಿ'ಗೆ ತಿಳಿಸಿದರು.

ಕೆಎಸ್‌ಸಿಎ ಅಧ್ಯಕ್ಷರಾಗಿ ಅವರು ಇದೇ 30ರಂದು ಮೂರು ವರ್ಷದ ಅವಧಿ ಪೂರೈಸಲಿದ್ದಾರೆ.

67 ವರ್ಷದ ಭಟ್ ಅವರು ಮೂಲತಃ ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನವರು. ಎಡಗೈ ಸ್ಪಿನ್ನರ್ ಆಗಿ ಕರ್ನಾಟಕ ಮತ್ತು ಭಾರತ ತಂಡವನ್ನು ಪ್ರತಿನಿಧಿಸಿದ್ದರು. 1983ರಲ್ಲಿ ಪಾಕಿಸ್ತಾನ ಮತ್ತು ವೆಸ್ಟ್ ಇಂಡೀಸ್ ವಿರುದ್ಧದ ಟೆಸ್ಟ್‌ಗಳಲ್ಲಿ ಆಡಿದ್ದರು. ಒಟ್ಟು 2 ಪಂದ್ಯಗಳಿಂದ 4 ವಿಕೆಟ್ ಗಳಿಸಿದ್ದರು. 82 ಪ್ರಥಮ ದರ್ಜೆ ಪಂದ್ಯಗಳಲ್ಲಿ ಅವರು 374 ಮತ್ತು 12 ಲಿಸ್ಟ್ ಎ ಪಂದ್ಯಗಳಲ್ಲಿ 12 ವಿಕೆಟ್‌ಗಳನ್ನು ಗಳಿಸಿದ್ದರು.

ಕೆಎಸ್‌ಸಿಎ ಆಯ್ಕೆ ಸಮಿತಿ ಮುಖ್ಯಸ್ಥರಾಗಿ, ಅಂಪೈರಿಂಗ್ ಮತ್ತು ತರಬೇತುದಾರರಾಗಿಯೂ ಕಾರ್ಯನಿರ್ವಹಿಸಿದ್ದಾರೆ. ಮೂರು ವರ್ಷಗಳ ಹಿಂದೆ ಕೆಎಸ್‌ಸಿಎ ಅಧ್ಯಕ್ಷ ಸ್ಥಾನಕ್ಕೆ ಅವಿರೋಧವಾಗಿ ಆಯ್ಕೆಯಾಗಿದ್ದರು.

ದಿವ್ಯಂ ಪ್ರಶಸ್ತಿ: ರಾಜೇಶ್‌ಗೆ 'ವರ್ಷದ ಆಟಗಾರ' ಗೌರವ

ರಾಜೇಶ್

ಜೈಪುರ (ಪಿಟಿಐ): ಅಂಗವಿಕಲ ಕ್ರೀಡಾಪಟುಗಳ ಸಾಧನೆ ಗುರುತಿಸಲು ಇದೇ ವರ್ಷ ಆರಂಭಿಸಿರುವ 'ದಿವ್ಯಂ ಕ್ರಿಕೆಟ್ ವಾರ್ಷಿಕ ಪ್ರಶಸ್ತಿ' ಸಮಾರಂಭದಲ್ಲಿ ಮುಂಬೈನ ಅನುಭವಿ ಆಟಗಾರ ರವೀಂದ್ರ ಪಾಟೀಲ ಅವರಿಗೆ 'ಜೀವಮಾನ ಸಾಧನೆ' ಪುರಸ್ಕಾರ ನೀಡಿ ಗೌರವಿಸಲಾಯಿತು. ಕರ್ನಾಟಕದ ರಾಜೇಶ್ ಕಣ್ಣೂರ್ ಅವರಿಗೆ 'ವರ್ಷದ ಆಟಗಾರ' ಗೌರವ ಪ್ರದಾನ ಮಾಡಲಾಯಿತು.

ರಾಜಸ್ಥಾನ ಅಂಗವಿಕಲ ಕ್ರಿಕೆಟ್ ಸಂಘ (ಆರ್‌ಡಿಸಿಎ) ಸಹಯೋಗದೊಂದಿಗೆ ಭಾರತ ವಿಕಲಚೇತನ ಕ್ರಿಕೆಟ್ ಮಂಡಳಿ (ಡಿಸಿಸಿಐ) ಆಯೋಜಿಸಿದ್ದ ಸಮಾರಂಭದಲ್ಲಿ ದೇಶದ ಹಲವಾರು ಆಟಗಾರರನ್ನು ಸನ್ಮಾನಿಸಲಾಯಿತು.

ವಿದರ್ಭದ ಗುರುದಾಸ್ ರಾವತ್ ಅವರು 'ವಿಶೇಷ ಕೊಡುಗೆ' ಪ್ರಶಸ್ತಿ, ಮುಂಬೈನ ವಿಕ್ರಾಂತ್ ಕೇಣಿ ಅವರು 'ಜನಪ್ರಿಯ ಆಟಗಾರ' ಪ್ರಶಸ್ತಿ, ಕರ್ನಾಟಕದ ಶಿವಶಂಕರ್ ಅವರು 'ಐಕಾನಿಕ್ ಆಟಗಾರ' ಪ್ರಶಸ್ತಿಯನ್ನು ಪಡೆದರು.

ರಾಜಸ್ಥಾನದ ಸುರೇಂದ್ರ ಖೋರ್ವಾಲ್ 'ಅತ್ಯುತ್ತಮ ಆಟಗಾರ' ಪ್ರಶಸ್ತಿ, ಗುಜರಾತ್‌ನ ಆದಿಲ್ ನನ್ಸೋಲಾ 'ವರ್ಷದ ಉದಯೋನ್ಮುಖ ತಾರೆ' ಪ್ರಶಸ್ತಿ ಮತ್ತು ಉತ್ತರ ಪ್ರದೇಶದ ಅನ್ವರ್ ಅಲಿ 'ಅತ್ಯುತ್ತಮ ಜೂನಿಯರ್ ಆಟಗಾರ' ಪ್ರಶಸ್ತಿಗೆ ಪಾತ್ರವಾದರು. ಹೈದರಾಬಾದ್‌ನ ಚಂದ್ರಭಾನ್ ಗಿರಿ 'ಅತ್ಯುತ್ತಮ ಕೋಚ್' ಪ್ರಶಸ್ತಿ ಸ್ವೀಕರಿಸಿದರು.

'ಅತ್ಯುತ್ತಮ ರಾಷ್ಟ್ರೀಯ ತಂಡ' ಪ್ರಶಸ್ತಿಗೆ ಜಮ್ಮು ಮತ್ತು ಕಾಶ್ಮೀರ ಭಾಜನವಾದರೆ, 'ವರ್ಷದ ಅತ್ಯುತ್ತಮ ಸಂಘ' ಪ್ರಶಸ್ತಿಯನ್ನು ಛತ್ತೀಸಗಢ ಅಂಗವಿಕಲ ಕ್ರಿಕೆಟ್ ಸಂಘ ಪಡೆಯಿತು.

MARUTI SUZUKI ARENA

CELEBRATIONS JUST GOT BIGGER!

WITH GST BENEFITS AND LIMITED PERIOD FESTIVE OFFERS

VALID UNTIL 30th SEPTEMBER, 2025

MODEL	REDUCTION IN PRICE (₹) UP TO	NOW STARTING AT^ (₹)	ADDITIONAL FESTIVE OFFERS (₹) UP TO
S-PRESSO	129 600	349 900	60 500
ALTO K10	107 600	369 900	70 500
CELERIO	94 100	469 900	75 500
WAGONR	79 600	498 900	75 500
SWIFT	84 600	578 900	103 000
DZIRE	87 700	625 600	3 000
BREZZA	112 700	825 900	43 000
ERTIGA	46 400	880 000	10 500
EECO	68 000	518 100	50 500

^PRICES APPLICABLE FROM 22ND SEPTEMBER 2025 ONWARDS

BOOK NOW | UP TO 100% PROCESSING FEE WAIVER ON CAR FINANCE

ARENA SAFETY SHIELD

SCAN TO CONNECT TO SHOWROOM NEAR YOU

E-BOOK TODAY AT WWW.MARUTISUZUKI.COM

Contact us at 1800-102-1800

T&C available at dealership. Features/accessories vary by variant. Black glass shade on the vehicle is due to lighting effect. Offers / Prices differ by variant/model/location/city and may change or end without notice. Includes consumer, exchange, and institutional/rural offers (where applicable) on select models. Offer values shown are maximums. Prices subject to GST rates as notified by the Government. Reductions and starting prices vary by variant. Valid with select financiers, for personal-use vehicles only.

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಹಬ್ಬದ ತಯಾರಿ

ಪ್ರಯಾಗರಾಜ್‌ನ ಕುಂಬಾರರೊಬ್ಬರು ನವರಾತ್ರಿ ಹಬ್ಬದಲ್ಲಿ ಬಳಕೆಯಾಗುವ ಮಣ್ಣಿನ ಸಣ್ಣ ಕುಡಿಕೆಗಳನ್ನು ತಯಾರಿಸಿದರು

ಓದುಗರ ಗಮನಕ್ಕೆ

ಪ್ರಜಾವಾಣಿಯ ಇಂದಿನ ಸಂಚಿಕೆ ಎರಡು ಭಾಗಗಳಲ್ಲಿ ಪ್ರಕಟವಾಗಿದೆ

ಬಸವಕಲ್ಯಾಣ: ದಸರಾ ಧರ್ಮ ಸಮ್ಮೇಳನ 8

ಏಷ್ಯಾದ ಮೊದಲ ಮಹಿಳಾ ರೈಲು ಎಂಜಿನಿಯರ್ ಸುರೇಖಾ ನಿವೃತ್ತಿ 8

‘ನಾಡಹಬ್ಬ’ಕ್ಕೆ ಬಾನು ಚಾಲನೆ ಇಂದು

ಚಾಮುಂಡೇಶ್ವರಿಗೆ ಅಗ್ರಪೂಜೆಯೊಂದಿಗೆ ಉದ್ಘಾಟನೆ; ಸಕಲ ಸಿದ್ಧತೆ

● ಎಂ.ಮಹೇಶ್

ಮೈಸೂರು: ರಾಜ್ಯದ ಐತಿಹಾಸಿಕ ಹಾಗೂ ಸಾಂಸ್ಕೃತಿಕ ಪರಂಪರೆ ಸಾರುವ ವಿಶ್ವವಿಖ್ಯಾತ ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಉದ್ಘಾಟನೆಗೆ ಕ್ಷಣಗಣನೆ ಅರಂಭವಾಗಿದೆ.

ಅಂತರರಾಷ್ಟ್ರೀಯ ‘ಬುಕರ್’ ಪ್ರಶಸ್ತಿ ಪುರಸ್ಕೃತರಾದ ಬಾನು ಮುಷ್ತಾಕ್ ಇಲ್ಲಿ ಸೋಮವಾರದಿಂದ (ಸೆ.22) ಅ.2 ರವರೆಗೆ ನಡೆಯುವ ಉತ್ಸವಕ್ಕೆ ಚಾಲನೆ ನೀಡಲಿದ್ದಾರೆ. ಚಾಮುಂಡಿ ಬೆಟ್ಟದಲ್ಲಿ ಬೆಳಿಗ್ಗೆ 10.10ರಿಂದ 10.40ರೊಳಗೆ ನಾಡದೇವತೆ ಚಾಮುಂಡೇಶ್ವರಿ ದೇವಿಯ ‘ಅಗ್ರಪೂಜೆ’ಯೊಂದಿಗೆ ಉತ್ಸವ ಗರಿಗೆದರಲಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್

ಬಾನು ಮುಷ್ತಾಕ್

ಹಾಗೂ ಜನಪ್ರತಿನಿಧಿಗಳು ಪಾಲ್ಗೊಳ್ಳುವರು. ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ. ದೇವೇಗೌಡ ಅಧ್ಯಕ್ಷತೆ ವಹಿಸುವರು.

ಇದೇ ಮೊದಲು: ಮೈಸೂರು ದಸರಾ ಉದ್ಘಾಟನೆಗೆ ಮುಸ್ಲಿಂ ಮಹಿಳೆಯನ್ನು ಆಯ್ಕೆ ಮಾಡಿರುವುದು ಇದೇ ಮೊದಲು. ಇದನ್ನು ಬಿಜೆಪಿ, ಹಿಂದುತ್ವ ಪರ ಸಂಘಟನೆಗಳು ವಿರೋಧಿಸಿದ್ದರಿಂದ ವಿವಾದ ಉಂಟಾಗಿತ್ತು. ಮಾಜಿ ಸಂಸದ ಪ್ರತಾಪ ಸಿಂಹ ಸೇರಿದಂತೆ ಕೆಲವರು ನ್ಯಾಯಾಲಯದಲ್ಲಿ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ (ಪಿಐಎಲ್) ಸಲ್ಲಿಸಿದ್ದರು. ಈ ಅರ್ಜಿಗಳನ್ನು ಹೈಕೋರ್ಟ್ ಹಾಗೂ ಸುಪ್ರೀಂ ಕೋರ್ಟ್ ವಜಾಗೊಳಿಸಿದ್ದು, ಬಾನು ಆಯ್ಕೆ ವಿರೋಧಿಸಿದವರಿಗೆ ಛೀಮಾರಿ ಹಾಕಿವೆ. ಆದರೆ, ‘ವಿವಾದದ ಕಾರ್ಮೋಡ’ದ ಕಾರಣದಿಂದಾಗಿ, ಚಾಮುಂಡಿ ಬೆಟ್ಟದಲ್ಲಿ ಉದ್ಘಾಟನೆ ಕಾರ್ಯಕ್ರಮಕ್ಕೆ ಹಿಂದೆಂದಿಗಿಂತಲೂ ಹೆಚ್ಚಿನ ಪೊಲೀಸರನ್ನು ನಿಯೋಜಿಸಲಾಗಿದೆ. ಪಾಸ್ ಇದ್ದವರಿಗಷ್ಟೆ ಪ್ರವೇಶವಿದೆ.

11 ಕಾರ್ಯಕ್ರಮಗಳಿಗೆ ಚಾಲನೆ: ಚಾಮುಂಡಿಬೆಟ್ಟದಲ್ಲಿ ಉದ್ಘಾಟನೆಗೊಂಡ ನಂತರ, ನಗರದ ವಿವಿಧ ವೇದಿಕೆಗಳಲ್ಲಿ ವೈವಿಧ್ಯಮಯ ಕಾರ್ಯಕ್ರಮಗಳಿಗೆ ಚಾಲನೆ ಸಿಗಲಿದೆ.

8

ಗಾಂಧಿ ಜಯಂತಿಯಂದೇ ಜಂಬೂಸವಾರಿ

ದಸರಾ ಪ್ರಮುಖ ಆಕರ್ಷಣೆಯಾದ ವಿಜಯದಶಮಿ ಮೆರವಣಿಗೆಯು ಗಾಂಧಿ ಜಯಂತಿ (ಅ.2)ಯಂದು ನಡೆಯಲಿದ್ದು, ಅಂದು ಮಧ್ಯಾಹ್ನ 1ರಿಂದ 1.18ರವರೆಗೆ ಅರಮನೆ ಬಲರಾಮ ದ್ವಾರದಲ್ಲಿ ನಂದಿಧ್ವಜ ಪೂಜೆ ನೆರವೇರಲಿದೆ. ಸಂಜೆ 4.42ರಿಂದ 5.06ರವರೆಗೆ ಅರಮನೆಯ ಒಳಾವರಣದಲ್ಲಿ ಮೆರವಣಿಗೆ ಗರಿಬಿಚ್ಚಲಿದ್ದು, ರಾಜಮಾರ್ಗದಲ್ಲಿ ನಾಡಿನ ಹಿರಿಮೆ–ಗರಿಮೆ ಬಿಂಬಿತವಾಗಲಿದೆ.

ಗಜಪಡೆಯ ನಾಯಕ ‘ಅಭಿಮನ್ಯು’ ಆನೆ ಹೊರಲಿರುವ 750 ಕೆ.ಜಿ. ತೂಕದ ಚಿನ್ನದ ಅಂಬಾರಿಯಲ್ಲಿ ಅಲಂಕೃತ ಚಾಮುಂಡೇಶ್ವರಿ ಉತ್ಸವ ಮೂರ್ತಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪುಷ್ಪಾರ್ಚನೆ ಮಾಡಿ ಉದ್ಘಾಟಿಸಲಿದ್ದಾರೆ. ಮೆರವಣಿಗೆಯು ಬನ್ನಿಮಂಟಪ ತಲುಪಿದ ನಂತರ, ಅಲ್ಲಿನ ಮೈದಾನದಲ್ಲಿ ಸಂಜೆ 7ಕ್ಕೆ ಪಂಜಿನ ಕವಾಯತು ಪ್ರದರ್ಶನ ನಡೆಯಲಿದೆ. ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಕವಾಯತು ವೀಕ್ಷಿಸಿ ಗೌರವವಂದನೆ ಸ್ವೀಕರಿಸಲಿದ್ದಾರೆ. ಈ ಪ್ರದರ್ಶನದೊಂದಿಗೆ 11 ದಿನಗಳ ಮಹೋತ್ಸವ ಸಂಪನ್ನಗೊಳ್ಳಲಿದೆ.

ರಾಜವಂಶಸ್ಥರಿಂದ ‘ಖಾಸಗಿ ದರ್ಬಾರ್’

ಮೈಸೂರು ರಾಜವಂಶಸ್ಥರು ಅರಮನೆಯಲ್ಲಿ ಸೋಮವಾರದಿಂದಲೇ ಶರನ್ನವರಾತ್ರಿ ಆಚರಿಸಲಿದ್ದಾರೆ. ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ರತ್ನಖಚಿತ ಸಿಂಹಾಸನದಲ್ಲಿ ಕುಳಿತು 11ನೇ ವರ್ಷದ ‘ಖಾಸಗಿ ದರ್ಬಾರ್’ ನಡೆಸಲಿದ್ದಾರೆ. ಬೆಳಿಗ್ಗೆಯಿಂದಲೇ ಧಾರ್ಮಿಕ ಕಾರ್ಯಕ್ರಮಗಳು ಆರಂಭಗೊಳ್ಳಲಿವೆ. ಗತಕಾಲದ ವೈಭವ ಸಾರುವ ಈ ಕಾರ್ಯಕ್ರಮಕ್ಕೆ ಸಾರ್ವಜನಿಕರಿಗೆ ಪ್ರವೇಶವಿಲ್ಲ.

ಅಂತಿಮ ಯಾತ್ರೆ

ಎಎಫ್‌ಪಿ ಚಿತ್ರ

ಅಸ್ಸಾಂ ರಾಜಧಾನಿ ಗುವಾಹಟಿಯ ಜಲೂಕ್‌ಬಾರಿಯಲ್ಲಿ ಭಾನುವಾರ ನಡೆದ ಬಾಲಿವುಡ್ ಗಾಯಕ, ಸಂಗೀತ ನಿರ್ದೇಶಕ ಝುಬೀನ್ ಗರ್ಗ್ ಅವರ ಪಾರ್ಥಿವ ಶರೀರದ ಮೆರವಣಿಗೆಯಲ್ಲಿ ಭಾರಿ ಸಂಖ್ಯೆಯಲ್ಲಿ ಅಭಿಮಾನಿಗಳು ಪಾಲ್ಗೊಂಡಿದ್ದರು

ಹಾಸನ: ಗಣೇಶ ಮೂರ್ತಿ ಮೇಲೆ ಚಪ್ಪಲಿ

ಬೇಲೂರು: ಇಲ್ಲಿನ ವರಸಿದ್ಧಿ ವಿನಾಯಕ ಗಣಪತಿ ದೇವಾಲಯದ ಬಾಗಿಲು ತೆರೆದು, ಮೂರ್ತಿ ಮೇಲೆ ಎರಡು ಚಪ್ಪಲಿಗಳನ್ನು ಇಟ್ಟಿರುವ ಘಟನೆ ಭಾನುವಾರ ನಡೆದಿದೆ.

ಸುದ್ದಿ 8

ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ ಮಾದರಿಯಲ್ಲಿ ಪರಿಷ್ಕರಣೆ

ಬಸ್ ಟಿಕೆಟ್ ದರ ನಿಗದಿಗೆ ಸಮಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಎಸ್ಆರ್‌ಟಿಸಿ ಸೇರಿದಂತೆ ಸಾರಿಗೆ ನಿಗಮಗಳ ಬಸ್ ಪ್ರಯಾಣ ದರವನ್ನು ಪರಿಷ್ಕರಿಸಲು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ (ಕೆಇಆರ್‌ಸಿ) ಮಾದರಿಯಲ್ಲಿ ಸಾರ್ವಜನಿಕ ಸಾರಿಗೆ ದರ ನಿಯಂತ್ರಣ ಸಮಿತಿಯನ್ನು ರಚಿಸಲು ರಾಜ್ಯ ಸರ್ಕಾರ ಕರಡು ಅಧಿಸೂಚನೆಯನ್ನು ಪ್ರಕಟಿಸಿದೆ.

ಕರ್ನಾಟಕ ಮೋಟಾರು ವಾಹನ ನಿಯಮಗಳು, 1989ರಡಿಯಲ್ಲಿ ರಚಿಸಿರುವ ಸಮಿತಿಗೆ ಸರ್ಕಾರದ ನಿವೃತ್ತ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅಥವಾ ಕರ್ನಾಟಕ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಅಧ್ಯಕ್ಷರಾಗಿರುತ್ತಾರೆ. ಇಬ್ಬರು ಸದಸ್ಯರು ಇರಲಿದ್ದಾರೆ. ಸದಸ್ಯರು ಕಾನೂನು ಶಿಕ್ಷಣ ಅರ್ಹತೆಯುಳ್ಳ ನಿವೃತ್ತ ಮುಖ್ಯ ಕಾರ್ಯದರ್ಶಿ ಅಥವಾ ಕಾರ್ಯದರ್ಶಿ ಮತ್ತು ಕೈಗಾರಿಕಾ ತಜ್ಞ ಅಥವಾ ಹಣಕಾಸು ತಜ್ಞರಾಗಿರುತ್ತಾರೆ.

8

30 ದಿನಗಳ ಬಳಿಕ ಪರಿಗಣನೆ

ರಾಜ್ಯಪತ್ರದಲ್ಲಿ ಅಧಿಸೂಚನೆಯ ಕರಡುಪ್ರತಿಯನ್ನು ಸೆ.9ರಂದು ಪ್ರಕಟಿಸಲಾಗಿದೆ. 30 ದಿನಗಳ ಬಳಿಕ ಪರಿಗಣಿಸಲಾಗುವುದು.

ಕರಡು ನಿಯಮಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕರು ಯಾವುದೇ ಆಕ್ಷೇಪಣೆ ಅಥವಾ ಸಲಹೆಯನ್ನು ಸಚಿವರು, ಸಾರಿಗೆ ಇಲಾಖೆ, ಕೊಠಡಿ ಸಂಖ್ಯೆ 123, ನೆಲ ಮಹಡಿ, ಎಂ.ಎಸ್. ಕಟ್ಟಡ, 3ನೇ ದ್ವಾರ, ಬೆಂಗಳೂರು – 560 001 ಇಲ್ಲಿಗೆ ಸಲ್ಲಿಸಬಹುದು ಎಂದು ಸಾರಿಗೆ ಇಲಾಖೆಯ ಪ್ರಕಟಣೆ ತಿಳಿಸಿದೆ.

ಪ್ರತಿ ವರ್ಷ ಶಿಫಾರಸು ಸಲ್ಲಿಕೆ

ಸಮಿತಿಯು, ರಸ್ತೆ ಸಾರಿಗೆ ನಿಗಮಗಳಿಗೆ ನೀಡಲಾದ ಶಿಫಾರಸುಗಳ ಪ್ರತಿಯನ್ನು ಉಭಯ ಸದನಗಳ ಮುಂದೆ ಮಂಡಿಸಲು ಸರ್ಕಾರಕ್ಕೆ ಪ್ರತಿ ವರ್ಷ ಏಪ್ರಿಲ್ 1ರ ನಂತರ ಸಲ್ಲಿಸಬೇಕು. ಡಿಸೆಂಬರ್ 31ರ ಒಳಗೆ ವಾರ್ಷಿಕ ವರದಿಯಾಗಿ ಸಲ್ಲಿಸಬೇಕು ಎಂದು ಸೂಚಿಸಲಾಗಿದೆ.

ದಸರಾ: 2,300 ವಿಶೇಷ ಬಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಸರಾ ಮಹೋತ್ಸವ ಮತ್ತು ಶಾಲಾ, ಕಾಲೇಜುಗಳಿಗೆ ರಜೆ ಇರುವುದರಿಂದ ಪ್ರವಾಸ ಹೋಗುವವರ ಸಂಖ್ಯೆ ಹೆಚ್ಚಾಗುವುದರಿಂದ ಕೆಎಸ್ಆರ್‌ಟಿಸಿ 2,300ಕ್ಕೂ ಅಧಿಕ ವಿಶೇಷ ಬಸ್‌ಗಳನ್ನು ರಸ್ತೆಗಿಳಿಸಲು ನಿರ್ಧರಿಸಿದೆ.

ಸೆ. 26, 27 ಮತ್ತು 30ರಂದು ಬೆಂಗಳೂರಿನಿಂದ ವಿವಿಧ ಪ್ರದೇಶಗಳಿಗೆ ಹಾಗೂ ಅ.2 ಮತ್ತು 5ರಂದು ವಿವಿಧ ಕಡೆಗಳಿಂದ ಬೆಂಗಳೂರಿಗೆ ಈ ವಿಶೇಷ ಬಸ್‌ಗಳ ಸಂಚಾರ ಇರಲಿದೆ.

ಕರ್ನಾಟಕ ಸಾರಿಗೆ (ವೇಗದೂತ), ರಾಜಹಂಸ, ಸ್ಲೀಪರ್, ಐರಾವತ, ಐರಾವತ ಕ್ಲಬ್ ಕ್ಲಾಸ್ (ಮಲ್ಟಿ ಆಕ್ಸಲ್) ಇ.ವಿ ಪವರ್ ಪ್ಲಸ್, ಅಂಬಾರಿ ಕ್ಲಬ್ ಕ್ಲಾಸ್, ಅಂಬಾರಿ ಉತ್ಸವ್ ಹಾಗೂ ಪಲ್ಲಕ್ಕಿ ಸಾರಿಗೆ ಸೇವೆಗಳ ಜೊತೆಗೆ ಹೆಚ್ಚುವರಿ ಬಸ್‌ಗಳ ಸಂಚಾರ ಇರಲಿದೆ ಎಂದು ಕೆಎಸ್ಆರ್‌ಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

ಕೆಂಪೇಗೌಡ ಬಸ್ ನಿಲ್ದಾಣ, ಮೈಸೂರು ರಸ್ತೆ ಬಸ್ ನಿಲ್ದಾಣ ಮತ್ತು ಶಾಂತಿನಗರದ ಬಿಎಂಟಿಸಿ ಬಸ್ ನಿಲ್ದಾಣದಿಂದ ಬಸ್‌ಗಳು ಹೊರಡಲಿವೆ. ಧರ್ಮಸ್ಥಳ, ಕುಕ್ಕೆಸುಬ್ರಹ್ಮಣ್ಯ, ಶೃಂಗೇರಿ, ಹೊರನಾಡು, ಕೊಲ್ಲೂರು, ಗೋಕರ್ಣ, ವಿವಿಧ ಜಿಲ್ಲಾ ಕೇಂದ್ರಗಳು ಹಾಗೂ ನೆರೆ ರಾಜ್ಯಗಳ ಹೈದರಾಬಾದ್, ಚೆನ್ನೈ, ಊಟಿ, ಕೊಡೈಕೆನಾಲ್, ಸೇಲಂ, ತಿರುಚಿನಾಪಳ್ಳಿ, ಪುದುಕೋಟೆ, ಮಧುರೈ, ಪಣಜಿ, ಶಿರಡಿ, ಪುಣೆ, ಎರ್ನಾಕುಳಂ, ಪಾಲ್‌ಘಾಟ್ ಹಾಗೂ ಇತರೆ ಸ್ಥಳಗಳಿಗೆ ವಿಶೇಷ ಬಸ್‌ಗಳ ಸಂಚಾರ ಇರಲಿದೆ.

www.ksrtc.karnataka.gov.in ವೆಬ್‌ಸೈಟ್ ಅಥವಾ ಮೊಬೈಲ್ ಮೂಲಕ ಇ-ಟಿಕೆಟ್ ಕಾಯ್ದಿರಿಸಬಹುದು. ಮೈಸೂರು ಗ್ರಾಮಾಂತರ, ನಗರ ಬಸ್ ನಿಲ್ದಾಣದಲ್ಲಿ ‘ಮಾಹಿತಿ ಕೇಂದ್ರ’ ತೆರೆಯಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮೈಸೂರಿಗೆ 610 ವಿಶೇಷ ಬಸ್

ಬೆಂಗಳೂರಿನ ಮೈಸೂರು ರಸ್ತೆ ಬಸ್ ನಿಲ್ದಾಣದಿಂದ ಮೈಸೂರಿಗೆ ಪ್ರತ್ಯೇಕವಾಗಿ 260 ಹೆಚ್ಚುವರಿ ವಾಹನಗಳ ಕಾರ್ಯಾಚರಣೆ ಇರಲಿದೆ. ಮೈಸೂರಿನ ಸುತ್ತಮುತ್ತಲಿನ ಪ್ರೇಕ್ಷಣೀಯ, ಧಾರ್ಮಿಕ ಹಾಗೂ ಪ್ರವಾಸಿ ತಾಣಗಳಾದ ಚಾಮುಂಡಿ ಬೆಟ್ಟ, ಕೆ.ಆರ್.ಎಸ್. ಅಣೆಕಟ್ಟು, ಶ್ರೀರಂಗಪಟ್ಟಣ, ನಂಜನಗೂಡು ಸೇರಿದಂತೆ ಮಡಿಕೇರಿ, ಮಂಡ್ಯ, ಮಳವಳ್ಳಿ, ಎಚ್.ಡಿ.ಕೋಟೆ, ಚಾಮರಾಜನಗರ, ಹುಣಸೂರು, ಕೆ.ಆರ್.ನಗರ, ಗುಂಡ್ಲುಪೇಟೆಗೂ ಸಾರಿಗೆ ಸಂಪರ್ಕ ಕಲ್ಪಿಸಲು 350 ಹೆಚ್ಚುವರಿ ಬಸ್‌ಗಳು ಸಂಚರಿಸಲಿವೆ.

ಬೆಂಗಳೂರಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಮೈಸೂರಿಗೆ ‘ಫ್ಲೈ ಬಸ್’ ಮೂಲಕ ನೇರ ಸಾರಿಗೆ ಸೌಲಭ್ಯ ಕಲ್ಪಿಸಲಾಗಿದೆ. ಸೆ.27 ರಿಂದ ಅ.7ರವರೆಗೆ ಮೈಸೂರಿನಲ್ಲಿ ಗಿರಿದರ್ಶಿನಿ, ಜಲದರ್ಶಿನಿ, ದೇವದರ್ಶಿನಿ ವಿಶೇಷ ಪ್ರವಾಸ ಕಾರ್ಯಾಚರಣೆ ಇದೆ.

ಕ್ಯಾಂಪಸ್‌ನಿಂದ ಕ್ಯಾಬಿನೆಟ್‌ಗೆ

ದೆಹಲಿ ವಿಶ್ವವಿದ್ಯಾಲಯದ ವಿದ್ಯಾರ್ಥಿ ಸಂಘವು ರಾಷ್ಟ್ರ ರಾಜಕಾರಣಕ್ಕೆ ನಾಯಕರನ್ನು ತಯಾರಿಸುವ 'ಕಾರ್ಖಾನೆ' ಇದ್ದಂತೆ. ಇಲ್ಲಿ ವಿದ್ಯಾರ್ಥಿ ನಾಯಕರಾಗಿದ್ದವರಲ್ಲಿ ಕೆಲವರು ರಾಜಕಾರಣದಲ್ಲಿ ಉನ್ನತ ಸ್ಥಾನಕ್ಕೆ ಏರಿದ್ದಾರೆ.

ಅರುಣ್ ಜೇಟ್ಲಿ: 1974–75ರಲ್ಲಿ ವಿದ್ಯಾರ್ಥಿ ಸಂಘದ ಅಧ್ಯಕ್ಷರಾಗುವ ಮೂಲಕ ರಾಜಕೀಯ ಜೀವನ ಆರಂಭಿಸಿದರು. ಹಲವು ವರ್ಷ ಕೇಂದ್ರ ಸಚಿವರಾಗಿ ಕಾರ್ಯ ನಿರ್ವಹಿಸಿದ್ದರು.

ರೇಖಾ ಗುಪ್ತಾ: 1996–97ರಲ್ಲಿ ಅಧ್ಯಕ್ಷರಾಗಿದ್ದರು. ಈಗ ದೆಹಲಿ ಮುಖ್ಯಮಂತ್ರಿ.

ವಿಜಯ್ ಗೋಯಲ್: 1997ರಲ್ಲಿ ಸಂಘದ ಅಧ್ಯಕ್ಷ. ಕೇಂದ್ರ ಸರ್ಕಾರದಲ್ಲಿ ಮಂತ್ರಿಯಾಗಿದ್ದರು.

ಅಜಯ್ ಮಾಕನ್: 1981ರಲ್ಲಿ ಸಂಘದ ಅಧ್ಯಕ್ಷ. ನಂತರ ದೆಹಲಿ ಸರ್ಕಾರ ಹಾಗೂ ಕೇಂದ್ರದಲ್ಲಿ ಸಚಿವರಾಗಿದ್ದರು.

ವಿಜೇಂದರ್ ಗುಪ್ತಾ : 1984ರಲ್ಲಿ ಸಂಘದ ಉಪಾಧ್ಯಕ್ಷ. ಪ್ರಸ್ತುತ ದೆಹಲಿ ವಿಧಾನಸಭಾಧ್ಯಕ್ಷ.

ಆಶಿಶ್ ಸೂದ್: 1987ರಲ್ಲಿ ಸಂಘದ ಜಂಟಿ ಕಾರ್ಯದರ್ಶಿ, 1988ರಲ್ಲಿ ಅಧ್ಯಕ್ಷ. ಈಗ ದೆಹಲಿ ಸರ್ಕಾರದಲ್ಲಿ ಮಂತ್ರಿ.



ದೆಹಲಿ ವಿ.ವಿ.ಯ ವಿದ್ಯಾರ್ಥಿ ಸಂಘದ ಚುನಾವಣೆಯಲ್ಲಿ ಜಂಟಿ ಕಾರ್ಯದರ್ಶಿಯಾಗಿ ಆಯ್ಕೆಯಾದ ಎಬಿವಿಪಿಯ ದೀಪಿಕಾ ಝಾ ವಿಜಯೋತ್ಸವ

ಮಕ್ಕಳಾಟವಲ್ಲೋ ಅಣ್ಣಾ... ಯುವ ನೇತಾರರ ಕಣ

• ಮಂಜುನಾಥ ಹೆಬ್ಬಾರ್

'ವಿದ್ಯಾರ್ಥಿ ಸಂಘದ ಚುನಾವಣೆಯಲ್ಲಿ ಇದಕ್ಕಿಂತ ಕೆಟ್ಟ ಪ್ರಚಾರ ಇರಲು ಸಾಧ್ಯವೇ? ಜೆಸಿಬಿಗಳು, ಐಷಾರಾಮಿ ಕಾರುಗಳ ಬಳಕೆಯನ್ನು ನಾವು ಇದುವರೆಗೆ ನೋಡಿಯೇ ಇಲ್ಲ. ಇವರಿಗೆ ಬೆಂಟ್ಲಿ, ರೋಲ್ಸ್–ರಾಯ್ಸ್ ಮತ್ತು ಫೆರಾರಿಯಂತಹ ದೊಡ್ಡ ದೊಡ್ಡ ಹಾಗೂ ಐಷಾರಾಮಿ ಕಾರುಗಳು ಸಿಕ್ಕಿದ್ದಾದರೂ ಎಲ್ಲಿಂದ? ನಾವು ವಿದ್ಯಾರ್ಥಿಗಳಾಗಿದ್ದಾಗ ಈ ಕಾರುಗಳ ಹೆಸರನ್ನು ಕೂಡ ಕೇಳಿರಲಿಲ್ಲ'.

ದೆಹಲಿ ವಿಶ್ವವಿದ್ಯಾಲಯದ ವಿದ್ಯಾರ್ಥಿ ಸಂಘದ ಚುನಾವಣೆಯ ತಕರಾರು ಅರ್ಜಿಯ ವಿಚಾರಣೆ ನಡೆಸಿದ ದೆಹಲಿ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ದೇವೇಂದ್ರ ಕುಮಾರ್ ಉಪಾಧ್ಯಾಯ ಹಾಗೂ ನ್ಯಾಯಮೂರ್ತಿ ತುಷಾರ್ ರಾವ್ ಗೆಡೆಲಾ ಅವರ ಕಳವಳದ ಹಾಗೂ ಕಟುನುಡಿಗಳಿವು. ಈ ಹೇಳಿಕೆಯು ದೆಹಲಿ ವಿಶ್ವವಿದ್ಯಾಲಯದ ವಿದ್ಯಾರ್ಥಿ ಸಂಘದ ಚುನಾವಣೆಯ ಆಳ– ಅಗಲಕ್ಕೆ ಪ್ರತ್ಯಕ್ಷ ನಿದರ್ಶನವಾಗಿದೆ.

ಈ ಚುನಾವಣೆಯನ್ನು ಮೊದಲಿನಿಂದಲೂ ರಾಷ್ಟ್ರ ರಾಜಕಾರಣದ ಸೂಕ್ಷ್ಮರೂಪವಾಗಿಯೇ ನೋಡಲಾಗುತ್ತದೆ. ದೇಶದ ಪ್ರಮುಖ ರಾಜಕೀಯ ಪಕ್ಷಗಳಾದ ಬಿಜೆಪಿ ಹಾಗೂ ಕಾಂಗ್ರೆಸ್‌ನ ಸೈದ್ಧಾಂತಿಕ ಹೋರಾಟವನ್ನು ಈ ಚುನಾವಣೆ ಪ್ರತಿಬಿಂಬಿಸುತ್ತದೆ. ರಾಜಕೀಯ ರಂಗಕ್ಕೆ ನಾಯಕರನ್ನು ಸಜ್ಜುಗೊಳಿಸುವ ಕಣವಾಗಿದೆ. ದೇಶದಲ್ಲಿ ವಿದ್ಯಾರ್ಥಿ ರಾಜಕಾರಣದ ತೀವ್ರತೆಯು ದಶಕಗಳಿಂದ ಏರಿಳಿತ ಕಂಡಿದ್ದರೂ, ದೆಹಲಿಯ ಕ್ಯಾಂಪಸ್ ಕಣದಲ್ಲಿ ಮಾತ್ರ ಚುನಾವಣಾ ಕಾವು ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಇದೆ. ಲೋಕಸಭೆ ಹಾಗೂ ವಿಧಾನಸಭೆ ಚುನಾವಣೆಗಳ ವೈಖರಿಯಲ್ಲೇ ವಿದ್ಯಾರ್ಥಿ ಸಂಘದ ಚುನಾವಣೆ ನಡೆದಿದೆ. 2 ಲಕ್ಷದಷ್ಟಿರುವ ವಿದ್ಯಾರ್ಥಿ ಮತದಾರರನ್ನು ಸೆಳೆಯಲು ಯುವ ನಾಯಕರು ಒಡ್ಡುವ ಆಮಿಷಗಳು ಒಂದೆರಡಲ್ಲ.

ವಿದ್ಯಾರ್ಥಿ ಸಂಘಟನೆಗಳ ನಡುವೆ ಸಂಘರ್ಷ, ಮಾರಾಮಾರಿಯಂತಹ ಪ್ರಕರಣಗಳು ವ್ಯಾಪಕವಾಗಿ ನಡೆದ ಕಾರಣಕ್ಕೆ ಕರ್ನಾಟಕದ ವಿಶ್ವವಿದ್ಯಾಲಯಗಳಲ್ಲಿ ಚುನಾವಣೆಗೆ ನಿರ್ಬಂಧ ಹೇರಿ ದಶಕಗಳೇ ಕಳೆದಿವೆ. ವಿದ್ಯಾರ್ಥಿ ಸಂಘಟನೆಗಳಿಗೆ ಚುನಾವಣೆ ನಡೆಸಲು ಅನುಮತಿ ನೀಡುವ ಬಗ್ಗೆ ರಾಜ್ಯ ಸರ್ಕಾರ ಚಿಂತನೆ ನಡೆಸಿದೆ. ಇದೇ ಹೊತ್ತಿನಲ್ಲಿ, ದೆಹಲಿ ವಿಶ್ವವಿದ್ಯಾಲಯದ ಚುನಾವಣೆಯ ವಿದ್ಯಮಾನಗಳು ಮುನ್ನೆಲೆಗೆ ಬಂದಿವೆ.

ವಿ.ವಿ.ಯ ಈ ಹಿಂದಿನ ಚುನಾವಣೆಗಳಲ್ಲಿನ ಅಕ್ರಮ, ಗಲಾಟೆ ಹಾಗೂ ವಿವಾದಗಳ ಕಾರಣಕ್ಕೆ ಈ ಬಾರಿ ಕೆಲವು ನಿರ್ಬಂಧಗಳನ್ನು ಹೇರಲಾಗಿತ್ತು. ಬಹಳ ವರ್ಷಗಳ ನಂತರ, ಜೋರಾದ ರ್‍ಯಾಲಿಗಳು, ಕರಪತ್ರಗಳು ಹಾಗೂ ಯುವ ನಾಯಕರ ಅಬ್ಬರದ ಭಾಷಣಗಳು ಮಾಯವಾಗಿದ್ದವು. ಎದುರಾಳಿಗಳ ದೂಷಣೆ ಹಾಗೂ ಆಕ್ರಮಣಕಾರಿ ಘೋಷಣೆಗಳ ಬದಲು ಅಭ್ಯರ್ಥಿಗಳು ಶಿಕ್ಷಣ ನೀತಿಯಂತಹ ವಿಷಯಗಳಿಗೆ ಒತ್ತು ನೀಡಿದ್ದರು. ಹೀಗಾಗಿ, ಈ ಬಾರಿಯದು ಒಂದು ರೀತಿ ಸ್ವಚ್ಛ ಹಾಗೂ ಹಸಿರು ಚುನಾವಣೆ!

ಆದರೆ, ಕಳ್ಳಾಟಗಳಿಗೇನೂ ಕಡಿಮೆ ಇರಲಿಲ್ಲ. ಅಭ್ಯರ್ಥಿಗಳು ಯುವ ಮತದಾರರನ್ನು ಸೆಳೆಯಲು ಹಲವು ಬಗೆಯ ಆಮಿಷಗಳನ್ನು ಒಡ್ಡಿದ್ದರು. ಹೈಕೋರ್ಟ್ ನಿರ್ದೇಶನದ ಮೇರೆಗೆ ಕೈಗೊಂಡ ಕಟ್ಟುನಿಟ್ಟಿನ ಕಣ್ಗಾವಲಿನ ನಡುವೆಯೂ ವಿದ್ಯಾರ್ಥಿಗಳನ್ನು ಗುಟ್ಟಾಗಿ ಪ್ರವಾಸಗಳಿಗೆ ಕರೆದೊಯ್ಯಲಾಗಿತ್ತು. ಮತದಾನದ ದಿನ 'ಝುನ್ ಜೀ' ಮತದಾರರಿಗೆ ವಡಾಪಾವ್ ಕೂಪನ್‌ಗಳು ಹಾಗೂ ಉಡುಗೊರೆಯ ಕೂಪನ್‌ಗಳನ್ನು ವಿತರಿಸಲಾಗಿತ್ತು. ಕ್ಯಾಂಪಸ್‌ನ ಸಮೀಪದಲ್ಲಿ ₹ 500ರ ನೋಟುಗಳನ್ನು ಯುವಜನರ ಮೇಲೆ ಸುರಿಯಲಾಗಿತ್ತು. ಈ ನೋಟುಗಳನ್ನು ಪಡೆಯಲು ಜನ ಮುಗಿಬಿದ್ದಿದ್ದರು. ಆದರೆ ಅವು ನಕಲಿ ಎಂದು ತಿಳಿದ ಬಳಿಕ ಬೇಸ್ತುಬಿದ್ದಿದ್ದರು. ಎರಡು ಕಾಲೇಜುಗಳ ಎಲೆಕ್ಟ್ರಾನಿಕ್ ಮತಯಂತ್ರಗಳಲ್ಲಿ ಅಕ್ರಮ ನಡೆದಿದೆ ಎಂಬ ಆರೋಪದಿಂದಾಗಿ ವಿದ್ಯಾರ್ಥಿ ಗುಂಪುಗಳ ನಡುವೆ ಸಂಘರ್ಷ ಏರ್ಪಟ್ಟಿತ್ತು. ಮತಚೋರಿಯಾಗಿದೆ ಎಂದು ಎನ್‌ಎಸ್‌ಯುಐ ಮುಖಂಡರು ಆರೋಪಿಸಿದ್ದರು. ಕ್ಯಾಂಪಸ್‌ನ ಈ ಚುನಾವಣೆ 'ಮಿನಿ ಭಾರತ'ದ ಚುನಾವಣೆಯಂತಿತ್ತು!

ಅಧ್ಯಕ್ಷ ಗಾದಿ ಸೇರಿದಂತೆ ಮೂರು ಸ್ಥಾನಗಳಲ್ಲಿ ಬಿಜೆಪಿ ಬೆಂಬಲಿತ ಎಬಿವಿಪಿ, ಒಂದು ಸ್ಥಾನದಲ್ಲಿ ಕಾಂಗ್ರೆಸ್ ಬೆಂಬಲಿತ ಎನ್‌ಎಸ್‌ಯುಐ ಜಯ ಸಾಧಿಸಿದವು. ❖

ಸ್ಟೂಡೆಂಟ್ ಕಾರ್ನರ್



ಹೂಗುಚ್ಛ ಬೇಡ

ಮುಂಬೈ: ಅಧಿಕೃತ ಕಾರ್ಯಕ್ರಮಗಳಲ್ಲಿ ಹೂಗುಚ್ಛದ ಬದಲಿಗೆ ನೋಟ್‌ಪುಸ್ತಕ ನೀಡುವ ಪದ್ಧತಿಯನ್ನು ಜಾರಿಗೆ ತಂದಿದ್ದಾರೆ ಮಹಾರಾಷ್ಟ್ರದ ಸಿಂಧೂದುರ್ಗ ಜಿಲ್ಲಾ ಪರಿಷತ್‌ನ ಸಿಇಒ ರವೀಂದ್ರ.

ಈ ವರ್ಷದ ಫೆಬ್ರುವರಿಯಲ್ಲಿ ಅವರು ಈ ಹುದ್ದೆಗೆ ವರ್ಗವಾಗಿ ಬಂದಾಗಿನಿಂದ ಈವರೆಗೆ 2,000 ನೋಟ್‌ಪುಸ್ತಕಗಳು ಸಂಗ್ರಹವಾಗಿದ್ದು, ಅವುಗಳನ್ನು ಬಡಮಕ್ಕಳಿಗೆ ವಿತರಿಸಲಾಗಿದೆ.

ಅಹೋರಾತ್ರಿ ಪಾದಯಾತ್ರೆ

ಇಟಾನಗರ: ಬಹುಕಾಲದಿಂದ ಇರುವ ಶಿಕ್ಷಕರ ಕೊರತೆ ನೀಗಿಸುವಂತೆ ಆಗ್ರಹಿಸಿ, ಅರುಣಾಚಲ ಪ್ರದೇಶದ ಪಕ್ಕೆ ಕೆಸ್ಸಾಂಗ್ ಜಿಲ್ಲೆಯ ಕಸ್ತೂರಬಾ ಗಾಂಧಿ ಬಾಲಿಕಾ ವಿದ್ಯಾಲಯದ ಸುಮಾರು 90 ವಿದ್ಯಾರ್ಥಿನಿಯರು ಇತ್ತೀಚೆಗೆ 65 ಕಿ.ಮೀ ದೂರದವರೆಗೆ ಮೆರವಣಿಗೆ ನಡೆಸಿದರು.

ಹಗಲೂ ರಾತ್ರಿ ಪಾದಯಾತ್ರೆ ನಡೆಸಿ ಜಿಲ್ಲಾ ಕೇಂದ್ರಕ್ಕೆ ಬಂದು, ಶಿಕ್ಷಣ ಇಲಾಖೆ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರು. ಅವರು ಹಿಡಿದಿದ್ದ 'ಶಿಕ್ಷಕರಿಲ್ಲದ ಶಾಲೆಯು ಬರೀ ಕಟ್ಟಡದಂತೆ' ಎಂಬ ಫಲಕಗಳು ಗಮನ ಸೆಳೆದವು. ಬಾಲಕಿಯರ ಈ ದಿಢೀರ್ ಪಾದಯಾತ್ರೆಯು ಪೋಷಕರು, ಅಧಿಕಾರಿಗಳು ಹಾಗೂ ಜನಸಾಮಾನ್ಯರಲ್ಲಿ ಅಚ್ಚರಿ ಹಾಗೂ ಆಘಾತ ಉಂಟು ಮಾಡಿತು. ತಕ್ಷಣವೇ ಶಿಕ್ಷಕರ ನೇಮಕಕ್ಕೆ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದ ಅಧಿಕಾರಿಗಳು, ವಾಹನದ ಮೂಲಕ ಮಕ್ಕಳನ್ನು ವಾಪಸ್ ಕಳುಹಿಸಿ ಕೊಟ್ಟರು. ಸ್ವಯಂಸೇವಾ ಸಂಸ್ಥೆಯೊಂದು ಈ ಶಾಲೆಯನ್ನು ನಡೆಸುತ್ತಿದೆ.

ಲಕ್ಷಾಂತರ ಮಂದಿಗೆ ಪರೀಕ್ಷೆ

ಕೋಲ್ಕತ್ತ: ಪಶ್ಚಿಮ ಬಂಗಾಳದ 11 ಮತ್ತು 12ನೇ ತರಗತಿಯ ಸರ್ಕಾರಿ ಹಾಗೂ ಅನುದಾನಿತ ಶಾಲಾ ಶಿಕ್ಷಕರ ನೇಮಕಾತಿಗಾಗಿ ಇತ್ತೀಚೆಗೆ ನಡೆದ ಪರೀಕ್ಷೆಗೆ 2.20 ಲಕ್ಷ ಮಂದಿ ಹಾಜರಾಗಿದ್ದರು. ಇವರಲ್ಲಿ ಸಾವಿರಾರು ಮಂದಿ ನೆರೆಯ ಉತ್ತರಪ್ರದೇಶ ಮತ್ತು ಬಿಹಾರ ರಾಜ್ಯಗಳಿಗೆ ಸೇರಿದವರು.



ಇದೇ ತಿಂಗಳ ಆರಂಭದಲ್ಲಿ 9 ಮತ್ತು 10ನೇ ತರಗತಿಯ ಶಿಕ್ಷಕರ ನೇಮಕಾತಿಗಾಗಿ ನಡೆದಿದ್ದ ಪರೀಕ್ಷೆಯನ್ನು ಸುಮಾರು 3 ಲಕ್ಷ ಮಂದಿ ಬರೆದಿದ್ದರು.

2016ರ ನೇಮಕಾತಿ ಪ್ರಕ್ರಿಯೆ ದೋಷಪೂರಿತವಾಗಿದೆ ಎಂದು ಸುಪ್ರೀಂ ಕೋರ್ಟ್ ತೀರ್ಪಿತ್ತ ಬಳಿಕ, 26,000 ಶಿಕ್ಷಕರು ಮತ್ತು ಶಿಕ್ಷಕೇತರ ಸಿಬ್ಬಂದಿ ಕೆಲಸ ಕಳೆದುಕೊಂಡಿದ್ದಾರೆ. ಅವರ ಜಾಗಕ್ಕೆ ಈ ಹೊಸ ನೇಮಕಾತಿ ಪ್ರಕ್ರಿಯೆ ನಡೆದಿದೆ.

ಕಾಲು ಮುಟ್ಟದೆ ಹೊಡೆತ ತಿಂದರು

ಬಾರೀಪದಾ (ಒಡಿಶಾ): ತಮ್ಮ ಕಾಲು ಮುಟ್ಟಿ ನಮಸ್ಕರಿಸದ ವಿದ್ಯಾರ್ಥಿಗಳನ್ನು ಥಳಿಸಿದ ಮಯೂರ್‌ಭಂಜ್ ಜಿಲ್ಲೆಯ ಗ್ರಾಮವೊಂದರ ಸರ್ಕಾರಿ ಶಾಲೆಯ ಶಿಕ್ಷಕಿಯನ್ನು ಅಮಾನತು ಮಾಡಲಾಗಿದೆ.



ಬೆಳಗಿನ ಪ್ರಾರ್ಥನೆಯ ಬಳಿಕ ವಿದ್ಯಾರ್ಥಿಗಳು ಶಿಕ್ಷಕರ ಪಾದ ಮುಟ್ಟಿ ಗೌರವ ಸಲ್ಲಿಸುವುದು ಈ ಶಾಲೆಯಲ್ಲಿ ರೂಢಿಯಲ್ಲಿದೆ. ಆದರೆ ಅಂದು ಶಿಕ್ಷಕಿ ಸುಕಾಂತಿ ಕರ್ ಶಾಲೆಗೆ ತಡವಾಗಿ ಬಂದಿದ್ದು, ಅಷ್ಟರಲ್ಲಿ ಪ್ರಾರ್ಥನೆ ಮುಗಿದಿತ್ತು. ಹೀಗಾಗಿ, ಮಕ್ಕಳು ಅವರ ಕಾಲಿಗೆ ನಮಸ್ಕರಿಸಲಿಲ್ಲ. ಇದರಿಂದ ಸಿಟ್ಟಿಗೆದ್ದ ಶಿಕ್ಷಕಿ, 6, 7 ಮತ್ತು 8ನೇ ತರಗತಿಯ 31 ಮಕ್ಕಳಿಗೆ ಬಿದಿರುಕೋಲಿನಿಂದ ಹೊಡೆದಿದ್ದರು.

ಇದರಿಂದ ಹಲವರ ಕೈಗಳು ಮತ್ತು ಬೆನ್ನಿನಲ್ಲಿ ಬರೆ ಬಂದಿತ್ತು. ಒಬ್ಬ ಬಾಲಕನ ಕೈಮೂಳೆ ಮುರಿದಿತ್ತು. ಪ್ರಜ್ಞಾಹೀನಳಾದ ವಿದ್ಯಾರ್ಥಿನಿಯೊಬ್ಬಳನ್ನು ಆಸ್ಪತ್ರೆಗೆ ಕರೆದೊಯ್ಯಬೇಕಾಗಿ ಬಂದಿತ್ತು. ಶಾಲಾ ಆಡಳಿತ ಮಂಡಳಿ ನಡೆಸಿದ ತನಿಖೆಯಿಂದ ಈ ಸಂಗತಿಗಳು ಹೊರಬಂದಿದ್ದವು. ಶಾಲಾ ಮಕ್ಕಳಿಗೆ ದೈಹಿಕ ಶಿಕ್ಷೆ ನೀಡುವುದನ್ನು ಒಡಿಶಾ ಸರ್ಕಾರ 2004ರಲ್ಲೇ ನಿಷೇಧಿಸಿದೆ. ❖

ಅತಿ ಕಾಳಜಿ ಬಿಡಿ ಸ್ವಾತಂತ್ರ್ಯ ಕೊಡಿ

ಸಮಾಧಾನ

ಡಾ.ಡಿ.ಎಂ. ಹೆಗಡೆ, ಸಮಾಲೋಚಕರು

• ನಮಗೆ ಒಬ್ಬನೇ ಮಗ. ಪದವಿ ಕೊನೆಯ ವರ್ಷದಲ್ಲಿದ್ದಾನೆ. ಓದಿನಲ್ಲಿ ಪರವಾಗಿಲ್ಲ. ಆದರೆ ವಯಸ್ಸಿಗೆ ಮೀರಿದ ನಾಚಿಕೆ ಹಾಗೂ ಹಿಂಜರಿಕೆ. ಗೆಳೆಯರು ಕಡಿಮೆ. ಮಾತಾಡುವಾಗ ಆಗಾಗ ಉಗ್ಗುತ್ತಾನೆ. ಬೈಕು ಕೊಡಿಸಿ ಎಂದು ಹಟ ಮಾಡುತ್ತಾನೆ. ಅವನಿಗೇನಾದರೂ ಅನಾಹುತವಾದರೆ ಎನ್ನುವ ಆತಂಕದಿಂದ ನಾವು ಕೊಡಿಸಿಲ್ಲ. ಯಾವಾಗಲೂ ಮೊಬೈಲ್ ಫೋನಿನಲ್ಲಿ ಮುಳುಗಿರುತ್ತಾನೆ. ಒಬ್ಬನೇ ಎಲ್ಲಿಗೂ ಹೋಗುವುದಿಲ್ಲ. ನನ್ನ ಮೇಲೆ ಸಿಡುಕುತ್ತಾನೆ. ತಂದೆಯ ಜೊತೆಗೆ ಓಡಾಡುತ್ತಾನೆ. ನೌಕರಿ ಮಾಡುವುದಿಲ್ಲ, ಹಾಗಾಗಿ ಮುಂದೆ ಓದುವುದಿಲ್ಲ ಎನ್ನುತ್ತಾನೆ. ಯಾಕೆ ಹೀಗೆ?

ಸುನೀತಾ ಕಡವಾಡಕರ್, ಬೆಳಗಾವಿ

ನಿಜ, ಬೆಳೆಯುವ ಮಕ್ಕಳು ಅಸಹಜವಾಗಿ ವರ್ತಿಸಿದರೆ ಪಾಲಕರಿಗೆ ಆತಂಕವಾಗುತ್ತದೆ. ನಿಮ್ಮ ಮಗನಿಗೆ ಈಗ ಹದಿಹರೆಯ ಮುಗಿಯುತ್ತಿರುವ ಸಮಯ. ಪ್ರೌಢನಂತೆ ವರ್ತಿಸಬೇಕು. ಅಂದಹಾಗೆ, ಆತ ಮೊದಲಿನಿಂದಲೂ ಹೀಗೆಯೇ ಅಥವಾ ಈಗೀಗ ಹೀಗಾಗುತ್ತಿದ್ದಾನೆಯೇ? ಒಬ್ಬನೇ ಮಗ ಎಂದು ನೀವು ಮೊದಲಿನಿಂದಲೂ ಅವನನ್ನು ಅಗತ್ಯಕ್ಕಿಂತ ಹೆಚ್ಚು ಕಾಳಜಿಯಿಂದ, ಮುದ್ದಾಗಿ ಬೆಳೆಸಿದ್ದೀರಿ, ಹೌದು ತಾನೆ? ಎಷ್ಟೇ ಮಕ್ಕಳಿದ್ದರೂ ಅಥವಾ ಒಂದೇ ಮಗುವಿದ್ದರೂ ಪಾಲಕರು ಸಹಜವಾಗಿ ಬೆಳೆಸಬೇಕು. ಇಲ್ಲದಿದ್ದರೆ ಮಕ್ಕಳು ಸ್ವಂತ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಲಾರರು. ಅವರಿಗೆ ವಯೋಸಹಜವಾದ ಅನುಭವಗಳು ಆಗಲು ಬಿಡಬೇಕು. ಕೋಣೆಯ ಮಗು ಕೊಳೆಯಿತು, ಬೀದಿಯ ಮಗು ಬೆಳೆಯಿತು ಎನ್ನುವ ಗಾದೆಯಂತೆ ಆಗಬಾರದು. ಹಾಗಾದಾಗ ಅವರು ಪರಾವಲಂಬಿಯಾಗಿಯೇ ಪಾಲಕರ ಅವಲಂಬಿಯಾಗಿಯೇ ಉಳಿದುಬಿಡುವ ಸಾಧ್ಯತೆ ಹೆಚ್ಚು. ನಿಮ್ಮ ಮಗನ ವಿಷಯದಲ್ಲಿ ಅಂಥ ಲಕ್ಷಣಗಳು ಕಾಣಿಸುತ್ತಿವೆ.

ಮೂವತ್ತು ವರ್ಷವಾದರೂ ಅಪ್ಪ, ಅಮ್ಮನ ಆದೇಶದಂತೆಯೇ ಕೆಲಸ ಮಾಡುವ, ಪಾಲಕರು ಹಾಕಿದ ಗೆರೆಯನ್ನು ದಾಟದವರನ್ನು ಕಂಡಿದ್ದೇನೆ. ಅವರು ಅಸಹಜವಾಗಿ ಕಾಣುತ್ತಾರೆ. ಪ್ರಾಣಿಗಳು ನೈಸರ್ಗಿಕವಾಗಿ ಮಕ್ಕಳನ್ನು ಹೊತ್ತು, ಹೆತ್ತು, ಸಾಕುತ್ತವೆ. ತಮ್ಮ ಸಂತಾನದ ಬಗ್ಗೆ ಅನವಶ್ಯವಾಗಿ ತಲೆಕೆಡಿಸಿಕೊಳ್ಳುವುದಿಲ್ಲ. ಮರಿಗಳನ್ನು ಒಂದಿಷ್ಟು ಸಮಯದವರೆಗೆ ಒಟ್ಟಿಗಿದ್ದು ರಕ್ಷಿಸಿ, ಸಾಕುತ್ತವೆ. ಬೇಟೆಯಾಡುವುದನ್ನು ಕಲಿಸುತ್ತವೆ. ಕೆಲ ತಿಂಗಳುಗಳ ನಂತರ ಬೇರೆ ಬೇರೆಯಾಗಿ, ಸ್ವತಂತ್ರವಾಗಿ ಬದುಕುತ್ತವೆ. ಇದು ನಮಗೆ ಪ್ರಕೃತಿ ಕಲಿಸುವ ಪಾಠ.

ಕೆಲವೊಮ್ಮೆ ವಿಮಾನದಲ್ಲಿ ಹೋಗುವವರಿಗೂ ಅಪಘಾತವಾಗುತ್ತದೆ. ಫುಟ್‌ಪಾತಿನಲ್ಲಿ ನಡೆಯುತ್ತಿರುವವರೂ ಅವಘಡಕ್ಕೆ ಈಡಾದ ಉದಾಹರಣೆಗಳಿವೆ. ಹಾಗೆಂದು, ಅದೇ ಭಯದಿಂದ ಯಾರೂ ಏನನ್ನೂ ಮಾಡದೆ, ಎಲ್ಲಿಗೂ ಪ್ರಯಾಣಿಸದೆ ಇರಲು ಸಾಧ್ಯವೇ? ಸ್ವಂತ ಬೈಕಿನಲ್ಲಿ ಓಡಾಡಬೇಕೆನ್ನುವ ನಿಮ್ಮ ಮಗನ ಆಸೆ ಅಸಹಜವಾದುದೇನಲ್ಲ. ಅವನಿಗೆ ಏನಾದರೂ ಅಪಾಯವಾಗುತ್ತದೆ ಎನ್ನುವ ನಿಮ್ಮೊಳಗಿನ ನಿತ್ಯ ಆತಂಕ ಅವನ ಮೇಲೆ ನಕಾರಾತ್ಮಕ ಪ್ರಭಾವವನ್ನು ಬೀರಿದೆ. ಇಂತಹ ಸಂದರ್ಭದಲ್ಲಿ ತಪ್ಪು ಯಾರದು ಎಂದು ವಿಶ್ಲೇಷಿಸುವುದರಿಂದ ಸಮಸ್ಯೆ ಬಗೆಹರಿಯುವುದಿಲ್ಲ. ಅವನ ಮನಸ್ಸಿನೊಳಗಿನ ಕೆಲವಾದರೂ ವಯೋಸಹಜವಾದ ಆಸೆ, ಬಯಕೆ ಈಡೇರದಿದ್ದರೆ ಹೇಗೆ? ಅವನೇ ಸ್ವತಂತ್ರವಾಗಿ ಕೆಲವನ್ನಾದರೂ ಈಡೇರಿಸಿಕೊಳ್ಳುವಷ್ಟು ಸಮರ್ಥನಿರದಿದ್ದರೆ ಹೇಗೆ? ❖

ವಿದ್ಯಾರ್ಥಿ ವೇತನ ಕೈಪಿಡಿ

ಮುಸ್ಕಾನ್ ಸ್ಕಾಲರ್‌ಷಿಪ್

ವಾಲ್ವೋಲಿನ್ ಕಮಿನ್ಸ್ ಪ್ರೈವೇಟ್ ಲಿಮಿಟೆಡ್‌ನ (ವಿಸಿಪಿಎಲ್) ಉಪಕ್ರಮ ಇದಾಗಿದೆ.

ಅರ್ಹತೆ: ಭಾರತದ ದಕ್ಷಿಣ, ಪೂರ್ವ ಮತ್ತು ಈಶಾನ್ಯ ರಾಜ್ಯಗಳ 9ರಿಂದ 12ನೇ ತರಗತಿಯ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಲು ಅರ್ಹರು. ವಾಣಿಜ್ಯ ಚಾಲಕರು (ಎಲ್‌ಎಂವಿ/ಎಚ್‌ಎಂವಿ) ಹಾಗೂ ಮೆಕ್ಯಾನಿಕ್‌ಗಳ ಮಕ್ಕಳು ಮತ್ತು ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ (ಇಡಬ್ಲ್ಯುಎಸ್) ಸೇರಿದವರ ಮಕ್ಕಳಾಗಿರಬೇಕು. ಹಿಂದಿನ ತರಗತಿಯಲ್ಲಿ ಶೇ 60ಕ್ಕಿಂತ ಹೆಚ್ಚು ಅಂಕ ಗಳಿಸಿರಬೇಕು. ಕುಟುಂಬದ ಒಟ್ಟು ವಾರ್ಷಿಕ ಆದಾಯ ₹ 8 ಲಕ್ಷ ಮೀರಿರಬಾರದು.

ಆರ್ಥಿಕ ಸಹಾಯ: ₹ 12,000ದವರೆಗಿನ ಸ್ಕಾಲರ್‌ಷಿಪ್ ಮತ್ತು ಮಾರ್ಗದರ್ಶನ ಬೆಂಬಲ.

ಅರ್ಜಿ ಸಲ್ಲಿಸಲು ಕೊನೇ ದಿನ: 30-09-2025

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್.

ಹೆಚ್ಚಿನ ಮಾಹಿತಿಗೆ: Short Url: www.b4s.in/praja/MKSP2

ಐಡಿಎಫ್‌ಸಿ ಫಸ್ಟ್ ಬ್ಯಾಂಕ್

ಬಿ.ಟೆಕ್ ಅಥವಾ ಬಿ.ಇ. ಕೋರ್ಸ್‌ನ ಮೊದಲ ವರ್ಷಕ್ಕೆ ದಾಖಲಾಗಿರುವ ವಿದ್ಯಾರ್ಥಿಗಳಿಗೆ ಮುಕ್ತವಾಗಿದೆ. ಕುಟುಂಬದ ವಾರ್ಷಿಕ ಆದಾಯ ₹ 6 ಲಕ್ಷ ಮೀರಿರಬಾರದು. ವಿದ್ಯಾರ್ಥಿಗಳು ಬೇರೆ ಯಾವುದೇ ಸ್ಕಾಲರ್‌ಷಿಪ್ ಅಥವಾ ಬೋಧನಾ ಶುಲ್ಕದ ವಿನಾಯಿತಿ ಪಡೆಯುತ್ತಿರಬಾರದು. ಡಿಪ್ಲೊಮಾ, ಅರೆಕಾಲಿಕ ಕೋರ್ಸ್, ದೂರಶಿಕ್ಷಣ, ಡ್ಯುಯಲ್ ಡಿಗ್ರಿ ಮಾಡುತ್ತಿರುವವರು ಅರ್ಹರಲ್ಲ.

ಆರ್ಥಿಕ ಸಹಾಯ: ನಾಲ್ಕು ವರ್ಷಗಳವರೆಗೆ ವರ್ಷಕ್ಕೆ ₹ 1 ಲಕ್ಷ. **ಅರ್ಜಿ ಸಲ್ಲಿಸಲು ಕೊನೇ ದಿನ:** 30-09-2025 **ಅರ್ಜಿ ಸಲ್ಲಿಸುವ ವಿಧಾನ:** ಆನ್‌ಲೈನ್.

ಮಾಹಿತಿಗೆ: Short Url: www.b4s.in/praja/IFBES1

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಗಣಿತ

ವರ್ಗ ಸಮೀಕರಣ

ಅಭ್ಯಾಸ 4.2

3) ಎರಡು ಸಂಖ್ಯೆಗಳ ಮೊತ್ತ 27 ಮತ್ತು ಗುಣಲಬ್ಧ 182 ಆದರೆ ಆ ಸಂಖ್ಯೆಗಳನ್ನು ಕಂಡುಹಿಡಿಯಿರಿ.

ಪರಿಹಾರ:– ಒಂದು ಸಂಖ್ಯೆ $27-x$ ಆಗಿರಲಿ (ಎರಡೂ ಸಂಖ್ಯೆಗಳ ಮೊತ್ತ 27)

ಆ ಸಂಖ್ಯೆಗಳ ಗುಣಲಬ್ಧ $= x(27-x)$

$$x(27-x) = 182$$
$$x^2 - 27x + 182 = 0$$
$$x^2 - 13x - 14x + 182 = 0$$
$$x(x-13) - 14(x-13) = 0$$
$$(x-13)(x-14) = 0$$

$x - 13 = 0$ ಅಥವಾ $x - 14 = 0$

$x = 13, 14$

$27x = 14, 13$

ಹೀಗಾಗಿ ಆ ಎರಡು ಸಂಖ್ಯೆಗಳು 14 ಮತ್ತು 13

4) ಎರಡು ಅನುಕ್ರಮ ಧನ ಪೂರ್ಣಾಂಕಗಳ ವರ್ಗಗಳ ಮೊತ್ತವು 365 ಆದರೆ ಆ ಸಂಖ್ಯೆಗಳನ್ನು ಕಂಡುಹಿಡಿಯಿರಿ.

ಪರಿಹಾರ:– ಎರಡು ಅನುಕ್ರಮ ಧನ ಪೂರ್ಣಾಂಕಗಳು x ಮತ್ತು $x+1$ ಆಗಿರಲಿ

ಎರಡು ಅನುಕ್ರಮ ಧನ ಪೂರ್ಣಾಂಕಗಳ ವರ್ಗಗಳ ಮೊತ್ತವು

$$x^2 + (x+1)^2$$
$$x^2 + x^2 + 2x + 1$$
$$2x^2 + 2x + 1$$

ಎರಡು ಸಮಸ್ಯೆಯ ಪ್ರಕಾರ

$$2x^2 + 2x + 1 = 365$$
$$2x^2 + 2x - 364 = 0$$

$x^2 + x - 182 = 0$ (ಎರಡರಿಂದ ಭಾಗಿಸಿದಾಗ)

$$x^2 + 14x - 13x - 182$$
$$x(x+14) - 13(x+14) = 0$$
$$(x+14)(x-13) = 0$$

$X + 14 = 0$ ಅಥವಾ $x - 13 = 0$

$X = -14$ ಅಥವಾ $x = 13$

$x = -14$ ಅಥವಾ 13

xನ ಬೆಲೆ ಧನಾತ್ಮಕವಾಗಿರುತ್ತದೆ ಹೀಗಾಗಿ x ನ ಬೆಲೆ = 13

ಎರಡು ಅನುಕ್ರಮ ಧನ ಪೂರ್ಣಾಂಕಗಳ ವರ್ಗಗಳ ಮೊತ್ತವು 365 ಆದರೆ ಆ ಸಂಖ್ಯೆಗಳು 13 ಮತ್ತು 14

5) ಒಂದು ಲಂಬಕೋನ ತ್ರಿಭುಜದ ಎತ್ತರವು ಅದರ ಪಾದಕ್ಕಿಂತ 7cm ಕಡಿಮೆ ಇದೆ. ಅದರ ವಿಕರ್ಣದ ಉದ್ದವು 13 cm ಆದರೆ ಉಳಿದೆರಡು ಬಾಹುಗಳ ಉದ್ದಗಳನ್ನು ಕಂಡುಹಿಡಿಯಿರಿ.

ಪರಿಹಾರ:– ಲಂಬಕೋನ ತ್ರಿಭುಜದ ಪಾದ $= x$ cm ಆಗಿರಲಿ.

ಲಂಬಕೋನ ತ್ರಿಭುಜದ ಎತ್ತರವು $= (x - 1)$ cm

ಪೈಥಾಗೋರಿಯನ್ ಪ್ರಮೇಯದ ಪ್ರಕಾರ

$(\text{ತ್ರಿಭುಜದ ಪಾದ})^2 + (\text{ಎತ್ತರ})^2 = (\text{ವಿಕರ್ಣದ})^2$

$$x^2 + (x-7)^2 = 13^2$$
$$x^2 + x^2 - 14x + 49 = 169$$
$$2x^2 - 14x - 120 = 0$$

$x^2 - 7x - 60 = 0$ (2 ರಿಂದ ಇಡೀ ಸಮೀಕರಣ ಭಾಗಿಸಿದಾಗ)

$$x^2 - 12x + 5x - 60 = 0$$
$$x(x-12) + 5(x-12) = 0$$
$$(x-12)(x+5) = 0$$

$x - 12 = 0$ ಅಥವಾ $x + 5 = 0$

$x = 12$ ಅಥವಾ $x = -5$

$x = -5$ ಸ್ವೀಕಾರ್ಹವಲ್ಲ

$x = 12$

$x - 7 = 12 - 7 = 5$

ಒಂದು ಲಂಬಕೋನ ತ್ರಿಭುಜದ ಎತ್ತರವು ಅದರ ಪಾದಕ್ಕಿಂತ 7 cm ಕಡಿಮೆ ಇದೆ. ಅದರ ವಿಕರ್ಣದ ಉದ್ದವು 13 cm ಆದರೆ ಉಳಿದೆರಡು ಬಾಹುಗಳ ಉದ್ದಗಳು 5 cm ಮತ್ತು 12 cm

6) ಒಂದು ಗುಡಿ ಕೈಗಾರಿಕೆಯು ಒಂದು ದಿನದಲ್ಲಿ ನಿರ್ದಿಷ್ಟ ಸಂಖ್ಯೆಯ ಮಡಿಕೆಗಳನ್ನು ತಯಾರಿಸುತ್ತದೆ. ಒಂದು ನಿರ್ದಿಷ್ಟ ದಿನದಲ್ಲಿ, ಪ್ರತಿ ಮಡಿಕೆಯ ಉತ್ಪಾದನಾ ವೆಚ್ಚವು (ರೂಪಾಯಿಗಳಲ್ಲಿ), ಆ ದಿನ ತಯಾರಿಸಿದ ಮಡಿಕೆಗಳ ಸಂಖ್ಯೆಯ ಎರಡರಷ್ಟಕ್ಕಿಂತ 3 ಹೆಚ್ಚಾಗಿರುವುದನ್ನು ಗಮನಿಸಲಾಯಿತು. ಆ ದಿನದ ಒಟ್ಟು ಉತ್ಪಾದನಾ ವೆಚ್ಚವು ರೂ. 90 ಆದರೆ ಆ ದಿನ ತಯಾರಿಸಿದ ಮಡಿಕೆಗಳ ಸಂಖ್ಯೆಯನ್ನು ಹಾಗೂ ಪ್ರತಿ ಮಡಿಕೆಯ ವೆಚ್ಚವನ್ನು ಕಂಡುಹಿಡಿಯಿರಿ.

ಪರಿಹಾರ: ಆ ದಿನ ಗುಡಿ ಕೈಗಾರಿಕೆಯು ತಯಾರಿಸಿದ ಮಡಿಕೆಗಳ ಸಂಖ್ಯೆ x ಆಗಿರಲಿ

ಆ ದಿನ ಗುಡಿ ಕೈಗಾರಿಕೆಯು ತಯಾರಿಸಿದ ಮಡಿಕೆಗಳ ಬೆಲೆ Rs $(2x+3)$ ಆಗಿರಲಿ ಒಂದು ನಿರ್ದಿಷ್ಟ ದಿನದಲ್ಲಿ, ಪ್ರತಿ ಮಡಿಕೆಯ ಉತ್ಪಾದನಾ ವೆಚ್ಚ $= x(2x-3)$

ಸಮಸ್ಯೆಯ ಪ್ರಕಾರ

$$x(2x+3) = 90$$
$$2x^2 + 3x - 90 = 0$$
$$2x^2 + 3x - 90 = 0$$
$$2x^2 + 15x - 12x - 90 = 0$$
$$x(2x+15) - 6(2x+15) = 0$$
$$(2x+15)(x-6) = 0$$

$2x + 15 = 0$ ಅಥವಾ $x - 6 = 0$

$x = -15/2$ ಅಥವಾ $x = 6$

$x = -15/2\ ,\ 6$

ಒಂದು ಗುಡಿ ಕೈಗಾರಿಕೆಯು ಒಂದು ದಿನದಲ್ಲಿ ಉತ್ಪಾದಿಸಿದ ಸಂಖ್ಯೆಯ ಮಡಿಕೆಗಳ 6 ಪ್ರತಿ ಮಡಿಕೆಯ ವೆಚ್ಚ $= 2x + 3$

$= (2 \times 6) + 3$

$=$ ರೂ $15/-$

ಅಭ್ಯಾಸ 4..3

1) ಕೆಳಗಿನ ವರ್ಗ ಸಮೀಕರಣಗಳ ಮೂಲಗಳ ಸ್ವಭಾವವನ್ನು ವಿವೇಚಿಸಿ. ಅವು ವಾಸ್ತವ ಮೂಲಗಳಾಗಿದ್ದರೆ, ಅವುಗಳನ್ನು ಕಂಡುಹಿಡಿಯಿರಿ.

(i) $2x^2 - 3x + 5 = 0$

(ii) $3x^2 - 4\sqrt{3}x + 4 = 0$

(iii) $2x^2 - 6x + 3 = 0$

ಪರಿಹಾರ:– (i) $2x^2 - 3x + 5 = 0$

ಇಲ್ಲಿ $a = 2, \quad b = -3, \quad c = 5$

$$b^2 - 4ac$$
$$= (-3)^2 - 4(2)(5)$$
$$= 9 - 40$$
$$= -31$$

ಹೀಗಾಗಿ ಕೊಟ್ಟಿರುವ ವರ್ಗ ಸಮೀಕರಣಕ್ಕೆ ವಾಸ್ತವ ಮೂಲಗಳಿಲ್ಲ

(ಮುಂದುವರಿಯುವುದು)

ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಎಸ್ಸೆಸ್ಸೆಲ್ಸಿ–ಪಿಯುಸಿ ಪರೀಕ್ಷೆ ದಿಕ್ಸೂಚಿ

PHYSICS

Chapter – 2

ELECTROSTATIC POTENTIAL AND CAPACITANCE

27. Write a note on the Electric Polarization

Ans:- (.......Contd)

$$E_o = \frac{\sigma}{\epsilon_o} \quad ...(1)$$

When a non-polar dielectric slab is introduced between the plates shown in the figure. Each atom will be elongated due to the displacement of its charges under the effect of applied electric field and hence becomes a polar atom.

Now, each atom/molecule of the dielectric having dipole moment experiences a torque in the direction of the field $\left(\vec{E_o}\right)$ and all the dipoles get aligned in the direction of the applied electric field.

The interior charges shown in the dotted rectangle cancel the effect of one another. Therefore, the net effect is that the opposite faces of the dielectric will have equal and opposite charges. These charges are called **induced charges** and the process is called ***polarization of the dielectric.*** Induced charges are bound charges and not free.

Induced charges set up an electric field known as **induced electric field,** $\vec{E_p}$.

If σ_p and $-\sigma_p$ be the surface charge densities of the opposite faces of the dielectric, then the magnitude of electric field due to polarization is given by – $E_p = \frac{\sigma_p}{\epsilon_o}$

directed opposite to that of applied electric field $\vec{E_0}$.

∴ net electric field inside the dielectric is -

$$E = E_o - E_p \text{ (or) } E = \frac{\sigma}{\epsilon_o} - \frac{\sigma_p}{\epsilon_o} \text{ (or)}$$

$$E = \frac{\sigma - \sigma_p}{\epsilon_o} ....(2)$$

Thus, on placing a dielectric slab between 2 parallel plates, the electric field intensity inside parallel plates gets reduced. Therefore, the net electric field (E) inside the dielectric is known as reduced value of electric field.

28. Write a note on dielectric constant.

Ans:- The ratio of applied electric field intensity (E_0) to the reduced value of electric field intensity (E) on placing a dielectric between two oppositely charged the plates is called dielectric constant. It is given by -

$$K = \frac{E_0}{E} = \frac{\sigma}{\sigma - \sigma_p}$$

Since, $E_0 > E$, ∴ K is always more than 1.

Dielectric constant is a pure number. It is also known as ***specific Inductive Capacity i.e. SIC*** of a medium.

29. Give the relation between Surface Charge Density (σ) and Induced Surface charge Density (σ_p).

Ans:- Relation between Surface Charge Density(σ) & Induced Surface charge Density (σ_p)

[1] The reduced value of electric field in the gap between two oppositely charged plates, when filled with a dielectric of dielectric constant K is given by

$$E = E_o - E_p \quad ....(i)$$

Now, $E_o = \frac{\sigma}{\epsilon_0}$, $E_p = \frac{\sigma_p}{\epsilon_0}$ and $E = \frac{E_o}{K} = \frac{\sigma}{\epsilon_0 K}$

∴ eqn.(i) becomes $\frac{\sigma}{\epsilon_0 K} = \frac{\sigma}{\epsilon_0} - \frac{\sigma_p}{\epsilon_0}$

$$\text{(or) } \sigma_p = \left(\sigma - \frac{\sigma}{K}\right) = \left(\frac{K-1}{K}\right)\sigma$$

Since $K > 1$, ∴ $\sigma_p < \sigma$

Thus, induced surface charge density on the dielectric is less than the surface charge density.

[2] If the gap between two oppositely charged plates is filled with a conductor instead of a dielectric, then E = O.

Hence eqn. (i) becomes

$$E_p = E_o \text{ (or) } \frac{\sigma_p}{\epsilon_0} = \frac{\sigma}{\epsilon_0}$$

$$\text{(or) } \sigma_p = \sigma$$

Thus, induced surface charge density on a conductor is equal to the surface charge density.

30. What is Dielectric constant also referred to as?

Ans:- Dielectric constant is also referred to a relative permittivity of a dielectric.

31. What is Polarization Vector? Explain.

Ans:- Polarization Vector is defined as the dipole moment per unit volume of the polarized dielectric. The polarization vector measures the degree of polarization of the dielectric.

Consider a homogeneous (i.e., of same kind or nature) dielectric slab placed in the uniform electric field $\vec{E_o}$. Due to polarization, all the atoms or molecules get aligned in the direction of the applied field. Since dielectric is homogeneous so each atom or molecule have the same dipole moment $\vec{P}$. If n is the number of atoms or molecules per unit volume of the dielectric,

then the polarization vector ($\vec{P}$) is given by

$$\vec{P} = n\vec{p}$$
$$\Rightarrow P = np$$

SI unit of polarization vector is

$$\frac{\text{Coulomb}}{\text{meter}^2} = (Cm^{-2})$$

Dimensional formula of polarization vector,

$$P = \frac{p}{V} = \frac{Cm}{m^3} = \frac{C}{m^2} = \frac{It}{m^2} = [M^0L^{-2}TA]$$

(Contd....)

ಬಾಪೂಜಿ ವಿದ್ಯಾಸಂಸ್ಥೆ (ರಿ.)

ಡಾ. ಶಾಮನೂರು ಶಿವಶಂಕರಪ್ಪ
ಶಾಸಕರು, ದಾವಣಗೆರೆ ದಕ್ಷಿಣ ಕ್ಷೇತ್ರ
ಗೌರವ ಕಾರ್ಯದರ್ಶಿಗಳು, ಬಾಪೂಜಿ ವಿದ್ಯಾಸಂಸ್ಥೆ

ಡಾ|| ಪ್ರಭಾ ಮಲ್ಲಿಕಾರ್ಜುನ್
ಸಂಸದರು, ದಾವಣಗೆರೆ ಲೋಕಸಭಾ ಕ್ಷೇತ್ರ
ಸದಸ್ಯರು, ಬಾಪೂಜಿ ವಿದ್ಯಾಸಂಸ್ಥೆ

58ನೇ ಜನ್ಮದಿನದ ಶುಭಾಶಯಗಳು

ತಮ್ಮ ವಿಶಿಷ್ಟ ನಾಯಕತ್ವ, ಜನಪರ ಸೇವಾಭಾವ ಮತ್ತು ನಿರಂತರ ಅಭಿವೃದ್ಧಿ ಕಾರ್ಯಗಳಿಂದ ಜನಮನಗಳಲ್ಲಿ ಅಚಲ ಸ್ಥಾನ ಪಡೆದುಕೊಂಡಿರುವ, ಧೀಮಂತ ಜನನಾಯಕರು, ಆಧುನಿಕ ಭಗೀರಥರು, ದಾವಣಗೆರೆ ಅಭಿವೃದ್ಧಿಯ ಹರಿಕಾರರು, ಕರ್ನಾಟಕ ಸರ್ಕಾರದ ಗಣಿ-ಭೂವಿಜ್ಞಾನ ಮತ್ತು ತೋಟಗಾರಿಕೆ ಸಚಿವರು, ದಾವಣಗೆರೆ ಜಿಲ್ಲೆಯ ಉಸ್ತುವಾರಿ ಸಚಿವರು ಹಾಗೂ ಬಾಪೂಜಿ ವಿದ್ಯಾಸಂಸ್ಥೆಯ ಗೌರವ ಜಂಟಿ ಕಾರ್ಯದರ್ಶಿಗಳಾದ

ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್

ಅವರು ಇಂದು ಐವತ್ತೆಂಟನೇ ಜನ್ಮದಿನವನ್ನು ಆಚರಿಸಿಕೊಳ್ಳುತ್ತಿದ್ದಾರೆ. ಶ್ರೀಯುತರು ನೂರ್ಕಾಲ ಬಾಳಲಿ ಎಂದು ಹಾರೈಸುತ್ತೇವೆ.

ಕೆ.ಎ. ಗಿರಿಜಮ್ಮ
ಉಪಾಧ್ಯಕ್ಷರು

ಎ.ಎಸ್. ನಿರಂಜನ್
ಖಜಾಂಚಿ

ಡಾ|| ಎ.ಎಸ್. ವೀರಣ್ಣ
ಸದಸ್ಯರು

ಡಾ|| ಸಂಪನ್ನ ಮುತಾಲಿಕ್
ಸದಸ್ಯರು

ಬಾಪೂಜಿ ವಿದ್ಯಾಸಂಸ್ಥೆ (ರಿ.), ದಾವಣಗೆರೆ.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75
ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಸುಭಾಷಿತ

ಒಡವೆಯಲ್ಲ ಬಡವೆಯಲ್ಲ ತಾಯಿ ಈ ವಸುಂಧರಾ, ಒಡೆತನದಲಿ ಬಡತನವನೆ ಬಿತ್ತ ಬೇಡ ಹೊಲದಲಿ. –ದ.ರಾ. ಬೇಂದ್ರೆ

ಸಂಪಾದಕೀಯ

ಮತಕಳವು: ಪಲಾಯನವಾದ ಬೇಡ ಆಯೋಗ ನಂಬಿಕೆ ಉಳಿಸಿಕೊಳ್ಳಲಿ

ಕರ್ನಾಟಕದಲ್ಲಿ ಮತಗಳ್ಳತನದ ಪ್ರಕರಣಗಳು ದೊಡ್ಡ ಪ್ರಮಾಣದಲ್ಲಿ ನಡೆದಿವೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಗಂಭೀರ ಆರೋಪಗಳನ್ನು ಮಾಡಿದ್ದಾರೆ. ಮಹದೇವಪುರ ಕ್ಷೇತ್ರದ ಮತದಾರರ ಪಟ್ಟಿಯಲ್ಲಿ ಒಂದು ಲಕ್ಷಕ್ಕೂ ಹೆಚ್ಚು ನಕಲಿ ನೋಂದಣಿಗಳಿವೆ ಎಂದು ಕೆಲವು ದಿನಗಳ ಹಿಂದೆ ರಾಹುಲ್ ಆಪಾದಿಸಿದ್ದರು. ಈಗ, ಆಳಂದ ಕ್ಷೇತ್ರದಲ್ಲಿ ಸಾವಿರಾರು ಹೆಸರುಗಳನ್ನು ಮತದಾರರ ಪಟ್ಟಿಯಿಂದ ಉದ್ದೇಶಪೂರ್ವಕವಾಗಿ ಅಳಿಸಲಾಗಿದೆ ಎಂದು ದೂರಿದ್ದಾರೆ. ಮಹದೇವಪುರ ಕ್ಷೇತ್ರದ ಮತದಾರರ ಪಟ್ಟಿಗಳಲ್ಲಿ ಲೋಪದೋಷಗಳು ಇರುವುದನ್ನು ಸ್ವತಂತ್ರ ಪರಿಶೀಲನೆಗಳೂ ದೃಢಪಡಿಸಿದ್ದವು, ಆ ಮೂಲಕ ರಾಹುಲ್ ಅವರ ಆರೋಪಕ್ಕೆ ಹೆಚ್ಚಿನ ವಿಶ್ವಾಸಾರ್ಹತೆ ದೊರೆತಂತಾಗಿತ್ತು. ಆದರೆ, ಆರೋಪಗಳ ಬಗ್ಗೆ ತನಿಖೆ ನಡೆಸಬೇಕಾದ ಚುನಾವಣಾ ಆಯೋಗ ವಿಚಿತ್ರವಾಗಿ ವರ್ತಿಸಿತ್ತು ಹಾಗೂ ತಮ್ಮ ಆರೋಪಗಳಿಗೆ ಸಾಕ್ಷ್ಯಗಳನ್ನು ನೀಡುವಂತೆ ಹಾಗೂ ಲಿಖಿತ ಪ್ರಮಾಣ ಪತ್ರ ಸಲ್ಲಿಸುವಂತೆ ರಾಹುಲ್ ಗಾಂಧಿ ಅವರನ್ನು ಒತ್ತಾಯಿಸಿತ್ತು. ಮುಕ್ತ ಹಾಗೂ ನ್ಯಾಯಸಮ್ಮತ ಚುನಾವಣೆ ನಡೆಸುವ ಹೊಣೆ ಹೊತ್ತಿರುವ ಸಂಸ್ಥೆ ತನ್ನ ವಿಶ್ವಾಸಾರ್ಹತೆಯನ್ನು ಸಾಬೀತುಪಡಿಸುವ ಹೊಣೆಗಾರಿಕೆಯಿಂದ ನುಣುಚಿಕೊಂಡಿತ್ತು. ಈಗ ಆಳಂದ ಕ್ಷೇತ್ರದಲ್ಲಿನ ಲೋಪಗಳ ಕುರಿತಾದ ಆರೋಪಕ್ಕೆ ಸಂಬಂಧಿಸಿದಂತೆಯೂ ಆಯೋಗದ ಧೋರಣೆ ಬದಲಾಗಿಲ್ಲ.

ಆಳಂದ ವಿಧಾನಸಭಾ ಕ್ಷೇತ್ರದಲ್ಲಿ 6,000ಕ್ಕೂ ಹೆಚ್ಚು ಮತದಾರರ ಹೆಸರುಗಳನ್ನು, ತಂತ್ರಜ್ಞಾನದ ದುರ್ಬಳಕೆ ಮಾಡಿಕೊಂಡು ಅಳಿಸಿ ಹಾಕಲು ಆಯೋಗ ಪ್ರಯತ್ನಿಸಿದೆ ಎಂದು ರಾಹುಲ್ ಗಾಂಧಿ ಆರೋಪಿಸಿದ್ದಾರೆ. ಅವರ ಈ ಆರೋಪ ಮೇಲ್ನೋಟಕ್ಕೆ ದುರ್ಬಲವಾಗಿದೆ. ಮತದಾರರ ಪಟ್ಟಿಯಿಂದ ತೆಗೆದು ಹಾಕಿರುವ ಹೆಸರುಗಳ ಸಂಖ್ಯೆ ಬರೀ 24, ಸಾವಿರಾರು ಅಲ್ಲ ಎಂದು ಆಯೋಗ ಸ್ಪಷ್ಟನೆ ನೀಡಿದೆ. ಈ ಪ್ರಕ್ರಿಯೆಗೆ ಸಂಬಂಧಿಸಿದ ಐಪಿ ವಿಳಾಸಗಳು, ಆಕ್ಷೇಪ ಸಲ್ಲಿಸಿದವರ ವಿವರಗಳು ಸೇರಿದಂತೆ ಎಲ್ಲ ದಾಖಲೆಗಳನ್ನು ತನಿಖಾಧಿಕಾರಿಗಳಿಗೆ ಸಲ್ಲಿಸಿರುವುದಾಗಿಯೂ ಹೇಳಿದೆ. ಆಳಂದ ವಿಷಯದಲ್ಲಿ ರಾಹುಲ್ ಅವರ ಆರೋಪ ಉತ್ಪ್ರೇಕ್ಷೆಯಿಂದ ಕೂಡಿರುವಂತಿದೆ. ಆದರೆ, ಉತ್ಪ್ರೇಕ್ಷೆಯ ಕಾರಣದಿಂದಾಗಿ ಚುನಾವಣಾ ಆಯೋಗ ಆರೋಪಮುಕ್ತ ಆಗುವುದಿಲ್ಲ. ಹೊರ ರಾಜ್ಯಗಳ ಮೊಬೈಲ್ ಸಂಖ್ಯೆಗಳನ್ನು ಬಳಸಿ, ಮತದಾರರ ಹೆಸರುಗಳನ್ನು ಸಣ್ಣ ಪ್ರಮಾಣದಲ್ಲಿ ಅಳಿಸಿಹಾಕಲಾಗಿದೆ ಹಾಗೂ ಸಂದೇಹಾಸ್ಪದ ವಿಧಾನಗಳನ್ನು ಅನುಸರಿಸಲಾಗಿದೆ ಎನ್ನುವುದು ಗಂಭೀರ ಪ್ರಶ್ನೆಗಳಿಗೆ ಆಸ್ಪದ ಕಲ್ಪಿಸುವಂತಿದೆ. ಇದು ತಂತ್ರಜ್ಞಾನದ ಸಂಘಟಿತ ಬಳಕೆಯ ಮೂಲಕ ನಡೆದ ಕಾರ್ಯಾಚರಣೆ ಆಗಿತ್ತೇ? ಹೌದು ಎಂದಾದಲ್ಲಿ, ಈ ಪ್ರಕ್ರಿಯೆ ಬೇರೆ ಕ್ಷೇತ್ರಗಳಲ್ಲಿ ಇನ್ನೂ ದೊಡ್ಡ ಪ್ರಮಾಣದಲ್ಲಿ ನಡೆದಿರಬಹುದಲ್ಲವೇ? ಈ ಪ್ರಶ್ನೆಗಳಿಗೆ ಪೂರ್ಣ ಪ್ರಮಾಣದ ಸ್ವತಂತ್ರ ತನಿಖೆಯ ಮೂಲಕ ಉತ್ತರಗಳು ದೊರೆಯಬೇಕಾಗಿದೆ.

ಮತಗಳ್ಳತನದ ಆರೋಪಗಳಿಗೆ ಸಂಬಂಧಿಸಿದಂತೆ ರಾಹುಲ್ ಗಾಂಧಿಯವರ ರಾಜಕೀಯ ನಿಲುವು ವಿರೋಧಾಭಾಸದಿಂದ ಕೂಡಿದೆ. ಸತ್ಯಗಳನ್ನು ಬಹಿರಂಗಪಡಿಸುವುದಷ್ಟೇ ತಮ್ಮ ಕೆಲಸ, ಪ್ರಜಾಪ್ರಭುತ್ವದ ರಕ್ಷಣೆಯ ಕರ್ತವ್ಯ ತಮಗೆ ಸೇರಿದ್ದಲ್ಲ ಎನ್ನುವ ಧೋರಣೆ ಅವರ ವಿಶ್ವಾಸಾರ್ಹತೆಯನ್ನು ಹೆಚ್ಚಿಸುವಂತಹದ್ದಲ್ಲ. ಚುನಾವಣಾ ಆಯೋಗ ನಿಜವಾಗಿಯೂ ತಡೆಗೋಡೆಗಳನ್ನು ನಿರ್ಮಿಸುತ್ತಿದ್ದರೆ, ನ್ಯಾಯಾಲಯದ ಮೊರೆ ಹೋಗುವುದು ರಾಹುಲ್ ಅವರ ಆಯ್ಕೆ ಮತ್ತು ಕರ್ತವ್ಯ ಎರಡೂ ಆಗಿದೆ. ಚುನಾವಣಾ ಆಯುಕ್ತರಿಗೆ ಕಾನೂನಿನ ಸುರಕ್ಷಾಕವಚವಿದೆ ಎನ್ನುವ ಕಾಂಗ್ರೆಸ್ ವಾದ ದಿಕ್ಕುತಪ್ಪಿಸುವಂತಹದ್ದು. ಆಯುಕ್ತರಿಗೆ ಇರುವ ಕಾನೂನಿನ ಸುರಕ್ಷತೆ, ಚುನಾವಣಾ ಅವ್ಯವಹಾರಗಳಂತಹ ವಿಶಾಲ ವ್ಯಾಪ್ತಿಗೆ ಅನ್ವಯ ಆಗುವಂತಹದ್ದಲ್ಲ. ಚುನಾವಣಾ ಅವ್ಯವಹಾರದ ಪ್ರಕರಣಗಳು ನ್ಯಾಯಾಂಗದ ಪರಾಮರ್ಶೆಗೆ ಮುಕ್ತವಾಗಿವೆ. ಚುನಾವಣಾ ಆಯೋಗ ಹಲವು ಪ್ರಶ್ನೆಗಳಿಗೆ ಉತ್ತರಿಸಲೇಬೇಕಾಗಿದೆ. ರಾಹುಲ್ ಗಾಂಧಿ ಅವರ ದೂರುಗಳಿಗೆ ಉತ್ತರಿಸಲು ಪಾರದರ್ಶಕ ಪ್ರಕ್ರಿಯೆ ಅನುಸರಿಸುವ ಬದಲಾಗಿ, ಆರೋಪಗಳನ್ನು ಸಾರಾಸಗಟಾಗಿ ತಿರಸ್ಕರಿಸುವ ಮೂಲಕ ಆಯೋಗ ತನ್ನ ಸಾರ್ವಜನಿಕ ವಿಶ್ವಾಸಾರ್ಹತೆಗೆ ತಾನೇ ಧಕ್ಕೆ ತಂದುಕೊಂಡಿದೆ; ತನ್ನ ಸ್ವಾಯತ್ತತೆಯ ಕುರಿತು ಪ್ರಶ್ನೆಗಳು ಉಂಟಾಗಲು ಆಯೋಗವೇ ಆಸ್ಪದ ಕಲ್ಪಿಸಿದೆ. ಅಂತಿಮವಾಗಿ, ಪ್ರಜಾಪ್ರಭುತ್ವದ ಸುರಕ್ಷತೆಯು ರಾಜಕಾರಣಿಗಳ ಆಲಂಕಾರಿಕ ಆರೋಪಗಳು ಹಾಗೂ ಹೊಣೆಗಾರಿಕೆಯಿಂದ ನುಣುಚಿಕೊಳ್ಳುವ ಸಾಂವಿಧಾನಿಕ ಸಂಸ್ಥೆಗಳ ಮೇಲೆ ಅವಲಂಬನೆ ಆಗಿರುವುದಿಲ್ಲ. ರಾಹುಲ್ ಗಾಂಧಿ ಅವರು ತಮ್ಮ ಆರೋಪಗಳನ್ನು ಸೂಕ್ತ ಕಾನೂನು ಮಾರ್ಗಗಳು ಹಾಗೂ ಸಾಂವಿಧಾನಿಕ ಸಂಸ್ಥೆಗಳ ಪರಾಮರ್ಶೆಗೆ ಒಡ್ಡಬೇಕಾಗಿದೆ ಹಾಗೂ ಚುನಾವಣಾ ಆಯೋಗ ಸುರಕ್ಷಿತ ಧೋರಣೆಯಿಂದ ಹೊರಬಂದು ಪಾರದರ್ಶಕ ತನಿಖೆಯ ಮಾರ್ಗವನ್ನು ಅನುಸರಿಸಬೇಕಾಗಿದೆ. ಮತದಾರರ ಪಟ್ಟಿಯ ಪಾವಿತ್ರ್ಯಕ್ಕೆ ಸಂಬಂಧಿಸಿದ ಹೋರಾಟದಲ್ಲಿ ಅರ್ಧಸತ್ಯಗಳು ಹಾಗೂ ಅಧಿಕಾರಿ ವರ್ಗದ ಅಸಹಕಾರ, ಎರಡೂ ಸಮಾನವಾಗಿ ಅಪಾಯಕಾರಿ. ರಾಜಕೀಯ ನಾಯಕರು ಹಾಗೂ ಸಂವಿಧಾನದ ರಕ್ಷಕರಿಂದ ಪಕ್ಷಪಾತ ರಹಿತ ಹಾಗೂ ನಿಜವಾದ ಸಾಂಸ್ಥಿಕ ಸುಧಾರಣೆಯ ಜವಾಬ್ದಾರಿಯನ್ನು ಅಪೇಕ್ಷಿಸುವುದಕ್ಕೆ ಭಾರತದ ಪ್ರಜಾಪ್ರಭುತ್ವಕ್ಕೆ ಎಲ್ಲ ಅಧಿಕಾರವೂ ಇದೆ.

ರಾಹುಲ್ ಗಾಂಧಿ ಮಾಡಿರುವ ಮತಗಳ್ಳತನದ ಆರೋಪಗಳನ್ನು ಚುನಾವಣಾ ಆಯೋಗ ಗಂಭೀರವಾಗಿ ಪರಿಗಣಿಸಬೇಕು. ಪಾರದರ್ಶಕ ತನಿಖೆಯಿಂದಷ್ಟೇ ಆಯೋಗದ ವಿಶ್ವಾಸಾರ್ಹತೆ ಉಳಿಯಲು ಸಾಧ್ಯ.

ಚಾಟಿ

ಅಮೆರಿಕದ ಕೊಡುಗೆ

ಅಮೆರಿಕದ ಬಗ್ಗೆ ಯಾರೇನೇ ಹೇಳಬಹುದು. ಒಂದೆರಡು ತಲೆಮಾರುಗಳ ಭಾರತೀಯರಿಗೆ ಉನ್ನತ ಕಲಿಕೆಗೆ ಅವಕಾಶ ಕಲ್ಪಿಸಿ, ಉದ್ಯೋಗ ಕೊಟ್ಟು ಭವಿಷ್ಯ ರೂಪಿಸಿಕೊಳ್ಳುವಂತೆ ಮಾಡಿದೆ. ಕೆಳ ಮಧ್ಯಮ ವರ್ಗದ ಜನರಿಗೂ ಮೇಲ್ಮಧ್ಯಮ ವರ್ಗಕ್ಕೆ ಬೆಳೆಯುವ ಅವಕಾಶಗಳನ್ನು ಕೊಟ್ಟಿದೆ. ನನ್ನಂತಹ ಅನೇಕರು ಅಮೆರಿಕಕ್ಕೆ ಎಂದೆಂದಿಗೂ ಋಣಿ.

ಅಮರನಾಥ್ ಶಿವಶಂಕರ್, ಐ.ಟಿ. ಉದ್ಯೋಗಿ, 'ಎಕ್ಸ್'ನಿಂದ

ಕಿಡಿನುಡಿ

ಮುಖ್ಯಮಂತ್ರಿ ಕುರ್ಚಿ ಭದ್ರಪಡಿಸಿಕೊಳ್ಳಲು ಸಿದ್ದರಾಮಯ್ಯ ಅವರು ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ನಡೆಸುತ್ತಿದ್ದಾರೆ. ಆ ಮೂಲಕ ಹಿಂದೂ ಸಮಾಜವನ್ನು ಒಡೆದು, ಹೈಕಮಾಂಡ್ ಮನವೊಲಿಸಲು ಯತ್ನಿಸುತ್ತಿದ್ದಾರೆ.

ಅರವಿಂದ ಬೆಲ್ಲದ, ವಿಧಾನಸಭೆ ವಿರೋಧ ಪಕ್ಷದ ಉಪ ನಾಯಕ

25 ವರ್ಷಗಳ ಹಿಂದೆ

ಶುಕ್ರವಾರ, 22-09-2000

• **ಸಿಬ್ಬಂದಿ ಮೇಲೆ ಕ್ರಮ: ಆಯೋಗಕ್ಕೆ ಪೂರ್ಣ ಅಧಿಕಾರ**

ನವದೆಹಲಿ, ಸೆಪ್ಟೆಂಬರ್ 21– ಚುನಾವಣಾ ನಿರ್ವಹಣೆಗಾಗಿ ನೇಮಿಸಲಾಗುವ ಸಿಬ್ಬಂದಿ ಬಗ್ಗೆ ಚುನಾವಣಾ ಆಯೋಗಕ್ಕೆ ಪೂರ್ಣ ಅಧಿಕಾರ ನೀಡಲು ಸಿದ್ಧವಿರುವುದಾಗಿ ಕೇಂದ್ರ ಸರ್ಕಾರ, ಇಂದು ಸುಪ್ರೀಂ ಕೋರ್ಟ್‌ಗೆ ತಿಳಿಸಿತು.

ಈ ಹಿನ್ನೆಲೆಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವೆ ಏರ್ಪಟ್ಟ ಒಪ್ಪಂದದ ಕುರಿತು ಚುನಾವಣಾ ಆಯೋಗ ಸಲ್ಲಿಸಿದ ರಿಟ್ ಅರ್ಜಿಯನ್ನು ತ್ರಿಸದಸ್ಯ ಪೀಠ ಇತ್ಯರ್ಥಗೊಳಿಸಿತು.

• **ಗ್ರಾ.ಪಂ. ಅಧ್ಯಕ್ಷರ ಶಿರಚ್ಛೇದ**

ಪಾವಗಡ, ಸೆಪ್ಟೆಂಬರ್ 21– ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದ ಗ್ರಾಮ ಪಂಚಾಯಿತಿ ಅಧ್ಯಕ್ಷರೊಬ್ಬರನ್ನು ಹಾಡಹಗಲೇ ಇಬ್ಬರು ದುಷ್ಕರ್ಮಿಗಳು ಮಚ್ಚಿನಿಂದ ಕೊಚ್ಚಿ ಕೊಲೆ ಮಾಡಿರುವ ಘಟನೆ ತಾಲ್ಲೂಕಿನ ತಿರುಮಣಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಇಂದು ನಡೆದಿದೆ.

ರ್‍ಯಾಪ್ಟೆ ಗ್ರಾಮ ಪಂಚಾಯಿತಿ ಅಧ್ಯಕ್ಷ ತಿಮ್ಮಾರೆಡ್ಡಿ (35) ಬೆಳಿಗ್ಗೆ ತಮ್ಮ ಊರು ಹುಸೇನ್‌ಪುರದಿಂದ ಬರುತ್ತಿದ್ದಾಗ ಬಸ್ಸಿಗೆ ನುಗ್ಗಿದ ಇಬ್ಬರು ದುಷ್ಕರ್ಮಿಗಳು, ಅವರ ರುಂಡ ಕತ್ತರಿಸಿ ಚೀಲದಲ್ಲಿ ತೆಗೆದುಕೊಂಡು ಹೋಗಿದ್ದಾರೆ.

75 ವರ್ಷಗಳ ಹಿಂದೆ

ಶುಕ್ರವಾರ, 22-09-1950

• **'ಗಾಂಧೀಜಿ ಹೆಸರು ಬಳಸುವ ಪ್ರವೃತ್ತಿ ಸರಿಯಲ್ಲ'**

ಗಾಂಧಿನಗರ, ಸೆಪ್ಟೆಂಬರ್ 21– ಕಾಂಗ್ರೆಸ್ ನಾಯಕರಲ್ಲಿ ತಮ್ಮ ತಪ್ಪುಗಳನ್ನು ಮುಚ್ಚಿಕೊಳ್ಳಲು ಮಹಾತ್ಮ ಗಾಂಧೀಜಿ ಅವರ ಹೆಸರು ಬಳಸಿಕೊಳ್ಳುವ ಪ್ರವೃತ್ತಿ ಹೆಚ್ಚುತ್ತಿರುವ ಕುರಿತು ಪ್ರಧಾನಿ ಪಂಡಿತ್ ನೆಹರೂ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಇಲ್ಲಿ ನಡೆಯುತ್ತಿರುವ ಕಾಂಗ್ರೆಸ್ ಸಭೆಯಲ್ಲಿ ಮಾತನಾಡಿದ ನೆಹರೂ, 'ಪಕ್ಷದ ಚರ್ಚೆಗಳಲ್ಲಿ ಗಾಂಧೀಜಿ ಅವರ ಹೆಸರು ಪ್ರಸ್ತಾಪಿಸಬಾರದು. ಅವರ ಬೋಧನೆ ಮತ್ತು ಆದರ್ಶಗಳನ್ನು ಪಾಲಿಸಬೇಕಿದೆ' ಎಂದು ಸಲಹೆ ನೀಡಿದರು.

ಎಲ್ಲಿದೆ ಧರ್ಮ, ಜಾತಿಗಳೇ ಎಲ್ಲ!

ವಿಶ್ಲೇಷಣೆ

ಎಸ್.ಜಿ. ಸಿದ್ಧರಾಮಯ್ಯ

> ಮಾನವೀಯ ಸಾಧ್ಯತೆಗಳನ್ನು ಒಂದು ಧರ್ಮ ಬಿಟ್ಟುಕೊಟ್ಟಾಗ, ಅದು ಜೀವನವಿಧಾನದ ರೂಪದಲ್ಲಷ್ಟೇ ಉಳಿದುಕೊಳ್ಳುತ್ತದೆ. ಈ ಅರಿವನ್ನು ನೇಪಥ್ಯಕ್ಕೆ ಸರಿಸಿ, ಜಾತಿಯ ವಿಕಾರಗಳನ್ನು ಧರ್ಮದ ಹೆಸರಿನಲ್ಲಿ ಆಚರಿಸಲಾಗುತ್ತದೆ. ಈ ವಿಕಾರಗಳು 'ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ' ಕುರಿತಾದ ಚರ್ಚೆಗಳಲ್ಲಿ ಸ್ಪಷ್ಟವಾಗಿ ಅನಾವರಣಗೊಂಡಿವೆ.

ಇತ್ತೀಚಿನ ದಿನಗಳಲ್ಲಿ ಭಾಷಾ ಬಳಕೆಯಲ್ಲಿ ಅಪಪ್ರಯೋಗಗಳು ಹೆಚ್ಚಾಗಿವೆ. ಇವುಗಳಿಂದಾಗಿ ಪದಗಳ ಮೂಲಾರ್ಥಗಳು ಕಳೆದುಹೋಗಿವೆ. ಬದಲಾಗಿ ಅನುಕೂಲಸಿಂಧು ಅರ್ಥಗಳು ಪ್ರಯೋಗದಲ್ಲಿವೆ. ಇದರಿಂದಾಗಿ ಮೂಲ ಪದಗಳ ಅರ್ಥಗಳ ಜೊತೆಗೆ, ಅರ್ಥದ ಆವರಣ ಕಟ್ಟಿಕೊಡಬೇಕಾಗಿದ್ದ ವಾಸ್ತವಿಕ ಸತ್ಯದ ಸ್ವರೂಪವೇ ಕಳೆದುಹೋಗಿದೆ. ಇವುಗಳಲ್ಲಿ ಉದಾಹರಣೆಗೆ, ಎರಡು ಪದಗಳನ್ನು ಇಲ್ಲಿ ವಿವೇಚನೆಗೆ ಎತ್ತಿಕೊಳ್ಳಬಹುದು. ಒಂದು, 'ಧರ್ಮ' ಎಂಬ ಪದ. ಎರಡು, 'ಮಾತೃಭಾಷೆ' ಎಂಬ ಪದ.

ಧರ್ಮವನ್ನು ಕುರಿತು ಪಂಪ ಕವಿ ಒಂದು ಮಾತು ಹೇಳಿದ್ದಾನೆ: 'ಅರಿವಂ ಪೊಸೆಯಿಸುವುದು ಧರ್ಮಂ'. ಅಂದರೆ, ಮನುಷ್ಯನ ಅರಿವನ್ನು ಅರ್ಥಾತ್ ವಿವೇಕವನ್ನು ಪ್ರಜ್ಞೆಯನ್ನು ಕಾಲೋಚಿತವಾಗಿ ಹೊಸತು ಮಾಡುವುದೇ ಧರ್ಮ. ಧರ್ಮ ನಿಂತ ನೀರಲ್ಲ, ಅದು ಹರಿಯುವ ನದಿ. ಭೂವೈಲಕ್ಷಣ್ಯಕ್ಕೆ ಅನುಗುಣವಾಗಿ ಅದರ ಪಾತ್ರ ಬದಲಾಗುತ್ತದೆ. ಹಾಗೆಯೇ ಭೂಮಿಯ ಸಾರ ಸಾಂದ್ರತೆಗೆ ಅನುಗುಣವಾಗಿ ಅದರ ಸ್ವಾದಗುಣ ಸಂಪನ್ನವಾಗುತ್ತದೆ. ಆದರೆ, ನೀರಿನ ಮೂಲ ಸ್ವರೂಪ ಮಾತ್ರ ಮೂಲ ಸ್ವರೂಪವಾಗಿಯೇ ಅರ್ಥಾತ್ ಗುಣವಾಗಿಯೇ ಉಳಿದಿರುತ್ತದೆ. ಹಾಗೆಯೇ ಧರ್ಮದ ನಿಜ ಸ್ವರೂಪ. ಯಾವುದೇ ಧರ್ಮದ ಮೂಲ ಆಶಯ ಮಾನವೀಯತೆ, ಜೀವಪರತೆ ಹಾಗೂ ಸಮಾನಶೀಲಭಾವದಲ್ಲಿ ನಿಸರ್ಗ ಧರ್ಮಕ್ಕೆ ಎರವಾಗದಂತೆ ಸಕಲ ಜೀವಗಳ ಸಂರಕ್ಷಣೆ. ಇದು ಇರದ ಯಾವುದೇ ಧರ್ಮವೂ ಅದು ಧರ್ಮವೆನ್ನಿಸಿಕೊಳ್ಳುವುದಿಲ್ಲ; ಅದು ಜೀವನವಿಧಾನ ಅರ್ಥಾತ್ ಮತ ಎನ್ನಿಸಿಕೊಳ್ಳುತ್ತದೆ.

ಮತವೆಂದರೆ ಅಭಿಪ್ರಾಯ. ಅಭಿಪ್ರಾಯಗಳಲ್ಲಿ ಭೇದವಿರುತ್ತದೆ. ಧರ್ಮಗಳಲ್ಲಿ ಸಮಾನಶೀಲತೆ ಇರುತ್ತದೆ. ಅಂದರೆ, ಆಚರಣೆಗಳಲ್ಲಿ ಭಿನ್ನತೆ ಇದ್ದರೂ ಆಶಯ ಮೂಲದಲ್ಲಿ ಜೀವಸಂರಕ್ಷಣೆಯ ಸಮಾನಶೀಲ ಸಂವೇದನೆ ಧರ್ಮದ ಪ್ರಾಣದ್ರವ್ಯವಾಗಿರುತ್ತದೆ. ಆ ಕಾರಣಕ್ಕಾಗಿಯೇ 'ಅರಿವಂ ಪೊಸೆಯಿಸುವುದು ಧರ್ಮ' ಎಂದು ಪಂಪ ಹೇಳಿರುವುದು.

ಜಾತಿಗಳು ವರ್ಣಗಳಿದ್ದಂತೆ. ವರ್ಣ ಎಂದರೆ ಬಣ್ಣ, ಬಣ್ಣದ ಮೂಲ ಸ್ವರೂಪ ಅದರ ಅಸ್ಮಿತೆ. ಬಣ್ಣಗಳಲ್ಲಿ ಏಳು ಬಣ್ಣಗಳನ್ನು ಪ್ರತ್ಯೇಕವಾಗಿ ಗುರುತಿಸಿರುವುದು ಅವುಗಳ ಮೂಲ ಸ್ವರೂಪದ ಆಧಾರದ ಮೇಲೆಯೇ. ಬಣ್ಣ ಬಣ್ಣಗಳಲ್ಲಿ ಸಂಕರ ಏರ್ಪಟ್ಟಾಗ ಮತ್ತೊಂದು ಬಣ್ಣವೇ ಕಾಣಬಹುದು. ಅದು ಆ ಏಳು ಬಣ್ಣಗಳಲ್ಲಿ ಯಾವುದರ ಸಂಕರ ಸಾಂದ್ರತೆಯಲ್ಲಿ ಪ್ರಬಲವಾಗಿರುತ್ತದೋ ಅದರ ಸಮೀಪದ ಅಥವಾ ಅದರ ಹತ್ತಿರದ ತೆಳು ಬಣ್ಣವಾಗಿ ಗುರುತಿಸಲಾಗುತ್ತದೆ. ನಮ್ಮ ಚಾತುರ್ವರ್ಣ ಪದ್ಧತಿಯ ಜಾತಿ ವಿಂಗಡಣೆಗಳು ಆನಂತರದ ಜಾತಿ ಸಂಕರಗಳ ಒಳಜಾತಿಗಳು ಈ ಮಾದರಿಯಲ್ಲಿ ರಚಿತವಾದವುಗಳು. ಹೀಗಾಗಿ, ನಮ್ಮ ದೇಶದಲ್ಲಿ ಜಾತಿಗಳು ಪ್ರಧಾನವಾಗಿವೆ. ಅವುಗಳೊಳಗೆ ಒಳಜಾತಿಗಳು ಜಾತಿಪ್ರಜ್ಞೆಯ ವಿಕೇಂದ್ರೀಕರಣ ಒಳಭೇದಗಳಾಗಿ ತಮ್ಮ ಭಿನ್ನತೆಯನ್ನು ತೆಳು ಅಥವಾ ಸಾಂದ್ರ ಸ್ವರೂಪದಲ್ಲಿ ಉಳಿಸಿಕೊಂಡಿವೆ.

ಈ ದೇಶದಲ್ಲಿ ಹುಟ್ಟಿದ ಪದ್ಧತಿಗಳು, ಪಂಥಗಳು, ಮತಗಳು ಎಲ್ಲವೂ ಈ ಜಾತಿವ್ಯವಸ್ಥೆಯನ್ನು ದಾಟಲಾರದವುಗಳಾಗಿ ಅವು ತತ್ತ್ವಗಳಾಗಿ, ಸಿದ್ಧಾಂತಗಳಾಗಿ ಪ್ರತ್ಯೇಕವಾಗಿ ಉಳಿದಿವೆ. ಎಲ್ಲ ವರ್ಣಗಳನ್ನು ಅರ್ಥಾತ್ ಜಾತಿಗಳನ್ನು ನುಂಗಿಯೂ ಅವು ಅವುಗಳನ್ನು ಅರಗಿಸಿಕೊಳ್ಳಲಾಗದೆ 'ಬಾಯಲ್ಲಿ ಬ್ರಹ್ಮ ಬಾಳಲ್ಲಿ ಲೊಳಲೊಟ್ಟೆ'ಗಳಾಗಿ ಧ್ವಯಗಳಾಗಿವೆ. ಆದ್ದರಿಂದಲೇ ಇಂದು ಇವುಗಳನ್ನು ಒಂದೇ ಛತ್ರಿಯಡಿಯಲ್ಲಿ ತರುವ ಪ್ರಯತ್ನದ ಫಲವಾಗಿ ಹಿಂದೂ ಎಂಬ ಪದ ಚಾಲ್ತಿಗೆ ಬಂದಿದೆ. ಅದೂ ಚಾತುರ್ವರ್ಣದ ಹಿತ ಸಾಧನೆಯ ಜಾತಿಹಿತಕ್ಕಾಗಿ ಬಳಕೆಗೆ ಬಂದದ್ದು ಮತ್ತು ಧರ್ಮ ಎಂದು ನಂಬಿಸಲಾದದ್ದು. ಆದರೆ, ಅದು ಎಲ್ಲಾ ಭಿನ್ನತೆಗಳನ್ನು ಉಸಿರಾಡುತ್ತಿರುವ ಕಾರಣದಿಂದ ಅದು ಧರ್ಮವಲ್ಲ. ಧರ್ಮದ ಮೂಲ ಆಶಯಕ್ಕೆ ಅದು ತೀರಾ ವ್ಯತಿರಿಕ್ತಭಾವದ ನಡೆ-ನುಡಿ ಸಿದ್ಧಾಂತ ಆಗಿರುವುದರಿಂದ, ಅದನ್ನು ಧರ್ಮ ಎಂದು ಕರೆಯಲಾಗುವುದಿಲ್ಲ. ಜಾತಿವ್ಯವಸ್ಥೆಯನ್ನು ಒಪ್ಪಿಕೊಂಡ ಒಂದು ಜೀವನಪದ್ಧತಿ ಎಂದು ಕರೆಯಬಹುದು.

ಇಂಥ ಜೀವನಪದ್ಧತಿಯಲ್ಲಿ ಉಸಿರಾಡುತ್ತಿರುವ ಕೆಲವು ಜಾತಿಗಳು ಅವಮಾನ, ಅಸಮಾನತೆಯ ನೋವಿನ ಕಾರಣದಿಂದ ಅದರಿಂದ ಬಿಡುಗಡೆ ಬಯಸಿ ಹೊರಗಿನಿಂದ ಬಂದ ಬೇರೆ ಧರ್ಮಗಳಿಗೆ ಮತಾಂತರವಾಗುತ್ತವೆ. ಈ ಮತಾಂತರ ಸ್ವಇಚ್ಛೆಯಿಂದ ಆಗಿರಬಹುದು ಅಥವಾ ಪ್ರಲೋಭನೆಗೆ ಒಳಗಾಗಿ ಆಗಿರಬಹುದು. ಅಥವಾ ಈ ಹಿಂದೆ ಆಗಿರುವಂತೆ ಹಲವು ಬಗೆಯ ರಾಜಕೀಯ, ಸಾಮಾಜಿಕ ಸಂಘರ್ಷಗಳ ಕಾರಣದಿಂದ ಆಗಿರಬಹುದು. ಆದರೆ, ಬೇರೆ ಧರ್ಮಕ್ಕೆ ಹೋದರೂ ಇಲ್ಲಿಯ ವಾಸನೆಯಿಂದ ಮುಕ್ತವಾಗಲಾರದ ಮೂಲ ವರ್ಣ/ಜಾತಿಯ ನಂಟು ಅವರನ್ನು ಹಿಂಬಾಲಿಸುತ್ತದೆ. ಅದರಿಂದಾಗಿಯೇ ಅಲ್ಲಿಯೂ ಈಗಾಗಲೇ ಇರುವ ಜಾತಿಗಳ ಜೊತೆಗೆ ಧರ್ಮದ ಹೆಸರಿಗೆ ತಾವು ಬಂದ ಮೂಲದ ಜಾತಿ/ವರ್ಣದ ಗುರುತನ್ನು ಉಳಿಸಿಕೊಂಡೇ ಉಸಿರಾಡುತ್ತಾರೆ.

'ಪಾಪಿ ಸಮುದ್ರ ಹೊಕ್ಕರೂ ಮೊಳಕಾಲುದ್ದ ನೀರು' ಎಂಬ ಗಾದೆಯ ಪರಿಸ್ಥಿತಿ ಮತಾಂತರಗೊಂಡ ಬಹುತೇಕರದ್ದಾಗಿರುತ್ತದೆ. ಆದರೆ, ಅದು ಸಮುದ್ರವಲ್ಲ; ಸಮುದ್ರದ ಭ್ರಮೆಯನ್ನು ಬಿತ್ತಿದ್ದ ಧರ್ಮ. ಆ ಧರ್ಮಕ್ಕೆ ಹೋದರೂ ಅದೂ ಮೊಳಕಾಲುದ್ದದ್ದೇ ಹೊರತು ಸಮುದ್ರ ಸದೃಶವಲ್ಲ ಎಂಬ ಅರಿವು ಅವರಿಗೆ ಕಾಡಿದಂತೆ ಬದುಕು ಎದುರಾಗುತ್ತದೆ. ಅತ್ತ ಅದನ್ನು ಕಟ್ಟಿಕೊಳ್ಳಲಾರದ, ಇತ್ತ ಇದನ್ನು ಬಿಟ್ಟುಕೊಡಲಾಗದ ಎಡಬಿಡಂಗಿ ಬದುಕು ಈ ದೇಶದ ಸಾಮಾಜಿಕ ವಾಸ್ತವವಾಗುತ್ತಿದೆ. ಹೀಗಾಗಿಯೇ, ದಲಿತ ಕ್ರಿಶ್ಚಿಯನ್, ಪಿಂಜಾರ ಮುಸ್ಲಿಂ, ಗಾಣಿಗ ಲಿಂಗಾಯತ, ದಲಿತಸಿಖ್ ಇತ್ಯಾದಿ ಹೊಸ ಜಾತಿಗಳ ಸೃಷ್ಟಿ ನಿರ್ಮಾಣವಾಗಿದೆ. ಇದೆಲ್ಲ ನಮ್ಮ ವರ್ಣನೀತಿಯ ಹೊಸ ವಿದ್ಯಮಾನವೇ ಆದ ಬೆಳವಣಿಗೆಯೇ ಹೊರತು ಬೇರೆ ಅಲ್ಲ. ಹೀಗೆ ಹೊರಗಣ್ಣಿಗೆ ಧರ್ಮದ ಆವರಣ ಕಾಣುತ್ತದೆ, ಒಳಹೊಕ್ಕು ನೋಡಿದರೆ ಹಳೆಯ ಗಾಯದ ಮಾಯದ ನೋವು ಅಲ್ಲಿ ಇನ್ನೂ ತೀವ್ರತರವಾಗಿರುವುದು ಅರಿವಿಗೆ ಬರುತ್ತದೆ.

ನುಂಗಲೂ ಆಗದ ಉಗುಳಲೂ ಆಗದ ಬಿಸಿತುಪ್ಪದ ಬಾಯಿಯ ಬೇಗೆಯಲ್ಲಿ ಅವರು ಬಳಲುತ್ತಿರುತ್ತಾರೆ. ಇದು ಈ ದೇಶದ ಕಥೆಯಾದರೆ, ಬೇರೆ ದೇಶಗಳಲ್ಲಿ ಹುಟ್ಟಿದ ಧರ್ಮಗಳೂ ಅವುಗಳ ಬೆಳವಣಿಗೆಯ ಸ್ವರೂಪದಲ್ಲಿ ನಾಯಿಬಾಲಗಳೇ ಆಗಿವೆ. ಪ್ರತಿಯೊಂದು ಧರ್ಮದೊಳಗಿರುವ ಪ್ರಧಾನ ಪಂಗಡಗಳು, ಅವುಗಳೊಳಗಿರುವ ಒಳಪಂಗಡಗಳು ಏನನ್ನು ಹೇಳುತ್ತಿವೆ? ಪಂಗಡಗಳು ಜಾತಿಗೆ ಪರ್ಯಾಯವಾಗಿ ಬಳಸುತ್ತಿರುವ ಪದಗಳೇ ಹೊರತು, ಅವುಗಳ ನಡವಳಿಕೆಯೆಲ್ಲ ಜಾತಿಭಿನ್ನತೆಯ ಭಾಗ ರೂಪಗಳೇ ಆಗಿವೆ. ಇದಕ್ಕೆ ಯಾವ ಧರ್ಮವೂ ಹೊರತಾಗಿಲ್ಲ. ಹೀನಾಯಾನ-ಮಹಾಯಾನ; ಷಿಯಾ-ಸುನ್ನಿ; ಕ್ಯಾಥೊಲಿಕ್-ಪ್ರಾಟೆಸ್ಟೆಂಟ್ ಇತ್ಯಾದಿಗಳೆಲ್ಲಾ ಏನನ್ನು ಹೇಳುತ್ತಿವೆ. ಈ ದಾರಿಯಲ್ಲಿ ನಡೆದಾಗ ಧರ್ಮದ ಮೂಲ ಸ್ವರೂಪ ಎಲ್ಲೋ ಎಂದೋ ಕಳೆದುಹೋಗಿರುವುದು ವಾಸ್ತವ ಸತ್ಯ. ದುರಂತವೆಂದರೆ ಇಂದೂ 'ಧರ್ಮ' ಎಂಬ ಪದವನ್ನು ಪದೇ ಪದೇ ನಾವು ಬಳಸುತ್ತಿರುವುದು ದುರಂತ ವ್ಯಂಗ್ಯದಂತೆ ಕಾಣುತ್ತಿದೆ.

ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯನ್ನು (ಜಾತಿಜನಗಣತಿ) ವಿರೋಧಿಸುತ್ತಿರುವ ಬಲಿಷ್ಠ ಸಮುದಾಯಗಳು ಒಳಪಂಗಡಗಳನ್ನು ಉದಾರತೆಯಲ್ಲಿ ತಬ್ಬಿಕೊಂಡಂತೆ ಮಾತನಾಡುತ್ತಿರುವುದು ಯಾರ ಹಿತಕ್ಕಾಗಿ? ಜಾತಿಗಳೊಳಗೆ ಇರುವ ಅಸಮಾನತೆ ಹಾಗೂ ಅಮಾನವೀಯತೆಯನ್ನು ಹೋಗಲಾಡಿಸಲಾರದ 'ಜಗದ್ಗುರುಗಳು' ನಿಜವಾದ ನೆಲೆಯಲ್ಲಿ ಅರಿವಂ ಪೊಸೆಯಿಸುವ ಧರ್ಮದ ಜಗದ್ಗುರುಗಳೇ? ಅಥವಾ ಜಾತಿಯೊಳಗೂ, ಜಾತಿಗಳೊಳಗೂ ಹಿತಾಸಕ್ತ ಪಂಗಡಗಳ ಹಿತ ಕಾಯುವ ಜಗದ್ಗುರುಗಳೋ? ಒಮ್ಮೆ ಆತ್ಮಾವಲೋಕನ ಮಾಡಿಕೊಳ್ಳುವುದು ಮಾನವೀಯ ಹೊಣೆಗಾರಿಕೆ.

ಈ ದೇಶದಲ್ಲಿ ಇಂದೂ ಅಸಮಾನತೆ ತಾಂಡವವಾಡುತ್ತಿದೆ. ಅವಮಾನ, ಹಸಿವು, ಕ್ರೌರ್ಯ, ಹಿಂಸೆ, ಅತ್ಯಾಚಾರಗಳ ಮಾರಣಹೋಮ ಇಂದಿಗೂ ದಿನದಿನದ ಸುದ್ದಿಯಾಗಿವೆ. ಅಂಬೇಡ್ಕರ್ ಅವರು ಹೇಳಿದ ಶಿಕ್ಷಣ-ಸಂಘಟನೆ-ಹೋರಾಟ ಎಂಬ ಸೂತ್ರಶಕ್ತಿ ಅವಕಾಶವಾದಿ ರಾಜಕಾರಣದಿಂದ ಹಾದಿ ತಪ್ಪಿದೆ. 'ಅರಿವಂ ಪೊಸೆಯಿಸುವ ಧರ್ಮ' ಇಲ್ಲವಾಗಿದೆ. 'ಬಾಯಿ ಇದ್ದವನು ಬರದಲ್ಲಿ ಬದುಕಿದ' ಎಂಬಂತೆ ಪ್ರಜಾಪ್ರಭುತ್ವದಲ್ಲಿ ಬಲಿಷ್ಠ ಜಾತಿಗಳು ಬೊಬ್ಬೆ ಹೊಡೆದು ಬಡಜಾತಿಗಳನ್ನು ಅಲೆಮಾರಿ ಸಮುದಾಯಗಳನ್ನು ಬಾಯಿ ಮುಚ್ಚಿಸುತ್ತಿವೆ. ಬೇಲಿಯೇ ಎದ್ದು ಹೊಲ ಮೇಯುತ್ತಿರುವಾಗ ಯಾರಿಗೆ ದೂರಲಿ ಕೂಡಲ ಸಂಗಮದೇವಾ?

ಇನ್ನು ಮಾತೃಭಾಷೆಯ ವಿಚಾರ, ಶಿಕ್ಷಣದ ಭಾಷೆ ಮಾತೃಭಾಷೆಯೇ ಆಗಬೇಕು ಎಂಬುದು ದುರ್ಬಳಕೆಯ ಪ್ರಯೋಗವಾಗಿದೆ. ಶಿಕ್ಷಣವನ್ನು ವ್ಯಾಪಾರ ಮಾಡಿಕೊಂಡಿರುವ ಲಾಭಬಡುಕರಿಗೆ ಇದೊಂದು ವ್ಯವಹಾರದ ಭಾವನಾತ್ಮಕ ಅಸ್ತ್ರವಾಗಿದೆ. ಎಷ್ಟು ಭಾಷೆಗಳಿಗೆ ಲಿಪಿಗಳಿವೆ? ಕರ್ನಾಟಕದಲ್ಲೇ ಲಿಪಿ ಇಲ್ಲದ ಮಾತೃಭಾಷೆಗಳೆಷ್ಟಿವೆ? ಭಾಷಾವಾರು ಪ್ರಾಂತ ರಚನೆಯ ಹಿನ್ನೆಲೆಯಲ್ಲಿ ಶಿಕ್ಷಣವನ್ನು ರಾಜ್ಯಭಾಷೆ, ಆಡಳಿತ ಭಾಷೆ, ಪ್ರಾದೇಶಿಕ ಭಾಷೆಗಳ ನೀತಿಸಂಹಿತೆಯಲ್ಲಿ ವ್ಯಾಖ್ಯಾನಿಸುವ ನಿರ್ವಚಿಸುವ ಅಗತ್ಯವಿದೆ. ಅದು ಬಿಟ್ಟು ಮಾತೃಭಾಷೆ ಎಂಬ ಅವಾಸ್ತವಿಕ, ಅವೈಜ್ಞಾನಿಕ ಪದವನ್ನು ಶಿಕ್ಷಣಕ್ಕೆ ಲಗತ್ತಿಸಿರುವುದು ರಾಜ್ಯಭಾಷೆಗಳಿಗೆ ಮಾಡುತ್ತಿರುವ ವಂಚನೆ, ಒಕ್ಕೂಟ ನೀತಿಗೆ ಮಾಡುತ್ತಿರುವ ದ್ರೋಹ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿನ ಅಸಾಂವಿಧಾನಿಕ ನಡೆ.

ವಾಚಕರ ವಾಣಿ

ದಲಿತ ಮಹಿಳೆ ಹಿಂದೂ ಅಲ್ಲವೆ?

'ಚಾಮುಂಡೇಶ್ವರಿಗೆ ಸನಾತನ ಧರ್ಮದವರಷ್ಟೇ ಹೂ ಮುಡಿಸಬೇಕು, ದಲಿತ ಮಹಿಳೆಗೂ ಇದಕ್ಕೆ ಅವಕಾಶವಿಲ್ಲ' ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದ್ದಾರೆ. ಹಾಗಿದ್ದರೆ, ದಲಿತ ಮಹಿಳೆ ಹಿಂದೂ ಅಲ್ಲವೆ?

ಶಾಸಕರ ಹೇಳಿಕೆಯು ದಲಿತರ ಮೇಲೆ ಸನಾತನವಾದಿಗಳು ಹೊಂದಿರುವ ಮನಃಸ್ಥಿತಿಗೆ ಕನ್ನಡಿ ಹಿಡಿದಿದೆ. ಒಂದು ಧರ್ಮವನ್ನು ವಿರೋಧಿಸಿ ಅದರಿಂದ ತಮ್ಮ ಸ್ಥಾನ ಭದ್ರಪಡಿಸಿಕೊಳ್ಳಲು, ಜಾತಿವ್ಯವಸ್ಥೆಯನ್ನು ಗಟ್ಟಿಗೊಳಿಸುವ ಹುನ್ನಾರ ಈ ಹೇಳಿಕೆಯ ಹಿಂದಿದೆ. ಮೈಸೂರು ಇಡೀ ರಾಜ್ಯದಲ್ಲಿ ಸ್ವಚ್ಛನಗರವೆಂಬ ಕೀರ್ತಿ ಪಡೆಯುವಲ್ಲಿ ಅಲ್ಲಿನ ಪೌರಕಾರ್ಮಿಕರ ಪಾಲು ಹಿರಿದು. ಮುಂದಿನ ವರ್ಷದ ದಸರಾ ಮಹೋತ್ಸವವನ್ನು ಪೌರಕಾರ್ಮಿಕ ಮಹಿಳೆಯೊಬ್ಬರಿಂದ ಉದ್ಘಾಟಿಸಿ, ಸನಾತನವಾದಿಗಳಿಗೆ ರಾಜ್ಯ ಸರ್ಕಾರವು ದಿಟ್ಟ ಉತ್ತರ ನೀಡಬೇಕಿದೆ.

ಗಗನ, ಸರಗೂರು

ಸಿರಿವಂತರಿಗೆ ಸೀಮಿತವಾದ ದಸರಾ

ನಾಡಹಬ್ಬ ದಸರಾ ಶತಮಾನಗಳಿಂದ ರಾಜ್ಯದ ಸಂಸ್ಕೃತಿ ಮತ್ತು ಆಡಳಿತದ ಪರಂಪರೆಯನ್ನು ಪ್ರತಿಬಿಂಬಿಸುತ್ತಿದೆ. ಜನಸಾಮಾನ್ಯರಿಗೆ ಉಚಿತ ವೀಕ್ಷಣೆಗೆ ಅವಕಾಶ ಕಲ್ಪಿಸುವುದು ದಸರಾ ಸಂಪ್ರದಾಯದ ಪ್ರಮುಖ ಅಂಶವಾಗಿತ್ತು. ಈಗ ಪ್ರತಿ ಕಾರ್ಯಕ್ರಮಕ್ಕೂ ಟಿಕೆಟ್ ನಿಗದಿ ಮಾಡಲಾಗಿದೆ. ಬಡವ, ರೈತ, ಕಾರ್ಮಿಕರನ್ನು ಹೊರಗಿಟ್ಟು ದಸರಾವನ್ನು ಹಣ ಪಾವತಿಸಿದವರ ಹಬ್ಬವಾಗಿ ಮಾಡಲಾಗುತ್ತಿದೆ. ಎಲ್ಲರಿಗೂ ಸೇರಬೇಕಾದ ದಸರಾ ಉಳ್ಳವರಿಗೆ ಸೀಮಿತವಾಗಿರುವುದು ವಿಪರ್ಯಾಸ. ದೂರದ ಊರಿಂದ ಆಸೆಗಣ್ಣಿನಿಂದ ಬಂದ ಬಡವ ನಿರಾಶೆಯಿಂದ ಹಿಂತಿರುಗುವಂತಾಗಿದೆ. ಒಟ್ಟಾರೆ, ಮೈಸೂರು ದಸರಾ ಜನಸಾಮಾನ್ಯರ ಹಬ್ಬವಾಗದೆ, ಪಾವತಿಸಿದವರ ಟಿಕೆಟ್ ಆಧಾರಿತ ಹಬ್ಬವಾಗಿದೆ.

ದರ್ಶನ್ ಎಂ.ಜಿ., ಕಡೂರು

ಮೀಸಲಾತಿ: ಕನ್ನಡಿಯೊಳಗಿನ ಬ್ರಹ್ಮಗಂಟು

ಸಂವಿಧಾನದತ್ತವಾದ ಮೀಸಲಾತಿ ಸೌಲಭ್ಯ ಪಡೆಯಲು ಹಿಂದುಳಿದ ವರ್ಗಗಳಿಗೆ ನೂರೆಂಟು ತೊಡಕು. ಈ ವರ್ಗಗಳ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಸ್ಥಿತಿಗತಿ ಕುರಿತ ಸಮರ್ಪಕ ಅಂಕಿಅಂಶಗಳು ಸರ್ಕಾರದ ಬಳಿ ಇಲ್ಲ. ಹಳೆಯ ಅಂಕಿಅಂಶ ಆಧರಿಸಿ ಮೀಸಲಾತಿ ನೀಡಲು ಅವಕಾಶ ಇಲ್ಲ.

ಆಡಳಿತ ಪಕ್ಷದೊಳಗಿರುವ ಮುಂದುವರಿದ ಸಮುದಾಯಗಳ ನಾಯಕರ ಹುನ್ನಾರದಿಂದ ಕಾಂತರಾಜು ವರದಿ ಮೂಲೆಗೆ ಸರಿಯಿತು. ಈಗ ಹೊಸ ಸಮೀಕ್ಷೆಯನ್ನೂ ಮುಂದೂಡುವಂತೆ ಪ್ರಬಲ ಜಾತಿಗಳು ಶತ ಪ್ರಯತ್ನ ನಡೆಸುತ್ತಿವೆ. ಆಡಳಿತದಲ್ಲಿ ಇರುವವರೇ ಅವರ ಪಕ್ಷದ ತೀರ್ಮಾನಕ್ಕೆ ವಿರುದ್ಧವಾಗಿ ತಮ್ಮ ಜಾತಿ ಸಭೆಯಲ್ಲಿ ಸಮೀಕ್ಷೆಯನ್ನು ವಿರೋಧಿಸುತ್ತಿದ್ದಾರೆ. ಈ ರೀತಿ ಅಡ್ಡಗಾಲು ಹಾಕುವುದರಿಂದ ಹಿಂದುಳಿದ ವರ್ಗಗಳಿಗೆ ಸಿಗಬೇಕಾದ ಮೀಸಲಾತಿಯು ಕನ್ನಡಿಯೊಳಗಿನ ಗಂಟಾಗಿ ಗೋಚರಿಸುತ್ತಿದೆ.

ಗಣಪತಿ ನಾಯ್ಕ್, ಕಾನಗೋಡ

ವಿದ್ಯಾರ್ಥಿಯ ಕಾಳಜಿ ಎಲ್ಲರಿಗೂ ಮಾದರಿ

ಹರಪನಹಳ್ಳಿಯಲ್ಲಿ ರಸ್ತೆ ವಿಸ್ತರಣೆಗಾಗಿ ಮರಗಳ ಕಡಿತದ ಬಗ್ಗೆ ನಾಲ್ಕನೇ ತರಗತಿ ವಿದ್ಯಾರ್ಥಿ ಮಹಮ್ಮದ್ ಅಯಾನ್ 'ವಾಚಕರ ವಾಣಿ'ಯಲ್ಲಿ ವ್ಯಕ್ತಪಡಿಸಿರುವ ಪರಿಸರ ಸಂರಕ್ಷಣೆ ಬಗೆಗಿನ ಕಾಳಜಿಯು ಎಲ್ಲರಿಗೂ ಸ್ಫೂರ್ತಿ. ತರಗತಿಯಲ್ಲಿ ಪರಿಸರ ವಿಜ್ಞಾನ ವಿಷಯ ಓದಿ ಮನನ ಮಾಡಿಕೊಂಡಿರುವ ಈ ವಿದ್ಯಾರ್ಥಿಗೆ, ಅಭಿವೃದ್ಧಿ ಹೆಸರಲ್ಲಿ ನಿತ್ಯ ಸಾವಿರಾರು ಮರಗಳ ಮಾರಣಹೋಮ ನಡೆಯುತ್ತಿರುವ ಬಗ್ಗೆ ಆತಂಕ ಮೂಡುವುದು ಸಹಜವಾದುದು. ಪರಿಸರ ಮತ್ತು ಜೀವಸಂಕುಲದ ಹೊಂದಾಣಿಕೆಯಲ್ಲಿ ವೈವಿಧ್ಯವಿದೆ. ವಿದ್ಯಾರ್ಥಿಗಿರುವ ಪರಿಸರ ಪ್ರಜ್ಞೆಯು ಅಧಿಕಾರಿಗಳು ಮತ್ತು ಆಳುವ ವರ್ಗಕ್ಕೆ ಇಲ್ಲದಿರುವುದು ಸೋಜಿಗ.

ಗುರುಪ್ರಸಾದ ಎಚ್.ಎಸ್., ಮರಿಯಮ್ಮನಹಳ್ಳಿ

ಗುಂಡಿಗಳ ಲೆಕ್ಕ ಕೊಟ್ಟವರು ಯಾರು?

ಬೆಂಗಳೂರಿನಲ್ಲಿ ಏಳು ಸಾವಿರ ರಸ್ತೆ ಗುಂಡಿಗಳನ್ನು ಮುಚ್ಚಲಾಗಿದೆ. ಇನ್ನೂ ಐದು ಸಾವಿರ ಗುಂಡಿಗಳನ್ನು ಮುಚ್ಚಬೇಕಿದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದ್ದಾರೆ. ಇದು ರಾಜಧಾನಿಯ ಲೆಕ್ಕವಾದರೆ, ರಾಜ್ಯದಲ್ಲಿ ಎಷ್ಟು ಗುಂಡಿಗಳಿರಬಹುದು? ಮುಖ್ಯಮಂತ್ರಿ ಅವರಿಗೆ ಈ ಗುಂಡಿಗಳ ನಿಖರ ಲೆಕ್ಕ ಕೊಟ್ಟವರು ಯಾರು? ಈ ಗುಂಡಿಗಳು ಯಾಕಾದವು ಎನ್ನುವುದಕ್ಕೆ ಸ್ಪಷ್ಟ ಕಾರಣ ಕಳಪೆ ಕಾಮಗಾರಿ ಎಂದು ಗೊತ್ತಿದ್ದರೂ ಅಂತಹ ಕೆಲಸ ಮಾಡಿದವರ ಮೇಲೆ ಕ್ರಮ ಕೈಗೊಳ್ಳುವುದಂತೂ ಕನಸಿನ ಮಾತು. ಮಳೆಗಾಲದಲ್ಲಿ ಅವೈಜ್ಞಾನಿಕವಾಗಿ ಗುಂಡಿಗಳನ್ನು ಮುಚ್ಚಿದರೆ ಅದರ ಆಯುಸ್ಸು ಕೇವಲ ಒಂದು ವಾರವಿರಬಹುದು ಅಷ್ಟೇ. ರಸ್ತೆಯಿಂದ ನೀರು ಸರಾಗವಾಗಿ ಹರಿಯುವಂತೆ ಒಳಚರಂಡಿ ವ್ಯವಸ್ಥೆ ಮಾಡದಿದ್ದರೆ, ಗುಂಡಿಗಳನ್ನು ದುರಸ್ತಿ ಮಾಡುವುದು ಹೊಳೆಯಲ್ಲಿ ಹುಣಸೆಹಣ್ಣನ್ನು ತೊಳೆದಂತಾಗುತ್ತದೆ.

ಕಡೂರು ಫಣಿಶಂಕರ್, ಬೆಂಗಳೂರು

ಪುರುಷರಿಗೂ ಬೇಕು ಉಚಿತ ಪ್ರಯಾಣ!

ರಾಜ್ಯ ಸರ್ಕಾರ ಮಹಿಳೆಯರಿಗೆ ಅನುಕೂಲ ಕಲ್ಪಿಸಲು 'ಶಕ್ತಿ' ಯೋಜನೆ ಜಾರಿಗೊಳಿಸಿದೆ. ಉಚಿತ ಬಸ್ ಪ್ರಯಾಣ ಸೌಲಭ್ಯ ಪುರುಷರಿಗೆ ಏಕಿಲ್ಲ ಎಂಬ ಪ್ರಶ್ನೆ ಸಹಜ. ಮಹಾರಾಷ್ಟ್ರದಲ್ಲಿ ಮಹಿಳೆಯರಿಗೆ ಬಸ್ ಪ್ರಯಾಣ ದರದಲ್ಲಿ ಶೇ 50ರಷ್ಟು ರಿಯಾಯಿತಿ ಸೌಲಭ್ಯವಿದೆ. ಕರ್ನಾಟಕ ರಾಜ್ಯ ಸರ್ಕಾರವು, ಮಹಿಳೆಯರು ಮತ್ತು ಪುರುಷರಿಗೆ ತಲಾ ಶೇ 50ರಷ್ಟು ರಿಯಾಯಿತಿ ದರದಲ್ಲಿ ಬಸ್ ಪ್ರಯಾಣ ಸೌಲಭ್ಯ ಒದಗಿಸಿದರೆ, ಇಬ್ಬರನ್ನೂ ಸಮಾನವಾಗಿ ನೋಡಿದಂತಾಗುತ್ತದೆ. ಜೊತೆಗೆ, ಸಾರಿಗೆ ನಿಗಮಗಳ ವೆಚ್ಚ ಸರಿದೂಗಿಸಲು ಸಹಕಾರಿಯಾಗಲಿದೆ.

ಎಸ್.ಎಂ. ಚಂದ್ರಮೌಳಿ, ಕೆಂಚಮಲ್ಲನಹಳ್ಳಿ

ಚುರುಮುರಿ

ಆತ್ಮನಿರ್ಭರ ಕನಸು

• ಸುಮಂಗಲಾ

ಬೆಕ್ಕಣ್ಣ ಕಳೆದ ವರ್ಷದಿಂದ ಹಲವು ಬಗೆಯ ಕೋಡಿಂಗ್, ಡೇಟಾ ಅನಾಲಿಸಿಸ್ ಕಲಿಯುತ್ತಿತ್ತು.

'ಏನು ಕಲೀತ ಇದ್ದೀಯ' ಎಂದು ಕೇಳಿದರೆ, 'ಕೆಲಸ ಸಿಕ್ಕು ಸಾಧನೆ ಮಾಡಿದ ಮೇಲೆ ಹೇಳತೀನಿ' ಎಂದು ಮುಗುಮ್ಮಾಗಿ ಹೇಳುತ್ತಿತ್ತು.

ಮೊನ್ನೆಯಿಂದ ಲ್ಯಾಪ್‌ಟಾಪ್ ಮುಟ್ಟದೇ ಹ್ಯಾಪುಮೋರೆ ಮಾಡಿ ಕೂತಿತ್ತು. 'ಏನಾತಲೇ... ಎದಕ್ಕೆ ಬೇಜಾರಾಗೈತೆ?' ಎಂದು ಕಾಳಜಿಯಿಂದ ಕೇಳಿದೆ.

'ಯಾವುದಾರ ಐ.ಟಿ ಕಂಪನಿ ಸೇರಿ, ಎಚ್-1ಬಿ ವೀಸಾದಡಿ ಅಮೆರಿಕಕ್ಕೆ ಹೋಗೂಣು ಅಂತ ಹೋದವರ್ಷದಿಂದ ತಯಾರಿ ನಡೆಸಿದ್ದೆ. ಹೊಸದಾಗಿ ಎಚ್-1ಬಿ ವೀಸಾದಡಿ ಬರೋವ್ರಿಗೆ ಟ್ರಂಪಣ್ಣ ತೊಂಬತ್ತು ಲಕ್ಷ ರೂಪಾಯಿ ಶುಲ್ಕ ವಸೂಲು ಮಾಡ್ತಾನಂತೆ. ನನ್ನ ಕನಸೆಲ್ಲ ಠುಸ್ ಅಂತು' ಎಂದು ಬೆಕ್ಕಣ್ಣ ನಿಟ್ಟುಸಿರು ಬಿಟ್ಟಿತು.

'ಮೋದಿ ಮಾಮಾ-ಟ್ರಂಪಣ್ಣ ಭಾಯಿ ಭಾಯಿ ಅಂತ ಕುಣಿತಿದ್ಯಲ್ಲ ಮತ್ತೆ' ಎಂದು ಛೇಡಿಸಿದೆ.

'ಭಾಯಿ ಭಾಯಿ ಇದ್ದವರು ಅವಗಾವಾಗ ಬಾಯ್-ಬಾಯ್ ಅಂತಾರೆ! ಅಷ್ಟಕೊಂದು ವರ್ಷ ಕಾಂಗಿಗಳು ನಮ್ ದೇಶ ಆಳಿದ್ರಲ್ಲ... ಅವರಿಂದಾಗಿನೇ ಇಂಥಾ ಪರಿಸ್ಥಿತಿ ಬಂದಿದ್ದು' ಎಂದು ಬೆಕ್ಕಣ್ಣ ಗುರುಗುಟ್ಟಿತು.

'ಅಲ್ಲಲೇ... ಟ್ರಂಪಣ್ಣನ ಇಂದಿನ ಕಿತಾಪತಿಗಳಿಗೂ ಅಂದಿನ ಕಾಂಗಿಗಳನ್ನು ಹೊಣೆ ಮಾಡಿದ್ರೆ ಹೆಂಗೆ?' ಎಂದು ಬೆಕ್ಕಣ್ಣನನ್ನು ಪ್ರಶ್ನಿಸಿದೆ.

'ಸ್ವಾತಂತ್ರ್ಯ ಸಿಕ್ಕ ಕೂಡ್ಲೇ ಜಾಗತೀಕರಣ ಮಾಡಿ, ಆವಾಗೇ ಮೇಕ್ ಇನ್ ಇಂಡಿಯಾ ಘೋಷಣೆ ಮಾಡಬೇಕಿತ್ತು. ಇಷ್ಟೊತ್ತಿಗೆ ನಾವು ಅಗದಿ ಭಯಂಕರ ಆತ್ಮನಿರ್ಭರ ಆಗತಿದ್ದೆವು' ಎಂದು ಅಲವತ್ತುಕೊಂಡಿತು.

'ಮೋದಿ ಮಾಮಾರು ಬಂದು ಹದಿನಾಕು ವರ್ಷದ ಮ್ಯಾಲೆ ಆತಲ್ಲ... ಹಂಗಾರೆ ಆತ್ಮನಿರ್ಭರ ಆಗಬೇಕಿತ್ತಲ್ಲವಾ?'

'ಅದಕ್ಕೆ ಕನಿಷ್ಠ ಕಾಲು ಶತಮಾನವಾದ್ರೂ ಬೇಕು! ಇನ್ನೊಂದು ಹತ್ ವರ್ಷ ಮೋದಿ ಮಾಮಾರೇ ಪ್ರಧಾನಿಯಾಗಿ ಮುಂದುವರಿಬೇಕು. ಆವಾಗ ಅಮೆರಿಕದ ಐ.ಟಿ ಮಂದಿನೇ ನೀವು ಹೇಳಿದಷ್ಟು ಶುಲ್ಕ ತುಂಬತೀವಿ, ನಿಮ್ಮ ದೇಶದಲ್ಲಿ ಕೆಲಸ ಮಾಡಕ್ಕೆ ವೀಸಾ ಕೊಡ್ರೀ ಅಂತ ಕ್ಯೂ ನಿಂದರತಾರೆ!' ಬೆಕ್ಕಣ್ಣ ಹೊಸ ಕನಸಿಗೆ ಜಾರಿತು.

ಸಂಗತ

ದ್ವೇಷ ಬಿತ್ತುತ್ತ ಹಾಗೂ ಹಿಂಸೆ ಹಂಚುತ್ತ...

ಸಾಮಾಜಿಕ ಮಾಧ್ಯಮ ನಮ್ಮ ಕಾಲದ ಬಹು ದೊಡ್ಡ ಶಕ್ತಿ. ದುರದೃಷ್ಟವಶಾತ್, ಈ ಮಾಧ್ಯಮ ದ್ವೇಷಸಾಧನೆಗೆ, ನಕಾರಾತ್ಮಕ ಚಿಂತನೆಗಳ ಪ್ರಸಾರಕ್ಕೆ ಬಳಕೆ ಆಗುತ್ತಿದೆ.

• ರಾಜಕುಮಾರ ಕುಲಕರ್ಣಿ

ಹಾಸನದಲ್ಲಿ ಬಿ.ಎ ಅಂತಿಮ ವರ್ಷದ ವಿದ್ಯಾರ್ಥಿ ಸಾಮಾಜಿಕ ಮಾಧ್ಯಮದ ಕ್ರೌರ್ಯಕ್ಕೆ ಒಳಗಾಗಿ ಆತ್ಮಹತ್ಯೆ ಮಾಡಿಕೊಂಡ ಸುದ್ದಿಯನ್ನು ಪತ್ರಿಕೆಗಳಲ್ಲಿ ಓದಿ ಕೆಡುಕೆನಿಸಿತು. ಉದ್ಯಾನದಲ್ಲಿ ಆ ಯುವಕ ತನ್ನ ಗೆಳತಿಯೊಂದಿಗೆ ಕುಳಿತಿದ್ದ ವಿಡಿಯೊವನ್ನು ಮಹಿಳೆಯೊಬ್ಬರು ಸಾಮಾಜಿಕ ಮಾಧ್ಯಮದಲ್ಲಿ ಹಂಚಿಕೊಂಡಿದ್ದು, ದುರ್ಘಟನೆಗೆ ಕಾರಣವಾಯಿತು.

ಸಾಮಾಜಿಕ ಮಾಧ್ಯಮದ ಮೂಲಕ ಸಂದೇಶಗಳನ್ನು ಹಂಚಿಕೊಳ್ಳುವ ಖಯಾಲಿ ಸಾಂಕ್ರಾಮಿಕ ಕಾಯಿಲೆಯಂತಾಗಿದೆ. ಸಂದೇಶಗಳು ಮನಸ್ಸಿಗೆ ಉಲ್ಲಾಸ-ಉತ್ಸಾಹ ನೀಡುವಂತಿದ್ದರೆ ಈ ಬೆಳವಣಿಗೆಯನ್ನು ಸ್ವಾಗತಿಸಬಹುದೇನೋ. ಆದರೆ, ಧರ್ಮ ಮತ್ತು ಸಮುದಾಯಗಳ ಕುರಿತು ಅವಹೇಳನದ ಮಾತುಗಳು, ಅಸಂಬದ್ಧವಾದ ಧಾರ್ಮಿಕ ವಿಚಾರಗಳು ಹಾಗೂ ವ್ಯಕ್ತಿತ್ವದ ತೇಜೋವಧೆ ಸಂದೇಶಗಳಲ್ಲಿ ಢಾಳಾಗಿ ಗೋಚರಿಸುತ್ತಿವೆ. ಕಾರು, ಸೈಟು, ಆಭರಣಗಳು, ಸನ್ಮಾನದ ಭಾವಚಿತ್ರಗಳ ಭೌತಿಕ ಸಂಗತಿಗಳು ಕೂಡ ಪ್ರದರ್ಶನದ ಮುನ್ನೆಲೆಗೆ ಬಂದಿವೆ. ಕುಟುಂಬದಲ್ಲಿ ಅಥವಾ ಬಂಧು ವರ್ಗದಲ್ಲಿ ಸಾವಾದರೆ ತಕ್ಷಣವೇ ಫೇಸ್‌ಬುಕ್, ವಾಟ್ಸ್‌ಆ್ಯಪ್‌ಗಳಲ್ಲಿ ಮೃತರ ಭಾವಚಿತ್ರ ರಾರಾಜಿಸುತ್ತದೆ.

ಕೆಲವರು ತಮ್ಮ ನೋವಿಗೆ ಉಪಶಮನ ಕಂಡುಕೊಳ್ಳಲು ಸಾಮಾಜಿಕ ಮಾಧ್ಯಮದ ಮೊರೆ ಹೋಗುವರು. ತಮ್ಮ ತೊಂದರೆ ಮತ್ತು ಕಷ್ಟಗಳ ಬಗ್ಗೆ ಮನ ಮಿಡಿಯುವ ನೋವಿನ ಮಾತುಗಳನ್ನು ದಿನನಿತ್ಯ ತಮ್ಮ ಸಂಪರ್ಕದಲ್ಲಿ ರುವವರ ಗಮನಕ್ಕೆ ತರುವ ಕೆಲಸವನ್ನು ಚಾಚೂತಪ್ಪದೆ ಪಾಲಿಸುತ್ತಾರೆ. ನೋವಿನ ಮಾತುಗಳ ಮೂಲಕ ಬಂಧುಗಳ ಮತ್ತು ದಾಯಾದಿಗಳ ವ್ಯಕ್ತಿತ್ವದ ತೇಜೋವಧೆಗಿಳಿಯುತ್ತಾರೆ. ಅವರ ಕಷ್ಟ ಮತ್ತು ನೋವಿಗೆ ಕಾರಣವೇ ಇಲ್ಲದ ವ್ಯಕ್ತಿಗಳನ್ನು ಗುರಿಯಾಗಿಸಿ ಕೊಂಡು ಮಾನಸಿಕ ಹಲ್ಲೆ ಮಾಡುತ್ತಾರೆ. ಬದುಕಿನಲ್ಲಿ ನೋವು, ನಲಿವು, ಕಷ್ಟ, ಸುಖ, ಇವೆಲ್ಲ ಸಹಜ. ಗೆಲುವನ್ನು ಆಸ್ವಾದಿಸುವಂತೆ ಮನುಷ್ಯ ಸೋಲನ್ನೂ ಸಹಜವಾಗಿಯೇ ಸ್ವೀಕರಿಸಬೇಕು. ಆದರೆ, ಸ್ಥಿತಪ್ರಜ್ಞೆಯ ಕೊರತೆಯಿಂದ ಇವರು ತಮಗಾದ ತೊಂದರೆಗಳಿಗೆ ಬೇರೆಯವರನ್ನು ಹೊಣೆಯಾಗಿಸುವ ಮಾನಸಿಕ ದೌರ್ಬಲ್ಯ ಪ್ರದರ್ಶಿಸುತ್ತಾರೆ.

ಸಾಮಾಜಿಕ ಮಾಧ್ಯಮವನ್ನು ದ್ವೇಷ, ಪ್ರತೀಕಾರದ ಸಾಧನೆಗೆ ಗುರಾಣಿಯಾಗಿಸಿಕೊಳ್ಳುವವರ ಸಂಖ್ಯೆಯೇ ಹೆಚ್ಚಾಗಿದೆ. ಧರ್ಮ ಮತ್ತು ಸಮುದಾಯಗಳ ಬಗ್ಗೆ ಅವಹೇಳನಕಾರಿಯಾದ ಸಂದೇಶಗಳನ್ನು ಹರಡುವುದರ ಮೂಲಕ ಸಮಾಜದಲ್ಲಿನ ಸೌಹಾರ್ದ ವಾತಾವರಣವನ್ನು ಕದಡಲಾಗುತ್ತಿದೆ. ಚುನಾವಣೆ ಸಂದರ್ಭ ಫೇಸ್‌ಬುಕ್ ಮತ್ತು ವಾಟ್ಸ್‌ಆ್ಯಪ್ ಅನ್ನು ಎದುರಾಳಿಗಳ ತೇಜೋವಧೆಗಾಗಿ ರಾಜಕಾರಣಿಗಳು ವ್ಯಾಪಕವಾಗಿ ಬಳಸಿಕೊಳ್ಳುತ್ತಿದ್ದಾರೆ. ಸೃಜನಶೀಲ ಕ್ಷೇತ್ರವೆಂದೇ ಪರಿಗಣಿತವಾದ ಸಾಹಿತ್ಯದಲ್ಲೂ ಬರಹಗಾರರು ನಿಂದನೆಗೆ ಸಾಮಾಜಿಕ ಮಾಧ್ಯಮವನ್ನು ಉಪಯೋಗಿ ಸುತ್ತಿರುವುದು ಆತಂಕದ ಸಂಗತಿ.

ಪ್ರಖ್ಯಾತ ಮನೋವಿಶ್ಲೇಷಣಾ ತಜ್ಞ ಎರಿಕ್ ಫ್ರಾಮ್ ಪ್ರಕಾರ, ಆಧುನಿಕ ಮನುಷ್ಯರಲ್ಲಿ ಇತರರನ್ನು ಹಂಗಿಸುವ, ಅವಮಾನಿಸುವ, ಬೇರೆಯವರ ಭಾವನೆಗಳ ಮೇಲೆ ಹಲ್ಲೆ ಮಾಡುವ, ಆ ಮೂಲಕ ಸಂತೋಷಪಡುವ ಪ್ರವೃತ್ತಿ ಹೆಚ್ಚುತ್ತಿದೆ. ಇಲ್ಲಿ ಅವಮಾನಿಸುವವನು ಶಬ್ದಗಳ ಮೂಲಕವೇ ಬೇರೆಯವರ ಮೇಲೆ ಹಲ್ಲೆ ನಡೆಸುತ್ತಾನೆ. ಅವಮಾನಿತನದು ಅಖಾಡದಲ್ಲಿ ಎದುರಾಳಿಯೇ ಗೋಚರಿಸದ, ದೇಹದ ಮೇಲೆ ಹಲ್ಲೆಯ ಯಾವ ಗುರುತುಗಳಿಲ್ಲದ ನೋವಿನ ಸ್ಥಿತಿ. ಇಂತಹದ್ದೊಂದು ಅಸಹನೀಯ ಸ್ಥಿತಿಯಿಂದ ಹೊರಬರಲು ಎರಿಕ್ ಬರ್ನ್ ಪರಿಚಯಿಸಿದ 'ಟ್ರಾನ್ಸಾಕ್ಷನಲ್ ಅನಾಲಿಸಿಸ್' ಪರಿಕಲ್ಪನೆ ನೆರವಾಗುತ್ತದೆ. ಈ ಪರಿಕಲ್ಪನೆ ಮನುಷ್ಯನ ಮಾತು ಮತ್ತು ವರ್ತನೆ ಬೇರೆಯವರಿಗೆ ನೋವಾಗದಂತೆ ಹೇಗಿರಬೇಕು ಎಂದು ಹೇಳುತ್ತದೆ. ಸಾಮಾಜಿಕ ಮಾಧ್ಯಮದ ಉಪಯೋಗ ಹೆಚ್ಚುತ್ತಿರುವ ದಿನಗಳಲ್ಲಿ ವಿದ್ಯಾರ್ಥಿಗಳಿಗೆ ಎರಿಕ್ ಬರ್ನ್ ಪರಿಕಲ್ಪನೆಯನ್ನು ಬೋಧಿಸುವ ಅಗತ್ಯವಿದೆ.

ಹೇಳಿಕೆಗಳು ಬರೀ ಹೇಳಿಕೆಗಳಾಗಿ ಉಳಿಯದೆ ಅವುಗಳು ಕ್ರಿಯೆಯಾಗಿ ಬದಲಾಗಬೇಕು. ಸಂದೇಶಗಳನ್ನು 'ರವಾನಿಸುವ' ಭರಾಟೆಯಲ್ಲಿ ಸಕ್ರಿಯನಾಗಿರುವ ಮನುಷ್ಯ, ಉತ್ತಮ ಗುಣಗಳನ್ನು ತನ್ನ ಬದುಕಿನಲ್ಲಿ ಅಳವಡಿಸಿಕೊಳ್ಳುವುದನ್ನು ಮರೆಯುತ್ತಿದ್ದಾನೆ.

'ಹಚ್ಚುವುದಾದರೆ ದೀಪ ಹಚ್ಚು, ಬೆಂಕಿ ಹಚ್ಚಬೇಡ; ಆರಿಸುವುದಾದರೆ ಬೆಂಕಿ ಆರಿಸು, ದೀಪ ಆರಿಸಬೇಡ' ಎನ್ನುವುದು ದಿನಕರ ದೇಸಾಯಿ ಅವರ ನುಡಿಮುತ್ತು. ಒಟ್ಟಾರೆ, ಒಂದು ಚೆಂದದ ಮತ್ತು ಸುಂದರವಾದ ಬಾಳ್ವೆ ಮನುಷ್ಯನದಾಗಬೇಕು. ಕಷ್ಟ, ನೋವು ಮತ್ತು ದುಃಖ, ಬದುಕಿನ ಸಹಜ ಸಂಗತಿಗಳು ಎಂದು ಸ್ವೀಕರಿಸಿದಾಗಲೇ ಮನುಷ್ಯ ಮಾನಸಿಕವಾಗಿ ಬಲಗೊಳ್ಳಲು ಸಾಧ್ಯ. ತನ್ನ ಕಷ್ಟಗಳಿಗೆ ಬೇರೆಯವರನ್ನು ದೂರುವ, ವ್ಯಕ್ತಿತ್ವದ ತೇಜೋವಧೆ ಮಾಡುವ, ಇತರರನ್ನು ಹಿಂಸಿಸಿ ಸಂತೋಷಪಡುವ ಪ್ರವೃತ್ತಿಗಳು ಮನುಷ್ಯನ ಮಾನಸಿಕ ದೌರ್ಬಲ್ಯದ ಸಂಕೇತಗಳಾಗಿವೆ.

ಸಾಮಾಜಿಕ ಮಾಧ್ಯಮದಲ್ಲಿ ಭಾಷೆಯ ದುರ್ಬಳಕೆ ಆಗುತ್ತಿದೆ. ಸಂದೇಶಗಳನ್ನು ರವಾನಿಸುವ ಧಾವಂತದಲ್ಲಿ ಭಾಷೆಯನ್ನು ಅಶ್ಲೀಲ ಮತ್ತು ಬೈಗುಳ ಆಗಿಸಲಾಗುತ್ತಿದೆ. ಭಾಷೆಯನ್ನು ಪ್ರೀತಿಯಾಗಿಸಬೇಕಾದ ಮನುಷ್ಯನೇ ಅದನ್ನು ಬೈಗುಳ ಆಗಿಸುತ್ತಿದ್ದಾನೆ ಎನ್ನುತ್ತಾರೆ ಭಾಷಾ ವಿಜ್ಞಾನಿಗಳು.

'ನಾವು ಎಷ್ಟೇ ಸಮರ್ಥಿಸಿಕೊಂಡರೂ ನಮ್ಮ ಬೈಗುಳ-ದ್ವೇಷಕ್ಕೆ ಪಾತ್ರವಾದ ವ್ಯಕ್ತಿಯಾಗಲಿ, ವಸ್ತುವಾಗಲಿ ಜಗತ್ತಿನಲ್ಲಿ ಇಲ್ಲ. ದ್ವೇಷಕ್ಕೆ ಅಧಿಕಾರಿ ಇದ್ದಾನೆ; ವಸ್ತು ಇಲ್ಲ. ಇಲ್ಲಿ ಎಲ್ಲವೂ ನಮ್ಮ ಪ್ರೀತಿಗೆ ಯೋಗ್ಯವಾದದ್ದೇ, ಪ್ರೀತಿಸುವ ತಾಕತ್ತು ನಮಗೆ ಇದ್ದಲ್ಲಿ' ಎಂದು ಯಶವಂತ ಚಿತ್ತಾಲರು ಹೇಳಿದ್ದಾರೆ. ಸಾಮಾಜಿಕ ಮಾಧ್ಯಮದ ಮೂಲಕ ಹೆಚ್ಚುತ್ತಿರುವ ಕ್ರೌರ್ಯದ ಉಪಶಮನಕ್ಕೆ ಪ್ರೀತಿಯೊಂದೇ ಮುಲಾಮು ಎನ್ನುವುದನ್ನು ಯುವಪೀಳಿಗೆಗೆ ಅರ್ಥಮಾಡಿಸುವುದು ಸದ್ಯದ ತುರ್ತು.

ಎಚ್–1ಬಿ ವೀಸಾ ಶುಲ್ಕ ಹೆಚ್ಚಳ: ಸ್ಪಷ್ಟನೆಯಿಂದ ಭಾರತೀಯರು ಕೊಂಚ ನಿರಾಳ

ಯುವ ಕನಸು ನುಚ್ಚು ನೂರು?

• ಸೂರ್ಯನಾರಾಯಣ ವಿ.

ಅಮೆರಿಕದ ಐಟಿ ಉದ್ಯೋಗಿಗಳಾಗಿರುವ ಕೆಲವು ಭಾರತೀಯರು ಶನಿವಾರ ತವರಿಗೆ ಬರುವುದಕ್ಕಾಗಿ ಸ್ಯಾನ್ ಫ್ರಾನ್ಸಿಸ್ಕೊ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ವಿಮಾನವನ್ನು ಏರಿದ್ದರು. ಸ್ವಲ್ಪ ಹೊತ್ತಿನಲ್ಲಿ ವಿಮಾನ ಹೊರಡುವುದಿತ್ತು. ಅಷ್ಟು ಹೊತ್ತಿಗೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಎಚ್–1ಬಿ ವೀಸಾದ ಅರ್ಜಿ ಶುಲ್ಕವನ್ನು 1 ಲಕ್ಷ ಡಾಲರ್‌ಗೆ (ಸುಮಾರು ₹88 ಲಕ್ಷ) ಏರಿಸುವ ಕಾರ್ಯಾದೇಶಕ್ಕೆ ಸಹಿ ಹಾಕಿದರು. ವಿಮಾನದಲ್ಲಿದ್ದ ಭಾರತೀಯರಿಗೆ ಈ ಸುದ್ದಿ ಸಿಕ್ಕಿದ್ದೇ ತಡ, ಆತಂಕಗೊಂಡರು. ತಮ್ಮನ್ನು ವಿಮಾನದಿಂದ ಕೆಳಗಿಳಿಸುವಂತೆ ವಿಮಾನದ ಸಿಬ್ಬಂದಿಗೆ ಕೇಳಿಕೊಂಡರು. ಟೆಕಿಗಳಿಗೆ ಮಾತ್ರವಲ್ಲ, ಅವರನ್ನು ನೇಮಿಸಿಕೊಂಡಿರುವ ಮೆಟಾ, ಮೈಕ್ರೊಸಾಫ್ಟ್, ಗೂಗಲ್‌ನಂತಹ ತಂತ್ರಜ್ಞಾನ ಕ್ಷೇತ್ರದ ಬೃಹತ್ ಕಂಪನಿಗಳೂ ಈ ಆದೇಶದಿಂದ ಗಾಬರಿಗೊಂಡು ಈ ವೀಸಾದ ಅಡಿಯಲ್ಲಿ ಕೆಲಸ ಮಾಡುತ್ತಿರುವ ತಮ್ಮೆಲ್ಲಾ ಸಿಬ್ಬಂದಿಗೆ ದೇಶ ತೊರೆಯದಂತೆ ಸೂಚಿಸಿದವು.

‘ಅಮೆರಿಕವೇ ಮೊದಲು’ ಎಂದು ಹೇಳುತ್ತಿರುವ ಟ್ರಂಪ್ ಆಡಳಿತದ ನಿರ್ಧಾರ ಭಾರತದಲ್ಲಿ ಅದರಲ್ಲೂ ವಿಶೇಷವಾಗಿ ಮಾಹಿತಿ ತಂತ್ರಜ್ಞಾನ ವಲಯದಲ್ಲಿ ತಲ್ಲಣ ಸೃಷ್ಟಿಸಿದೆ. ಅಮೆರಿಕದ ನಿರ್ಧಾರವು ಭಾರತೀಯರ ‘ಕುಟುಂಬಗಳನ್ನು ಗಲಿಬಿಲಿಗೊಳಿಸಲಿದೆ’ ಎಂಬ ಭಾರತದ ವಿದೇಶಾಂಗ ಸಚಿವಾಲಯದ ಪ್ರತಿಕ್ರಿಯೆ ಕೂಡ ಟ್ರಂಪ್ ಆದೇಶದಿಂದ ಭಾರತೀಯರ ಮೇಲಾಗಲಿರುವ ಪರಿಣಾಮವನ್ನು ಒತ್ತಿ ಹೇಳುತ್ತದೆ. ಅದಕ್ಕೆ ಕಾರಣವೂ ಇದೆ. ಈ ವೀಸಾ ಯೋಜನೆಯ ಅತಿ ಹೆಚ್ಚು ಫಲಾನುಭವಿಗಳು ಭಾರತೀಯ ಯುವ ಜನರು. ಅಮೆರಿಕದಲ್ಲಿ ದುಡಿದು ಹಣ ಸಂಪಾದಿಸಬೇಕು ಎಂಬ ಅವರ ಕನಸನ್ನು ನನಸು ಮಾಡಿದ್ದು ಇದೇ ಎಚ್–1ಬಿ ವೀಸಾ. ಈ ವೀಸಾದ ಮೂಲಕ ಅಲ್ಲಿಗೆ ತೆರಳಿ ಒಂದಷ್ಟು ವರ್ಷ ಕೆಲಸ ಮಾಡಿ, ನಂತರ ಪೌರತ್ವ ಪಡೆದು ಅಲ್ಲಿಯೇ ನೆಲಸಿದ ಭಾರತೀಯರ ಸಂಖ್ಯೆ ದೊಡ್ಡದಿದೆ. ಹೀಗಿರುವಾಗ 2,000 ಡಾಲರ್‌ನಿಂದ 5,000 ಡಾಲರ್‌ವರೆಗೆ ಇದ್ದ ವೀಸಾ ಶುಲ್ಕವನ್ನು ದಿಢೀರ್ ಒಂದು ಲಕ್ಷ ಡಾಲರ್‌ಗೆ ಏರಿಸಿರುವುದು ಅಮೆರಿಕದಲ್ಲಿ ಕೆಲಸ ಮಾಡಬೇಕು, ನಂತರ ಅಲ್ಲಿಯೇ ನೆಲಸಬೇಕು ಎನ್ನುವ ದೇಶದ ಲಕ್ಷಾಂತರ ಯುವಕ–ಯುವತಿಯರ ಕನಸಿಗೆ ತಣ್ಣೀರು ಎರಚಿದೆ.

ಈ ವೀಸಾದ ಅಡಿಯಲ್ಲಿ ಅಮೆರಿಕದಲ್ಲಿ ಈಗ ಕೆಲಸ ಮಾಡುತ್ತಿರುವವರೂ ಶನಿವಾರ ಆದೇಶ ಹೊರಬಿದ್ದ ತಕ್ಷಣ ಆತಂಕಗೊಂಡಿದ್ದರು. ತಮ್ಮನ್ನು ನೇಮಕ ಮಾಡಿಕೊಂಡ ಕಂಪನಿಗಳು ಲಕ್ಷ ಡಾಲರ್ ಶುಲ್ಕ ಭರಿಸದೇ ಇದ್ದರೆ, ಕೆಲಸ ಕಳೆದುಕೊಂಡು ಭಾರತಕ್ಕೆ ಮರಳಬೇಕಾದೀತು ಎಂಬ ಕಳವಳ ಅವರನ್ನು ಕಾಡಿತ್ತು. ಆದರೆ, ಶ್ವೇತಭವನದಿಂದ ಸ್ಪಷ್ಟನೆ ಹೊರಬಿದ್ದ ಬಳಿಕ ಅವರು ಕೊಂಚ ನಿರಾಳರಾಗಿದ್ದಾರೆ.

ಶ್ವೇತ ಭವನದ ಆಡಳಿತ ನೀಡಿರುವ ಸ್ಪಷ್ಟನೆಯ ಪ್ರಕಾರ, ಹೊಸ ಶುಲ್ಕ ಹೊಸ ಅರ್ಜಿಗಳಿಗಷ್ಟೇ ಅನ್ವಯವಾಗುತ್ತದೆ (ಮುಂದಿನ ಲಾಟರಿ ಸೈಕಲ್‌ಗೆ). ಈ ವೀಸಾದಡಿ ಈಗ ಕೆಲಸ ಮಾಡುತ್ತಿರುವವರು ಹೊಸ ಶುಲ್ಕ ಪಾವತಿಸಬೇಕಾಗಿಲ್ಲ. ಅಲ್ಲದೇ ವೀಸಾ ಅವಧಿ ಮುಕ್ತಾಯಗೊಂಡ ನಂತರ ಸಲ್ಲಿಸಲಾಗುವ ನವೀಕರಣ ಅರ್ಜಿಗೂ ಇದು ಅನ್ವಯವಾಗುವುದಿಲ್ಲ. ಹಾಲಿ ವೀಸಾ ಹೊಂದಿರುವವರು ಈಗಿನಂತೆ ಹೊರ ದೇಶಗಳಿಗೆ ಹೋಗಬಹುದು, ಅಮೆರಿಕಕ್ಕೆ ಬರಬಹುದು. ಅದೇ ರೀತಿ, ಎಚ್–1ಬಿ ವೀಸಾಕ್ಕಾಗಿ ಪ್ರತಿ ವರ್ಷ ಲಕ್ಷ ಡಾಲರ್ ಶುಲ್ಕ ಪಾವತಿಸಬೇಕಾಗುತ್ತದೆ ಎಂದು ಆರಂಭದಲ್ಲಿ ವರದಿಯಾಗಿತ್ತು. ಆದರೆ, ಇದಕ್ಕೂ ಸ್ಪಷ್ಟನೆ ನೀಡಿರುವ ಅಧಿಕಾರಿಗಳು, ಈ ಶುಲ್ಕವು ವೀಸಾದ ಪೂರ್ಣ ಅವಧಿಗೆ ಅನ್ವಯವಾಗುತ್ತದೆ ಎಂದು ಹೇಳಿದ್ದಾರೆ.

ಕಡಿಮೆಯಾಗಲಿದೆ ಅವಕಾಶ: ಹೊರದೇಶಗಳ ಕೌಶಲಯುಕ್ತ ವೃತ್ತಿಪರರನ್ನು ನೇಮಿಸಿಕೊಳ್ಳುವ ಕಂಪನಿಗಳು ಈ ವೀಸಾಕ್ಕಾಗಿ ಅರ್ಜಿ ಸಲ್ಲಿಸುತ್ತವೆ. ಶುಲ್ಕವನ್ನು ಭರಿಸುವುದೂ ಅವುಗಳೇ. ಶುಲ್ಕ ಹೆಚ್ಚಾಗಿರುವುದು ಕಂಪನಿಗಳಿಗೆ ಹೊರೆಯಾಗುವುದು ಖಂಡಿತ. ಹಾಗಾಗಿ, ವಿದೇಶ ವೃತ್ತಿಪರರನ್ನು ನೇಮಿಸುವುದಕ್ಕಾಗಿ ಅಷ್ಟು ಮೊತ್ತದ ಶುಲ್ಕ ನೀಡಲು ಅವುಗಳು ಹಿಂದೇಟು ಹಾಕಬಹುದು. ಇಲ್ಲವೇ ಹೆಚ್ಚು ಪರಿಣತಿ ಇರುವ ನಿರ್ದಿಷ್ಟ ವ್ಯಕ್ತಿಯನ್ನು ನೇಮಕ ಮಾಡಿಕೊಳ್ಳಲೇ ಬೇಕು ಎಂಬಂತಹ ಅನಿವಾರ್ಯ ಸನ್ನಿವೇಶದಲ್ಲಿ ಮಾತ್ರ ಈ ವೀಸಾದಡಿ ಕಂಪನಿಗಳು ನೇಮಕಾತಿಗೆ ಮುಂದಾಗಬಹುದು. ನೇಮಕ ಮಾಡಿದರೂ, ಉದ್ಯೋಗಿಗಳ ಸಂಖ್ಯೆ ತುಂಬಾ ಕಡಿಮೆ ಇರಬಹುದು. ವೀಸಾ ನವೀಕರಣಕ್ಕೆ ಹೊಸ ಶುಲ್ಕ ಅನ್ವಯವಾಗುವುದಿಲ್ಲ ಎಂದು ಸ್ಪಷ್ಟನೆ ನೀಡಿರುವುದು ಸಮಾಧಾನಕರ ಸಂಗತಿ. ನವೀಕರಣಕ್ಕೆ ಈ ಶುಲ್ಕ ಅನ್ವಯವಾಗಿದ್ದರೆ ಸಾವಿರಾರು ಭಾರತೀಯರು ಕೆಲಸ ಕಳೆದುಕೊಳ್ಳುತ್ತಿದ್ದರು ಎಂಬುದು ತಜ್ಞರ ಅಭಿಪ್ರಾಯ.

ಆಧಾರ: ಪಿಟಿಐ, ಬಿಬಿಸಿ, ರಾಯಿಟರ್ಸ್, ಶ್ವೇತಭವನ ವೆಬ್‌ಸೈಟ್, ಯುಎಸ್‌ಸಿಐಎಸ್.ಜಿಒವಿ, ಪ್ಯೂರಿಸರ್ಚ್.ಒಆರ್‌ಜಿ

ಹೆಚ್ಚು ಎಚ್1ಬಿ ವೀಸಾ ಪಡೆದಿರುವ ಕಂಪನಿಗಳು

ಕಂಪನಿ	2024	2025*
ಅಮೆಜಾನ್	9,257	10,044
ಟಿಸಿಎಸ್	5,272	5,505
ಮೈಕ್ರೊಸಾಫ್ಟ್	4,725	5,189
ಮೆಟಾ	4,844	5,123
ಆ್ಯಪಲ್	3,873	4,202
ಗೂಗಲ್	5,364	4,181
ಜೆಪಿಮಾರ್ಗನ್	1,719	2,440
ಅಮೆಜಾನ್ ವೆಬ್ ಸರ್ವಿಸಸ್	2,216	2,347
ಇನ್ಫೊಸಿಸ್	8,137	2,004
ಮೈಂಡ್‌ಟ್ರೀ	2,136	1,807
ಎಚ್‌ಸಿಎಲ್	2,952	1,728
ವಿಪ್ರೊ	1,636	1,523
ಟೆಕ್ ಮಹೀಂದ್ರ	1,199	951

* ಜೂನ್ 30ರವರೆಗೆ

ವೀಸಾಗೆ ಮಿತಿ

ಪ್ರತಿ ಆರ್ಥಿಕ ವರ್ಷದಲ್ಲಿ 65 ಸಾವಿರದಷ್ಟು ಹೊಸ ಎಚ್–1ಬಿ ವೀಸಾ ನೀಡುವ ಮಿತಿಯನ್ನು ಅಮೆರಿಕ ಸರ್ಕಾರ ಹಾಕಿಕೊಂಡಿದೆ (ವೀಸಾ ನವೀಕರಣ ಇದರ ವ್ಯಾಪ್ತಿಯಲ್ಲಿ ಬರುವುದಿಲ್ಲ). ಅಮೆರಿಕದ ಶಿಕ್ಷಣ ಸಂಸ್ಥೆಗಳಿಂದ ಸ್ನಾತಕೋತ್ತರ ಅಥವಾ ಉನ್ನತ ಶಿಕ್ಷಣ ಪಡೆದವರಿಗೆ ಹೆಚ್ಚುವರಿಯಾಗಿ 20 ಸಾವಿರದಷ್ಟು ವೀಸಾವನ್ನು ನೀಡುವ ವ್ಯವಸ್ಥೆ ಅಲ್ಲಿದೆ.

ಸದ್ಬಳಕೆಗೆ ಅವಕಾಶ

ಟ್ರಂಪ್ ಅವರ ಈ ಕ್ರಮವನ್ನು ಸದ್ಬಳಕೆ ಮಾಡುವುದಕ್ಕೆ ಭಾರತಕ್ಕೆ ಅವಕಾಶ ಇದೆ. ಅಮೆರಿಕದಲ್ಲಿನ ಕಂಪನಿಗಳು ಪರಿಣತ ವೃತ್ತಿಪರರನ್ನು ನೇಮಕ ಮಾಡಿಕೊಳ್ಳದೇ ಇದ್ದರೆ, ಅವರು ಭಾರತದಲ್ಲೇ ಉಳಿಯಲಿದ್ದಾರೆ. ಅವರಿಗೆ ಇಲ್ಲೇ ಉತ್ತಮ ಅವಕಾಶ ಸಿಕ್ಕಿದರೆ ದೇಶದಲ್ಲಿ ಉದ್ಯಮಗಳು ಬೆಳೆಯುತ್ತವೆ. ಇದು ದೇಶದ ಅಭಿವೃದ್ಧಿಗೂ ಅನುಕೂಲ ಎಂಬ ಅಭಿಪ್ರಾಯವೂ ವ್ಯಕ್ತವಾಗಿದೆ. ‘ಅಮೆರಿಕದಿಂದ ವಾಪಸ್ ಆಗುವ ಮತ್ತು ದೇಶದಲ್ಲಿರುವ ತಜ್ಞ ಪ್ರತಿಭೆಗಳನ್ನು ದೇಶದ ಸಾಫ್ಟ್‌ವೇರ್, ಕ್ಲೌಡ್ ಮತ್ತು ಸೈಬರ್‌ಭದ್ರತೆ ಸೇರಿದಂತೆ ಇನ್ನಿತರ ಕ್ಷೇತ್ರಗಳಲ್ಲಿ ಬಳಸಿಕೊಂಡು ಲಾಭ ಪಡೆಯುವ ಯೋಜನೆಯನ್ನು ಭಾರತ ರೂಪಿಸಬೇಕು. ಆ ಮೂಲಕ ‘ಡಿಜಿಟಲ್ ಸ್ವರಾಜ್ ಮಿಷನ್’ಗೆ ಉತ್ತೇಜನ ನೀಡಬೇಕು’ ಎಂದು ಜಿಟಿಆರ್‌ಐ ಸಂಸ್ಥಾಪಕ ಅಜಯ್ ಶ್ರೀವಾಸ್ತವ ಹೇಳಿದ್ದಾರೆ.

‘ಅಮೆರಿಕಕ್ಕೇ ನಷ್ಟ’

ಟ್ರಂಪ್ ಅವರ ಈ ನಿರ್ಧಾರದಿಂದ ಭಾರತಕ್ಕಿಂತಲೂ ಅಮೆರಿಕಕ್ಕೆ ಹೆಚ್ಚು ನಷ್ಟ ಆಗಬಹುದು ಎಂದು ಚಿಂತಕರ ಚಾವಡಿ ಜಿಟಿಆರ್‌ಐ ಹೇಳಿದೆ.

‘ಅಮೆರಿಕದಲ್ಲಿ ಭಾರತದ ಐಟಿ ಕಂಪನಿಗಳು ಈಗಾಗಲೇ ಶೇ 50ರಿಂದ ಶೇ 80ರಷ್ಟು ಸ್ಥಳೀಯರನ್ನೇ ನೇಮಕ ಮಾಡಿಕೊಂಡಿವೆ. ಟ್ರಂಪ್ ಕ್ರಮವು ಹೆಚ್ಚಿನ ಸಂಖ್ಯೆಯಲ್ಲಿ ಹೊಸ ಉದ್ಯೋಗಗಳನ್ನು ಸೃಷ್ಟಿಸದು. ಭಾರತೀಯರನ್ನು ನೇಮಕ ಮಾಡಿಕೊಳ್ಳುವುದಕ್ಕೆ ಕಂಪನಿಗಳು ಹೆಚ್ಚು ಖರ್ಚು ಮಾಡಬೇಕಾಗುತ್ತದೆ. ಇದನ್ನು ತಪ್ಪಿಸಲು ಕಂಪನಿಗಳು, ಹೊರದೇಶಗಳಿಂದಲೇ ತಮ್ಮ ಕಂಪನಿಗಳ ಕಾರ್ಯಾಚರಣೆಯನ್ನು ತೀವ್ರಗೊಳಿಸಬಹುದು. ಉದಾಹರಣೆಗೆ, ತಮ್ಮ ಉದ್ಯೋಗಿಗಳ ಮೂಲಕ ಭಾರತದಿಂದಲೇ ಕಾರ್ಯಾಚರಣೆಯನ್ನು ಹೆಚ್ಚಿಸಬಹುದು’ ಎಂದು ಅದು ಅಭಿಪ್ರಾಯಪಟ್ಟಿದೆ.

ಟ್ರಂಪ್ ನೀತಿಯಿಂದಾಗಿ ಭಾರತದ ಐಟಿ ವಲಯವು ಅಮೆರಿಕದ ಪ್ರಾಜೆಕ್ಟ್‌ಗಳಿಗಾಗಿ ತನ್ನ ಕಾರ್ಯಾಚರಣೆಯನ್ನು ಸಂಪೂರ್ಣವಾಗಿ ಬದಲಾಯಿಸಬೇಕಾಗಬಹುದು ಎಂದು ತಜ್ಞರು ವಿಶ್ಲೇಷಿಸಿದ್ದಾರೆ.

ಭಾರತದ ಐಟಿ ವಲಯವು ತನ್ನ ಒಟ್ಟಾರೆ ಆದಾಯದಲ್ಲಿ ಅಮೆರಿಕದಿಂದಲೇ ಶೇ 57ರಷ್ಟು ಆದಾಯ ಪಡೆಯುತ್ತದೆ.

ಭಾರತೀಯರೇ ಫಲಾನುಭವಿಗಳು

‘ಎಚ್1–ಬಿ’ ಯು ವಲಸೆಯೇತರ ವೀಸಾ. ಹೊರದೇಶಗಳ ಪರಿಣತ ವೃತ್ತಿಪರರಿಗೆ ಅಮೆರಿಕದಲ್ಲಿ ಕೆಲಸ ನೀಡಲು ಅಲ್ಲಿನ ಕಂಪನಿಗಳಿಗೆ ಇದು ಅವಕಾಶ ನೀಡುತ್ತದೆ. ಇದು ತಾತ್ಕಾಲಿಕ ವೀಸಾ ಆಗಿದ್ದು, ಇದಕ್ಕೆ ಮೂರರಿಂದ ಆರು ವರ್ಷಗಳ ಅವಧಿ ಇರುತ್ತದೆ.

ಈ ವೀಸಾದ ಅಡಿಯಲ್ಲಿ ಅಮೆರಿಕಕ್ಕೆ ತೆರಳುವವರಲ್ಲಿ ಭಾರತೀಯರೇ ಮುಂದೆ ಇದ್ದಾರೆ. ಭಾರತದ ಎಂಜಿನಿಯರ್‌ಗಳು ಹಾಗೂ ಇತರ ಕ್ಷೇತ್ರಗಳ ತಜ್ಞರನ್ನು ತಂತ್ರಜ್ಞಾನ ಹಾಗೂ ಇತರ ಕಂಪನಿಗಳು ಕರೆಸಿಕೊಳ್ಳುತ್ತವೆ. ಅಮೆರಿಕ ಸರ್ಕಾರ ವಿತರಿಸುವ ಬಹುಪಾಲು ವೀಸಾಗಳ ಫಲಾನುಭವಿಗಳು ತಂತ್ರಜ್ಞಾನ ಕಂಪನಿಗಳು. ಕಂಪ್ಯೂಟರ್‌ಗೆ ಸಂಬಂಧಿಸಿದ ಉದ್ಯೋಗದಲ್ಲಿರುವ ಶೇ 65ರಷ್ಟು ಮಂದಿ ಈ ವೀಸಾದ ಫಲಾನುಭವಿಗಳು.



ಪ್ಯೂ ರಿಸರ್ಚ್ ವರದಿ ಪ್ರಕಾರ 2023ರಲ್ಲಿ ಎಚ್1–ಬಿ ವೀಸಾಗಳಲ್ಲಿ ಶೇ 73ರಷ್ಟು ಭಾರತೀಯರು ಪಡೆದಿದ್ದರು. ಚೀನಾದ ನಾಗರಿಕರ ಪಾಲು ಶೇ 12. ಉಳಿದ ಎಲ್ಲ ದೇಶಗಳ ನಾಗರಿಕರಿಗೆ ಸಿಕ್ಕಿದ್ದು ಶೇ 15ರಷ್ಟು ವೀಸಾಗಳು.

ಶುಲ್ಕ ಹೆಚ್ಚಳ: ಟ್ರಂಪ್ ವಾದವೇನು?

ಟ್ರಂಪ್ ಅವರು ತಮ್ಮ ಕಾರ್ಯಾದೇಶದಲ್ಲಿ, ಎಚ್–1ಬಿ ವೀಸಾ ಅರ್ಜಿ ಶುಲ್ಕ ಹೆಚ್ಚಿಸುವುದಕ್ಕೆ ಏನು ಕಾರಣ ಎಂಬುದನ್ನೂ ವಿವರಿಸಿದ್ದಾರೆ. ಕಂಪನಿಗಳು ಈ ವೀಸಾ ಯೋಜನೆಯನ್ನು ದುರ್ಬಳಕೆ ಮಾಡಿಕೊಳ್ಳುತ್ತಿವೆ ಎಂದು ಅವರು ಆರೋಪಿಸಿದ್ದಾರೆ. ಸ್ಥಳೀಯರಿಗೆ ಹೆಚ್ಚು ಸಂಬಳ ನೀಡಬೇಕಾಗುತ್ತದೆ ಎಂಬ ಕಾರಣಕ್ಕೆ ಅವರಿಗೆ ಅವಕಾಶ ನೀಡದೆ, ಹೊರದೇಶಗಳಿಂದ ಕಡಿಮೆ ಸಂಬಳಕ್ಕೆ ವೃತ್ತಿಪರರನ್ನು ಕರೆಸಿಕೊಂಡು ಉದ್ಯೋಗ ನೀಡಲಾಗುತ್ತದೆ ಎಂದು ಅವರು ಹೇಳಿದ್ದಾರೆ.

ವಿಜ್ಞಾನ, ತಂತ್ರಜ್ಞಾನ ಎಂಜಿನಿಯರಿಂಗ್ ಮತ್ತು ಗಣಿತ ಕ್ಷೇತ್ರದಲ್ಲಿ (ಸ್ಟೆಮ್) ದುಡಿಯುತ್ತಿರುವ ವಿದೇಶಿ ಉದ್ಯೋಗಿಗಳ ಸಂಖ್ಯೆ 2000 ಮತ್ತು 2019ರ ನಡುವೆ ದುಪ್ಪಟ್ಟಾಗಿದೆ. ಐಟಿ ಕಂಪನಿಗಳು ಈ ವೀಸಾ ಯೋಜನೆಯನ್ನು ಅತಿ ಹೆಚ್ಚು ದುರ್ಬಳಕೆ ಮಾಡಿಕೊಂಡಿವೆ. ಕಳೆದ ಐದು ವರ್ಷಗಳಲ್ಲಿ ಕಂಪನಿಗಳು ಎಚ್–1ಬಿ ವೀಸಾ ಪಡೆಯುವ ಪ್ರಮಾಣ ಶೇ 65ರಷ್ಟು ಹೆಚ್ಚಾಗಿದೆ ಎಂದು ಟ್ರಂಪ್ ಅವರು ಆದೇಶದಲ್ಲಿ ವಿವರಿಸಿದ್ದಾರೆ.

ಕಂಪನಿಗಳು ವರ್ಷದಿಂದ ವರ್ಷಕ್ಕೆ ಹೆಚ್ಚೆಚ್ಚು ಎಚ್–1ಬಿ ವೀಸಾಕ್ಕೆ ಅರ್ಜಿ ಸಲ್ಲಿಸಿ ವಿದೇಶದವರಿಗೆ ಉದ್ಯೋಗ ನೀಡುತ್ತಿವೆ. ಅದೇ ಸಮಯದಲ್ಲಿ ಹೆಚ್ಚು ಸಂಬಳದ ಕಾರಣಕ್ಕೆ ಅಮೆರಿಕದವರನ್ನು ಕೆಲಸದಿಂದ ತೆಗೆಯುತ್ತಿವೆ. ಎಂದು ಆರೋಪಿಸಿರುವ ಅವರು, ಇದಕ್ಕೆ ಹಲವು ಉದಾಹರಣೆಗಳನ್ನೂ ನೀಡಿದ್ದಾರೆ. ವೀಸಾ ಯೋಜನೆಯ ದುರ್ಬಳಕೆ ತಡೆಯಲು ಮತ್ತು ಸ್ಥಳೀಯರಿಗೆ ಉದ್ಯೋಗ ಸಿಗುವಂತೆ ಮಾಡಲು ವೀಸಾ ಅರ್ಜಿ ಶುಲ್ಕ ಹೆಚ್ಚಿಸುವುದು ಅನಿವಾರ್ಯ ಎಂದು ಟ್ರಂಪ್ ತಮ್ಮ ನಿರ್ಧಾರವನ್ನು ಸಮರ್ಥಿಸಿಕೊಂಡಿದ್ದಾರೆ.

ಈ ಆದೇಶ ಒಂದು ವರ್ಷ (ಸೆ.21 2026) ಜಾರಿಯಲ್ಲಿರಲಿದೆ ಎಂದು ಕಾರ್ಯಾದೇಶದಲ್ಲಿ ಹೇಳಲಾಗಿದೆ. ಒಂದು ವೇಳೆ, ಅದರ ಒಳಗಾಗಿ ಅವಧಿಯನ್ನು ವಿಸ್ತರಿಸದೇ ಇದ್ದರೆ ಆದೇಶ ಅನೂರ್ಜಿತಗೊಳ್ಳಲಿದೆ.

‘ಈ ಬಾರಿ ನಿಖರ ಸಮೀಕ್ಷೆ ಗೊಂದಲಕ್ಕೆ ಅವಕಾಶವಿಲ್ಲ’

ರಾಜ್ಯದಾದ್ಯಂತ ಇಂದಿನಿಂದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಆರಂಭವಾಗಲಿದೆ. ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ಸಮೀಕ್ಷೆಗಾಗಿ ಎಲ್ಲ ಸಿದ್ಧತೆಗಳನ್ನು ನಡೆಸಿದೆ. ಈ ಹೊತ್ತಿನಲ್ಲಿ ಸಮೀಕ್ಷೆಗೆ ಸಂಬಂಧಿಸಿದಂತೆ **ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಆಯುಕ್ತ ಕೆ.ಎ.ದಯಾನಂದ** ಅವರು ‘ಪ್ರಜಾವಾಣಿ’ಯೊಂದಿಗೆ ಮಾತನಾಡಿದ್ದಾರೆ. ಅವರೊಂದಿಗೆ ನಡೆಸಿರುವ ಸಂದರ್ಶನದ ಆಯ್ದ ವಿವರಗಳು ಇಲ್ಲಿವೆ

• ಚಂದ್ರಹಾಸ ಹಿರೇಮಳಲಿ

ಪ್ರಜಾವಾಣಿ ಸಂದರ್ಶನ

• ಬಿಹಾರ ಮತ್ತು ತೆಲಂಗಾಣದಲ್ಲಿ ನಡೆದಿರುವ ಜಾತಿ ಸಮೀಕ್ಷೆ ಬಗ್ಗೆ, ಅವುಗಳ ನಿಖರತೆ ಬಗ್ಗೆ ಹಲವು ಆರೋಪ, ದೂರುಗಳು ವ್ಯಕ್ತವಾಗಿದ್ದವು. ರಾಜ್ಯದಲ್ಲಿ ನಡೆಸಲಾಗುತ್ತಿರುವ ಸಮೀಕ್ಷೆಯಲ್ಲಿ ಅವುಗಳನ್ನು ಗಣನೆಗೆ ತೆಗೆದುಕೊಳ್ಳಲಾಗಿದೆಯೇ?

ತೆಲಂಗಾಣ, ಬಿಹಾರದ ಜಾತಿ ಸಮೀಕ್ಷೆ ಜತೆಗೆ ಕರ್ನಾಟಕದ ಸಮೀಕ್ಷೆಯ ಹೋಲಿಕೆಯೇ ಸರಿಯಲ್ಲ. ತೆಲಂಗಾಣದಲ್ಲಿ ಹಿಂದುಳಿದ ವರ್ಗಗಳ ಆಯೋಗದ ಮೂಲಕ ಸಮೀಕ್ಷೆ ನಡೆಸಿಲ್ಲ. ಯೋಜನಾ ಇಲಾಖೆ ಸಮೀಕ್ಷೆ ನಡೆಸಿದೆ. ಎಚ್.ಕಾಂತರಾಜ ವರದಿ ಆಧಾರದಲ್ಲೇ ಸಮೀಕ್ಷೆ ಕೈಗೊಳ್ಳಲು ಅಲ್ಲಿನ ತಂಡ ಮಾಹಿತಿ ಪಡೆದಿತ್ತು. ಆದರೆ, ಆ ಸಮೀಕ್ಷೆ ವೈಜ್ಞಾನಿಕವಾಗಿ ನಡೆದಿಲ್ಲ ಎನ್ನುವ ಆರೋಪವಿದೆ. ರಾಜ್ಯದಲ್ಲಿ ಕಾನೂನುಬದ್ಧ ಸಂಸ್ಥೆಯಾದ ಹಿಂದುಳಿದ ವರ್ಗಗಳ ಶಾಶ್ವತ ಆಯೋಗವೇ ಸಮೀಕ್ಷೆ ನಡೆಸುತ್ತಿದೆ. ಹಿಂದಿನ ಸಮೀಕ್ಷೆಯಲ್ಲಿ ಗಣತಿದಾರರು ಎಲ್ಲರ ಮನೆಗೂ ಭೇಟಿ ನೀಡಿಲ್ಲ ಎನ್ನುವ ಆರೋಪವಿತ್ತು. ಅದನ್ನು ತೊಡೆದು ಹಾಕಲು ಈ ಬಾರಿ ಮನೆಗಳನ್ನು ಜಿಯೋ ಟ್ಯಾಗ್ ಮಾಡಿ ಬ್ಲಾಕ್‌ಗಳನ್ನು ರಚಿಸಲಾಗಿದೆ. ಆ್ಯಪ್ ಆಧಾರಿತ ವೈಜ್ಞಾನಿಕ ಸಮೀಕ್ಷೆ ಕೈಗೊಳ್ಳಲಾಗುತ್ತಿದೆ. ಗಣತಿದಾರರು ಎಲ್ಲಿ ಸಮೀಕ್ಷೆ ಮಾಡುತ್ತಿದ್ದಾರೆ ಎಂಬ ಮಾಹಿತಿ ಇದರಿಂದ ಸಿಗಲಿದೆ. ಆ ಸ್ಥಳದ ಲೊಕೇಷನ್ ಕ್ಯಾಪ್ಚರ್ ಆಗುತ್ತದೆ. ಸಮೀಕ್ಷೆ ವೇಳೆ ಮಾಹಿತಿ ನೀಡುವವರ ಫೋಟೊ ಕೂಡ ತೆಗೆದುಕೊಳ್ಳಲಾಗುತ್ತದೆ. ಎಲ್ಲೋ ಕುಳಿತು ಸಮೀಕ್ಷೆ ನಡೆಸಲು ಸಾಧ್ಯವೇ ಇಲ್ಲ. ಈ ಬಾರಿಯ ಸಮೀಕ್ಷೆ ಅತ್ಯಂತ ಸ್ಪಷ್ಟ, ನಿಖರವಾಗಿರಲಿದೆ.

• ರಾಜ್ಯದ ಜಾತಿವಾರು ಸಮೀಕ್ಷೆಯ ಬೆನ್ನಲ್ಲೇ ಕೇಂದ್ರವೂ ಜನಗಣತಿ ಮತ್ತು ಜಾತಿ ಸಮೀಕ್ಷೆ ಒಟ್ಟಿಗೇ ನಡೆಸಲಿದೆ. ಎರಡರ ನಡುವೆ ಸಂಘರ್ಷ ಉಂಟಾಗುವುದಿಲ್ಲವೇ?

ಕರ್ನಾಟಕದಲ್ಲಿ ನಡೆಯುತ್ತಿರುವುದು ಜಾತಿ ಸಮೀಕ್ಷೆ ಅಲ್ಲ, ಇದು ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ. ಈ ಸಮೀಕ್ಷೆಗೆ ಸಿದ್ಧಪಡಿಸಿರುವ 60 ಪ್ರಶ್ನೆಗಳಲ್ಲಿ ಜಾತಿ ಕುರಿತು ಒಂದು ಪ್ರಶ್ನೆಯಷ್ಟೇ ಇದೆ. ಇದು ಜಾತಿಯ ಆಧಾರದಲ್ಲಿ ಅವರ ಸ್ಥಿತಿಗತಿ ನಿರ್ಧರಿಸುವ ಸಮೀಕ್ಷೆಯಲ್ಲ. ಈ ಸಮೀಕ್ಷೆ ಮೀಸಲಾತಿಯ ಮಾನದಂಡವೂ ಅಲ್ಲ. ಎಲ್ಲ ಜಾತಿಗಳಲ್ಲಿನ ಸಾಮಾಜಿಕ, ಶೈಕ್ಷಣಿಕ, ಉದ್ಯೋಗದ ಸ್ಥಿತಿಗತಿಗಳನ್ನು ಗುರುತಿಸಿ ವಿಶ್ಲೇಷಿಸಿ ಸೂಕ್ತ ಶಿಫಾರಸು ಮಾಡುವ ಉದ್ದೇಶ ಇದರದ್ದು. ಉದಾಹರಣೆಗೆ ಎಚ್‌ಎಸ್‌ಆರ್ ಲೇಔಟ್‌ನಲ್ಲಿ ವಾಸಿಸುವ ಜನರಿಗೂ, ಒಂದು ಚಿಕ್ಕ ಕಾಲೊನಿಯಲ್ಲಿ ವಾಸಿಸುವ ಒಂದೇ ಜಾತಿಗೆ ಸೇರಿದ ವ್ಯಕ್ತಿಗಳ ಸ್ಥಿತಿಗತಿಗಳಲ್ಲಿ ಭಾರಿ ವ್ಯತ್ಯಾಸ ಇರುತ್ತದೆ.

• ಈ ಬಾರಿ ಸಮೀಕ್ಷೆಯನ್ನು ಉದ್ದೇಶಿತ ಸಮಯದಲ್ಲಿ ಮುಗಿಸಲು ಸಾಧ್ಯವಾಗುತ್ತದೆಯೇ?

ಖಂಡಿತ ಆ ಪ್ರಯತ್ನವನ್ನು ಆಯೋಗ ಮಾಡುತ್ತದೆ ಎಂಬ ನಂಬಿಕೆ ಇದೆ. ಸಣ್ಣ ವ್ಯತ್ಯಾಸಗಳಾದರೆ ಒಂದೆರಡು ದಿನ ವಿಸ್ತರಿಸಿಕೊಳ್ಳಬಹುದು. ಅದಕ್ಕಾಗಿ ದಸರಾ ರಜೆಯನ್ನು ಸದ್ಬಳಕೆ ಮಾಡಿಕೊಳ್ಳಲಾಗುತ್ತಿದೆ.

ದೇಶದಲ್ಲೇ ಮೊದಲ ಬಾರಿ ಮನೆಗಳ ವಿದ್ಯುತ್ ಸಂಪರ್ಕದ ಮಾಹಿತಿಯನ್ನು (ಆರ್‌ಆರ್ ಸಂಖ್ಯೆ) ಸಮೀಕ್ಷೆಗೆ ಬಳಸಿಕೊಳ್ಳುತ್ತಿದೆ. ಈಗಾಗಲೇ ಇಂಧನ ಇಲಾಖೆಯ ಸಿಬ್ಬಂದಿ ಪ್ರತಿ ಮನೆಗೂ ಜಿಯೋ ಟ್ಯಾಗ್ ಮಾಡಿ, ಪ್ರತಿ ಮನೆಗಳನ್ನೂ ಗುರುತಿಸಿ ಮನೆಪಟ್ಟಿ ಮಾಡಲಾಗಿದೆ. ಅದಕ್ಕಾಗಿ ಪ್ರತ್ಯೇಕ ಆ್ಯಪ್ ಸಿದ್ಧಪಡಿಸಲಾಗಿದೆ. ಸಮೀಕ್ಷಾ ಕಾರ್ಯವನ್ನು ತ್ವರಿತವಾಗಿ ಪೂರ್ಣಗೊಳಿಸಲು, ಸಮೀಕ್ಷಾ ವ್ಯಾಪ್ತಿಯಿಂದ ಯಾವುದೇ ಮನೆ ಬಿಟ್ಟು ಹೋಗದಂತೆ ಮುನ್ನೆಚ್ಚರಿಕೆ ವಹಿಸಲು ವಿಧಾನ ಸಹಕಾರಿಯಾಗಿದೆ.

• ಜಾತಿ ಹೆಸರು ನಮೂದಿಸುವ ವಿಚಾರದಲ್ಲಿ ಕೆಲವು ಸಮುದಾಯಗಳಲ್ಲಿ ಗೊಂದಲಗಳಿವೆ. ಉದಾಹರಣೆಗೆ, ವೀರಶೈವ ಲಿಂಗಾಯತರ ಜಾತಿ ಹೆಸರು ಹೇಗೆ ಬರೆಯಬೇಕು ಎನ್ನುವುದರ ಬಗ್ಗೆ ತುಂಬಾ ಗೊಂದಲ ಇದೆ. ಇಂಥವುಗಳನ್ನು ಹೇಗೆ ಪರಿಹರಿಸುತ್ತೀರಿ?

ಯಾವುದೇ ಗೊಂದಲ ಇಲ್ಲ. ಪರಿಶಿಷ್ಟರಲ್ಲಿ 101, ಪರಿಶಿಷ್ಟ ಪಂಗಡದಲ್ಲಿ 50, ಹಿಂದುಳಿದ ವರ್ಗಗಳಲ್ಲಿ 887 ಜಾತಿಗಳನ್ನು ಗುರುತಿಸಲಾಗಿದೆ. ಇವುಗಳಿಗೆ ಸೇರದ ಸಾವಿರಾರು ಜಾತಿಗಳಿವೆ. ಅವುಗಳು ಮೇಲಿನ ಯಾವುದಾದರೂ ಒಂದು ಜಾತಿಯ ಉಪಜಾತಿ ಆಗಿರಬಹುದು. ಆ ಜಾತಿಯ ಕಾಲಂನಲ್ಲಿ ತಮ್ಮನ್ನು ಗುರುತಿಸಿಕೊಳ್ಳುವ, ಪ್ರತ್ಯೇಕ ಜಾತಿ ನಮೂದಿಸುವ ಅಥವಾ ಇಷ್ಟವಿಲ್ಲದವರು ಇಲ್ಲವೆಂದು, ತಿರಸ್ಕರಿಸುವ ಅವಕಾಶವನ್ನೂ ನೀಡಲಾಗಿದೆ.

• ಈ ಹಿಂದಿನ ಜಾತಿ ಸಮೀಕ್ಷೆಯನ್ನು ರಾಜ್ಯದ ಪ್ರಬಲ ಸಮುದಾಯಗಳು ಒಪ್ಪಿರಲಿಲ್ಲ. ಈ ಬಾರಿಯ ಸಮೀಕ್ಷೆ ವರದಿಯನ್ನು ಅವು ಒಪ್ಪುತ್ತವೆಯೇ?

ಈ ಬಾರಿಯ ಸಮೀಕ್ಷೆಯನ್ನು ಎಲ್ಲರೂ ಒಪ್ಪುತ್ತಾರೆ ಎನ್ನುವ ವಿಶ್ವಾಸವಿದೆ. ಇದು ಜನರೇ ನೀಡುವ ಮಾಹಿತಿ. ತಮ್ಮ ಸ್ಥಿತಿಗತಿ, ಜಾತಿ ವಿವರ ಎಲ್ಲವನ್ನೂ ತಮ್ಮಿಷ್ಟದಂತೆ ನೀಡುವ ಸ್ವಾತಂತ್ರ್ಯವನ್ನೂ ಜನರಿಗೇ ಕೊಡಲಾಗಿದೆ. ಅವರು ನೀಡಿದ ಮಾಹಿತಿಯನ್ನು ಒಟ್ಟುಗೂಡಿಸಿ, ವಿಶ್ಲೇಷಿಸಿ ವರದಿ ಸಿದ್ಧಪಡಿಸುವ ಕೆಲಸವನ್ನು ಆಯೋಗ ಮಾಡುತ್ತದೆ. ವರದಿ ಕುರಿತು ಸರ್ಕಾರ ಅಂತಿಮ ನಿರ್ಧಾರ ತೆಗೆದುಕೊಳ್ಳಲಿದೆ. ವಿವಾದಕ್ಕೆ ಕಾರಣಗಳೇನೂ ಇರುವುದಿಲ್ಲ.

• ಈ ಹಿಂದಿನ ಸಮೀಕ್ಷೆಯಲ್ಲಿ ಕಂಡುಬಂದ ಲೋಪಗಳು ಮತ್ತೆ ಆಗದಂತೆ ಎಚ್ಚರಿಕೆ ವಹಿಸಲಾಗಿದೆಯೇ?

ಎಲ್ಲ ಗಣತಿದಾರರು ಮನೆ ಮನೆಗೆ ಭೇಟಿ ನೀಡದೇ ಮಾಹಿತಿ ಸಂಗ್ರಹಿಸಿದ್ದಾರೆ ಎನ್ನುವುದೇ ಹಿಂದೆ ಇದ್ದ ಪ್ರಮುಖ ಆರೋಪ. ಅದಕ್ಕೆ ಈ ಬಾರಿ ಎರಡು ಕೋಟಿ ಮನೆಗಳಿಗೆ ಜಿಯೋ ಟ್ಯಾಗ್ ಮಾಡಲಾಗಿದೆ. ಆ್ಯಪ್ ಮೂಲಕ ಸಂಪೂರ್ಣ ನಿಗಾ ಇಡಲಾಗುತ್ತದೆ. ಗಣತಿದಾರರಿಗೆ ಸೂಕ್ತ ತರಬೇತಿಯನ್ನೂ ನೀಡಲಾಗಿದೆ.

• ಆರಂಭದಲ್ಲೇ ಧರ್ಮ ಮತ್ತು ಜಾತಿ ಮಧ್ಯೆ ಗೊಂದಲ ಏಕೆ?

ಕಾನೂನು ಪ್ರಕಾರ ಇರುವ ಅವಕಾಶದಂತೆ ಸಮೀಕ್ಷೆ ನಡೆಯುತ್ತದೆ. ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡ ಪರಿಶಿಷ್ಟರಿಗೆ ಅದೇ ಜಾತಿಯಲ್ಲೇ ಗುರುತಿಸಿಕೊಳ್ಳಲು ಅವಕಾಶವಿದೆ. ಹಿಂದುಳಿದ ವರ್ಗಗಳಿಗೆ ಅಂತಹ ಅವಕಾಶ ಕಾನೂನಿನಲ್ಲಿ ಇಲ್ಲ. ಅವರನ್ನು ಕ್ರೈಸ್ತರೆಂದೇ ಪರಿಗಣಿಸಲಾಗುತ್ತದೆ. ಅಲ್ಲದೇ ಯಾರು ಯಾವ ಜಾತಿ ನಮೂದಿಸಿದರೂ ಈ ಸಮೀಕ್ಷೆ ಮೂಲಕ ಮೀಸಲಾತಿ ಪಡೆಯಲು ಆಗದು. ವಿವಾದ ಉಂಟಾಗಿದ್ದರಿಂದ ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡ 33 ಜಾತಿಗಳನ್ನು ಕಾಲಂನಿಂದ ಕೈಬಿಡಲಾಗಿದೆ. ಇಲ್ಲಿ ಗೊಂದಲಕ್ಕೆ ಅವಕಾಶವೇ ಇಲ್ಲ.

ಪದಬಂಧ 6172

ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2.ಮೂಕನಿಗೆ ಕಾಣಿಸಿದ ಇಲಿ (3)
4.ಆಸೆ ಪಡುವವನು ಇಲ್ಲಿದ್ದಾನೆ (5)
6.ಕೆಟ್ಟ ರೂಪವಿದು (3)
8.ಜೈ ಜವಾನ್, ಜೈ ಕಿಸಾನ್ ಎಂಬ ಘೋಷಣೆಯನ್ನು ಸಾರಿದ ಪ್ರಧಾನಮಂತ್ರಿ (8)
10.ನದಿಗೆ ಅಥವಾ ಕೆರೆಕೊಳಗಳಿಗೆ ನೀರು ಹರಿದು ಬರುವ ಪ್ರದೇಶ (8)
12.ಜನರ ನಡುವಿನ ಹುಟ್ಟು (3)
14.ಇದು ಸಂತೋಷಪಡಿಸುವಂಥದ್ದು (5)
16.ವರ ತೋರಿದ ವ್ಯಾಯಾಮದ ಪಟ್ಟು (3)

ಮೇಲಿಂದ ಕೆಳಕ್ಕೆ
1.ಗಜವಿಲ್ಲಿ ಉಲ್ಟಾ ನಿಂತಿದೆ (2)
2.ಈತ ಮಾತುಬಾರದಿರುವವನು (2)
3.ಕಬ್ಬಿಗ ಇಲ್ಲಿದ್ದಾನೆ (2)
5.ಅತಿಯಾದ ಆಸೆ ಉಲ್ಟಾ ಆಗಿದೆ (3)
7.ಈಕೆ ಅನ್ಯ ಹೆಂಗಸು (3)
9.ಶಿಲ್ಪಕಲೆಗಳ ಬೀಡು ಹೊಯ್ಸಳ ನಾಡು ಎಂದೇ ಪ್ರಸಿದ್ಧವಾದ ಜಿಲ್ಲೆ (3)
10.ನೀರಿನಲ್ಲಿ ಹುಟ್ಟಿದುದು (3)
11.ನೂರರ ಮೊತ್ತ (3)
13.ಮನವರಿಕೆಯಲ್ಲಿ ಹೊಸದನ್ನು ಹುಡುಕಿ! (2)
14.ಅಪೇಕ್ಷೆ ಈ ರೀತಿ ವ್ಯಕ್ತವಾಗಿದೆ (2)
15.ದರವುಳ್ಳ ಆನೆಯ ದಾಡೆ! (2)



6171ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
4.ಹರಾಮ 6.ಅನುಕರಣೆ
8.ಕಮುಕ್ರ 9.ಕಡ
11.ಮೌನ 13.ಪ್ರಗತಿ
15.ಪ್ರಾಯೋಪವೇಶ
17.ನವಮಿ

ಮೇಲಿಂದ ಕೆಳಕ್ಕೆ:
1.ಮೆಹನತ್ತು 2.ಅಂಕ
3.ಜಾಣೆ 5.ಮರಕತ
6.ಅತಿಕ್ರಮಪ್ರವೇಶ
7.ರಸಿಕ 10.ಮತಿಹೀನ
12.ನಜಯೋ 14.ಪರಿಮಿತ
15.ಪ್ರಾಸ 16.ಪದ್ಯ

ಸುಡೊಕು 6556

ಆಡುವುದು ಹೇಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

2	1				5	4		9
4		7	6				5	
	6				8	1		
	2				7			6
5		1		6			2	
			5				1	7
	3	9				6		
6			8		4		3	
		4		3		2		5

6555 ಸುಡೊಕು

3	4	9	1	5	8	2	7	6
2	5	6	4	9	7	8	1	3
1	7	8	3	6	2	4	5	9
5	3	7	2	4	6	9	8	1
8	9	1	7	3	5	6	2	4
4	6	2	8	1	9	7	3	5
6	8	4	5	2	3	1	9	7
7	1	3	9	8	4	5	6	2
9	2	5	6	7	1	3	4	8

ರಾವಣರ ಎದೆಯಲ್ಲೂ ಗುನುಗಬೇಕು ಶಾಂತಿಗೀತೆ

ನುಡಿ ಬೆಳಗು

ದಾದಾಪೀರ್ ನವಿಲೇಹಾಳ್

ದೇಶದೇಶಗಳ ನಡುವೆ ನಡೆಯುತ್ತಿರುವ ಯುದ್ಧಗಳಿಗೆ ಮತ್ತು ಆ ಸಂಬಂಧದ ಹಿಂಸೆಗೆ ಸಾಕ್ಷಿಯಾಗಿರುವ ಮನುಷ್ಯ ಜಗತ್ತು, ವಿಚಿತ್ರವಾಗಿ ಪ್ರತಿಕ್ರಿಯಿಸುತ್ತಿದೆ. ಪ್ರಕೃತಿ ವಿಕೋಪಗಳಿಗಿಂತ ಹೆಚ್ಚಾಗಿ ಮನುಷ್ಯ ಯೋಜಿತ ಯುದ್ಧಗಳಿಂದ ಜಗತ್ತು ಜರ್ಝರಿತಗೊಂಡಿದೆ. ಮನೆಯಲ್ಲಿ ತಣ್ಣಗೆ ಕುಳಿತು ಸಮರೋನ್ಮಾದವನ್ನು ಪ್ರಚೋದಿಸುವ ವೀರಾಧಿವೀರರ ಗಂಟಲಿನಲ್ಲಿ ಬರೀ ಫಿರಂಗಿಗಳೇ ತುಂಬಿವೆ. ಭಗತ್ ಸಿಂಗ್‌ನಂತಹ ಕ್ರಾಂತಿಕಾರಿ ಪಕ್ಕದ ಮನೆಯಲ್ಲಿರಲಿ ಎಂಬ ಧೋರಣೆಯ ಜನ ಇವರು. ರಣರಂಗಕ್ಕೆ ಇಳಿಯದೆ ಜನಾಂಗೀಯ ದ್ವೇಷವನ್ನೇ ದೇಶಪ್ರೇಮವೆಂದು ಸಾರಹೊರಟವರಿಗೆ ಜೀವಗಳ ಬೆಲೆ ತಿಳಿಯುವುದಿಲ್ಲ.

ವಿಶ್ವದ ಇತಿಹಾಸದಲ್ಲಿ ನಡೆದಿರುವ ಎಲ್ಲ ಯುದ್ಧಗಳ ಹಿಂದೆ ಮನುಕುಲದ ಹಿತಾಸಕ್ತಿಯ ಉದಾತ್ತ ಆಶಯಗಳು ಹುಡುಕಿದರೂ ಸಿಗುವುದಿಲ್ಲ. ಅಹಂಕಾರದಿಂದ, ಸ್ವಾರ್ಥದಿಂದ ಮೆರೆಯುತ್ತಾ ಸಾರ್ವಜನಿಕ ಸಂಪತ್ತನ್ನು ಕೊಳ್ಳೆ ಹೊಡೆದು ರಾಜ್ಯಾಧಿಕಾರ ವಿಸ್ತರಿಸಿಕೊಳ್ಳುವ ಪ್ರಯತ್ನಗಳೇ ಅಲ್ಲಿ ಕಾಣುತ್ತವೆ. ಬಲಿಷ್ಠರು ದುರ್ಬಲರ ಮೇಲೆ ನಡೆಸುವ ದಬ್ಬಾಳಿಕೆಯನ್ನು ಶೌರ್ಯದ ಹೆಸರಿನಲ್ಲಿ ವೈಭವೀಕರಿಸಲಾಗಿದೆ. ರಾಜಕೀಯ ಅನಾಚಾರಗಳನ್ನು ನೈತಿಕವಾಗಿ ಸಮರ್ಥಿಸಿಕೊಳ್ಳಲು ಸಾಧ್ಯವಿಲ್ಲ ಎಂದು ತಿಳಿದೇ ಧಾರ್ಮಿಕ ಸನಾತನತೆಯನ್ನು ಮತ್ತದರ ಘೋಷಿತ ಪಾವಿತ್ರ್ಯವನ್ನು ದೇಶ ಪ್ರೇಮದೊಂದಿಗೆ ತಳುಕುಹಾಕಿ ಮರೆಸುವ ವಿದ್ರೋಹದ ಸಂಗತಿ ಯಾವ ಕಾಲಕ್ಕೂ ಹೊಸದಲ್ಲ. ಆದರೆ ಬಾಹ್ಯಾಕಾಶದಲ್ಲಿ ಶಾಶ್ವತ ನೆಲೆ ಕಂಡುಕೊಳ್ಳುವಷ್ಟು ಮತ್ತು ಪಕ್ಕದ ಊರಿಗೆ ಹೋಗಿ ಬಂದಷ್ಟು ಸಲೀಸಾಗಿ ಚಂದ್ರನಲ್ಲಿಗೆ ಹೋಗಿ ಬರುವಷ್ಟು ತಾಂತ್ರಿಕ ಉನ್ನತಿಯನ್ನು ಸಾಧಿಸಿದ ಮನುಷ್ಯ ದಿನಬೆಳಗಾದರೆ ಧರ್ಮ ಜಾತಿಗಳ ಕೆಸರೆರಚಾಟದಲ್ಲಿ ಹಿಂಸಾಪರ ಧೋರಣೆಗಳನ್ನು ಬೆಳೆಸಿಕೊಂಡು ನರಳುತ್ತಿದ್ದಾನೆ. ಚರಿತ್ರೆಯಲ್ಲಿನ ವಿಕೃತಿಗಳನ್ನು ಹಸಿಹಸಿಯಾಗಿ ತಂದು ಸುರಿಯುತ್ತಾ ವರ್ತಮಾನದ ನೆಮ್ಮದಿಗೆ ಕಂಟಕವಾಗಿದ್ದಾನೆ. ಹೀಗೆ ಪೀಳಿಗೆಯಿಂದ ಪೀಳಿಗೆಗೆ ಹಿಂಸೆಯನ್ನು ದಾಟಿಸುತ್ತಾ ಹೋಗುವುದರ ಪರಿಣಾಮ ಕ್ರೂರವಾಗಬಹುದು. ವರ್ತಮಾನದ ಚಾರಿತ್ರ್ಯವನ್ನು ರೂಪಿಸಿಕೊಳ್ಳಲು ಅಗತ್ಯವಾದ ವಿದ್ಯಮಾನಗಳನ್ನು ಇತಿಹಾಸದಿಂದ ಆಯ್ದುಕೊಳ್ಳಬೇಕಾದುದು ಮನುಕುಲದ ಭವಿಷ್ಯದ ದೃಷ್ಟಿಯಿಂದ ಒಳ್ಳೆಯದು.

ಹಿಂಸೆಯಿಂದ ಆಗುವ ಸಾವು ನೋವು ಮಾನವತೆಯ ಕುಸಿತಕ್ಕೆ ಕಾರಣವಾಗುತ್ತದೆ. ಹಿಂಸೆಯು ಕೊಲೆ ಎಂಬ ಮರಿಯನ್ನು ಹಾಕುತ್ತಾ ಸೇಡಿನ ಹೀನ ಸಂತಾನವನ್ನು ಬೆಳೆಸುತ್ತದೆ. ಮನುಷ್ಯ ಹುಟ್ಟಿದ ಧರ್ಮ, ಜಾತಿ, ಬಣ್ಣದ ಹೆಸರಿನಲ್ಲಿ ತಿನ್ನುವ ಅನ್ನದ ವಿಷಯದಲ್ಲಿ ಶ್ರೇಷ್ಠತೆಯ ಅಹಂಕಾರ ಬೆಳೆಸಿಕೊಂಡು ಸಾಮಾಜಿಕ ತರತಮಕ್ಕೆ ಕಾರಣನಾಗಿದ್ದಾನೆ. ಹಸಿವು ಮತ್ತು ಹಿಂಸೆ ಮನುಷ್ಯ ಕುಲದ ಪರಮಶತ್ರುಗಳು. ಹಸಿವಿಗೆ ಅನ್ನದ ಭೇದವಿಲ್ಲ. ಹಿಂಸೆಗೆ ತನ್ನವರು ಅನ್ಯರು ಎಂಬ ಭೇದವಿಲ್ಲ. ಆದರೆ, ಇಂದಿನ ಜಗತ್ತು ರಾಕ್ಷಸ ರಾವಣತ್ವದಿಂದ ತುಂಬಿದೆ. ಶ್ರೀಸಾಮಾನ್ಯನ ನೆಮ್ಮದಿಯ ಬದುಕಿಗೆ ಯುದ್ಧಗಳು ತೊಡಕಾಗಿವೆ. ರಾಜಕಾರಣದ ದುಷ್ಟ ಮೋಹಕ್ಕೆ ಈ ನೆಲ ನೆತ್ತರಿನಿಂದ ತೊಯ್ದು ಕೆಂಪಾಗುತ್ತಿದೆ. ಪಾವಿತ್ರ್ಯದ ನೆಪದಲ್ಲಿ ಕೆಂಪಾದ ಇದೇ ಮಣ್ಣಿನಲ್ಲಿ ಮಾನವತೆಯು ಸೊಂಪಾಗಿ ಬೆಳೆದಿದ್ದ ಅನಂತಕಾಲದ ಪರಂಪರೆಯು ಮರುಹುಟ್ಟು ಪಡೆಯಬೇಕು. ಚರಿತ್ರೆಯುದ್ದಕ್ಕೂ ಭೂಮಿಗೆ ಬಿದ್ದ ರಕ್ತವನ್ನು ತೊಳೆಯಲು ಆಗದಿರಬಹುದು. ಹೊಸದಾಗಿ ನೆತ್ತರು ಹರಿಯುವುದನ್ನು ತಡೆಯಬಹುದು. ಇಡೀ ಭೂಮಿ ಮಸಣಮಯವಾಗುವುದನ್ನು ತಪ್ಪಿಸಬಹುದು. ನೆಲದ ಒಡಲಿಂದ ಕಸಿದ ಹಸಿರನ್ನು ಹಿಂತಿರುಗಿಸುವಂತಾಗಬೇಕು. ಪ್ರಪಂಚದ ಎಲ್ಲ ರಾವಣರ ಎದೆಯಲ್ಲಿ ಶಾಂತಿಗೀತೆ ಗುನುಗುವಂತಾಗಬೇಕು. ❖

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

22 ಸೆಪ್ಟೆಂಬರ್ 2025 ಸೋಮವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಯುಜ ಶುಕ್ಲ ಪ್ರತಿಪದ್ ಗಂ. 26-57 ನಕ್ಷತ್ರ: ಉತ್ತರಫಲ್ಗುಣಿ ಗಂ. 11-24 ಯೋಗ: ಶುಕ್ಲ (ಶುಕ್ರ) ಗಂ. 19-59 ಕರಣ: ಕಿಂಸ್ತುಘ್ನ ಗಂ. 14-07 ಕನ್ಯಾ ಮಾಸದ 05 ನೇ ದಿನ. ಮಳೆ ನಕ್ಷತ್ರ : ಉತ್ತರಾ 3 ನೇ ಪಾದ. ರಾಹುಕಾಲ : ಬೆಳಿಗ್ಗೆ 07-30 09-00 ಸೂರ್ಯೋದಯ : 06-23 ಸೂರ್ಯಾಸ್ತ : 06-24, ಮುಸ್ಲಿಂ ದಿನಾಂಕ : 29 ರಬಿಉಲ್ಲಾವಲ್, ದಿನ ವಿಶೇಷ : ಶರನ್ನವರಾತ್ರಿ ಆರಂಭ , ಅದೃಷ್ಟ ಸಂಖ್ಯೆ : 1, 3

ಮೇಷ: ಜವಾಬ್ದಾರಿ ಕೆಲಸಗಳು ಒದಗಿ ಬಂದು ಅವುಗಳನ್ನು ಮುಗಿಸಿಕೊಳ್ಳುವಲ್ಲಿ ಯಶಸ್ವಿಯಾಗುವಿರಿ. ವೈದ್ಯರಿಗೆ ತುರ್ತು ಕೆಲಸಗಳಿಂದ ಬಿಡುವಿಲ್ಲದಂತಾಗುವುದು. ಧರ್ಮದಲ್ಲಿ ಶ್ರದ್ಧೆ ಹೆಚ್ಚಲಿದೆ, ಧಾರ್ಮಿಕ ಕೆಲಸಗಳಲ್ಲಿ ತೊಡಗುತ್ತೀರಿ.

ವೃಷಭ: ಭಾಷಾ ಅಧ್ಯಾಪಕರಿಗೆ ಮತ್ತು ನಾಟಕ ಕಲಾವಿದವರಿಗೆ ಮನ್ನಣೆ ಸಿಗಲಿದೆ. ಚರ್ಮದ ವಸ್ತುಗಳ ಮಾರಾಟಗಾರರಿಗೆ ವಿದೇಶದಿಂದ ಅವಕಾಶ ಸಿಗಲಿದೆ. ರಫ್ತು ವ್ಯವಹಾರದಲ್ಲಿ ಲಾಭ ಸಿಗಲಿದೆ.

ಮಿಥುನ: ತುಂಬ ದಿನಗಳಿಂದ ಶತ್ರುಗಳ ಉಪಟಳದಿಂದ ಬೇಸರಗೊಂಡಿರುವ ನಿಮಗೆ ಶತ್ರುಗಳ ಬಣ್ಣ ಬಯಲಾಗುವುದು ಸಂತಸ ತರಲಿದೆ. ವ್ಯಾಪಾರದ ಅಭಿವೃದ್ಧಿಗೆ ಪತ್ರಿಕೆಯವರ ಸಹಾಯ ಪಡೆದು ಪ್ರಚಾರಕ್ಕೆ ಬರಬಹುದು.

ಕರ್ಕಾಟಕ: ಮಕ್ಕಳ ಕೆಲವು ಮಾತುಗಳು ಮನಸ್ಸಿಗೆ ಬಹಳವಾಗಿ ನಾಟುವುದು. ಎಲ್ಲಾ ರೀತಿಯ ಕುಟುಂಬದ ಸಮಸ್ಯೆಗಳು ಪರಿಹಾರವಾಗುವವು. ತಂದೆ ಮಕ್ಕಳ ನಡುವೆ ಸಂಬಂಧ ಅಭಿವೃದ್ಧಿಯಾಗುವುದು.

ಸಿಂಹ: ನಡೆದು ಬಂದ ದಾರಿಯು ನಿಮಗಿಂತ ಕಿರಿಯರಿಗೆ ಮಾರ್ಗದರ್ಶನವನ್ನು ಕೊಡಲಿದೆ. ಮಕ್ಕಳ ಹಾಗೂ ಮೊಮ್ಮಕ್ಕಳ ಜತೆಗೆ ಈ ಹಬ್ಬವನ್ನು ಆಚರಿಸುವಿರಿ. ಈ ದಿನವು ಹರ್ಷದಾಯಕವಾಗಿರುವುದು.

ಕನ್ಯಾ: ಸಾಂಪ್ರದಾಯಿಕ ಉಡುಗೆಗಳ ಮಾರಾಟಗಾರರಿಗೆ ಅಧಿಕ ಮಾರಾಟ ಇರುವುದು. ಹೊಸ ವಿಷಯಗಳನ್ನು ತಿಳಿದುಕೊಳ್ಳಲು ಉತ್ತಮ ಅವಕಾಶಗಳು ಬರಲಿವೆ. ಕೌಟುಂಬಿಕ ವಿಚಾರಗಳತ್ತ ಸಂಪೂರ್ಣ ಗಮನ ನೀಡಬೇಕಾಗುತ್ತದೆ.

ತುಲಾ: ಹೊಸದಾಗಿ ಹಣ ಹೂಡಿಕೆ ಮಾಡಬೇಕಾದರೆ ವ್ಯಕ್ತಿಯ ಪರಿಚಯ ಮತ್ತು ವ್ಯವಹಾರದ ಸಂಪರ್ಕ ನಿಮಗಿದ್ದರೆ ಶುಭವಾಗುವುದು. ಎಲ್ಲಾ ಕಿರಿಕಿರಿಗಳನ್ನೂ ಶಾಂತ ರೀತಿಯಿಂದ ಎದುರಿಸಿ.

ವೃಶ್ಚಿಕ: ವಕೀಲೀ ವೃತ್ತಿ ನಡೆಸುವವರಿಗೆ, ನ್ಯಾಯಾಂಗ ಇಲಾಖೆಯವರಿಗೆ ಉತ್ತಮ ದಿನ. ವೈದ್ಯಕೀಯ ವಿದ್ಯಾರ್ಥಿಗಳಿಗೆ ಯಶಸ್ಸು ಲಭ್ಯ. ತಾಮ್ರ, ಹಿತ್ತಾಳೆ ಪಾತ್ರೆಗಳ ಮಾರಾಟಗಾರರಿಗೆ ಅಧಿಕ ಲಾಭವಿರುವುದು.

ಧನು: ಈಗೆರಡು ದಿನಗಳಿಂದ ಅನುಭವಿಸುತ್ತಿರುವ ಹಣಕಾಸಿನ ಸಂಬಂಧದ ಅಪವಾದಗಳು ದೂರವಾಗಲಿವೆ. ಅತಿಯಾಗಿ ಪ್ರೀತಿಸುವ ಹಾಗೂ ಆದರಿಸುವ ಜನರೊಂದಿಗೆ ಕಾಲ ಕಳೆಯಲು ಸಕಾಲವಾಗಿದೆ.

ಮಕರ: ಹಣ ಉಳಿತಾಯದ ಸನ್ಮಾರ್ಗಗಳನ್ನು ಕಂಡುಕೊಳ್ಳುವಿರಿ, ಅದರಂತೆಯೇ ಉಳಿತಾಯವಾಗಲಿದೆ. ಸಮಯ ಪ್ರಜ್ಞೆಯ ಜೊತೆಯಲ್ಲಿ ಕಾರ್ಯನಿರ್ವಹಿಸುವುದರಿಂದ ಶುಭ. ಎಣಿಕೆಯಂತೆ ಕಾರ್ಯಗಳು ಸಿದ್ಧಿಸಲಿವೆ.

ಕುಂಭ: ಸಾಹಿತಿಗಳು ಈ ದಿನದಲ್ಲಿ ಬರೆಯುವ ಲೇಖನಕ್ಕೆ ಸರಸ್ವತಿಯ ಅನುಗ್ರಹ ಇದ್ದಂತೆ ಅನುಭವವಾಗಲಿದೆ. ತಿಂಡಿ ತಿನಿಸುಗಳ ವ್ಯಾಪಾರದಲ್ಲಿ ಲಾಭ ನಷ್ಟದ ಮಿಶ್ರಫಲ ಕಾಣುವಿರಿ. ಮನಸ್ಸಿದ್ದರೆ ಮಾರ್ಗ ಎಂಬ ಮಾತು ಅನ್ವಯಿಸುತ್ತದೆ.

ಮೀನ: ಇತರರಿಗಿಂತ ಭಿನ್ನವಾದ ಹಾಗೂ ಧನಾತ್ಮಕವಾದ ನಿರ್ಧಾರವನ್ನು ತಗೆದುಕೊಳ್ಳುವಿರಿ. ಧನಾಗಮನಕ್ಕೆ ಹಲವು ರೀತಿಯ ಅವಕಾಶಗಳು ಇದ್ದರೂ ಬುದ್ಧಿವಂತಿಕೆ, ಆತ್ಮವಿಶ್ವಾಸದ ಅಗತ್ಯವಿರುತ್ತದೆ.

ಆದೀಶ್ವರ್
ಎಲೆಕ್ಟ್ರೋ ವರ್ಲ್ಡ್
gadget for every budget!
ನವರಾತ್ರಿ ಬೃಹತ್ ಸೇಲ್
GET UPTO ₹ 15,000/- UPI MONEY BACK
ON BAJAJ FINSERV PURCHASE
BANK TRANSFER
PAY
LG Haier SONY Hisense SAMSUNG Panasonic BPL
Celebration of
SMALLEST EMI & LOWEST DOWNPAYMENT
55" QLED
SPECIAL PRICE ₹ 39,990/- ONWARDS
65" QLED
SPECIAL PRICE ₹ 59,990/- ONWARDS
1 EMI FREE ON LG SONY Haier UPTO ₹ 25,000/-
1 MONTH EMI HOLIDAY
BUY IN SEPTEMBER PAY EMI FROM NOVEMBER
0% INTEREST FREE FINANCE
EMI CARD EASY FINANCE
ಆಕರ್ಷಕ ಫೈನಾನ್ಸ್ ಕೊಡುಗೆಗಳು
AVAIL UPTO 36 MONTHS LONG TENURE EMI
JUST SHOW AADHAAR CARD for easy finance offers & TAKE HOME YOUR FAVOURITE PRODUCTS
FIXED EMI PAY EMI AS PER THE TV SCREEN SIZE
Anything on EMI Club Multiple Small Products and take them home on EMI only
Select & Swipe 3, 6, 9, 12 EASY EMI OFFERS ON CREDIT CARD & DEBIT CARD
SIDE BY SIDE REFRIGERATORS
LG Haier SAMSUNG Godrej BPL
EMI ₹ 2,025/- ONWARDS
FROST FREE REFRIGERATORS
LG Haier Whirlpool Godrej
EMI ₹ 1,899/- ONWARDS
FRONT LOAD WASHING MACHINE
LG Haier Whirlpool Godrej IFB
EMI ₹ 1,999/- ONWARDS
4 STAR
INVERTER AIR-CONDITIONERS
Available in 1.0 TON, 1.5 TON & 2.0 TON
LG Haier Whirlpool IFB Godrej
5 STAR
3 STAR
EMI ₹ 1,999/- ONWARDS
TOP LOAD WASHING MACHINE
LG Haier Whirlpool Godrej BPL IFB
EMI ₹ 1,499/- ONWARDS
ಬೆಂಗಳೂರು
ನೂತನ ಉಲ್ಲಾಳ್ ಮುಖ್ಯ ರಸ್ತೆ ಮಂಗಳೂರು ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ ಅಂಡ್ ಸೈನ್ಸ್ Ph : 9686680760 / 9686680842
ನೂತನ ಬಾಗಲೂರು ಬಾಗಲೂರು ಮುಖ್ಯರಸ್ತೆ, ಬೃಂದಾವನ್ ಕೇಲೇಜ್ ಹತ್ತಿರ Ph : 080-35712968 /35712969 9731306702
ಬಿಡದಿ ಕೆಂಚನಗುಪ್ಪೆ ಗೇಟ್, HDFC ಬ್ಯಾಂಕ್ ಎದುರು, ಬೆಂಗಳೂರು-ಮೈಸೂರು ಹೆದ್ದಾರಿ 7702203254
ಕೋಣನಕುಂಟೆ ಸೌಧಾಮಣಿ ಚೌಲ್ಟ್ರಿ ಹತ್ತಿರ ಪೊಲೀಸ್ ಸ್ಟೇಷನ್ ಪಕ್ಕ Ph :9731306531
ಬೇಗೂರು ನಂ. 80, ಹೊಂಗಸಂದ್ರ, ಬೇಗೂರು ರಸ್ತೆ 080-41499467/9731306604
ಆರ್.ಟಿ. ನಗರ ಪೊಲೀಸ್ ಸ್ಟೇಷನ್ ಎದುರು 9731307264 080-23559977
ಹೊಸಕೋಟೆ ಸರ್ಕಾರಿ ಮಹಿಳಾ ಕಾಲೇಜು ಹತ್ತಿರ. 9731306767
ಹೆಣ್ಣೂರು ಮುಖ್ಯ ರಸ್ತೆ. ಡಿಮಾರ್ಟ್ ಎದುರು 080-48651500/48505043 9731306571
ಮಹದೇವಪುರ 080-48148975, 9148151731
ಉತ್ತರಹಳ್ಳಿ ಮುಖ್ಯ ರಸ್ತೆ, ಹೆಚ್.ಡಿ.ಎಫ್.ಸಿ. ಬ್ಯಾಂಕ್ ಹತ್ತಿರ. 9731306547 49587474, 49537575
ವೈಟ್ ಫೀಲ್ಡ್ ಉಡುಪಿ ಡೆಲಿಕೆಸಿ ಹೋಟೇಲ್ ಸಮೀಪ ರಾಮಗೊಂಡನಹಳ್ಳಿ. 080-40984677 9513499851
ಯಲಹಂಕ ಎಸ್.ಬಿ.ಐ. ಬ್ಯಾಂಕ್ ಸಮೀಪ, ಯಲಹಂಕ ನ್ಯೂ ಟೌನ್ 9731306702
ಹೆಬ್ಬಗೋಡಿ ಅತ್ತಿಬೆಲೆ ಹೋಬಳಿ, ಚರ್ಚ್ ಸಮೀಪ ಬಯಾಕಾನ್ ಎದುರು. 9731307257 080-27849941
ರಾಜಾಜಿನಗರ ಪ್ರೀಮಿಯಮ್ ಸ್ಟೋರ್ ಕೇಕ್ ಪ್ಯಾಲೆಸ್ ಹತ್ತಿರ 41610910, 9731306537
ತನಿಸಂದ್ರ ಕಿಂಗ್ ಸ್ಪೇಸ್ ಮಿಡೋಸ್ ಅಪಾರ್ಟ್‌ಮೆಂಟ್ಸ್, ರೈಲ್ವೆ ಟ್ರಾಕ್ ಅಂಡರ್ ಪಾಸ್ ಸಮೀಪ. 9731306763/32521747
ವಿಜಯನಗರ ಕಾರ್ಡ್ ರಸ್ತೆ, ಎಮ್.ಸಿ. ಲೇಔಟ್, ಮೆಟ್ರೋ ಸ್ಟೇಷನ್ ಹತ್ತಿರ 9731306631
ಪೀಣ್ಯ ಟಿ-ದಾಸರಹಳ್ಳಿ ಸಂತೋಷ್ ಎನ್‌ಕ್ಲೇವ್, ಓಲ್ಡ್ ರಿಲೈನ್ಸ್ ಬಿಲ್ಡಿಂಗ್. 9731306572 28393199/4199
ಮತ್ತಿಕೆರೆ ಜಾಂಬೆ ಡೈಯಿಂಗ್ ರಸ್ತೆ. 080-40974968 Ph :9731306641
ಹೆಚ್.ಎಸ್.ಆರ್. ಲೇಔಟ್ 1ನೇ ಸೆಕ್ಟರ್, ಐ.ಸಿ.ಐ.ಸಿ.ಐ. ಬ್ಯಾಂಕ್ ಎದುರು. Ph :9731306550
ಬನಶಂಕರಿ ಬಿಗ್ ಬಜಾರ್ ಎದುರು Ph :9731306606 080-26691262/63
ಜಯನಗರ 40ನೇ ಅಡ್ಡ ರಸ್ತೆ, 9ನೇ ಮುಖ್ಯ ರಸ್ತೆ 26541050/51 9731306617
ಚಂದ್ರ ಲೇಔಟ್ ವಾಟರ್ ಟ್ಯಾಂಕ್ ಹತ್ತಿರ 9731306558, 080 41503359
ನಾಗರಭಾವಿ ಬಿ.ಡಿ.ಎ. ಕಾಂಪ್ಲೆಕ್ಸ್ ಎದುರು. 6ನೇ ಬಡಾವಣೆ, 2ನೇ ಹಂತ, 9731306616
ಮಾರತಹಳ್ಳಿ ಪಾರ್ಕ್ ಪ್ಲಾಜಾ ಎದುರು 080-42200050 9731306703
ಕೆಂಗೇರಿ, 80 ಅಡಿ ರಸ್ತೆ, ಶಿರ್ಕೆ ಅಪಾರ್ಟ್‌ಮೆಂಟ್ಸ್ ಹತ್ತಿರ 9731306634
ಚನ್ನಸಂದ್ರ ಉತ್ತರಹಳ್ಳಿ ಮುಖ್ಯ ರಸ್ತೆ, ಆರ್.ಎನ್.ಎಸ್.ಐ.ಟಿ. ಸಮೀಪ 28613065/9731306766
ಸುಂಕದಕಟ್ಟೆ ಜನಪ್ರಿಯ ಕಮರ್ಷಿಯಲ್ ಕಾಂಪ್ಲೆಕ್ಸ್, ಮಾಗಡಿ ರಸ್ತೆ, 9686680764 23288940/942
ರಾಜಾಜಿನಗರ ದಯಾಕಾನ್ ಹಾಸ್ಪಿಟಲ್ ಎದುರು. Ph :9731306570 080-23134692
ವಿದ್ಯಾರಣ್ಯಪುರ ಬಿಡಬ್ಲ್ಯೂಎಸ್‌ಎಸ್‌ಬಿ ಎದುರು. 41721897/1861 9731306614
ಹೆಗ್ಗನಹಳ್ಳಿ ಹೆಗ್ಗನಹಳ್ಳಿ ಮುಖ್ಯ ರಸ್ತೆ, ಪೀಣ್ಯ 2ನೇ ಹಂತ ವಿಶ್ವನೀಡಂ ಅಂಚೆ, 9591997257 080-28366565/66
ಹೆಚ್.ಆರ್.ಬಿ.ಆರ್. ಲೇಔಟ್ ಸೂರ್ಯ ಪ್ಲಾಜಾ. 41687449, 9731306596 25450871
ರಾಮಮೂರ್ತಿನಗರ ಮೋರ್ ಎದುರು 41638612/13 8861007307
ಪುಟ್ಟೇನಹಳ್ಳಿ ಬ್ರಿಗೇಡ್ ಮಿಲೇನಿಯಮ್ ಎದುರು. 9591997265 080-40954615/16
ಹುಳಿಮಾವು ಶಿವ ಸಾಗರ ಹೊಟೇಲ್ ಸಮೀಪ. 080-26483425 9731306625
LG SHOPPE ಮಾರತಹಳ್ಳಿ 42197907/08 8861002259
LG SHOPPE ರಾಜಾಜಿನಗರ Ph : 9731306671
LG SHOPPE ರಾಜರಾಜೇಶ್ವರಿನಗರ 9591997261
Regd. Off: M/s ADISHWAR INDIA LIMITED, #85, 59th Cross, 4th Block, Rajaji Nagar, Bangalore - 560010 Tel: 080-40733999, CIN: U51909KA1997PLC021681
• 0% Interest • Free Delivery • Exchange Offers • Spot Finance • Major Credit Cards Accepted • Home Delivery only within City Limits • 0% Interest, Offers, are subject to evaluation • Offers valid till stocks last • Products available without the offers also • Spot finance is available from Bajaj Finance • Terms &

ಆದೀಶ್ವರ್
ಎಲೆಕ್ಟ್ರೋ ವರ್ಲ್ಡ್
gadget for every budget!
ನವರಾತ್ರಿ ಬೃಹತ್ ಸೇಲ್
GET INSTANT CASH BACK UPTO ₹ 25,000/- ON CREDIT & DEBIT CARD EMI
NAVARATRI OFFERS
9 DAYS BIGGEST CELEBRATION
GREAT SAVINGS TIME
LOWER GST HIGHER SAVINGS
BEFORE 28% 18% NOW
ON OLED, UHD, QLED, SMART TELEVISIONS, AIR-CONDITIONERS & MANY MORE
LG Life's Good
Haier
SONY
Whirlpool
Panasonic
IFB
FABER
Prestige
BOSCH
Godrej
Preethi
BPL Happy Little Things
SAMSUNG
AO Smith
Butterfly Good for a lifetime
iPhone
ONEPLUS
vivo
mi
oppo
ಚನ್ನಪಟ್ಟಣ ಅರ್ಪಣ ಜ್ಯೂವೆಲರ್ಸ್ ಬಿಲ್ಡಿಂಗ್, ಕೆನರಾ ಬ್ಯಾಂಕ್ ಪಕ್ಕ, ಬಿ.ಎಂ. ರಸ್ತೆ PH : 9036593446 / 9036593447
ಶಿರಸಿ ಸಿ.ಪಿ. ಬಜಾರ್ ಮುಖ್ಯ ರಸ್ತೆ, ದೇವೀಕೆರೆ PH : 9591997260, 9731306569
ಕೋಲಾರ ಶಾರದಾ ಟಾಕೀಸ್ ರಸ್ತೆ ದೊಡ್ಡಪೇಟೆ, ಕಠಾರಿಪಾಳ್ಯ 9731306635/9731306574 08152-467397
ಬೆಳಗಾವಿ ಕೊಲ್ಹಾಪುರ ವೃತ್ತದ ಹತ್ತಿರ, ನೆಹರು ನಗರ, ಪಿ.ಬಿ ರಸ್ತೆ, 0831 4215241 / 42, 9731306717 / 9731306713
ಬಳ್ಳಾರಿ ವಾಸವಿ ಶಾಲೆ ಎದುರು, Ph : 08392-242330 / 337, 9731306742 / 9731331684
ಚಿತ್ರದುರ್ಗ ಶ್ರೀನಿವಾಸ ಮ್ಯಾನ್ಷನ್, ಹೊಳಕೆರೆ ರಸ್ತೆ, 08194-224224, 9686446883
ದಾವಣಗೆರೆ ಅಶೋಕ ರಸ್ತೆ, 08192-233626/27, 9731306633 / 6712
ತಿಪಟೂರು ರೈಲ್ವೇ ಸ್ಟೇಷನ್ ರಸ್ತೆ, Ph : 08134-250104/304, 9686680758 / 9731306552
ತುಮಕೂರು ವಿಶ್ವವಿದ್ಯಾಲಯ ಎದುರು, Ph : 0816-4021031, 9731306549 / 9591997270
ಯಾದಗಿರಿ ಮುದ್ ನಾಳ್ ಲೇಔಟ್ ಮುಖ್ಯ ರಸ್ತೆ, ಸಿಂಡಿಕೇಟ್ ಬ್ಯಾಂಕ್ ಎದುರು Ph : 08173/251779/759 8861002260
ಗೋಣಿಕೊಪ್ಪ ನಾರ್ಥ್ ಪಾಯಿಂಟ್, ಮಹಾಲಕ್ಷ್ಮಿ ದೇವಸ್ಥಾನದ ಎದುರು 7702770314/7702770353
ಕೊಪ್ಪಳ ಕೆಹೆಚ್ ಬಿ ಕಾಲೋನಿ ಐಡಿಬಿಐ ಬ್ಯಾಂಕ್ ಎದುರು, ಹೊಸಪೇಟೆ ರಸ್ತೆ 08539 221931/32 9731306645
ಬೀದರ್ ಅಕ್ಷಯ ಕಾಂಪ್ಲೆಕ್ಸ್ ಹೊಸ ಬಸ್ ನಿಲ್ದಾಣ ಹತ್ತಿರ - 08482 226800/01 9513499863
ಕಲಬುರ್ಗಿ ತಿಮ್ಮಾಪುರಿ ಸರ್ಕಲ್ ಹತ್ತಿರ ಕನ್ನಡ ಭವನ ಎದುರು, ಎಸ್.ವಿ.ಪಿ.ಸರ್ಕಲ್ - Ph 08472 227556 9108023816.
ಕೆ.ಆರ್. ನಗರ ಶ್ರೀ ವೆಂಕಟೇಶ್ವರ ಚಿತ್ರಮಂದಿರದ ಎದುರು ಹುಣಸೂರು ಸರ್ಕಲ್, ಮೈಸೂರು ರಸ್ತೆ 08223295855/66 9731306715
ಚನ್ನರಾಯಪಟ್ಟಣ ಬಿ.ಎಂ. ರಸ್ತೆ, ಪುರಸಭೆ ಎದುರು ಹಳೇ ಬಸ್ ನಿಲ್ದಾಣ 08176253312 / 295256, 9513499855
ವಿಜಯಪುರ ಲಿಂಗದ್ ಗುಡಿ ರಸ್ತೆ, ಪಾರೇಖ್ ಸಿಗ್ನೇಚರ್ ಮಾಲ್ ಪಕ್ಕ 9353907691 / 9606865996
ಸಿಂಧನೂರ್ ನಟರಾಜ ಕಾಲೋನಿ, ಕೆಎಸ್ಆರ್‌ಟಿಸಿ ಬಸ್ ಸ್ಟ್ಯಾಂಡ್ ಹತ್ತಿರ 08535-222254, 9731306673 / 9731306672
ಕುಶಾಲನಗರ ಬಿಎಂ ರಸ್ತೆ, ಸಿಟಿ ಸೆಂಟರ್ ಎದುರು 9591997262/9591997263
ಮಂಡ್ಯ 100 ಅಡಿ ರಸ್ತೆ, ವಿಜಯ ಬ್ಯಾಂಕ್ ಎದುರು 08232406100/08232406200 9513599861 / 7349609274
ಚಿಕ್ಕಮಗಳೂರು ಐ.ಜಿ. ರಸ್ತೆ, Ph : 08262 - 239944 / 45, 9963998358, 9963998365
ಶಹಾಪೂರ ಬೀದರ್-ಬೆಂಗಳೂರು ರಸ್ತೆ ಬುದ್ಧನಗರ್ ಪಾರ್ಕ್ ಮುಂಭಾಗ, 9513499858 08479-240565,244565
ತೊಕ್ಕೊಟ್ಟು ಬಿಬಿ ಕಮರ್ಷಿಯಲ್ ಪ್ಲಾಜಾ, ಯೂನಿಟಿ ಹಾಲ್ ಎದುರು, ಕಲ್ಲಾಪು, ಪೆರಮನ್ನೂರು ವಿಲೇಜ್ 0824-2956565 9731306621
ಮೈಸೂರು 5 ಸ್ಟೋರ್ಸ್
ಕುವೆಂಪುನಗರ ಅಕ್ಷಯ ಭಂಡಾರ Ph : 0821-2343705/6, 9731306587
ಹಿನ್‌ಕಲ್ ಹುಣಸೂರು ಮುಖ್ಯ ರಸ್ತೆ, ಫ್ಲೈ ಓವರ್ ಕೆಳಗೆ Ph. 0821-4852733 / 4851773, 8861007297
ಉದಯಗಿರಿ ಮಹದೇವಪುರ ಮುಖ್ಯ ರಸ್ತೆ, BSNL ಕಛೇರಿ ಸಿಗ್ನಲ್ ಹತ್ತಿರ Ph : 0821-2457860/50, 8861007304/9731306653
ಜೆ.ಪಿ ನಗರ ನಾಚನಹಳ್ಳಿ, ಕಿಲ್ಲೆ ಮೊಹಲ್ಲಾ ಮೋರ್ ಸೂಪರ್ ಮಾರ್ಕೆಟ್ ಹತ್ತಿರ, 8861007309 / 886107306
ಡಾ. ರಾಜ್‌ಕುಮಾರ್ ರಸ್ತೆ ಟೀಚರ್ಸ್ ಲೇಔಟ್, (ಕಾವೇರಿ ಸರ್ಕಲ್) 8861002262/8861002263
Free Gifts depends on Brands & Selective Models • Products shown here are only indicative • Exchange Rates Conditions apply • Finance at the sole discretion of the financiers • Offers not applicable on Sony & Samsung.
HELPLINE 080 - 408 33 999
Shop Online @ www.adishwarestore.com

ವಿಚಾರಣೆಗೆ ಕಾಲಾವಕಾಶ ಕೋರಿದ ಜೋಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಧಿಕಾರ ದುರ್ಬಳಕೆ ಸೇರಿ ವಿವಿಧ ಆರೋಪಗಳಿಗೆ ಸಂಬಂಧಿಸಿದಂತೆ ವಿಚಾರಣೆಗೆ ಹಾಜರಾಗುವಂತೆ ಸಹಕಾರ ಇಲಾಖೆ ನೀಡಿದ ನೋಟಿಸ್‌ಗೆ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ 15 ದಿನಗಳ ಕಾಲಾವಕಾಶ ಕೇಳಿದ್ದಾರೆ.

ಈ ಸಂಬಂಧ ಅವರು ಸಹಕಾರ ಇಲಾಖೆ ಕಾರ್ಯದರ್ಶಿ ಸಂಜಯ ಶೆಟ್ಟಣ್ಣನವರ್ ಅವರಿಗೆ ಪತ್ರ ಬರೆದಿದ್ದಾರೆ. 'ಸಹೋದರಿ ಪತಿ ಲಿಂಗರಾಜ ಕುರ್ತಕೋಟಿ ಅವರು ಮೃತಪಟ್ಟ ಕಾರಣ, ಲಿಖಿತ ಹೇಳಿಕೆ ನೀಡಲು ಹಾಗೂ ವಿಚಾರಣೆಗೆ ಹಾಜರಾಗಲು 15 ದಿನಗಳ ಕಾಲಾವಕಾಶ ನೀಡಬೇಕು' ಎಂದು ಮನವಿ ಮಾಡಿದ್ದಾರೆ.

'ಮೇಲ್ನೋಟಕ್ಕೆ ಆರೋಪಗಳು ಸಾಬೀತಾಗಿರುವುದರಿಂದ ಏಕೆ ಆಡಳಿತಾಧಿಕಾರಿ ನೇಮಿಸಬಾರದು' ಎಂದು ನೋಟಿಸ್‌ನಲ್ಲಿ ಪ್ರಶ್ನಿಸಿದ್ದ ಸಹಕಾರ ಇಲಾಖೆ ಕಾರ್ಯದರ್ಶಿ, ಇದೇ 22ರಂದು ಬೆಳಿಗ್ಗೆ 11.30ರೊಳಗೆ ವಿಚಾರಣೆಗೆ ಹಾಜರಾಗುವಂತೆ ತಿಳಿಸಿದ್ದರು. ಒಂದು ವೇಳೆ ಹೇಳಿಕೆ ಸಲ್ಲಿಸಲು ತಪ್ಪಿದಲ್ಲಿ ನಿಯಮಾನುಸಾರ ಮುಂದಿನ ಕ್ರಮ ಕೈಗೊಳ್ಳುವುದಾಗಿ ಎಚ್ಚರಿಸಿದ್ದರು.

ಗಣೇಶ ಮೂರ್ತಿ ಮೇಲೆ ಚಪ್ಪಲಿ

ಸ್ಥಳೀಯರಿಂದ ಪ್ರತಿಭಟನೆ: ಆರೋಪಿ ಲೀಲಮ್ಮ ಬಂಧನ

ಪ್ರಜಾವಾಣಿ ವಾರ್ತೆ

ಬೇಲೂರು (ಹಾಸನ ಜಿಲ್ಲೆ): ಇಲ್ಲಿನ ಬಸ್ ನಿಲ್ದಾಣದ ಮುಂಭಾಗದ ಪುರಸಭೆ ಆವರಣದಲ್ಲಿರುವ ವರಸಿದ್ಧಿ ವಿನಾಯಕ ಗಣಪತಿ ದೇವಾಲಯದ ಕಬ್ಬಿಣದ ಬಾಗಿಲು ತೆರೆದು, ಗಣೇಶ ಮೂರ್ತಿ ಮೇಲೆ ಮಹಿಳೆಯೊಬ್ಬಳು ಎರಡು ಚಪ್ಪಲಿಗಳನ್ನು ಇಟ್ಟಿರುವ ಘಟನೆ ಭಾನುವಾರ ನಡೆದಿದೆ. ಈ ಸಂಬಂಧ ಆಕೆಯನ್ನು ಭಾನುವಾರ ಸಂಜೆ ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ.

'ಹಾಸನದ ವಿಜಯನಗರ ಬಡಾವಣೆಯ ಲೀಲಮ್ಮ ಎಂಬಾಕೆಯನ್ನು ವಶಕ್ಕೆ ಪಡೆಯಲಾಗಿದೆ. ಆಕೆಯ ಮಾನಸಿಕ ಸ್ಥಿತಿ ಸ್ಥಿಮಿತದಲ್ಲಿಲ್ಲ ಎನ್ನುವ ಮಾಹಿತಿ ಇದೆ. ಈ ಬಗ್ಗೆ ಕೂಲಂಕಷ ತನಿಖೆ ನಡೆಸಲಾಗುತ್ತಿದೆ' ಎಂದು ಎಸ್ಪಿ ಮೊಹಮ್ಮದ್ ಸುಜೀತಾ ತಿಳಿಸಿದರು.

'ಶನಿವಾರ ರಾತ್ರಿ 8.30ಕ್ಕೆ ಲೀಲಮ್ಮ ಹಾಸನದಿಂದ ಹೊರಟು ಬೇಲೂರು ಬಸ್ ಹತ್ತಿದ್ದಾರೆ. ನಂತರ ಚಿಕ್ಕಮಗಳೂರಿಗೆ ಹೋಗಿ ವಾಪಸ್ ಬೇಲೂರಿಗೆ ಬಂದಿದ್ದಾರೆ. ಬೇಲೂರಿನಲ್ಲಿ

> **ಆರೋಪಿಯನ್ನು ತ್ವರಿತವಾಗಿ ಬಂಧಿಸಿ, ಕೂಡಲೇ ಶಿಕ್ಷೆ ನೀಡಬೇಕು. ಇಲ್ಲದಿದ್ದರೆ ತೀವ್ರ ಹೋರಾಟ ಮಾಡಲಾಗುವುದು. ಮಹಿಳೆಗೆ ಒತ್ತಡವಿದ್ದರೆ, ಅದನ್ನು ಪರಿಶೀಲಿಸಬೇಕು**
> **ಎಚ್‌.ಕೆ. ಸುರೇಶ್,** ಶಾಸಕ

ಇಳಿದು ಪುರಸಭೆ ಆವರಣಕ್ಕೆ ಬಂದಿದ್ದು, ಮಹಿಳೆಯ ಸಂಪೂರ್ಣ ಚಲನವಲನ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ದೇಗುಲಕ್ಕೆ ಹೋಗಿ ಬಂದ ಬಳಿಕ ಮರಳಿ ಹಾಸನಕ್ಕೆ ಬಂದಿದ್ದಾರೆ' ಎಂದು ಮಾಹಿತಿ ನೀಡಿದರು.

'ಆಕೆಯ ಮನೆ ಬಳಿಯೇ ವಶಕ್ಕೆ ಪಡೆದಿದ್ದು, ವೈದ್ಯಕೀಯ ಪರೀಕ್ಷೆಯ ಅಗತ್ಯವಿದೆ. ಈ ಹಿಂದೆ ಮನೆಯಲ್ಲೂ ಇದೇ ರೀತಿ ವರ್ತಿಸಿದ್ದ ಬಗ್ಗೆ ಕುಟುಂಬ ಸದಸ್ಯರಿಂದ ಮಾಹಿತಿ ಇದೆ' ಎಂದು ಹೇಳಿದರು.

'ಸಿಸಿಟಿವಿ ದೃಶ್ಯಾವಳಿ ಪರಿಶೀಲಿಸಿದ್ದು, ಹೆಚ್ಚುವರಿ ತನಿಖೆಗಾಗಿ ಎಂಟು ತಂಡ ರಚಿಸಲಾಗಿದೆ' ಎಂದು ತಿಳಿಸಿದರು.

ಮಹಿಳೆ ದೇವಾಲಯ ಪ್ರವೇಶಿಸಿರುವ ದೃಶ್ಯ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ

ವ್ಯಾಪಾರಿಗಳು ಗಮನಿಸಿದ್ದು: ಈ ದೇವಾಲಯದಲ್ಲಿ ನಿತ್ಯ ಪೂಜೆ ನಡೆಯುತ್ತಿದ್ದು, ವ್ಯಾಪಾರಿಗಳು ಬೆಳಿಗ್ಗೆ ಮೂರ್ತಿಗೆ ನಮಿಸಿ ವ್ಯಾಪಾರ ಆರಂಭಿಸುತ್ತಾರೆ. ಶನಿವಾರ ರಾತ್ರಿ ಪುರಸಭೆ ಗೇಟ್‌ಗೆ ಬೀಗ ಹಾಕಿ ತೆರಳಿದ್ದರು. ಭಾನುವಾರ ಬೆಳಿಗ್ಗೆ ಭಕ್ತರು ನಮಿಸಲು ಹೋದಾಗ, ಮೂರ್ತಿಯ ಮೇಲೆ ಚಪ್ಪಲಿಗಳನ್ನು ಇಟ್ಟಿರುವುದು ಗೊತ್ತಾಗಿದೆ.

ಪೊಲೀಸರು ಸಿಸಿಟಿವಿ ಕ್ಯಾಮೆರಾ ದೃಶ್ಯ ಆಧಾರದ ಮೇಲೆ ತನಿಖೆ ನಡೆಸಿದ್ದಾರೆ.

ಘಟನೆಯಿಂದ ಪಟ್ಟಣದಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಗಿದ್ದು, ಎಸ್‌ಪಿ ಮೊಹಮ್ಮದ್ ಸುಜೀತಾ ಭೇಟಿ ನೀಡಿದ್ದರು.

'ಕೋಮು ಸೌಹಾರ್ದ ಕದಡಲು ಕಿಡಿಗೇಡಿಗಳು ಇಂತಹ ದುಷ್ಕೃತ್ಯ ಎಸಗಿದ್ದು, ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು' ಎಂದು ಆಗ್ರಹಿಸಿ ಸ್ಥಳೀಯರು ಪುರಸಭೆ ಆವರಣದಲ್ಲಿ ಪ್ರತಿಭಟಿಸಿದರು. 'ಆರೋಪಿಯನ್ನು ಕೂಡಲೇ ಬಂಧಿಸದಿದ್ದಲ್ಲಿ, ಸೋಮವಾರ ಬೇಲೂರು ಬಂದ್‌ಗೆ ಕರೆ ನೀಡಲಾಗುವುದು' ಎಂದು ಎಚ್ಚರಿಕೆ ನೀಡಿದರು.

ಬೇಲೂರಿಗೆ ಭೇಟಿ ನೀಡಿದ ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ, 'ಹಿಂದೂಗಳ ಭಾವನೆಗಳಿಗೆ ಧಕ್ಕೆ ತರುವ ಕೆಲಸ ಮಾಡಲಾಗುತ್ತಿದೆ. ಗಣೇಶ ಮೆರವಣಿಗೆ ಮೇಲೆ ಕಲ್ಲು ತೂರಲಾಗುತ್ತದೆ. ಹಸುವಿನ ಕೆಚ್ಚಲು ಕೊಯ್ಯುತ್ತಾರೆ. ಈಗ ಪುರಸಭೆ ಆವರಣದಲ್ಲಿನ ಗಣಪತಿಗೆ ಚಪ್ಪಲಿ ಹಾಕಿದ್ದಾರೆ. ಇದು ಕೋಮು ಗಲಭೆ ಸೃಷ್ಟಿಸುವ ಸಂಚಿನ ಭಾಗವಾಗಿದೆ' ಎಂದು ಆರೋಪಿಸಿದರು.

'ಬುಲ್ಡೋಜರ್ ಹತ್ತಿಸಬೇಕು'

ಚಿಕ್ಕಮಗಳೂರು: ಬೇಲೂರು ಪುರಸಭೆ ಗಣಪತಿ ವಿಗ್ರಹದ ಮೇಲೆ ಚಪ್ಪಲಿ ಇಟ್ಟವರ ವಿರುದ್ಧ ಪ್ರಕರಣ ದಾಖಲಿಸುವುದು ಮಾತ್ರವಲ್ಲ, ಅವರ ಮನೆಗೆ ಬುಲ್ಡೋಜರ್ ಹತ್ತಿಸಬೇಕು ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ ಆಗ್ರಹಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ತಪ್ಪಿತ್ತಸ್ಥರ ರಕ್ಷಣೆಗೆ ಮುಂದಾದರೆ ಸಮಾಜವೇ ಬುಲ್ಡೋಜರ್ ತೆಗೆದುಕೊಂಡು ಅವರ ಮನೆ ಮುಂದೆ ಹೋಗಲಿದೆ' ಎಂದು ಎಚ್ಚರಿಸಿದರು.

'ಕೋಮು ಗಲಭೆ ಸೃಷ್ಟಿಸುವ ಭಾಗವಾಗಿ ಈ ಕೆಲಸ ಮಾಡಿದ್ದಾರೆ. ಸಂಚಿನ ಭಾಗವಾಗಿಯೇ ಚಪ್ಪಲಿ ಇಡಲಾಗಿದೆ. ಸಜ್ಜನರಿಗೆ ಸಿಟ್ಟು ತರಿಸಿದರೆ ಯಾರೂ ಉಳಿಯುವುದಿಲ್ಲ' ಎಂದರು.

ಬಿಎಸ್‌ಎಫ್ ತರಬೇತಿ ಪಠ್ಯಕ್ಕೆ ಡ್ರೋನ್ ಯುದ್ಧ ಸೇರ್ಪಡೆ

ಟೆಂಕನಪುರ (ಮಧ್ಯಪ್ರದೇಶ), (ಪಿಟಿಐ): ಗಡಿ ಭದ್ರತಾ ಪಡೆಯು (ಬಿಎಸ್‌ಎಫ್) ತನ್ನ ತರಬೇತಿ ಪಠ್ಯಕ್ಕೆ ಡ್ರೋನ್ ಯುದ್ಧವನ್ನು ಸೇರ್ಪಡೆಗೊಳಿಸಿದ್ದು, ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಕಡ್ಡಾಯ ವಿಷಯವನ್ನಾಗಿಸಿದೆ.

ಕೇಂದ್ರ ಗೃಹ ಸಚಿವಾಲಯದಡಿ ಅರೆಸೇನಾ ಪಡೆಗಳು ನಡೆಸುತ್ತಿರುವ ಏಕೈಕ ಉನ್ನತ ಶಿಕ್ಷಣ ಸಂಸ್ಥೆಯಾದ ರುಸ್ತಮ್‌ಜಿ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ (ಆರ್‌ಜೆಐಟಿ) ವಿದ್ಯಾರ್ಥಿಗಳಿಗಾಗಿ ಡ್ರೋನ್ ಪ್ರಯೋಗಾಯಲವನ್ನೂ ಆರಂಭಿಸಿದೆ.

ಹೊಸದಾಗಿ ಆರಂಭವಾಗಿರುವ ಡ್ರೋನ್ ಶಾಲೆಯು ಡ್ರೋನ್ ಕಮಾಂಡೊ ಹಾಗೂ ಡ್ರೋನ್ ವಾರಿಯರ್ಸ್ ಕೋರ್ಸ್‌ಗಳಲ್ಲಿ 45 ಸಿಬ್ಬಂದಿಯ ಮೊದಲ ಬ್ಯಾಚ್‌ಗೆ ತರಬೇತಿ ನೀಡಿದ್ದು, ಎರಡನೇ ಬ್ಯಾಚ್‌ಗೆ ತರಬೇತಿ ನೀಡುತ್ತಿದೆ.

ವಾರ್ಷಿಕ 500 ಸಿಬ್ಬಂದಿಗೆ ತರಬೇತಿ ನೀಡುವ ಗುರಿ ಹೊಂದಿರುವ ಬಿಎಸ್‌ಎಫ್, ಮುಂದಿನ ವರ್ಷಗಳಲ್ಲಿ ಈ ಸಂಖ್ಯೆಯನ್ನು ಹೆಚ್ಚಿಸುವ ಆಲೋಚನೆ ಹೊಂದಿದೆ. ಶಾಲೆಯಲ್ಲಿ ತರಬೇತಿ ನೀಡುವ ಅವಶ್ಯ ಉಪಕರಣಗಳ ಖರೀದಿಗಾಗಿ ₹20 ಕೋಟಿಯನ್ನು ಮೀಸಲಿಟ್ಟಿದೆ.

ಆಪರೇಷನ್ ಸಿಂಧೂರ ಕಾರ್ಯಾಚರಣೆಯ ಬಳಿಕ ಆಧುನಿಕ ಯುಗದ ಯುದ್ಧಕ್ಕಾಗಿ ಅಗತ್ಯವಿರುವ ಉಪಕರಣಗಳನ್ನು ದೇಶೀಯವಾಗಿಯೇ ಅಭಿವೃದ್ಧಿಪಡಿಸಲು ನಾವೀನ್ಯತಾ ಕೇಂದ್ರವನ್ನು ಆರಂಭಿಸಿದೆ.

ಡ್ರೋನ್‌ಗಳು ಅಥವಾ ಮಾನವರಹಿತ ವೈಮಾನಿಕ ವಾಹನಗಳು (ಯುಎವಿ) ಸೇರಿದಂತೆ ಆಂತರಿಕ ಭದ್ರತಾ ಕ್ಷೇತ್ರದಲ್ಲಿನ ಈಚೆಗಿನ ಸವಾಲುಗಳಿಗೆ ಪರಿಹಾರಗಳನ್ನು ಕಂಡುಕೊಳ್ಳಲು ಬಿಎಸ್‌ಎಫ್ ಅಕಾಡೆಮಿಯು ತನ್ನದೇ ಆದ ತಜ್ಞ ಅಧಿಕಾರಿಗಳು, ನವೋದ್ಯಮಗಳು, ಶಿಕ್ಷಣ ತಜ್ಞರ ಭಾಗವಹಿಸುವಿಕೆಯೊಂದಿಗೆ 'ಪೊಲೀಸ್ ತಂತ್ರಜ್ಞಾನ ನಾವೀನ್ಯತೆ ಕೇಂದ್ರ'ವನ್ನು ರಚಿಸಿದ್ದು, ಇದು 48 ಸಮಸ್ಯೆಗಳ ಬಗ್ಗೆ ತನ್ನ ಗಮನವನ್ನು ಕೇಂದ್ರೀಕರಿಸಲಿದೆ ಎಂದು ಬಿಎಸ್‌ಎಫ್ ಅಕಾಡೆಮಿಯ ನಿರ್ದೇಶಕ ಶಂಶೇರ್ ಸಿಂಗ್ ತಿಳಿಸಿದರು.

ಯುದ್ಧ ತಂತ್ರದಲ್ಲಿ ಡ್ರೋನ್ ತಂತ್ರಜ್ಞಾನದ ಬಳಕೆಗಾಗಿ ಮಾರ್ಗಸೂಚಿ ತಯಾರಿಸಲಿಕ್ಕಾಗಿ ಬಿಎಸ್‌ಎಫ್ ವಿವಿಧ ಐಐಟಿಗಳು ಹಾಗೂ ಸರ್ಕಾರಿ ಸಂಶೋಧನಾ ಸಂಸ್ಥೆಗಳೊಂದಿಗೆ ತಿಳಿವಳಿಕೆ ಒಪ್ಪಂದಕ್ಕೆ ಸಹಿಯನ್ನು ಹಾಕಿದೆ.

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	123.56	6,819	6,455
ಹಾರಂಗಿ	2,859	2,857.80	923	1,600
ಕಬಿನಿ	2,284.00	2,282.30	1,825	1,850
ಹೇಮಾವತಿ	2,922	2,919.75	4,668	6,335
ಲಿಂಗನಮಕ್ಕಿ	1,819	1,816.45	3,347	6,920
ಸೂಪಾ (ಮೀ)	564	559.82	3,436.85	3,901.59
ಮಾಣಿ	595	593.92	656	656
ತುಂಗಭದ್ರಾ	1,633	1,626.06	11,430	11,276
ಮಲಪ್ರಭಾ	2,079.50	2,079.50	1,494	1,494
ಘಟಪ್ರಭಾ	2175	2,174.68	2,514	1,392
ಭದ್ರಾ *	186	185.5	2,906	4,121
ಆಲಮಟ್ಟಿ (ಮೀ)	519.60	519.60	33,444	30,585
ನಾರಾಯಣಪುರ (ಮೀ)	492.25	492.22	60,000	74,200

* ನೆಲಮಟ್ಟದಿಂದ

ಭದ್ರತೆ: ಬಕರ್‌ವಾಲಾಗಳ ಅವಶ್ಯಕತೆ

ಜಮ್ಮು/ಶ್ರೀನಗರ (ಪಿಟಿಐ): ಗುಜ್ಜರ್ ಹಾಗೂ ಬಕರ್‌ವಾಲಾ ಬುಡಕಟ್ಟು ಸಮುದಾಯದ ಜನರ ನಂಬಿಕೆಯನ್ನು ಮರಳಿ ಗಳಿಸಬೇಕಾದ ಸನ್ನಿವೇಶವು ಸೇನೆಗೆ ಎದುರಾಗಿದೆ.

ಪರ್ವತಗಳ ಎತ್ತರದ ಪ್ರದೇಶಗಳಲ್ಲಿ ಭಯೋತ್ಪಾದಕರು ಸುರಕ್ಷಿತ ಅಡಗು ತಾಣಗಳನ್ನು ಮಾಡಿಕೊಳ್ಳುತ್ತಿರುವುದರಿಂದ, ಅದಕ್ಕೆ ತಕ್ಕ ತಂತ್ರಗಾರಿಕೆ ರೂಪಿಸಲು ಭದ್ರತಾ ಪಡೆಗಳಿಗೆ ಇದು ಅನಿವಾರ್ಯವಾಗಿದೆ ಎಂದು ಪರಿಣತರು ಅಭಿಪ್ರಾಯಪಟ್ಟಿದ್ದಾರೆ.

ಅಲೆಮಾರಿ ಬುಡಕಟ್ಟುಗಳಾದ ಈ ಎರಡೂ ಸಮುದಾಯದ ಜನಸಂಖ್ಯೆ 23 ಲಕ್ಷದಷ್ಟಿದ್ದು, ಇವರನ್ನು ಪರ್ವತಗಳ ಕಣ್ಣು-ಕಿವಿಗಳು ಎಂದೇ ಪರಿಗಣಿಸಲಾಗಿದೆ.

ಭದ್ರತಾ ಪಡೆಗಳು ಮತ್ತು ಜಮ್ಮು–ಕಾಶ್ಮೀರದಲ್ಲಿನ ಅಲೆಮಾರಿಗಳ ನಡುವೆ ಈಚೆಗಿನ ದಿನಗಳಲ್ಲಿ ಅಪನಂಬಿಕೆಯು ಹೆಚ್ಚುತ್ತಿರುವುದನ್ನು ಗಮನಿಸಿರುವ ತಜ್ಞರು, ಇದು ಗಡಿ ಭದ್ರತೆಗೆ ಅವಶ್ಯವಾದ ಗೋಪ್ಯ ಮಾಹಿತಿ ಸಂಗ್ರಹಕ್ಕೆ ಅಡ್ಡಿಯಾಗಿದೆ ಎಂದಿದ್ದಾರೆ.

ಪಿರ್ ಪಂಜಾಲ್ ಭೂಪ್ರದೇಶದ ಜ್ಞಾನ ಹೊಂದಿರುವ ಈ ಅಲೆಮಾರಿಗಳು, ತಾಯ್ನಾಡಿಗೆ ಅಚಲ ನಿಷ್ಠೆಯನ್ನು ಹೊಂದಿದ್ದಾರೆ. ಇದರಿಂದಾಗಿಯೇ ಹಲವು ದಶಕಗಳಿಂದಲೂ ಸೇನಾಪಡೆಗಳ ಪಾಲಿಗೆ ನಿರ್ಣಾಯಕರಾಗಿದ್ದಾರೆ.

ಅಲೆಮಾರಿಗಳ ಸಹಕಾರ, ಗುಪ್ತಚರ ಮಾಹಿತಿಯಿಂದಲೇ ಭಯೋತ್ಪಾದಕರ ಹಲವು ದಾಳಿಗಳನ್ನು ಹಿಮ್ಮೆಟ್ಟಿಸಲು ಸೇನೆಗೆ ಸಾಧ್ಯವಾಗಿದೆ. ಆದರೆ, ಇದರ ಪರಿಣಾಮವಾಗಿ ಬುಡಕಟ್ಟು ಜನರು ಭಯೋತ್ಪಾದಕರ ದಾಳಿ ಎದುರಿಸಿದ್ದು, ಪ್ರಾಣ ನಷ್ಟವೂ ಆಗಿದೆ.

ಇದಕ್ಕೆ ವ್ಯತಿರಿಕ್ತವಾಗಿ ಭದ್ರತಾ ಪಡೆಗಳು ಈಚೆಗಿನ ವರ್ಷಗಳಲ್ಲಿ ಕೆಲವೊಮ್ಮೆ ಬುಡಕಟ್ಟು ಯುವಕರ ಮೇಲೆ ಗುಂಡು ಹಾರಿಸಿವೆ. ವಿಚಾರಣೆ ನೆಪದಲ್ಲಿ ಕರೆದೊಯ್ದು ಹಿಂಸಿಸಿವೆ. ಇದರಿಂದಾಗಿ ಸೇನೆ ಮತ್ತು ಅಲೆಮಾರಿಗಳ ನಡುವಿನ ಸಂಬಂಧ ಹಳಸಿದ್ದು, ದಿನದಿಂದ ದಿನಕ್ಕೆ ಅಂತರ ಹೆಚ್ಚುತ್ತಿದೆ. ಉಗ್ರರ ಚಲನವಲನದ ಗೋಪ್ಯ ಮಾಹಿತಿಗಳು ಸೇನೆಗೆ ಸಿಗದಾಗಿವೆ.

ರಂಭಾಪುರಿ ಪೀಠದ ವೀರಸೋಮೇಶ್ವರ ಶಿವಾಚಾರ್ಯರ ಮೆರವಣಿಗೆ

ಬಸವಕಲ್ಯಾಣ: ದಸರಾ ಧರ್ಮ ಸಮ್ಮೇಳನ

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ (ಬೀದರ್ ಜಿಲ್ಲೆ): ಸೋಮವಾರದಿಂದ (ಸೆ.22) ಅಕ್ಟೋಬರ್ 2ರವರೆಗೆ ನಗರದಲ್ಲಿ ನಡೆಯಲಿರುವ 34ನೇ ದಸರಾ ಧರ್ಮ ಸಮ್ಮೇಳನಕ್ಕಾಗಿ ಭಾನುವಾರ ಆಗಮಿಸಿದ ಬಾಳೆಹೊನ್ನೂರು ರಂಭಾಪುರಿ ಪೀಠದ ವೀರಸೋಮೇಶ್ವರ ಶಿವಾಚಾರ್ಯ ಅವರನ್ನು ಸಾರೋಟದಲ್ಲಿ ಮೆರವಣಿಗೆ ಮೂಲಕ ಭವ್ಯ ಸ್ವಾಗತ ಕೋರಲಾಯಿತು.

ರಾಷ್ಟ್ರೀಯ ಹೆದ್ದಾರಿಯಲ್ಲಿ ಅವರನ್ನು ಸ್ವಾಗತಿಸಿ ಮುಖ್ಯ ರಸ್ತೆಯ ಮೂಲಕ ಅಕ್ಕ ಮಹಾದೇವಿ ಕಾಲೇಜು ಆವರಣದಲ್ಲಿನ ಮಂಟಪಕ್ಕೆ ಕರೆತರಲಾಯಿತು. ವಾದ್ಯ ಮೇಳದವರು ಪಾಲ್ಗೊಂಡಿದ್ದರು. ಮಹಿಳೆಯರು ಕುಂಭ ಕಳಶ ಹೊತ್ತಿದ್ದರು. ಯುವಕರು ಹರ್ಷದಿಂದ ಕುಣಿದರು.

ಶಾಸಕ ಶರಣು ಸಲಗರ, ತಡೋಳಾ ರಾಜೇಶ್ವರ ಶಿವಾಚಾರ್ಯರು, ಹಾರಕೂಡ ಚನ್ನವೀರ ಶಿವಾಚಾರ್ಯರು ಪಾಲ್ಗೊಂಡಿದ್ದರು. ಬಳಿಕ ನಡೆದ

ಬಸವಕಲ್ಯಾಣದಲ್ಲಿ ದಸರಾ ಧರ್ಮ ಸಮ್ಮೇಳನದ ಅಂಗವಾಗಿ ಬಾಳೆಹೊನ್ನೂರು ರಂಭಾಪುರಿ ಪೀಠದ ವೀರಸೋಮೇಶ್ವರ ಶಿವಾಚಾರ್ಯ ಅವರನ್ನು ಭಾನುವಾರ ಸಾರೋಟಿನಲ್ಲಿ ಮೆರವಣಿಗೆಯಲ್ಲಿ ಸ್ವಾಗತಿಸಲಾಯಿತು

ಸಮಾರಂಭದಲ್ಲಿ ರಂಭಾಪುರಿ ಶಿವಚಾರ್ಯರು ಮಾತನಾಡಿ, ದಸರಾ ಭಾವೈಕ್ಯ ಬೆಸೆಯುವ ಹಬ್ಬವಾಗಿದೆ ಎಂದರು.

ಸೆ. 22ರಂದು ಬೆಳಿಗ್ಗೆ ರಂಭಾಪುರಿ ವೀರಸೋಮೇಶ್ವರ ಶಿವಾಚಾರ್ಯರ ನೇತೃತ್ವದಲ್ಲಿ ಇಷ್ಟಲಿಂಗ ಪೂಜೆ ನಡೆಯಲಿದೆ. ಸಂಜೆ 6.30ಕ್ಕೆ ವೀರಸೋಮೇಶ್ವರ ಶಿವಾಚಾರ್ಯರ ಸಾನ್ನಿಧ್ಯದಲ್ಲಿ ಧರ್ಮ ಸಮ್ಮೇಳನ ಜರುಗಲಿದೆ. ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಉದ್ಘಾಟಿಸುವರು. ಹಾರಕೂಡ ಚನ್ನವೀರ ಶಿವಾಚಾರ್ಯರು, ಪ್ರಭುಸಾರಂಗ ಶಿವಾಚಾರ್ಯರು ನೇತೃತ್ವ ವಹಿಸುವರು. ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಬಿ. ಖಂಡ್ರೆಯವರು ಭಾವಚಿತ್ರ ಬಿಡುಗಡೆಗೊಳಿಸುವರು.

ಬಸ್ ದರ ನಿಗದಿಗೆ ಸಮಿತಿ ರಚನೆ

ಒಂದನೇ ಪುಟದಿಂದ...

ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕರು ಸದಸ್ಯ ಕಾರ್ಯದರ್ಶಿಯಾಗಿರಲಿದ್ದಾರೆ.

ಈ ಸಮಿತಿಯು ರಸ್ತೆ ಸಾರಿಗೆ ನಿಗಮಗಳ ಆರ್ಥಿಕ ಪರಿಸ್ಥಿತಿಯನ್ನು ಅಧ್ಯಯನ ಮಾಡಿ, ಕಾಲಕಾಲಕ್ಕೆ ದರ ಪರಿಷ್ಕರಣೆಯನ್ನು ಸೂಚಿಸಲಿದೆ. ನಿಗಮಗಳ ಆರ್ಥಿಕ ಮತ್ತು ಕಾರ್ಯಾಚರಣೆಯ ದಕ್ಷತೆಯನ್ನು ಸುಧಾರಿಸಲು ದರಗಳ ಮೇಲೆ ವಿವಿಧ ಸರ್‌ಚಾರ್ಜ್‌ಗಳು ಮತ್ತು ಶುಲ್ಕಗಳನ್ನು ವಿಧಿಸಲು ಸೂಚಿಸುವ ಅಧಿಕಾರ ಕೂಡ ಈ ಸಮಿತಿಗೆ ಇರಲಿದೆ.

ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳಲ್ಲಿ ವೈಜ್ಞಾನಿಕವಾಗಿ ಪ್ರಯಾಣ ದರ ಹೆಚ್ಚಿಸಲು ಈ ಹಿಂದೆ ಯಾವುದೇ ಸಮಿತಿ ರಚನೆಯಾಗಿಲ್ಲ. ಕಾಲಕಾಲಕ್ಕೆ ಹೆಚ್ಚಳವಾಗುವ ಡೀಸೆಲ್ ಬೆಲೆ ಮತ್ತು ಇತರೆ ವೆಚ್ಚವನ್ನು ಸರಿದೂಗಿಸಲು ದರ ಪರಿಷ್ಕರಣೆ ಅಗತ್ಯವಾದರೂ ಪರಿಷ್ಕರಣೆ ಆಗದೇ ಇರುವುದರಿಂದ ಸಾರಿಗೆ ನಿಗಮಗಳು ಆರ್ಥಿಕ ಸಂಕಷ್ಟಕ್ಕೆ ಸಿಲುಕುತ್ತಿವೆ. ಬಿಎಂಟಿಸಿಯಲ್ಲಿ 2014ರಲ್ಲಿ ದರ ಪರಿಷ್ಕರಣೆಯಾಗಿತ್ತು. ಅದಾದ 11 ವರ್ಷಗಳ ಬಳಿಕ ಈ ವರ್ಷ ಪರಿಷ್ಕರಣೆಯಾಗಿದೆ. ಈ ಅವಧಿಯಲ್ಲಿ ಇಂಧನ ವೆಚ್ಚ ₹7 ಕೋಟಿಯಿಂದ ₹13 ಕೋಟಿಗೆ, ಸಿಬ್ಬಂದಿ ವೆಚ್ಚ ₹6 ಕೋಟಿಯಿಂದ ₹12 ಕೋಟಿಗೆ ಹೆಚ್ಚಳವಾಗಿತ್ತು.

ಕೆಎಸ್‌ಆರ್‌ಟಿಸಿ, ಕೆಕೆಆರ್‌ಟಿಸಿ, ಎನ್‌ಡಬ್ಲ್ಯುಆರ್‌ಟಿಸಿಯಲ್ಲಿ 2020ರಲ್ಲಿ ಪರಿಷ್ಕರಣೆಯಾಗಿತ್ತು. ಆನಂತರದ ಪರಿಷ್ಕರಣೆಗೆ ಐದು ವರ್ಷ ಹಿಡಿದಿದೆ. ಇದನ್ನು ತಪ್ಪಿಸುವುದಕ್ಕಾಗಿ ಸರ್ಕಾರ ದರ ಸಮಿತಿ ರಚಿಸಲು ಮುಂದಾಗಿದೆ ಎಂದು ಸಾರಿಗೆ ಅಧಿಕಾರಿಗಳು ತಿಳಿಸಿದ್ದಾರೆ.

ಒಮ್ಮೆಲೆ ಹೆಚ್ಚಿಸಿದರೆ ಹೊರೆ

ಐದು–ಹತ್ತು ವರ್ಷಗಳಿಗೊಮ್ಮೆ ಟಿಕೆಟ್ ದರ ಒಮ್ಮೆಲೇ ಹೆಚ್ಚಿಸಿದರೆ ಪ್ರಯಾಣಿಕರಿಗೂ ಹೊರೆಯಾಗುತ್ತದೆ. ಕಾಲಕಾಲಕ್ಕೆ ಅಲ್ಪ ಪ್ರಮಾಣದಲ್ಲಿ ವೈಜ್ಞಾನಿಕವಾಗಿ ದರ ಏರಿಕೆ ಮಾಡಿದಾಗ ಹೊರೆಯಾಗುವುದು ತಪ್ಪಲಿದೆ. ಅಲ್ಲದೇ ರಾಜಕೀಯ ಹಿತಾಸಕ್ತಿಗಳಿಂದ ದೂರ ಇದ್ದು, ಸ್ವತಂತ್ರವಾಗಿ ಸಮಿತಿಯು ಕಾರ್ಯನಿರ್ವಹಿಸುವುದರಿಂದ ಸಂಸ್ಥೆಗಳಿಗೂ ಒಳಿತಾಗಲಿದೆ ಎಂದು ಅಧಿಕಾರಿಗಳು ಅಭಿಪ್ರಾಯಪಟ್ಟಿದ್ದಾರೆ.

ಮಡಿಕೇರಿ: ದೇವತೆಗಳ ಕರಗೋತ್ಸವ ಇಂದಿನಿಂದ

ಪ್ರಜಾವಾಣಿ ವಾರ್ತೆ

ಮಡಿಕೇರಿ: 'ಬೆಳಕಿನ ದಸರೆ' ಎಂದೇ ಹೆಸರಾದ ಮಡಿಕೇರಿ ದಸರೆಗೆ ಮುನ್ನುಡಿ ಬರೆಯುವ ಕರಗೋತ್ಸವಕ್ಕೆ ಸೆ. 22ರ ಸಂಜೆ 5ಕ್ಕೆ ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್.ಭೋಸರಾಜು ಚಾಲನೆ ನೀಡಲಿದ್ದಾರೆ.

ನಗರದ ನಾಲ್ಕು ಶಕ್ತಿ ದೇವತೆಗಳಾದ ಕೋಟೆ ಮಾರಿಯಮ್ಮ, ಕುಂದೂರುಮೊಟ್ಟೆ ಚೌಟಿ ಮಾರಿಯಮ್ಮ, ದಂಡಿನ ಮಾರಿಯಮ್ಮ ಹಾಗೂ ಕಂಚಿ ಕಾಮಾಕ್ಷಮ್ಮ ಕರಗಗಳನ್ನು ಹೊತ್ತ ಕರಗಧಾರಿಗಳು ಇಲ್ಲಿನ ಮಹದೇವಪೇಟೆಯ ಪಂಪಿನ ಕೆರೆ ಆವರಣದಿಂದ ಹೊರಡಲಿದ್ದಾರೆ.

ಮಹದೇವಪೇಟೆಯ ಮುಖ್ಯ ರಸ್ತೆಯಲ್ಲಿ ಕರಗೋತ್ಸವ ನಡೆಯಲಿದೆ.

ನವರಾತ್ರಿಯ ಅಷ್ಟೂ ದಿನ ಕರಗಧಾರಿಗಳು ನಗರದಲ್ಲಿ ಸಂಚರಿಸಲಿದ್ದಾರೆ.

ಸೆ. 23ರಿಂದ ಅ.2ರವರೆಗೆ ಗಾಂಧಿ ಮೈದಾನದಲ್ಲಿ ನಿತ್ಯ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ.

ಗೋಣಿಕೊಪ್ಪಲಿನ ಕಾವೇರಿ ದಸರಾ ಸಮಿತಿಯಿಂದ ದಸರಾ ಜನೋತ್ಸವಕ್ಕೂ ಚಾಲನೆ ದೊರೆಯಲಿದೆ.

ಏಷ್ಯಾದ ಮೊದಲ ಮಹಿಳಾ ರೈಲು ಚಾಲಕಿ ಸುರೇಖಾ ನಿವೃತ್ತಿ

ಪ್ರಜಾವಾಣಿ ವಾರ್ತೆ

ಮುಂಬೈ: ಇದು ಮಹಿಳೆಯರ ಕೈಲಾಗುವಂಥ ಕೆಲಸವಲ್ಲ ಎನ್ನುತ್ತಿದ್ದ ಕಾಲದಲ್ಲಿಯೇ ರೈಲು ಎಂಜಿನಿಯರ್ ಆಗಿ ಉದ್ಯೋಗ ಪಡೆದವರು ಸುರೇಖಾ ಯಾದವ್. ಮಹಿಳೆಯೊಬ್ಬರು ರೈಲು ಚಲಾಯಿಸಿದ ಏಷ್ಯಾದ ಮೊದಲಿಗರಿವರು. 36 ವರ್ಷದ ವೃತ್ತಿ ಜೀವನ ಮುಗಿಸಿದ ಸುರೇಖಾ ಅವರು ಇದೇ 30ರಂದು ನಿವೃತ್ತಿಯಾಗಲಿದ್ದಾರೆ.

1988ರಲ್ಲಿ ಇವರು ರೈಲು ಎಂಜಿನಿಯರ್ ಆಗಿ ತಮ್ಮ ವೃತ್ತಿ ಆರಂಭಿಸಿದರು. ಗುರಿ ಸಾಧನೆ, ಹಿಡಿದ ಛಲ ಬಿಡದಿರುವುದು ಮತ್ತು ಅತ್ಯಂತ ಸವಾಲಿನ ವೃತ್ತಿರಂಗದಲ್ಲಿನ ಲಿಂಗ ತಾರತಮ್ಯದ ಅಡೆತಡೆಗಳನ್ನು ಮೀರಿದ ಇವರ ಜೀವನಗಾಥೆಯೇ ಅಸಾಧಾರಣವಾದುದು. ಅವರಿಗೀಗ 60 ವರ್ಷ.

ಸಾಧನೆಯ ಹಾದಿ...

ಸುರೇಖಾ ಹಲವು ಮೊದಲುಗಳಿಗೆ ಹೆಸರಾದವರು. 1989ರಲ್ಲಿ ಇವರ ಸಹಾಯಕ ಲೋಕೋ ಚಾಲಕಿಯಾದರು. 1996ರಲ್ಲಿ ಗೂಡ್ಸ್ ರೈಲು ಚಾಲಕಿಯಾದರು. 2000ರಲ್ಲಿ ರೈಲು ಚಾಲಕಿಯಾದರು. 2010ರಲ್ಲಿ ಘಾಟ್ ಡ್ರೈವರ್ ಆದರು. 2023ರಲ್ಲಿ ವಂದೇ ಭಾರತ್ ಎಕ್ಸ್‌ಪ್ರೆಸ್ ಚಲಾಯಿಸಿದರು.

ಮೋದಿ ಅವರು ಮೂರನೇ ಬಾರಿಗೆ ಪ್ರಧಾನಿಯಾಗಿ ಪ್ರಮಾಣವಚನ ಸ್ವೀಕರಿಸಿದ ಸಮಾರಂಭಕ್ಕೆ ಸುರೇಖಾ ಅವರನ್ನು ಮುಖ್ಯ ಅತಿಥಿಯಾಗಿ ಆಹ್ವಾನಿಸಲಾಗಿತ್ತು.

'ಸೇವೆ ಅಜರಾಮರ'

ತಮಗೆ ಎದುರಾದ ಎಲ್ಲ ಅಡೆತಡೆಗಳನ್ನು ದಾಟಿದವರು. ಅಸಂಖ್ಯ ಮಹಿಳೆಯರಿಗೆ ಸ್ಫೂರ್ತಿದಾಯಕರು. ಯಾವುದೇ ಕನಸನ್ನೂ ನನಸು ಮಾಡಿಕೊಳ್ಳುವುದು ಸಾಧ್ಯ ಎಂದು ತೋರಿಸಿಕೊಟ್ಟವರು. ಭಾರತೀಯ ರೈಲ್ವೆಯಲ್ಲಿ ಮಹಿಳಾ ಸಬಲೀಕರಣದ ರೂಪಕವಾಗಿ ಸುರೇಖಾ ಅವರ ವೃತ್ತಿ ಜೀವನವು ಅಜರಾಮರ

ಕೇಂದ್ರ ರೈಲ್ವೆ, ಮುಂಬೈ ಕೇಂದ್ರ ಕಚೇರಿ

ಗೂಡ್ಸ್ ರೈಲಿನ ಚಾಲಕಿಯಾಗಿ ಅವರು ತಮ್ಮ ವೃತ್ತಿ ಆರಂಭಿಸಿದರು. ಬಳಿಕ, ಮುಂಬೈನ ಲೋಕಲ್ ರೈಲುಗಳಲ್ಲಿ ಕಾರ್ಯನಿರ್ವಹಿಸಿದರು. ಪ್ರತಿಷ್ಠಿತ 'ಡೆಕ್ಕನ್ ಕ್ವೀನ್'ನನ್ನೂ ಇವರು ಚಲಾಯಿಸಿದ್ದಾರೆ. ಆಧುನಿಕ ಕಾಲದ ವಂದೇ ಭಾರತ್ ಎಕ್ಸ್‌ಪ್ರೆಸ್ ಅನ್ನು ಚಲಾಯಿಸಿದ್ದಾರೆ. ವಿಶೇಷವೆಂದರೆ, ಇಷ್ಟೊಂದು ವೈವಿಧ್ಯಮಯ ರೈಲುಗಳನ್ನು ಚಲಾಯಿಸಿದ ಮೊದಲ ಮಹಿಳೆಯೂ ಇವರೇ ಆಗಿದ್ದಾರೆ.

'ಈ ವೃತ್ತಿ ಆಯ್ಕೆ ಮಾಡಿಕೊಳ್ಳಲು ಪೋಷಕರು ನನಗೆ ಬೇಡ ಎನ್ನಲೇ ಇಲ್ಲ' ಎನ್ನುವ ಸುರೇಖಾ ಅವರು ಹುಟ್ಟಿದ್ದು ಮಹಾರಾಷ್ಟ್ರದ ಸತಾರ ಜಿಲ್ಲೆಯಲ್ಲಿ. ಹೈಸ್ಕೂಲ್ ಮುಗಿಸಿದ ಬಳಿಕ ಇವರು ಎಲೆಕ್ಟ್ರಿಕಲ್ ಎಂಜಿನಿಯರಿಂಗ್‌ನಲ್ಲಿ ಡಿಪ್ಲೊಮಾ ಮುಗಿಸಿದರು. ಸುರೇಖಾ ಅವರ ಪತಿ ಪೊಲೀಸ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಇವರ ಇಬ್ಬರು ಮಕ್ಕಳು ಎಂಜಿನಿಯರ್‌ಗಳು.

ಹಜರತ್ ನಿಜಾಮುದ್ದೀನ್– ಎಸ್‌ಸಿಎಂಟಿ ರಾಜಧಾನಿ ಎಕ್ಸ್‌ಪ್ರೆಸ್ ರೈಲು ಗುರುವಾರ ಛತ್ರಪತಿ ಶಿವಾಜಿ ಮಹಾರಾಜ ಟರ್ಮಿನಲ್ ತಲುಪುತ್ತಿದ್ದಂತೆಯೇ ರೈಲು ಚಾಲಕಿ ಸುರೇಖಾ ಅವರಿಗೆ ಅವರ ಸಹೋದ್ಯೋಗಿಗಳು, ಸಿಬ್ಬಂದಿ ಹಾಗೂ ಕುಟುಂಬಸ್ಥರು ಹಾರ ಹಾಕಿ ಸುರೇಖಾ ಅವರಿಗೆ ಪುಟ್ಟ ಬೀಳ್ಕೊಡುಗೆ ನೀಡಿದರು

ಭಾವನೆಗಳಿಗೆ ಧಕ್ಕೆ ಆಗದಂತೆ ನಡೆದುಕೊಳ್ಳಲಿ: ಯದುವೀರ್

ಪ್ರಜಾವಾಣಿ ವಾರ್ತೆ

ಮೈಸೂರು: 'ಬಾನು ಮುಷ್ತಾಕ್ ಅವರು ದಸರಾ ಉದ್ಘಾಟನೆಯ ವೇದಿಕೆಯಲ್ಲಿ ಜನರ ಧಾರ್ಮಿಕ ಭಾವನೆಗಳಿಗೆ ಧಕ್ಕೆ ಆಗದ ರೀತಿ ನಡೆದುಕೊಳ್ಳಲಿ. ಅದೇ ಅವರು ನಮಗೆ ನೀಡುವ ಸ್ಪಷ್ಟೀಕರಣ' ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಹೇಳಿದರು.

'ಭುವನೇಶ್ವರಿ ಹಾಗೂ ಕನ್ನಡ ಬಾವುಟದ ಬಗ್ಗೆ ಬಾನು ಅವರು ಆಡಿದ್ದ ಮಾತುಗಳ ಕಾರಣಕ್ಕೆ, ನಾವು ಅವರು ದಸರಾ ಉದ್ಘಾಟಿಸುವುದನ್ನು ವಿರೋಧಿಸಿದ್ದೆವು. ಅವರು ಆ ಬಗ್ಗೆ ಸ್ಪಷ್ಟನೆ ನೀಡಲಿಲ್ಲ. ಈಗ ಚಾಮುಂಡೇಶ್ವರಿ ಮೂರ್ತಿಗೆ ಪುಷ್ಪಾರ್ಚನೆ ವೇಳೆ ಅವರು ಗೌರವದಿಂದ ನಡೆದುಕೊಳ್ಳಲಿ' ಎಂದು ಇಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ದಸರಾ ರಾಜಕೀಯ ಮೀರಿದ ಆಚರಣೆ. ಆದರೆ, ಉದ್ಘಾಟನೆ ವಿಚಾರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಯಾವ ರೀತಿ ನಡೆದುಕೊಳ್ಳುತ್ತಿದ್ದಾರೆ ಎಂದು ಜನರು ಗಮನಿಸುತ್ತಿದ್ದಾರೆ. ಮುಂದೆ ಅವರೇ ಉತ್ತರ ಕೊಡುವ ಕಾಲ ಬರಲಿದೆ' ಎಂದು ಹೇಳಿದರು.

ಬಿಜೆಪಿ ಶಾಸಕ ಟಿ.ಎಸ್. ಶ್ರೀವತ್ಸ ಮಾತನಾಡಿ, 'ನಾವು ಬಾನು ಮುಷ್ತಾಕ್ ನಡವಳಿಕೆಗಳ ವಿರುದ್ಧ ಧ್ವನಿ ಎತ್ತಿರುವುದು ನಿಜ. ಆದರೆ, ನಮ್ಮೂರಿನಲ್ಲೇ ನಾಡಹಬ್ಬ ನಡೆದಿದೆ. ಹೀಗಾಗಿ, ವೇದಿಕೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುತ್ತೇವೆ. ಬಾನು ಅವರು ಹೇಗೆ ನಡೆದುಕೊಳ್ಳುತ್ತಾರೆ ಎಂಬ ಬಗ್ಗೆ ಕುತೂಹಲವಂತೂ ಇದ್ದೇ ಇದೆ' ಎಂದರು.

ನವರಾತ್ರಿಯಲ್ಲಿ ಶಕ್ತಿದೇವತೆಯ ಪೂಜೆ

• ನಚಿಕೇತ್ ಹೆಗಡೆ

ಮನುಷ್ಯನ ಚಿಂತನ ಸಾಮರ್ಥ್ಯವನ್ನು ಸೃಷ್ಟಿಯ ಹಿಂದಿನ ಗುಟ್ಟು ಕಾಡಿರುವಷ್ಟು ಇನ್ನಾವುದೂ ಅಣಕಿಸಿರಲಾರದು. ನಾನು ಯಾರು? ಈ ಜಗತ್ತಿನ ಸ್ವರೂಪವೇನು? ನನ್ನನ್ನು ಹೊರತುಪಡಿಸಿಯೂ ಇಲ್ಲಿ ಇಷ್ಟೆಲ್ಲ ಜೀವರಾಶಿಗಳೂ ಜಡಪ್ರಪಂಚವೂ ತುಂಬಿದೆಯಲ್ಲ, ಇದೆಲ್ಲವನ್ನು ರಂಗದ ಮೇಲಿನ ಪಾತ್ರಗಳಂತೆ ಸೃಜಿಸಿ, ಬಾಳಿಸಿ, ಅಳಿಸುತ್ತಿರುವ ಸೂತ್ರಧಾರಿ ಯಾರು? – ಎನ್ನುವುದೆಲ್ಲ ಆತನ ಬುದ್ಧಿಶಕ್ತಿಗೆ ಸವಾಲುಗಳಾಗಿ ಪರಿಣಮಿಸಿವೆ. ದೇವರ ಗುಟ್ಟನ್ನು ಅವನೇ ಹೇಳಬೇಕಲ್ಲದೆ ಅನ್ಯರಲ್ಲ ಎಂಬ ಸೂಕ್ಷ್ಮವನ್ನು ಅರಿತಿದ್ದ ಭಾರತೀಯರು ಸೃಷ್ಟಿಯ ಇತರ ಅಂಗಗಳೊಡನೆ ಒಡನಾಡುತ್ತ ಈ ಪ್ರಶ್ನೆಗಳಿಗೆ ಕಂಡುಕೊಂಡ ಉತ್ತರವೇ 'ಶಕ್ತಿ' ಅಥವಾ 'ಮಾಯೆ'. ಅದರ ಮೂರ್ತರೂಪವೇ ಆ 'ಮಹಾದೇವಿ'.

ಈ ಶಕ್ತಿಯನ್ನು ನಮ್ಮ ಪ್ರಾಚೀನರು ವಾಙ್ಮಯದಲ್ಲಿ ಬಹುವಾಗಿ ಕೊಂಡಾಡಿರುವುದು ಪುರಾಣಗಳಲ್ಲಿಯೂ, ಶಂಕರರಾದಿಯಾಗಿ ಇತರ ಆಚಾರ್ಯರ ಸ್ತೋತ್ರಗಳಲ್ಲಿಯೂ, ಶಾಕ್ತಗ್ರಂಥಗಳಾದ ದುರ್ಗಾಸಪ್ತಶತೀ, ಲಲಿತಾಸಹಸ್ರನಾಮಾದಿ ಗ್ರಂಥಗಳಿಂದ ವೇದ್ಯವಾಗುತ್ತದೆ. ಆಕೆಯನ್ನೇ ಪರ ದೈವವೆಂದು ಬಗೆದು ಅವಳ ಆರಾಧನೆಯಲ್ಲಿಯೇ ನಿರತರಾದ ಜನರು 'ಶಾಕ್ತ' ಎಂಬ ಪಂಥವನ್ನೇ ಆರಂಭಿಸಿದರು. ಇನ್ನು ಅದ್ವೈತಾಚಾರ್ಯರಾದ ಶಂಕರರಂತೂ ಸೌಂದರ್ಯಲಹರಿಯಲ್ಲಿ 'ಶಿವನು ಶಕ್ತಿಯೊಂದಿಗೆ ಸೇರಿಕೊಂಡಿರುವಾಗ ಮಾತ್ರ ಸೃಷ್ಟಿಕಾರ್ಯಕ್ಕೆ ಸಮರ್ಥನಾಗುತ್ತಾನೆ. ಅನ್ಯಥಾ ಆತ ಒಂದಡಿಯಿಡಲೂ ಆರನು' ಎಂದುಬಿಟ್ಟಿದ್ದಾರೆ. ಒಮ್ಮೆ 'ನಂದಿತಮೇದಿನಿ' ಎನ್ನುತ್ತಲೂ ಮತ್ತೊಮ್ಮೆ 'ಮಹಾಹವತರ್ಪಿತ ಭೂತಪಿಶಾಚರತೇ' ಎನ್ನುತ್ತಲೂ ಆಕೆಯ ಸೌಮ್ಯ ಮತ್ತು ಉಗ್ರಾವತಾರಗಳೆರಡನ್ನೂ ಕೊಂಡಾಡಿದ್ದಾರೆ. ಅಂಥದು ಆ ತಾಯಿಯ ಸಾರ್ವತ್ರಿಕತ್ವ.

ಚೈತನ್ಯವುಳ್ಳದ್ದರಲ್ಲೆಲ್ಲ ದೈವದ ಇರುವಿಕೆಯನ್ನು ಬೆರಗಿನ ಕಣ್ಣುಗಳಿಂದ ಕಾಣುವವರು ಭಾರತೀಯರು. ಆ ಪ್ರವೃತ್ತಿಗನುಗುಣವಾಗಿ ವಸಂತ ಋತುವಿನಲ್ಲೊಮ್ಮೆ ಮತ್ತು ಶರದೃತುವಿನಲ್ಲೊಮ್ಮೆ 'ನವರಾತ್ರಿ' ಎಂಬ ಹೆಸರಿನಲ್ಲಿ ದುಷ್ಟರನ್ನು ಸಂಹರಿಸಿ, ದುರಿತಗಳನ್ನು ದೂರೀಕರಿಸಿ ಮಂಗಳವನ್ನು ಉಂಟುಮಾಡುವ ಆಕೆಯನ್ನು ಮತ್ತು ಆಕೆಯ ನವವಿಧ ಅವತಾರಗಳನ್ನು ಆರಾಧಿಸುತ್ತಾರೆ. ಮತ್ತು ಈ ಋತುಗಳೇ ಏಕೆ ಎನ್ನುವುದನ್ನು ದೇವೀ ಭಾಗವತವು ತಿಳಿಸುವುದು ಹೀಗೆ:

'ಶರತ್ ಮತ್ತು ವಸಂತಋತುಗಳು ಜೀವಿಗಳಿಗೆ ರೋಗಾದಿಗಳನ್ನು ತಂದೊಡ್ಡಿ ಅಪಾಯವನ್ನುಂಟು

ಮಾಡುವ ಕಾಲಗಳು. ಪ್ರಾಣಿಗಳನ್ನು ಯಮದಂಷ್ಟ್ರಕ್ಕೆ ಒಡ್ಡುವ ಕಾಲಗಳು ... ಆ ದುರಿತಗಳನ್ನು ನಾಶಮಾಡುವ ತಾಯಿಯನ್ನು ... ಆ ಇದರಿಂದ ... ಹೊತ್ತುಗಳು ...

ರೋಗರುಜಿನಗಳು ತೋರಿಕೊಳ್ಳುವುದು ಸಹಜ. ಅವುಗಳನ್ನು ದೇವಿಯು ನಿವಾರಿಸಲಿ ಎಂಬ ಆಶಯ ಪೂರ್ವಿಕರದು.

ಪೌರಾಣಿಕ ಹಿನ್ನೆಲೆ: ದೇವಿಯ ಕುರಿತಾದ ಆಖ್ಯಾನಗಳಿಗೆಲ್ಲ ಹೃದಯಪ್ರಾಯವಾದದ್ದು ದುರ್ಗಾಸಪ್ತಶತಿ. ಮಾರ್ಕಂಡೇಯಪುರಾಣದಲ್ಲಿ ಅಂತರ್ಗತವಾಗಿರುವ ಈ ಏಳುನೂರು ಶ್ಲೋಕಗಳ ಕಟ್ಟು – ಮೂರು ಲೋಕಗಳನ್ನೂ ನಡುಗಿಸುತ್ತಿದ್ದ, ಲೋಕಕಂಟಕನೂ ಉದ್ಧಟನೂ ಆದ ಮಹಿಷಾಸುರನನ್ನು ದೇವಿಯು ಕೊಂದ ಕಥೆಯನ್ನು ಕಟ್ಟಿಕೊಡುತ್ತದೆ. ಬ್ರಹ್ಮನಿಂದ ಪಡೆದ ವರದಿಂದ ಕೊಬ್ಬಿದ್ದ ಆತನನ್ನು ಸಂಹರಿಸಲೆಂದು ದೇವತೆಗಳೆಲ್ಲ ತಮ್ಮ ತಮ್ಮ ಅಂಶಗಳಿಂದ ಒಂದು ಸ್ತ್ರೀರೂಪವನ್ನು ಉಂಟುಮಾಡಿ ಆಕೆಯ ಹದಿನೆಂಟು ಕೈಗಳಿಗೆ ಹದಿನೆಂಟು ಆಯುಧಗಳನ್ನು ನೀಡಿದರಂತೆ. ಸ್ವತಃ ಹಿಮವಂತನು ಆಕೆಗೆ ವಾಹನವಾಗಿ ಸಿಂಹವನ್ನು ನೀಡಿದನಂತೆ. ಇವುಗಳಿಂದ ಭೂಯಿಷ್ಠಳಾದ ಆ ಚಂಡಿಕೆಯು ಚಾಮರ, ಚಿಕ್ಷುರಾದಿ ಮಹಿಷಾಸುರನ ಸೇನಾಪತಿಗಳನ್ನೆಲ್ಲ ಒಬ್ಬೊಬ್ಬರನ್ನಾಗಿ ಸಂಹರಿಸುತ್ತ ಕೊನೆಯಲ್ಲಿ ಭೀಕರವಾದ ಯುದ್ಧವೊಂದರಲ್ಲಿ ಮಹಿಷಾಸುರನನ್ನು ಸಂಹರಿಸಿದಳು. ಆ ದಿನವು 'ವಿಜಯದಶಮಿ' ಎನ್ನುವುದಾಗಿ ಪ್ರಸಿದ್ಧವಾಗಿದೆ. ಅಧರ್ಮದ ಮೇಲಣ ಧರ್ಮದ ಈ ಜಯವನ್ನೇ ನವರಾತ್ರಿಯ ಹೊತ್ತಿನಲ್ಲಿ ಸ್ಮರಿಸಲಾಗುತ್ತದೆ.

'ನಾಡಹಬ್ಬ'ಕ್ಕೆ ಬಾನು ಚಾಲನೆ ಇಂದು

ಒಂದನೇ ಪುಟದಿಂದ...

ಇದಕ್ಕಾಗಿ ಭಾನುವಾರ ವೇದಿಕೆ ಸಜ್ಜುಗೊಳಿಸುವುದು ಸೇರಿದಂತೆ ಅಂತಿಮ ಹಂತದ ತಯಾರಿ ನಡೆದವು. ವಿದ್ಯುತ್ ದೀಪಾಲಂಕಾರದೊಂದಿಗೆ ಮಧುವಣಗಿತ್ತಿಯಿಂದ ಕಂಗೊಳಿಸುತ್ತಿರುವ ನಗರವು ಪ್ರವಾಸಿಗರನ್ನು ಕೈಬೀಸಿ ಕರೆಯುತ್ತಿದೆ.

ಮೊದಲ ದಿನ ಹನ್ನೊಂದು ಕಾರ್ಯಕ್ರಮ ಉದ್ಘಾಟನೆಗೊಳ್ಳಲಿವೆ. ಕುಪ್ಪಣ್ಣ ಉದ್ಯಾನದಲ್ಲಿ ಫಲಪುಷ್ಪ ಪ್ರದರ್ಶನ, ಮಹಾರಾಜ ಕಾಲೇಜು ಮೈದಾನದಲ್ಲಿ ಆಹಾರ ಮೇಳ, ದೊಡ್ಡಕೆರೆ ಮೈದಾನದಲ್ಲಿ ಕುಸ್ತಿ ಪಂದ್ಯಾವಳಿ ಹಾಗೂ ವಸ್ತುಪ್ರದರ್ಶನ, ಕಾವಾ ಆವರಣದಲ್ಲಿ ಚಿತ್ರಕಲಾ ಶಿಬಿರ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಮೈದಾನದಲ್ಲಿ ಕನ್ನಡ ಪುಸ್ತಕ ಮಾರಾಟ ಮೇಳ, ರಂಗಾಯಣದಲ್ಲಿ 'ನವರಾತ್ರಿ ಜಾನಪದ ರಂಗೋತ್ಸವ', ಜೆ.ಕೆ. ಮೈದಾನದಲ್ಲಿ ಯೋಗ ದಸರಾ, ಚಾಮುಂಡಿವಿಹಾರ ಕ್ರೀಡಾಂಗಣದಲ್ಲಿ ರಾಜ್ಯ ದಸರಾ ಸಿಎಂ ಕಪ್ ಕ್ರೀಡಾಕೂಟ, ಸಯ್ಯಾಜಿರಾವ್ ರಸ್ತೆಯಲ್ಲಿ ವಿದ್ಯುತ್ ದೀಪಾಲಂಕಾರದ ಹಸಿರು ಚಪ್ಪರದ ಉದ್ಘಾಟನೆ ನೆರವೇರಲಿದೆ.

ದಸರಾ ಮಹೋತ್ಸವದ ಉದ್ಘಾಟನೆಗಾಗಿ ಚಾಮುಂಡಿಬೆಟ್ಟದಲ್ಲಿ ವೇದಿಕೆ ಸಜ್ಜುಗೊಳಿಸುವ ಕಾರ್ಯ ಭಾನುವಾರ ನಡೆಯಿತು

ಪ್ರಜಾವಾಣಿ ಚಿತ್ರ: ಅನೂಪ್ ರಾಘ ಟಿ.

ಅಂಬಾವಿಲಾಸ ಅರಮನೆ ಆವರಣ ಸೇರಿದಂತೆ 11 ವೇದಿಕೆಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ರಂಗು ತುಂಬಲಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಸಂಜೆ 6ಕ್ಕೆ ಚಾಲನೆ ನೀಡಲಿದ್ದಾರೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ 'ಸಂಗೀತ ವಿದ್ವಾನ್' ಪ್ರಶಸ್ತಿಯನ್ನು ಪಂ.ಎಂ.ವೆಂಕಟೇಶ್ ಕುಮಾರ್ ಅವರಿಗೆ ಪ್ರದಾನ ಮಾಡಲಾಗುವುದು.

ಮುಖ್ಯಾಂಶಗಳು

- ಚಾಮುಂಡಿಬೆಟ್ಟದಲ್ಲಿ 'ಪೊಲೀಸ್ ಪಹರೆ'ಯಲ್ಲಿ ಉದ್ಘಾಟನೆ
- ಅರಮನೆ ಆವರಣ ಸೇರಿ 11 ಕಡೆ ಸಾಂಸ್ಕೃತಿಕ ಕಾರ್ಯಕ್ರಮ